सत्यमेव जयते

# ಭಾರತದ ಲೆಕ್ಕನಿಯಂತ್ರಕರು
# ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ
# ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ
# ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷ

SUPREME AUDIT INSTITUTION OF INDIA
लोकहितार्थ सत्यनिष्ठा
Dedicated to Truth in Public Interest

## ಕರ್ನಾಟಕ ಸರ್ಕಾರ

## 2023ರ ವರದಿ ಸಂಖ್ಯೆ – 02

# ಭಾರತದ ಲೆಕ್ಕನಿಯಂತ್ರಕರು

# ಮತ್ತು ಮಹಾ ಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ

# ಹಣಕಾಸಿನ ವ್ಯವಹಾರಗಳ ಮೇಲಿನ ವರದಿ

## 31 ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷ

## ಕರ್ನಾಟಕ ಸರ್ಕಾರ

## 2023ರ ವರದಿ ಸಂಖ್ಯೆ – 02

| ಪರಿವಿಡಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| **ಮುನ್ನುಡಿ** | | xi |
| **ಕಾರ್ಯನಿರ್ವಹಣಾ ಸಾರಾಂಶ** | | xiii |
| **ಅಧ್ಯಾಯ 1 – ಅವಲೋಕನ** | | |
| **ಪೀಠಿಕೆ** | **1.1** | 1 |
| **ರಾಜ್ಯದ ಸಂಕ್ಷಿಪ್ತ ಚಿತ್ರ** | **1.2** | 1 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 1.2.1 | 1 |
| **ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ** | **1.3** | 4 |
| **ಸರ್ಕಾರಿ ಲೆಕ್ಕಗಳ ರಚನೆ** | **1.4** | 5 |
| **ಆಯವ್ಯಯ ಪ್ರಕ್ರಿಯೆಗಳು** | **1.5** | 7 |
| **ರಾಜ್ಯ ಹಣಕಾಸುಗಳ ಕಿರುನೋಟ** | **1.6** | 7 |
| **ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಕ್ಷಿಪ್ರ ಚಿತ್ರ** | **1.7** | 8 |
| **ವಿತ್ತೀಯ ಪ್ರಮಿತಿಗಳು** | **1.8** | 10 |
| ಕೊರತೆ/ಹೆಚ್ಚಳಗಳಲ್ಲಿನ ಪ್ರವೃತ್ತಿಗಳು | 1.8.1 | 10 |
| ವಿತ್ತೀಯ ಹೊಣೆಗಾರಿಕೆಗಳಲ್ಲಿ ಪ್ರವೃತ್ತಿಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ | 1.8.2 | 11 |
| **ರಾಜ್ಯದ ಹಣಕಾಸಿನ ಸ್ಥಿತಿ** | **1.9** | 12 |
| ಪ್ರಮುಖ ಹಣಕಾಸಿನ ಪ್ರಮಿತಿಗಳ ಮೇಲೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ, 2002ರ ಗುರಿಗಳು ಮತ್ತು ಅದರ ಸಾಧನೆಗಳು | 1.9.1 | 12 |
| 2021–22ರ ಮಧ್ಯಮಾವಧಿ ವಿತ್ತೀಯ ಯೋಜನೆಯ ಪ್ರಕ್ಷೇಪಣೆಗಳಿಗೆ ಪ್ರತಿಯಾಗಿ ವಾಸ್ತವಗಳು | 1.9.2 | 14 |
| **2021–22ರ ಅವಧಿಯಲ್ಲಿ ಪ್ರಮುಖ ವಿತ್ತೀಯ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪರಿಣಾಮ** | **1.10** | 15 |
| **ಅಧ್ಯಾಯ – 2 – ರಾಜ್ಯದ ಹಣಕಾಸು ವ್ಯವಹಾರಗಳು** | | |
| **ಪೀಠಿಕೆ** | **2.1** | **19** |
| **2021–22ರಲ್ಲಿ ಪ್ರಮುಖ ಹಣಕಾಸಿನ ಒಟ್ಟುಗೂಡಿಸುವಿಕೆಯಲ್ಲಿನ ಪ್ರಮುಖ ಬದಲಾವಣೆಗಳು** | **2.2** | **19** |
| **ನಿಧಿಯ ಆಕರಗಳು ಮತ್ತು ಅನ್ವಯ** | **2.3** | **20** |

| ಪರಿವಿಡಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| **ರಾಜ್ಯದ ಸಂಪನ್ಮೂಲಗಳು** | **2.4** | **21** |
| ರಾಜಸ್ವ ಸ್ವೀಕೃತಿಗಳು | 2.4.1 | 21 |
| ರಾಜಸ್ವ ಸ್ವೀಕೃತಿಗಳ ವೃದ್ಧಿ ಮತ್ತು ಪ್ರವೃತ್ತಿ | 2.4.2 | 23 |
| ರಾಜ್ಯದ ಸ್ವಂತ ಸಂಪನ್ಮೂಲಗಳು | 2.4.3 | 25 |
| ಕೇಂದ್ರದಿಂದ ವರ್ಗಾವಣೆಗಳು | 2.4.4 | 30 |
| ಭಾರತ ಸರ್ಕಾರದ ಸಹಾಯಾನುದಾನಗಳು | 2.4.5 | 31 |
| ಬಂಡವಾಳ ಸ್ವೀಕೃತಿಗಳು | 2.4.6 | 33 |
| ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆ | 2.4.7 | 34 |
| **ಸಂಪನ್ಮೂಲಗಳ ಅನ್ವಯ** | **2.5** | 35 |
| ವೆಚ್ಚದ ಬೆಳವಣಿಗೆ ಮತ್ತು ಸಂಯೋಜನೆ | 2.5.1 | 35 |
| ರಾಜಸ್ವ ವೆಚ್ಚ | 2.5.2 | 36 |
| ಬಂಡವಾಳ ವೆಚ್ಚ | 2.5.3 | 49 |
| ಬಂಡವಾಳ ವೆಚ್ಚದ ಗುಣಮಟ್ಟ | 2.5.4 | 50 |
| ವೆಚ್ಚದ ಆದ್ಯತೆಗಳು | 2.5.5 | 56 |
| **ಸಾರ್ವಜನಿಕ ಲೆಕ್ಕ** | **2.6** | 57 |
| ನಿವ್ವಳ ಸಾರ್ವಜನಿಕ ಲೆಕ್ಕದ ಶಿಲ್ಕುಗಳು | 2.6.1 | 57 |
| ಮೀಸಲು ನಿಧಿಗಳು | 2.6.2 | 58 |
| ನಿಷ್ಕ್ರಿಯ ಮೀಸಲು ನಿಧಿಗಳು | 2.6.3 | 63 |
| ಪರಿಹಾರಾರ್ಥ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನೆ ಪ್ರಾಧಿಕಾರ (ಸಿಎಎಮ್‌ಪಿಎ) | 2.6.4 | 63 |
| **ಸಾಲ ನಿರ್ವಹಣೆ** | **2.7** | 65 |
| ಸಾಲ ಚಿತ್ರಣದ ಅಂಗಗಳು | 2.7.1 | 66 |
| ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದನ್ನು ಭರಿಸಲು ವ್ಯವಸ್ಥೆ | 2.7.2 | 69 |
| ಋಣ ಚಿತ್ರಣ: ಸಾಲಗಳ ಅವಧಿ ಮುಕ್ತಾಯ ಮತ್ತು ಮರುಪಾವತಿ | 2.7.3 | 71 |
| **ಋಣ ಸಹಿಷ್ಣುತೆ ವಿಶ್ಲೇಷಣೆ** | **2.8** | 72 |
| ಸಾಲ ಪಡೆದ ನಿಧಿಯ ಬಳಕೆ | 2.8.1 | 75 |
| ಖಾತರಿಗಳ ಸ್ಥಿತಿ – ಸಾಂದರ್ಭಿಕ ಹೊಣೆಗಾರಿಕೆಗಳು | 2.8.2 | 76 |
| ನಗದು ಶಿಲ್ಕುಗಳ ನಿರ್ವಹಣೆ | 2.8.3 | 76 |

| ಪರಿವಿಡಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| **ತೀರ್ಮಾನ ಮತ್ತು ಶಿಫಾರಸುಗಳು** | **2.9** | 80 |
| **ಅಧ್ಯಾಯ-3 : ಆಯವ್ಯಯ ನಿರ್ವಹಣೆ** | | |
| **ಪೀಠಿಕೆ** | **3.1** | 85 |
| **ಆಯವ್ಯಯ ಪ್ರಕ್ರಿಯೆ** | **3.2** | 85 |
| **ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ** | **3.3** | 86 |
| **ಮಕ್ಕಳ ಆಯವ್ಯಯ** | **3.4** | 87 |
| **ಧನವಿನಿಯೋಗ ಲೆಕ್ಕಗಳು** | **3.5** | 88 |
| 2021–22ರಲ್ಲಿ ಒಟ್ಟು ಅವಕಾಶಗಳು, ವಾಸ್ತವಿಕ ವಿತರಣೆಗಳು ಮತ್ತು ಉಳಿತಾಯಗಳ ಸಾರಾಂಶ | 3.5.1 | 88 |
| ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು | 3.5.2 | 89 |
| **ಧನವಿನಿಯೋಗ ಲೆಕ್ಕಪರಿಶೋಧನೆ** | **3.6** | 90 |
| ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ಸಮೀಕ್ಷೆ | 3.6.1 | 90 |
| ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಸಮಗ್ರತೆ ಕುರಿತು ವ್ಯಾಖ್ಯಾನಗಳು | 3.6.2 | 90 |
| ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಪರಿಣಾಮಕಾರಿತ್ವದ ಕುರಿತು ವ್ಯಾಖ್ಯಾನಗಳು | 3.6.3 | 97 |
| **ಆಯ್ದ ಅನುದಾನಗಳ ಪರಿಶೀಲನೆಯ ಫಲಿತಾಂಶ** | **3.7** | 99 |
| ಅನುದಾನ ಸಂಖ್ಯೆ 07ರ ಸಮೀಕ್ಷೆ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 3.7.1 | 99 |
| ಅನುದಾನ ಸಂಖ್ಯೆ–20ರ ಸಮೀಕ್ಷೆ – ಲೋಕೋಪಯೋಗಿ ಇಲಾಖೆ | 3.7.2 | 103 |
| **ತೀರ್ಮಾನ** | **3.8** | 107 |
| **ಶಿಫಾರಸುಗಳು** | **3.9** | 107 |
| **ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು** | | |
| **ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು** | **4.1** | 111 |
| **ಬಳಕೆಯ ಪ್ರಮಾಣ ಪತ್ರಗಳ ಸಲ್ಲಿಕೆಯಲ್ಲಿ ವಿಳಂಬ** | **4.2** | 112 |
| **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು** | **4.3** | 113 |
| ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಲ್ಲಿ ವಿಳಂಬ | 4.3.1 | 115 |
| ಬಳಸದೇ ಉಳಿದ ಮೊತ್ತವನ್ನು ಜಮೆ ಮಾಡುವಲ್ಲಿ ವಿಳಂಬ | 4.3.2 | 116 |
| ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ನಿಧಿಗಳನ್ನು ಸೆಳೆಯುವುದು | 4.3.3 | 116 |

| ಪರಿವಿಡಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಅನುಮತಿಸಲಾಗದ ವೋಚರ್‌ಗಳು | 4.3.4 | 117 |
| ವೈಯಕ್ತಿಕ ಠೇವಣಿ ಖಾತೆಗಳಲ್ಲಿ ನಿಧಿಗಳನ್ನು ಎರಡು ವರ್ಷಗಳವರೆಗೆ ಹಿಡಿದಿಟ್ಟುಕೊಂಡಿರುವಿಕೆ | 4.3.5 | 117 |
| ಅನುಮೋದನೆಯನ್ನು ತಪ್ಪಿಸಲು ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ಮೊತ್ತದ ಬಿಲ್ಲುಗಳ ವಿಭಜನೆ | 4.3.6 | 118 |
| ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಿಂದ ಪಡೆದ ಹಣವನ್ನು ಉದ್ದೇಶ ಲೆಕ್ಕಶೀರ್ಷಿಕೆ–051 ಸಾಮಾನ್ಯ ವೆಚ್ಚಗಳಿಗೆ ಬಳಸುವಿಕೆ | 4.3.7 | 118 |
| **ವೈಯಕ್ತಿಕ ಠೇವಣಿ ಖಾತೆಗಳು** | **4.4** | 118 |
| ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳ ಪ್ರವೃತ್ತಿಗಳು | 4.4.1 | 119 |
| ನಿಷ್ಕ್ರಿಯ ಮತ್ತು ಲೆಕ್ಕ ಹೊಂದಾಣಿಕೆ ಮಾಡದ ವೈಯಕ್ತಿಕ ಠೇವಣಿ ಖಾತೆಗಳು | 4.4.2 | 120 |
| **ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು** | **4.5** | 120 |
| ಪ್ರಮುಖ ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು | 4.5.1 | 120 |
| ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು | 4.5.2 | 122 |
| **ಇಲಾಖೆಗಳ ಅಂಕಿಗಳ ಹೊಂದಾಣಿಕೆ ಆಗದಿರುವುದು** | **4.6** | 123 |
| **ನಗದು ಶಿಲ್ಕಿನ ಲೆಕ್ಕಹೊಂದಾಣಿಕೆ** | **4.7** | 124 |
| **ಲೆಕ್ಕಪತ್ರ ಮಾನದಂಡಗಳ ಅನುಸರಣೆ** | **4.8** | 125 |
| **ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿಗಳನ್ನು ಶಾಸಕಾಂಗದಲ್ಲಿ ಮಂಡಿಸುವುದು** | **4.9** | 126 |
| **ಇಲಾಖಾ ವಾಣಿಜ್ಯೋದ್ಯಮಗಳು/ನಿಗಮಗಳು/ಕಂಪನಿಗಳು** | **4.10** | 126 |
| **ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ/ಸಾಲಗಳ ವಿವರಗಳನ್ನು ಸಲ್ಲಿಸದಿರುವುದು** | **4.11** | 127 |
| **ಲೆಕ್ಕ ಸಲ್ಲಿಕೆಯ ಕಾಲಮಿತಿಗಳು ಮತ್ತು ಲೆಕ್ಕಗಳ ಗುಣಮಟ್ಟ** | **4.12** | 127 |
| **ಹಣ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿ.** | **4.13** | 128 |
| **ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ** | **4.14** | 129 |
| **ತೀರ್ಮಾನ** | **4.15** | 129 |
| **ಶಿಫಾರಸುಗಳು** | **4.16** | 130 |

| ಪರಿವಿಡಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| **ಅಧ್ಯಾಯ–5: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** | | |
| **ಸರ್ಕಾರಿ ಕಂಪನಿಯ ವ್ಯಾಖ್ಯಾನ** | **5.1** | 133 |
| **ಲೆಕ್ಕಪರಿಶೋಧನಾ ಆದೇಶ** | **5.2** | 133 |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಎಸ್‌ಡಿಪಿ) ಅವುಗಳ ಕಾಣಿಕೆ** | **5.3** | 134 |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮತ್ತು ಆಯವ್ಯಯ ಬೆಂಬಲ** | **5.4** | 135 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹೊಂದಿರುವಿಕೆ ಮತ್ತು ಸಾಲಗಳು | 5.4.1 | 135 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹೂಡಿಕೆಯಲ್ಲಿ ಮಾರುಕಟ್ಟೆ ಬಂಡವಾಳೀಕರಣ | 5.4.2 | 135 |
| ಬಂಡವಾಳ ಹಿಂತೆಗೆತ, ಪುನರ್–ರಚನೆ ಮತ್ತು ಖಾಸಗೀಕರಣ | 5.4.3 | 135 |
| ವಿದ್ಯುತ್ ಸರಬರಾಜು ಕಂಪನಿಗಳು | 5.4.4 | 135 |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಪ್ರತಿಫಲ** | **5.5** | 137 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿದ ಲಾಭ | 5.5.1 | 137 |
| ರಾಜ್ಯದ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಷೇರು ಲಾಭಾಂಶ (ಡಿವಿಡೆಂಡ್) ಪಾವತಿ | 5.5.2 | 138 |
| **ಋಣ ಸೇವೆಗಳು** | **5.6** | 139 |
| ಬಡ್ಡಿ ವ್ಯಾಪ್ತಿ ಅನುಪಾತ | 5.6.1 | 139 |
| **ವಿನಿಮಯ ಕೇಂದ್ರದಲ್ಲಿ ನೋಂದಣಿಯಾದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ ಅದಕ್ಕನುಗುಣವಾಗಿ ಖಾಸಗಿ ಕಂಪನಿಗಳ ಕಾರ್ಯ ನಿರ್ವಹಣೆ** | **5.7** | 139 |
| ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲ | 5.7.1 | 140 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಈಕ್ವಿಟಿ ಮೇಲಿನ ಪ್ರತಿಫಲ | 5.7.2 | 140 |
| **ನಷ್ಟ ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** | **5.8** | 141 |
| ಅನುಭವಿಸಿದ ನಷ್ಟಗಳು | 5.8.1 | 141 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಬಂಡವಾಳ ಅಳಿಸಿಹೋಗುವಿಕೆ | 5.8.2 | 142 |
| **ರಾಜ್ಯ ಸರ್ಕಾರಿ ವಲಯ ಉದ್ದಿಮೆಗಳ ಲೆಕ್ಕಪರಿಶೋಧನೆ** | **5.9** | 143 |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕ** | **5.10** | 143 |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ** | **5.11** | 143 |

| ಪರಿವಿಡಿ | | |
|---|---|---|
| | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| ಸಮಯೋಚಿತ ಸಲ್ಲಿಕೆಯ ಅಗತ್ಯತೆ | 5.11.1 | 143 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿ ಸಮಯೋಚಿತತೆ | 5.11.2 | 144 |
| ಶಾಸನಬದ್ದ ನಿಗಮಗಳಿಂದ ಲೆಕ್ಕಪತ್ರಗಳ ತಯಾರಿಕೆಯಲ್ಲಿ ಸಮಯೋಚಿತತೆ | 5.11.3 | 145 |
| **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲುಸ್ತುವಾರಿ (ಒವರ್‌ಸೈಟ್)– ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಪೂರಕ ಲೆಕ್ಕಪರಿಶೋಧನೆ** | **5.12** | 145 |
| ಆರ್ಥಿಕ ನಿರೂಪಣಾ ಚೌಕಟ್ಟು | 5.12.1 | 145 |
| ಶಾಸನಬದ್ಧ ಲೆಕ್ಕಪರಿಶೋಧಕರಿಂದ ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ | 5.12.2 | 145 |
| ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಪೂರಕ ಲೆಕ್ಕಪರಿಶೋಧನೆ | 5.12.3 | 146 |
| **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲುಸ್ತುವಾರಿ ಪಾತ್ರದ ಫಲಿತಾಂಶಗಳು** | **5.13** | 146 |
| ಕಂಪನಿಗಳ ಅಧಿನಿಯಮ,2013ರ ಪರಿಚ್ಛೇದ 143ರ ಅಡಿಯಲ್ಲಿ ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ | 5.13.1 | 146 |
| ಹಣಕಾಸು ತ:ಖ್ತೆಗಳ ಮಾರ್ಪಾಟುಗಳು | 5.13.2 | 146 |
| ಲೆಕ್ಕಪರಿಶೋಧಕರ ವರದಿಯ ಪರಿಷ್ಕರಣೆ | 5.13.3 | 147 |
| ಸರ್ಕಾರಿ ಕಂಪನಿಗಳ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ನೀಡಿದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಗಮನಾರ್ಹ ಟಿಪ್ಪಣಿಗಳು | 5.13.4 | 147 |
| ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರಾಗಿರುವ ಶಾಸನಬದ್ಧ ನಿಗಮಗಳು | 5.13.5 | 147 |
| **ವ್ಯವಸ್ಥಾಪನ ಪತ್ರಗಳು** | **5.14** | 148 |
| **ತೀರ್ಮಾನ** | **5.15** | 148 |
| **ಶಿಫಾರಸುಗಳು** | **5.16** | 149 |

## ಪರಿವಿಡಿ

## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1.1 | ರಾಜ್ಯ ಚಿತ್ರಣ | 153 |
| 1.2 | ಸರ್ಕಾರಿ ಲೆಕ್ಕಗಳ ಸ್ವರೂಪ | 155 |
| 1.3 | 31 ಮಾರ್ಚಿ 2022ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ | 156 |
| 2.1 | ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ | 158 |
| 2.2 | ರಾಜ್ಯ ಸರ್ಕಾರದ ಹಣಕಾಸಿನ ಕಾಲ ಸರಣಿ ದತ್ತಾಂಶಗಳು | 162 |
| 2.3 | ಇಲಾಖಾವಾರು ಸಹಾಯಧನಗಳ ಪಾಲು | 168 |
| 2.4 | ಪರೋಕ್ಷ ಸಹಾಯಧನಗಳು | 169 |
| 2.5 | ಲೇಖಾಪಾಲರ ಕಛೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ಸವಿವರ ಸಾಲ ಲೆಕ್ಕಗಳು | 170 |
| 3.1 | ಮಕ್ಕಳ ಆಯವ್ಯಯ ವಿವರಣಾಪಟ್ಟಿಯಲ್ಲಿ ವರ್ಗಾವಾರು/ಇಲಾಖಾವಾರು ಆಯವ್ಯಯ ಹಂಚಿಕೆ | 171 |
| 3.2 | ಆಯವ್ಯಯದಲ್ಲಿ ಅವಕಾಶ ಕಲ್ಪಿಸದೆ ಕಾರ್ಯಕಾರಿ ಆದೇಶಗಳ ಮುಖಾಂತರ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲಾದ ಹೆಚ್ಚುವರಿ ಅವಕಾಶಗಳು | 172 |
| 3.3 | ಅನಗತ್ಯ ಪೂರಕ ಅಂದಾಜುಗಳು | 173 |
| 3.4 | ಅಧಿಕವಾದ ಪೂರಕ ಅಂದಾಜುಗಳು | 174 |
| 3.5 | ಸಾಕಷ್ಟಿಲ್ಲದ ಪೂರಕ ಅಂದಾಜುಗಳು | 176 |
| 3.6 | ಅನಗತ್ಯ ಪುನರ್ವಿನಿಯೋಗಗಳು | 178 |
| 3.7 | ದೋಷಪೂರಿತ ಪುನರ್ವಿನಿಯೋಗ ಆದೇಶಗಳು | 182 |
| 3.8 | ₹100 ಕೋಟಿ ಹಾಗೂ ಅದಕ್ಕಿಂತ ಹೆಚ್ಚಾದ ಬಳಕೆಯಾಗದೇ ಉಳಿದ ಅವಕಾಶಗಳ ಅನುದಾನ/ವಿನಿಯೋಗಗಳು | 186 |
| 3.9 | ಅವಕಾಶಗಳು ಬಳಕೆಯಾಗದೆ ಉಳಿದು ಅದರ ಯಾವುದೇ ಭಾಗವನ್ನು ಅಧ್ಯರ್ಪಣೆ ಮಾಡದಿರುವ ವಿವಿಧ ಅನುದಾನಗಳು | 188 |
| 3.10 | ಬಳಕೆಯಾಗದೇ ಉಳಿದ ಸಂಪೂರ್ಣ ಅವಕಾಶಗಳ ಅಧ್ಯರ್ಪಣೆ | 190 |
| 3.11 | ಬಳಕೆಯಾಗದೇ ಉಳಿದ ಅವಕಾಶಗಳ ಅಧ್ಯರ್ಪಣೆ | 191 |
| 3.12 | ಪ್ರಸಕ್ತ ವರ್ಷದಲ್ಲಿ ಗಣನೀಯ ಅಧ್ಯರ್ಪಣೆಗಳ ಸಮೀಕ್ಷೆಯ ಫಲಿತಾಂಶಗಳು | 193 |
| 3.13 | 30 ಮತ್ತು 31 ಮಾರ್ಚ್ 2022ರಂದು ಅಧ್ಯರ್ಪಣೆ ಮಾಡಲಾದ ₹ ಐದು ಕೋಟಿಗೂ ಮೀರಿದ ಅವಕಾಶಗಳು | 202 |

## ಪರಿವಿಡಿ

## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 3.14 | ಸಕ್ರಮಗೊಳಿಸಬೇಕಾಗಿರುವ ಹೆಚ್ಚಾದ ವೆಚ್ಚಗಳು | 203 |
| 3.15 | ಉಳಿತಾಯದ ಮೊತ್ತಗಳಿಗೆ ನಿರ್ದಿಷ್ಟ ಮಾಹಿತಿ ಒದಗಿಸದ ಅನುದಾನಗಳ ವಿವರಗಳು | 206 |
| 3.16 | ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡ | 207 |
| 3.17 | ಮಾರ್ಚ್ ತಿಂಗಳಲ್ಲಿನ ವೆಚ್ಚದ ಒತ್ತಡ | 209 |
| 4.1 | ಪ್ರಧಾನ ಶೀರ್ಷಿಕಾವಾರು ಇಲಾಖಾವಾರು ಮತ್ತು ವರ್ಷಾವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿವರಗಳು | 211 |
| 4.2 | ನಿಷ್ಕ್ರಿಯ ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿ ಉಳಿದಿರುವ ಶಿಲ್ಕುಗಳು | 212 |
| 4.3 | ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 214 |
| 4.4 | ಬಾಕಿ ಇರುವ ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ದಿಮೆಗಳ ಪ್ರಪತ್ರಲೆಕ್ಕಗಳ ವಿವರಗಳು | 215 |
| 4.5 | ಸರ್ಕಾರದಿಂದ ಗಣನೀಯವಾಗಿ ಹಣ ಸಹಾಯ ಪಡೆದ ಸಂಸ್ಥೆಗಳಿಂದ ಮಾಹಿತಿ ಬಾರದಿರುವುದು | 217 |
| 4.6 | ಹಣ ದುರುಪಯೋಗ ದುರ್ಬಳಕೆ ಇತ್ಯಾದಿ ಪ್ರಕರಣಗಳ ಇಲಾಖಾವಾರು/ಅವಧಿವಾರು ವಿವರಗಳು | 218 |
| 5.1 | ಕರ್ನಾಟಕದಲ್ಲಿ ಲೆಕ್ಕಪರಿಶೋಧನೆಯ ವ್ಯಾಪ್ತಿಯಲ್ಲಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ | 220 |
| 5.2 | ಸರ್ಕಾರಿ ಕಂಪನಿಗಳ ಲಾಭಸಾಧ್ಯತೆ ಮೇಲೆ ಟಿಪ್ಪಣಿಗಳ ಪ್ರಭಾವ | 224 |
| 5.3 | ಸರ್ಕಾರಿ ಕಂಪನಿಗಳ ಹಣಕಾಸು ಸ್ಥಿತಿಯ ಮೇಲೆ ಟಿಪ್ಪಣಿಯ ಪ್ರಭಾವ | 225 |
| 5.4 | ತಮ್ಮ ಇತ್ತೀಚಿಗೆ ಮುಕ್ತಾಯಗೊಂಡ ಲೆಕ್ಕಪತ್ರಗಳ ಪ್ರಕಾರ ನಿವ್ವಳ ಆಸ್ತಿ ಮೌಲ್ಯ (ನೆಟ್‌ವರ್ಥ್) ಅಳಿಸಿಹೋಗಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಿವರಗಳು | 226 |
| | **ಪಾರಿಭಾಷಿಕ ಪದಗಳು** | **228** |
| | | |

# ಮುನ್ನುಡಿ

1. ಈ ವರದಿಯನ್ನು ಸಂವಿಧಾನದ ಅನುಚ್ಛೇದ 151ರ ಅನ್ವಯ ರಾಜ್ಯಪಾಲರಿಗೆ ಕರ್ನಾಟಕ ವಿಧಾನ ಮಂಡಲದಲ್ಲಿ ಸಲ್ಲಿಸಲು ತಯಾರಿಸಲಾಗಿದೆ.

2. ಈ ವರದಿಯ ಅಧ್ಯಾಯ–1 ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೀಲನಾ ವರದಿಯ ಆಧಾರ ಮತ್ತು ವಿಧಾನ, ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳಾದ ರಾಜಸ್ವ ಹೆಚ್ಚಳ ಮತ್ತು ಆರ್ಥಿಕ ಕೊರತೆಗಳ ಪ್ರವೃತ್ತಿ ಹಾಗೂ ಆರ್ಥಿಕ ತಿದ್ದುಪಡಿಗಳ ಮಾರ್ಗಗಳನ್ನು ಒಳಗೊಂಡಿದೆ.

3. ಈ ವರದಿಯ ಅಧ್ಯಾಯ–2 ಮತ್ತು 3 ಕ್ರಮವಾಗಿ, ರಾಜ್ಯ ಸರ್ಕಾರದ 31 ಮಾರ್ಚ್ 2022ಕ್ಕೆ ಅಂತ್ಯಗೊಂಡ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳ ಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಹೊಂದಿವೆ. ಅಗತ್ಯವಿದ್ದ ಕಡೆ ರಾಜ್ಯ ಸರ್ಕಾರದಿಂದಲೂ ಮಾಹಿತಿಯನ್ನು ಪಡೆಯಲಾಗಿದೆ.

4. ಅಧ್ಯಾಯ–4 ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳಲ್ಲಿ 2021–22ನೇ ವರ್ಷದಲ್ಲಿ ರಾಜ್ಯ ಸರ್ಕಾರದ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಸ್ಥೂಲ ಸಮೀಕ್ಷೆಯೊಂದಿಗೆ ಅನುಪಾಲನೆಯ ಸ್ಥಿತಿಯನ್ನು ನಿರೂಪಿಸುತ್ತದೆ.

5. ಅಧ್ಯಾಯ–5: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು: ಈ ಅಧ್ಯಾಯವು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಆರ್ಥಿಕ ಸಾಧನೆ ಮತ್ತು ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸು ತಖ್ತೆ:ಗಳ ಪೂರಕ ಲೆಕ್ಕಪರಿಶೋಧನೆಯ ಕಾರಣದಿಂದಾಗಿ ನೀಡಿದ ಟಿಪ್ಪಣಿಗಳ ಪ್ರಭಾವವನ್ನು ಚರ್ಚಿಸುತ್ತದೆ.

6. 31 ಮಾರ್ಚ್ 2010ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ವ್ಯವಹಾರಗಳ ವರದಿಗೆ, ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸಿನ ಮೇಲೆ (ಹದಿಮೂರನೇ ವರದಿ–ಡಿಸೆಂಬರ್ 2011) ಸರ್ಕಾರವು ತೆಗೆದುಕೊಂಡ ಕ್ರಮದ ವರದಿಯ ಮೇಲಿನ ಸಾರ್ವಜನಿಕ ಲೆಕ್ಕ ಸಮಿತಿಯ ಶಿಫಾರಸುಗಳನ್ನು (ಐದನೇ ವರದಿ – ಜುಲೈ 2015) ಗಣನೆಗೆ ತೆಗೆದುಕೊಂಡು ವರದಿಯನ್ನು ತಯಾರಿಸಲಾಗಿದೆ.

7. ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯ ಮತ್ತು ವಿವಿಧ ಇಲಾಖೆಗಳ ವಹಿವಾಟುಗಳ ಲೆಕ್ಕಪರಿಶೋಧನಾ ಫಲಿತಾಂಶಗಳ ಸರ್ಕಾರದ ಕಂಪನಿಗಳ, ಶಾಸನಬದ್ಧ ನಿಗಮಗಳ, ಮಂಡಳಿಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದ ಅಭಿಪ್ರಾಯಗಳು ಮತ್ತು ರಾಜಸ್ವ ಸ್ವೀಕೃತಿಗಳ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಒಳಗೊಂಡ ವರದಿಗಳನ್ನು ಪ್ರತ್ಯೇಕವಾಗಿ ಮಂಡಿಸಲಾಗಿದೆ.

8. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಹಿನ್ನೆಲೆ

ಹನ್ನೊಂದನೇ ಹಣಕಾಸು ಆಯೋಗವು ನಿಗದಿಪಡಿಸಿದ ಹಣಕಾಸಿನ ತಿದ್ದುಪಡಿಯ ಪ್ರಮಿತಿಗಳನ್ನು ಆಧರಿಸಿ 2000–05ರ ಅವಧಿಗೆ ಮೊದಲ ಮಧ್ಯಮಾವಧಿ ಹಣಕಾಸಿನ ಯೋಜನೆಯನ್ನು ಜಾರಿಗೊಳಿಸುವ ಮೂಲಕ ಕರ್ನಾಟಕ ಸರ್ಕಾರವು ಹಣಕಾಸಿನ ಸುಧಾರಣೆಗಳು ಮತ್ತು ಬಲವರ್ಧನೆಗೆ ಆದ್ಯತೆ ನೀಡಿದೆ. ಮಧ್ಯಮಾವಧಿಯ ಹಣಕಾಸಿನ ಯೋಜನೆಯ ಆವರ್ತನ ವಾರ್ಷಿಕ ದಾಖಲೆಯಾಗಿ ಇದರಲ್ಲಿ ನಿಗದಿಪಡಿಸಲಾದ ವಿತ್ತೀಯ ಗುರಿಗಳು ಮತ್ತು ಕಾರ್ಯನೀತಿಗಳು ವಾರ್ಷಿಕ ಆಯವ್ಯಯ ತಯಾರಿಕೆಗೆ ಪೂರಕವಾಗಿದೆ. ಕರ್ನಾಟಕವು ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು (ಸೆಪ್ಟೆಂಬರ್ 2002) ಜಾರಿಗೊಳಿಸಿದ ಮೊದಲ ರಾಜ್ಯವಾಗಿದ್ದು, ಮಧ್ಯಮಾವಧಿಯ ಹಣಕಾಸಿನ ಯೋಜನೆಗೆ ಶಾಸನಬದ್ಧ ಬೆಂಬಲವನ್ನು ನೀಡಿದೆ. ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯು ರಾಜಸ್ವ ಹೆಚ್ಚಳವನ್ನು ಸಾಧಿಸುವುದು, ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದು , ಹಣಕಾಸಿನ ನೀತಿಯ ಪರಿಣಾಮಕಾರಿ ನಿರ್ವಹಣೆಗೆ ಇರುವ ಅಡ್ಡಿಗಳನ್ನು ತೆಗೆದುಹಾಕುವುದರ ಮೂಲಕ ಸಾಮಾಜಿಕ ಮತ್ತು ಭೌತಿಕ ಮೂಲಸೌಕರ್ಯ ಮತ್ತು ಮಾನವ ಅಭಿವೃದ್ಧಿಯನ್ನು ಸುಧಾರಿಸುವ ವ್ಯಾಪ್ತಿಯನ್ನು ಹೆಚ್ಚಿಸುವುದು ಮತ್ತು ಸಾಲ ಮತ್ತು ಋಣ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ವಿವೇಚನಾಯುಕ್ತ ಋಣ ನಿರ್ವಹಣೆ, ಮಧ್ಯಂತರ ವಿತ್ತೀಯ ಪರಿಮಿತಿಗಳ ಬಳಕೆಯಿಂದ ಹಣಕಾಸು ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಸಾಧಿಸುವುದರ ಮುಖಾಂತರ ಹಣಕಾಸಿನ ಸ್ಥಿರತೆ ಮತ್ತು ಸಹಿಷ್ಣುತೆಯನ್ನು ಖಾತ್ರಿಪಡಿಸುವ ಗುರಿಯನ್ನು ಹೊಂದಿದೆ.

## ವರದಿ

31 ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಕರ್ನಾಟಕ ಸರ್ಕಾರದ ಪರಿಶೋಧಿತ ಲೆಕ್ಕಗಳನ್ನು ಆಧರಿಸಿ, ಈ ವರದಿಯು ರಾಜ್ಯ ಸರ್ಕಾರದ ಹಣಕಾಸುಗಳ ವ್ಯವಹಾರದ ವಿಶ್ಲೇಷಣಾತ್ಮಕ ವಿಮರ್ಶೆಯನ್ನು ಒದಗಿಸುತ್ತದೆ. ವರದಿಯನ್ನು ಐದು ಅಧ್ಯಾಯಗಳಲ್ಲಿ ರಚಿಸಲಾಗಿದೆ.

**ಅಧ್ಯಾಯ 1– ಅವಲೋಕನ:** ಈ ಅಧ್ಯಾಯವು ವರದಿಯ ಆಧಾರ ಮತ್ತು ವಿಧಾನಗಳನ್ನು ವಿವರಿಸುತ್ತದೆ ಮತ್ತು ಇದರಲ್ಲಿನ ದತ್ತಾಂಶವು, ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಸಮಗ್ರ ಹಣಕಾಸು ವಿಶ್ಲೇಷಣೆ ಮತ್ತು ಕೊರತೆಗಳು/ಹೆಚ್ಚಳವೂ ಸೇರಿದಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

**ಅಧ್ಯಾಯ 2– ರಾಜ್ಯದ ಹಣಕಾಸು ವ್ಯವಹಾರಗಳು:** ಈ ಅಧ್ಯಾಯವು ರಾಜ್ಯದ ಹಣಕಾಸಿನ ವಿಶಾಲ ನೋಟದೊಂದಿಗೆ ರಾಜ್ಯದ ಹಣಕಾಸು ಲೆಕ್ಕಗಳನ್ನು ಆಧರಿಸಿ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ನಿರ್ಣಾಯಕ ಬದಲಾವಣೆಗಳನ್ನು, 2017–18ರಿಂದ 2021–22ರವರೆಗಿನ ಒಟ್ಟಾರೆ ಪ್ರವೃತ್ತಿಗಳು, ರಾಜ್ಯದ ಋಣ ಚಿತ್ರಣ ಮತ್ತು ಪ್ರಮುಖ ಸಾರ್ವಜನಿಕ ಲೆಕ್ಕ ವಹಿವಾಟುಗಳ ವಿಶ್ಲೇಷಣೆಯನ್ನು ಒದಗಿಸುತ್ತದೆ.

**ಅಧ್ಯಾಯ 3– ಆಯವ್ಯಯ ನಿರ್ವಹಣೆ:** ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳನ್ನು ಆಧರಿಸಿದೆ ಮತ್ತು ರಾಜ್ಯ ಸರ್ಕಾರದ ಹಣ ವಿನಿಯೋಗ ಮತ್ತು ಹಂಚಿಕೆಯ ಆದ್ಯತೆಗಳನ್ನು ಪರಿಶೀಲಿಸುತ್ತದೆ. ಇದು ಸಾಂವಿಧಾನಿಕ ನಿಬಂಧನೆಗಳಿಂದ ಆದ ವಿಚಲನಗಳನ್ನು ಕುರಿತು ವರದಿ ಮಾಡುತ್ತದೆ ಮತ್ತು ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಪ್ರಧಾನವಾಗಿ ತೋರಿಸುತ್ತದೆ.

**ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು:** ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯವಿಧಾನಗಳು ಮತ್ತು ನಿರ್ದೇಶನಗಳೊಂದಿಗೆ ರಾಜ್ಯ ಸರ್ಕಾರದ ಇಲಾಖೆಗಳ ಅನುಸರಣೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ. .

**ಅಧ್ಯಾಯ 5 – ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು:** ಈ ಅಧ್ಯಾಯವು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಆರ್ಥಿಕ ಸಾಧನೆ ಮತ್ತು ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸು ತಖ್ತೆಗಳ ಪೂರಕ ಲೆಕ್ಕಪರಿಶೋಧನೆಯ ಕಾರಣದಿಂದಾಗಿ ನೀಡಿದ ಟಿಪ್ಪಣಿಗಳ ಪ್ರಭಾವವನ್ನು ಚರ್ಚಿಸುತ್ತದೆ.

ವರದಿಯಲ್ಲಿನ ಅಭಿಪ್ರಾಯಗಳಿಗೆ ಸಮರ್ಥನೀಯವಾಗಿ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹೆಚ್ಚುವರಿ ದತ್ತಾಂಶದ ಅನುಬಂಧಗಳನ್ನು ವರದಿಯು ಒಳಗೊಂಡಿದೆ. ಆಯ್ದ ಪದಗಳ ಪಾರಿಭಾಷಿಕ ಪಟ್ಟಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

## ಲೆಕ್ಕ ಪರಿಶೋಧನೆಯಲ್ಲಿನ ಅಂಶಗಳು

### ಹಣಕಾಸಿನ ಸ್ಥಿತಿ

ರಾಜ್ಯದ ಹಣಕಾಸಿನ ಸ್ಥಿತಿಯನ್ನು ಮೂರು ಪ್ರಮುಖ ಹಣಕಾಸಿನ ಪ್ರಮಿತಿಗಳ ಪರಿಭಾಷೆಯಲ್ಲಿ ನೋಡಲಾಗುತ್ತದೆ.– ರಾಜಸ್ವ ಹೆಚ್ಚಳ/ಕೊರತೆ, ವಿತ್ತೀಯ ಕೊರತೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಾಕಿ ಇರುವ ಸಾಲದ ಅನುಪಾತ.

2004–05ರಿಂದ ರಾಜಸ್ವ ಹೆಚ್ಚಳವನ್ನು ದಾಖಲಿಸಿದ್ದ ರಾಜ್ಯವು ಮೊಟ್ಟ ಮೊದಲ ಬಾರಿಗೆ 2020–21ರಲ್ಲಿ ರಾಜಸ್ವ ಕೊರತೆಯನ್ನು ಕಂಡಿತು. ರಾಜಸ್ವ ಕೊರತೆಯು 2021–22ರಲ್ಲಿಯೂ ಮುಂದುವರೆಯಿತು, ಮತ್ತು ಅದು ₹13,666 ಕೋಟಿಯಷ್ಟಿತ್ತು. 2017–18ರಿಂದ 2019–20ರ ಅವಧಿಯಲ್ಲಿ ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಮೂರಕ್ಕಿಂತಾ ಕಡಿಮೆ ಮತ್ತು 2020–21 ಮತ್ತು 2021–22ರಲ್ಲಿ ಶೇಕಡ ನಾಲ್ಕಕ್ಕಿಂತ ಕಡಿಮೆ ಇಡುವಲ್ಲಿ ರಾಜ್ಯವು ಯಶಸ್ವಿಯಾಗಿದೆ.

ಈ ಅವಧಿಯಲ್ಲಿ ರಾಜ್ಯದ ಬಾಕಿ ಇರುವ ಸಾಲವು (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಮೊದಲ ನಾಲ್ಕು ವರ್ಷಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 18.47 ಮತ್ತು 24.03ರ ನಡುವೆ ಉಳಿಯಿತು (ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002ರಲ್ಲಿ ಸೂಚಿಸಲಾದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 25ಕ್ಕಿಂತ ಕಡಿಮೆ) ಮತ್ತು 2021–22ರಲ್ಲಿ ಶೇಕಡ 26.71ಕ್ಕೆ ಏರಿತು.

**(ಅಧ್ಯಾಯ 1)**

### ರಾಜ್ಯದ ಹಣಕಾಸು ವ್ಯವಹಾರ

ಹಿಂದಿನ ವರ್ಷಕ್ಕೆ ಹೋಲಿಸಿದರೆ, 2021–22ರಲ್ಲಿ ರಾಜ್ಯ ಸರ್ಕಾರವು ತನ್ನ ರಾಜಸ್ವ ಸ್ವೀಕೃತಿಯಲ್ಲಿ ಶೇಕಡ 24.92ರಷ್ಟು ಹೆಚ್ಚಳವನ್ನು ದಾಖಲಿಸಿದೆ.

ಕಳೆದ 2017–18ರಿಂದ 2019–20ರವರೆಗೆ ಸ್ಥಿರತೆಯನ್ನು ಕಂಡಿದ್ದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು 2020–21ರಲ್ಲಿ ಶೇಕಡ 5.61ಕ್ಕೆ ಇಳಿದಿದೆ. ಅದು ಮತ್ತೆ 2021–22ರಲ್ಲಿ ಹೆಚ್ಚಳವಾಯಿತು ಮತ್ತು ಶೇಕಡ 7.01ರಷ್ಟಿತ್ತು. ಸ್ವಂತ ತೆರಿಗೆ ಆದಾಯವು ರಾಜಸ್ವ ಸ್ವೀಕೃತಿಗಳ ಪ್ರಮುಖ ಭಾಗವಾಗಿ (ಶೇಕಡ 62) ಕೊಡುಗೆ ನೀಡಿದೆ. ರಾಜಸ್ವ ಸ್ವೀಕೃತಿಗಳಿಗೆ ತೆರಿಗೆಯೇತರ ಆದಾಯದ ಅನುಪಾತವು 2017–18ರಲ್ಲಿದ್ದ ಶೇಕಡ 4.41ರಿಂದ 2021–22ರಲ್ಲಿ 6.02ಕ್ಕೆ ಹೆಚ್ಚಳವಾಗಿದೆ. ತೆರಿಗೆಯೇತರ ಆದಾಯವು ಹೆಚ್ಚಳವಾಗಿದ್ದರೂ, ಅದಕ್ಕೆ ರಾಜ್ಯ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಅತ್ಯಲ್ಪವಾಗಿದ್ದು (2021–22ರಲ್ಲಿ ಶೇಕಡ 0.68) ಇದು ತೆರಿಗೆಯೇತರ ಆದಾಯ ಸಂಗ್ರಹವನ್ನು ಸಜ್ಜುಗೊಳಿಸುವ ಅಗತ್ಯವನ್ನು ಸೂಚಿಸುತ್ತದೆ. 2021–22ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ಶೇಕಡ 53.42ರಷ್ಟು ಹೆಚ್ಚಳವಾಗಿದೆ.

## ರಾಜಸ್ವ ವೆಚ್ಚ

ಹಿಂದಿನ ವರ್ಷಕ್ಕೆ (ಶೇಕಡ 35) ಹೋಲಿಸಿದರೆ ಸಾಮಾಜಿಕ ಸೇವೆಗಳ ವಿಭಾಗದಡಿಯ ವೆಚ್ಚದ ಪಾಲು 2021–22ರಲ್ಲಿ ಶೇಕಡ ಮೂರರಷ್ಟು (ಶೇಕಡ 38) ಹೆಚ್ಚಳವಾಗಿದೆ. ಅದರ ಪರಿಣಾಮವಾಗಿ, ಸಾಮಾನ್ಯ ಸೇವೆಗಳು ಮತ್ತು ಆರ್ಥಿಕ ಸೇವೆಗಳ ಪಾಲು 2021–22ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ ಒಂದರಷ್ಟು ಇಳಿಕೆಯಾಗಿದೆ. 2020–21ರಲ್ಲಿ ಶೇಕಡ 85ರಷ್ಟಿದ್ದ ಸಂಬಳ, ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಗಳು, ಬಡ್ಡಿ ಪಾವತಿಗಳು, ಪಿಂಚಣಿಗಳು, ಸಹಾಯಧನಗಳು, ಆಡಳಿತಾತ್ಮಕ ವೆಚ್ಚಗಳು, ಸಹಾಯಾನುದಾನಗಳು ಮತ್ತು ಹಣಕಾಸು ನೆರವುಗಳ ಮೇಲಿನ ಬದ್ಧ ವೆಚ್ಚವು 2021–22ರಲ್ಲಿ ಶೇಕಡ 80ಕ್ಕೆ ಇಳಿಕೆಯಾಯಿತು. 2017–18ರಿಂದ 2021–22ರ ಅವಧಿಯಲ್ಲಿ, ಸ್ಥಳೀಯ ಸಂಸ್ಥೆಗಳಿಗೆ ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಹಂಚಿಕೆಗಳು ಇಳಿಕೆಯ ಪ್ರವೃತ್ತಿಯಲ್ಲಿದ್ದರೆ ಸಹಾಯಧನಗಳು ರಾಜಸ್ವ ಸ್ವೀಕೃತಿಗಳ ಶೇಕಡಾವಾರು ಏರಿಕೆ ಪ್ರವೃತ್ತಿಯಲ್ಲಿತ್ತು ಮತ್ತು ಅದು 2017–18ರಲ್ಲಿದ್ದ ಶೇಕಡ 10ರಿಂದ 2021–22ರಲ್ಲಿ ಶೇಕಡ 14ಕ್ಕೆ ಹೆಚ್ಚಳವಾಯಿತು.

## ವೆಚ್ಚದ ಗುಣಮಟ್ಟ

ಹಿಂದಿನ ವರ್ಷಕ್ಕೆ ಹೋಲಿಸಿದರೆ (ಶೇಕಡ 21.45) 2021–22ರ ವರ್ಷದಲ್ಲಿ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) (ಶೇಕಡ 19.92) ಶೇಕಡ 1.53ರಷ್ಟು ಇಳಿಕೆಯಾಗಿದೆ. ಹಿಂದಿನ ವರ್ಷಗಳಲ್ಲಿ ಅತ್ಯಲ್ಪವಾಗಿದ್ದ ಹೂಡಿಕೆಯಿಂದ ಬಂದ ಲಾಭವು (ಶೇಕಡ 0.1) 2021–22ರಲ್ಲಿ ಶೇಕಡ 0.5ಕ್ಕೆ ಹೆಚ್ಚಳವಾಯಿತು ಮತ್ತು ₹349.77 ಕೋಟಿಗಳಷ್ಟು ಲಾಭವನ್ನು ಸ್ವೀಕರಿಸಲಾಯಿತು. ಹೂಡಿಕೆಗಳು ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿ ಹೂಡಿದ ₹42,194.32 ಕೋಟಿಗಳನ್ನು (ಶೇಕಡ 57) ಒಳಗೊಂಡಿತ್ತು.

## ನಿಧಿಗಳು ಮತ್ತು ಇತರ ಹೊಣೆಗಾರಿಕೆಗಳು

ಪ್ರಸಕ್ತ ವರ್ಷದಲ್ಲಿ ಹಸಿರು ತೆರಿಗೆ ಉಪಕರ ₹13.84 ಕೋಟಿ ಮತ್ತು ರಸ್ತೆ ಸುರಕ್ಷತಾ ಉಪಕರ ₹91.32 ಕೋಟಿಗಳನ್ನು ಕ್ರಮವಾಗಿ ಹಸಿರು ತೆರಿಗೆ ನಿಧಿ ಮತ್ತು ರಸ್ತೆ ಸುರಕ್ಷತಾ ಉಪಕರ ನಿಧಿಗೆ ವರ್ಗಾಯಿಸಲಾಗಿಲ್ಲ. ರಾಷ್ಟ್ರೀಯ ಪರಿಹಾರಾತ್ಮಕ ಅರಣ್ಯೀಕರಣ ನಿಧಿಗೆ ಅಗತ್ಯವಿದ್ದ ಸ್ವೀಕೃತಿಯ (2019–20ರಿಂದ 2021–22ರವರೆಗೆ) ಶೇಕಡ 10ಕ್ಕೆ ಬದಲಾಗಿ ಸಂಪೂರ್ಣ ಸ್ವೀಕೃತಿಯನ್ನು ರಾಷ್ಟ್ರೀಯ ನಿಧಿಗೆ ವರ್ಗಾಯಿಸಲಾಗಿತ್ತು, ಅದರಿಂದಾಗಿ ₹347.13 ಕೋಟಿಗಳಷ್ಟು ನಷ್ಟ ಅನುಭವಿಸಲಾಯಿತು.

## ಋಣ ಸಹಿಷ್ಣುತೆ

ಮುಕ್ತ ಮಾರುಕಟ್ಟೆ ಸಾಲಗಳು ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ (ಆಯವ್ಯಯದ ಹೊರಗಿನ ಸಾಲಗಳೂ ಸೇರಿದಂತೆ) ಪ್ರಮುಖ ಪಾಲನ್ನು (ಶೇಕಡ 67) ಹೊಂದಿದ್ದವು. ಹಿಂದಿನ ವರ್ಷಕ್ಕೆ ಹೋಲಿಸಿದರೆ, 2021–22ರಲ್ಲಿ ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಋಣವು (₹26,593 ಕೋಟಿ) ಶೇಕಡ 36ರಷ್ಟು ಇಳಿಕೆ ಕಂಡಿತು. 2020–21ರವರೆಗೂ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದ ಬಡ್ಡಿ ಪಾವತಿಯ ಹೊರೆ 2021–22ರಲ್ಲಿ ಸ್ವಲ್ಪ ಕಡಿಮೆಯಾಯಿತು.

## ನಗದು ಶಿಲ್ಕುಗಳು

ಹೆಚ್ಚುವರಿ ಮಾರುಕಟ್ಟೆ ಸಾಲಗಳ ಕಾರಣದಿಂದಾಗಿ ವರ್ಷದ ಅಂತ್ಯದಲ್ಲಿದ್ದ ರಾಜ್ಯದ ನಗದು ಶಿಲ್ಕು (ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ಠೇವಣಿಗಳ ಹೂಡಿಕೆ ಸೇರಿದಂತೆ) ಹಿಂದಿನ ವರ್ಷಕ್ಕಿಂತ ಶೇಕಡ 35ರಷ್ಟು ಹೆಚ್ಚಾಗಿದೆ.

**(ಅಧ್ಯಾಯ–2)**

## ಆಯವ್ಯಯ ನಿರ್ವಹಣೆ

2021–22ರಲ್ಲಿ ಒದಗಿಸಿದ್ದ ಒಟ್ಟು ₹2,93,185.31 ಕೋಟಿಗಳಿಗೆ ಪ್ರತಿಯಾಗಿ, ವೆಚ್ಚವು ₹2,82,335.70 ಕೋಟಿಗಳಾಗಿತ್ತು. ಇದು ₹10,849.61 ಕೋಟಿ (ಶೇಕಡ 4) ವೆಚ್ಚವಾಗದೆ ಉಳಿದ ಅವಕಾಶಕ್ಕೆ ಕಾರಣವಾಯಿತು. ಇದರಲ್ಲಿ, ಉಳಿತಾಯದ ಶೇಕಡ 55ರಷ್ಟನ್ನು ಅಧ್ಯರ್ಪಣೆ ಮಾಡಲಾಯಿತು.

ಉಳಿತಾಯದ ಶೇಕಡ 49ರಷ್ಟಕ್ಕೆ ನಿಯಂತ್ರಣಾಧಿಕಾರಿಗಳು ಹಂಚಿಕೆ ಮತ್ತು ವೆಚ್ಚಗಳ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ಮಹಾಲೇಖಾಪಾಲರಿಗೆ (ಲೆಕ್ಕ ಮತ್ತು ಹಕ್ಕುದಾರಿ) ಸಲ್ಲಿಸಿಲ್ಲ.

21 ಅನುದಾನಗಳ ಅಡಿಯಲ್ಲಿ, ₹8,489.40 ಕೋಟಿಗಳ ಹೆಚ್ಚುವರಿ ವೆಚ್ಚಕ್ಕಾಗಿ ಶಾಸಕಾಂಗದ ಅನುಮೋದನೆಯಿಲ್ಲದೆ 68 ಕಾರ್ಯಕಾರಿ ಆದೇಶಗಳನ್ನು ಹೊರಡಿಸಲಾಗಿತ್ತು. ಈ ಕಾರ್ಯಕಾರಿ ಆದೇಶಗಳನ್ನು ನಂತರ ಪೂರಕ ಬೇಡಿಕೆಗಳ ಮೂಲಕ ಕ್ರಮಬದ್ಧಗೊಳಿಸಲಾಯಿತು. ಹಿಂದಿನ ವರ್ಷಕ್ಕೆ ಹೋಲಿಸಿದರೆ, 2021–22ರಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿದ ಪ್ರಕರಣಗಳ ಸಂಖ್ಯೆ ಮತ್ತು ಒಳಗೊಂಡ ಮೊತ್ತ ಹೆಚ್ಚಾಗಿದೆ.

ಒಂಬತ್ತು ಪ್ರಕರಣಗಳಲ್ಲಿ ಪೂರಕ ಅಂದಾಜುಗಳ ಮೂಲಕ ಪಡೆದ ₹385.04 ಕೋಟಿಗಳ ಹೆಚ್ಚುವರಿ ಅವಕಾಶವು ಅನಗತ್ಯವಾಗಿತ್ತು ಮತ್ತು 30 ಪ್ರಕರಣಗಳಲ್ಲಿ ಪಡೆದ ₹2,245.37 ಕೋಟಿಗಳು ಅಗತ್ಯಕ್ಕಿಂತ ಅಧಿಕವಾಗಿತ್ತು.

52 ಪ್ರಕರಣಗಳಲ್ಲಿ ಅವಕಾಶದ ಪುನರ್ವಿನಿಯೋಗವನ್ನು ಅನುಚಿತವಾಗಿ ಮಾಡಲಾಗಿದ್ದು, ಇದರ ಪರಿಣಾಮವಾಗಿ ಅವಕಾಶವು ಬಳಕೆಯಾಗದೆ ಉಳಿದಿದೆ ಅಥವಾ ಅವಕಾಶಕ್ಕಿಂತ ಹೆಚ್ಚಿನ ವೆಚ್ಚವಾಗಿದೆ.

ಸಂವಿಧಾನದ 205ನೇ ವಿಧಿಯ ಅಡಿಯಲ್ಲಿ ಹಿಂದಿನ ವರ್ಷದ ಆಯವ್ಯಯಕ್ಕಿಂತ ಅಧಿಕವಾದ ವೆಚ್ಚವನ್ನು ಸಕ್ರಮೀಕರಣಗೊಳಿಸಬೇಕಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಸಭೆಯಲ್ಲಿ 2012–13 ರಿಂದ 2017–18ರ ವರೆಗಿನ ಅಧಿಕ ವೆಚ್ಚದ ಸಕ್ರಮೀಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಿತ್ತಾದರೂ ಅದು ರಾಜ್ಯ ವಿಧಾನಸಭೆಗೆ ತನ್ನ ಶಿಫಾರಸುಗಳನ್ನು ಇನ್ನೂ ಮಂಡಿಸಬೇಕಿದೆ.

ವಿತ್ತೀಯ ಸೂಚಕವಾದ ರಾಜಸ್ವ ಕೊರತೆಯ ಮೇಲೆ ಪರಿಣಾಮ ಬೀರುವಂತೆ ರಾಜಸ್ವ/ಬಂಡವಾಳ ವಿಭಾಗಗಳ ಅಡಿಯಲ್ಲಿ ₹316.55 ಕೋಟಿಗಳ ಮೊತ್ತವನ್ನು ತಪ್ಪಾಗಿ ವರ್ಗೀಕರಿಸಲಾಗಿದೆ.

**(ಅಧ್ಯಾಯ–3)**

## ಲೆಕ್ಕಗಳ ಗುಣಮಟ್ಟ ಮತ್ತು ಹಣಕಾಸು ವರದಿಯಲ್ಲಿನ ರೂಢಿಗಳು

ಹಿಂದಿನ ವರ್ಷಗಳಿಗೆ ಹೋಲಿಸಿದರೆ, 2021–22ರಲ್ಲಿ ಬಾಕಿ ಉಳಿದಿರುವ ಬಳಕೆ ಪ್ರಮಾಣಪತ್ರಗಳ ಸಂಖ್ಯೆ ಏರಿಕೆಯಾಗಿದೆ. 2021–22ರ ಕೊನೆಗೆ ₹325.50 ಕೋಟಿ ಮೊತ್ತದ 132 ಪ್ರಮಾಣಪತ್ರಗಳು ಬಾಕಿ ಉಳಿದಿದ್ದವು.

2021–22ರಲ್ಲಿ, ಬಾಕಿ ಉಳಿದಿರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 38ರಷ್ಟು ಕಡಿಮೆಯಾಗಿದೆ. ಮೊತ್ತದ ಲೆಕ್ಕದಲ್ಲಿ ಅದು ಶೇಕಡ 49ರಷ್ಟು ಇಳಿಕೆ ಕಂಡಿದೆ. ಎರಡು ಪ್ರಧಾನ ಶೀರ್ಷಿಕೆಯ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಮೀಕ್ಷೆಯು ಬಿಲ್ಲುಗಳ ಸಲ್ಲಿಕೆಯಲ್ಲಿನ ವಿಳಂಬದ ಜೊತೆಗೆ ಆಯವ್ಯಯ ಅನುದಾನ ನಷ್ಟವಾಗುವುದನ್ನು ತಪ್ಪಿಸಲು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ನಿಧಿಯನ್ನು ಸೆಳೆಯುವುದು, ಒಪ್ಪಿಕೊಳ್ಳಲಾಗದ ವೋಚರುಗಳು, ಬಿಲ್ಲುಗಳನ್ನು ವಿಭಜಿಸುವುದು ಮುಂತಾದ ಪ್ರಕರಣಗಳೂ ಇದ್ದವು ಎಂದು ತೋರಿಸಿದವು.

₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು 21 ಇಲಾಖೆಗಳು ಒದಗಿಸಿಲ್ಲ.

ವೈಯುಕ್ತಿಕ ಠೇವಣಿ ಲೆಕ್ಕಗಳಲ್ಲಿ ದೊಡ್ಡ ಮೊತ್ತದ ಶಿಲ್ಕನ್ನು ಉಳಿಸಿಕೊಳ್ಳುವುದು, ಚಾಲ್ತಿಯಲ್ಲಿಲ್ಲದ ವೈಯುಕ್ತಿಕ ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸದಿರುವುದು, ಅಂತಹ ಚಾಲ್ತಿಯಲ್ಲಿಲ್ಲದ ವೈಯುಕ್ತಿಕ ಠೇವಣಿ ಖಾತೆಗಳಲ್ಲಿರುವ ಶಿಲ್ಕುಗಳ ಲೆಕ್ಕ ಸಮನ್ವಯ ಮಾಡದಿರುವುದು ಮತ್ತು ಬಳಸದೆ ಉಳಿದ ಶಿಲ್ಕುಗಳನ್ನು ಸಂಚಿತ ನಿಧಿಗೆ ವರ್ಗಾಯಿಸದಿರುವುದು ಶಾಸಕಾಂಗ ಹಣಕಾಸು ನಿಯಂತ್ರಣ ತತ್ವಗಳಿಗೆ ವಿರುದ್ಧವಾಗಿದೆ. 2020–21ರಲ್ಲಿ ₹3,989.23 ಕೋಟಿಗಳಷ್ಟಿದ್ದ ವೈಯುಕ್ತಿಕ ಠೇವಣಿ ಖಾತೆಗಳ ಮುಕ್ತಾಯ ಶಿಲ್ಕುಗಳು 2021–22ರಲ್ಲಿ ₹4,105.61 ಕೋಟಿಗಳಿಗೆ ಹೆಚ್ಚಳವಾಯಿತು.

**(ಅಧ್ಯಾಯ–4)**

## ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು

31 ಮಾರ್ಚ್ 2022ರಲ್ಲಿದ್ದಂತೆ, ಆರು ಶಾಸನಬದ್ಧ ನಿಗಮಗಳು ಮತ್ತು 119 ಸರ್ಕಾರಿ ಕಂಪನಿಗಳು ಒಳಗೊಂಡಂತೆ 125 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಇದ್ದವು. 119 ಸರ್ಕಾರಿ ಕಂಪನಿಗಳ ಪೈಕಿ 13 ನಿಷ್ಕ್ರಿಯವಾಗಿದ್ದವು. ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 97,053..87 ಕೋಟಿ ಬಂಡವಾಳ ಹೂಡಿಕೆ ಮತ್ತು ₹93,885.59 ಕೋಟಿ ದೀರ್ಘಾವಧಿ ಸಾಲಗಳನ್ನು ಹೊಂದಿದ್ದವು.

125 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 50 (5 ನಿಷ್ಕ್ರಿಯವಾದ ಉದ್ದಿಮೆಗಳನ್ನು ಹೊರತುಪಡಿಸಿ) ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2021–22ರಲ್ಲಿ ಲಾಭವನ್ನು ಗಳಿಸಿದ್ದವು. ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಟ್ಟು ಲಾಭದ (₹2,608.22 ಕೋಟಿ) ಸುಮಾರು ಶೇಕಡ 63 ರಷ್ಟು ಕೊಡುಗೆಯನ್ನು ನೀಡಿದ್ದವು.

ಕಂಪನಿಯ ಲಾಭದಾಯಕತೆ ಮತ್ತು ಅದರ ಬಂಡವಾಳವನ್ನು ಎಷ್ಟರಮಟ್ಟಿಗಿನ ದಕ್ಷತೆಯೊಂದಿಗೆ ಬಳಸಲಾಗಿದೆ ಎಂಬುದನ್ನು ಅಳೆಯುವ ಬಂಡವಾಳದ ಮೇಲಿನ ಪ್ರತಿಫಲವು 2019–20ರಲ್ಲಿ ಶೇಕಡ 3.61 ಇದ್ದದ್ದು 2021–22ರಲ್ಲಿ ಶೇಕಡ 1.18ಕ್ಕೆ ಇಳಿಕೆಯಾಯಿತು.

ಮಾರ್ಚ್ 2022ರಲ್ಲಿದ್ದಂತೆ, 54 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಂಚಿತ ನಷ್ಟವನ್ನು ಹೊಂದಿದ್ದವು. ಇವುಗಳಲ್ಲಿ, 34 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಿವ್ವಳ ಮೌಲ್ಯವು ಸಂಚಿತ ನಷ್ಟದಿಂದಾಗಿ ಸಂಪೂರ್ಣವಾಗಿ ಅಳಿಸಿಹೋಗಿದ್ದವು ಮತ್ತು ಅವುಗಳ ನಿವ್ವಳ ಮೌಲ್ಯವು ಶೂನ್ಯ ಅಥವಾ ಋಣಾತ್ಮಕವಾಗಿದ್ದವು.

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಹಣಕಾಸು ತಖ್ತೆಗಳನ್ನು ಸಲ್ಲಿಸಲು ಕಂಪನಿಗಳ ಅಧಿನಿಯಮ, 2013ರ ಪ್ರಕಾರ ನಿಗದಿಪಡಿಸಿದ್ದ ಕಾಲಮಿತಿಯನ್ನು ಅನುಸರಿಸುತ್ತಿರಲಿಲ್ಲ. ತತ್ಪರಿಣಾಮವಾಗಿ 86 ಸರ್ಕಾರಿ ಕಂಪನಿಗಳ 204 ಲೆಕ್ಕಪತ್ರಗಳು ಬಾಕಿ ಇದ್ದವು. ಹಾಗೆಯೇ, ನಾಲ್ಕು ಶಾಸನಬದ್ಧ ನಿಗಮಗಳ ಆರು ಲೆಕ್ಕಪತ್ರಗಳು ಬಾಕಿ ಇದ್ದವು.

**(ಅಧ್ಯಾಯ–5)**

# ಅಧ್ಯಾಯ–1

# ಅವಲೋಕನ

# ಅಧ್ಯಾಯ 1 – ಅವಲೋಕನ

## 1.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಸಂಕ್ಷಿಪ್ತ ಚಿತ್ರವನ್ನು ಒದಗಿಸುತ್ತದೆ ಮತ್ತು ವರದಿಯ ಆಧಾರ ಮತ್ತು ವಿಧಾನವನ್ನು ವಿವರಿಸುತ್ತದೆ. ವರದಿಗೆ ಆಧಾರವಾಗಿರುವ ದತ್ತಾಂಶವು ಸರ್ಕಾರಿ ಲೆಕ್ಕಗಳ ರಚನೆ, ಆಯವ್ಯಯ ಪ್ರಕ್ರಿಯೆಗಳು, ಪ್ರಮುಖ ಸೂಚ್ಯಂಕಗಳ ಸ್ಥೂಲ ವಿತ್ತೀಯ ವಿಶ್ಲೇಷಣೆ ಮತ್ತು ಕೊರತೆಗಳು/ಹೆಚ್ಚಳ ಸೇರಿದಂತೆ ರಾಜ್ಯದ ಹಣಕಾಸಿನ ಸ್ಥಿತಿಯ ಅವಲೋಕನವನ್ನು ಒದಗಿಸುತ್ತದೆ.

## 1.2 ರಾಜ್ಯದ ಸಂಕ್ಷಿಪ್ತ ಚಿತ್ರ

- **ಸಾಮಾಜಿಕ ಸೂಚಕಗಳು**

ಕರ್ನಾಟಕವು ಭೌಗೋಳಿಕ ವಿಸ್ತೀರ್ಣದಲ್ಲಿ (1,91,791 ಚ.ಕಿ.ಮೀ) ರಾಷ್ಟ್ರದ ಆರನೇ ಅತಿದೊಡ್ಡ ರಾಜ್ಯವಾಗಿದೆ ಮತ್ತು ಜನಸಂಖ್ಯೆಯಲ್ಲಿ ಎಂಟನೇ ದೊಡ್ಡ ರಾಜ್ಯವಾಗಿದೆ. ರಾಜ್ಯದ ಜನಸಂಖ್ಯೆಯು 6.11 ಕೋಟಿಗಳು (2011ರ ಜನಗಣತಿ) ಮತ್ತು ದಶಕದಲ್ಲಿ ಸುಮಾರು ಶೇಕಡ 16ರಷ್ಟು (2001–11) ಬೆಳವಣಿಗೆಯನ್ನು ದಾಖಲಿಸಿದೆ. ಅಖಿಲ ಭಾರತದ ಸರಾಸರಿ 21.90ಕ್ಕೆ (2011–12) ಹೋಲಿಸಿದರೆ ಬಡತನ ರೇಖೆಗಿಂತ[1] ಕೆಳಗಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣವು 20.90 ಆಗಿತ್ತು. ಸಾಕ್ಷರತೆ ಪ್ರಮಾಣವು ಶೇಕಡ 75.36ರಷ್ಟಿದೆ (2011ರ ಜನಗಣತಿ). ಮಾರ್ಚ್ 2022ರಲ್ಲಿದ್ದಂತೆ ರಾಜ್ಯವು 31 ಜಿಲ್ಲೆಗಳು ಮತ್ತು 227 ತಾಲೂಕುಗಳನ್ನು ಹೊಂದಿದೆ.

- **ಆರ್ಥಿಕ ಸೂಚಕಗಳು**

2021–22ರಲ್ಲಿ ಮಾರುಕಟ್ಟೆ ಬೆಲೆಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು (ರಾಒಆಂಉ) ₹17,21,336 ಕೋಟಿಗಳಾಗಿದ್ದು (2020–21ರಲ್ಲಿ ₹17,30,991 ಕೋಟಿ) ಹಿಂದಿನ ವರ್ಷಕ್ಕಿಂತ ಶೇಕಡ (–)0.56ರಷ್ಟು ಬೆಳವಣಿಗೆಯ ದರ ಹೊಂದಿದೆ. ಕೃಷಿ, ಕೈಗಾರಿಕೆಗಳು ಮತ್ತು ಸೇವಾ ವಿಭಾಗಗಳ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರವು ಹಿಂದಿನ ವರ್ಷಕ್ಕಿಂತ ಕ್ರಮವಾಗಿ ಶೇಕಡ 14.69, ಶೇಕಡ 18.73 ಮತ್ತು ಶೇಕಡ 15.96 ರಷ್ಟಿತ್ತು.

ರಾಷ್ಟ್ರೀಯ ತಲಾವಾರು ಒಟ್ಟು ಆಂತರಿಕ ಉತ್ಪನ್ನವಾದ ₹1,45,680ರಷ್ಟಕ್ಕೆ ಪ್ರತಿಯಾಗಿ ತಲಾವಾರು ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ₹2,59,803 ಆಗಿತ್ತು. ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು ದೇಶದ ಸರಾಸರಿ ₹1,50,326ರಷ್ಟಕ್ಕೆ ಪ್ರತಿಯಾಗಿ ರಾಜ್ಯದ ತಲಾವಾರು ಒಟ್ಟು ಆಂತರಿಕ ಉತ್ಪನ್ನವು ₹2,78,786ರಷ್ಟಿತ್ತು (ಮಾರ್ಚ್ 2022ರಲ್ಲಿದ್ದಂತೆ – ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ, 2021–22). ರಾಜ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಮತ್ತು ಹಣಕಾಸಿನ ದತ್ತಾಂಶವನ್ನು **ಅನುಬಂಧ–1.1**ರಲ್ಲಿ ನೀಡಲಾಗಿದೆ.

### *1.2.1 ರಾಜ್ಯದ ಒಟ್ಟು ಆಂತರಿಕ ಉತ್ಪನ್ನ*

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಒಂದು ನಿರ್ದಿಷ್ಟ ಅವಧಿಯಲ್ಲಿ ರಾಜ್ಯದ ಗಡಿಯೊಳಗೆ ಉತ್ಪಾದಿಸಲಾದ ಅಧಿಕೃತವಾಗಿ ಗುರುತಿಸಲ್ಪಟ್ಟ ಎಲ್ಲಾ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯವಾಗಿದೆ.

[1] 2021–22ರ ಭಾರತದ ಆರ್ಥಿಕ ಸಮೀಕ್ಷೆಯ ಪ್ರಕಾರ

ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಆರ್ಥಿಕತೆಯು ಬದಲಾಗುತ್ತಿರುವ ಚಿತ್ರವನ್ನು ಸೂಚಿಸುವುದರಿಂದ ಅದಕ್ಕೆ ವಿಭಾಗವಾರು ಕೊಡುಗೆಯಲ್ಲಿನ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿದೆ. ಆರ್ಥಿಕ ಚಟುವಟಿಕೆಯನ್ನು ಸಾಮಾನ್ಯವಾಗಿ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ವಲಯಗಳಾಗಿ ವಿಂಗಡಿಸಲಾಗಿದ್ದು ಇದು ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಿಗೆ ಅನುಗುಣವಾಗಿರುತ್ತದೆ. ಪ್ರಸಕ್ತ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ವಾರ್ಷಿಕ ವೃದ್ಧಿಯಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ–1.1** ರಲ್ಲಿ ನೀಡಲಾಗಿದೆ ಮತ್ತು ಪ್ರಸಕ್ತ ಬೆಲೆಗಳು ಮತ್ತು ಸ್ಥಿರ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರವನ್ನು **ನಕ್ಷೆ–1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.1: ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದಂತೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಪ್ರವೃತ್ತಿಗಳು**

| ವರ್ಷ | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಒಟ್ಟು ಆಂತರಿಕ ಉತ್ಪನ್ನ* (₹ ಕೋಟಿಗಳಲ್ಲಿ) | 1,70,90,042 | 1,88,99,668 | 2,00,74,855 | 1,98,00,914 | 2,32,14,703 |
| ವೃದ್ಧಿಯ ದರ (ಶೇಕಡಾವಾರು) | 11.03 | 10.59 | 6.22 | (–)1.36 | 17.24 |
| ಒಟ್ಟು ಆಂತರಿಕ ಉತ್ಪನ್ನ# (₹ ಕೋಟಿಗಳಲ್ಲಿ) | 13,33,240 | 14,76,496 | 16,15,457 | 17,30,991 | 17,21,336 |
| ವೃದ್ಧಿಯ ದರ (ಶೇಕಡಾವಾರು) | 10.40 | 10.74 | 9.41 | 7.15 | (–)0.56 |

*ಆಕರ: *ಅಖಿಲ ಭಾರತ ಒಟ್ಟು ಆಂತರಿಕ ಉತ್ಪನ್ನದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂಕಿ ಅಂಶಗಳು (2017–18ರಿಂದ 2020–21) ಕರ್ನಾಟಕ ಸರ್ಕಾರ ಆರ್ಥಿಕ ಸಮೀಕ್ಷೆ – 2021–22.*

*# ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂಕಿ ಅಂಶಗಳು 2020–21, ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಪ್ರಕಾರ.*

*ಟಿಪ್ಪಣಿ : ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿನ ಋಣಾತ್ಮಕ ಬೆಳವಣಿಗೆಯಿಂದಾಗಿ, 2021–22 ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿನ ಪ್ರಮುಖ ಹಣಕಾಸಿನ ನಿಯತಾಂಕಗಳು ಶೇಕಡಾವಾರಿನಲ್ಲಿ ಹೆಚ್ಚಾಗಿದ್ದವು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ.*

**ನಕ್ಷೆ–1.1: ಭಾರತದ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿ**




*ಆಕರ: ಅಖಿಲ ಭಾರತ ಒಟ್ಟು ಆಂತರಿಕ ಉತ್ಪನ್ನದ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂಕಿ ಅಂಶಗಳು (2017–18ರಿಂದ 2020–21) ಕರ್ನಾಟಕ ಸರ್ಕಾರ ಆರ್ಥಿಕ ಸಮೀಕ್ಷೆ – 2021–22.*

*ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂಕಿ ಅಂಶಗಳು 2020–21, ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಪ್ರಕಾರ.*

ಪ್ರಸಕ್ತ ಬೆಲೆಗಳಲ್ಲಿ ಕರ್ನಾಟಕದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರವು ಹೆಚ್ಚಿನ ವರ್ಷಗಳಲ್ಲಿ ರಾಷ್ಟ್ರದ ವೃದ್ಧಿಯ ದರಕ್ಕಿಂತ ಹೆಚ್ಚಾಗಿರುವುದನ್ನು **ಕೋಷ್ಟಕ–1.1** ಮತ್ತು **ನಕ್ಷೆ–1.1**ರಲ್ಲಿ ಗಮನಿಸಬಹುದು. ಆದಾಗ್ಯೂ,

ಹಿಂದಿನ ವರ್ಷಕ್ಕೆ ಹೋಲಿಸಿದರೆ 2021–22ರಲ್ಲಿ ಪ್ರಸಕ್ತ ಬೆಲೆಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಋಣಾತ್ಮಕವಾಗಿತ್ತು. ಸ್ಥಿರ ದರದಲ್ಲಿನ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ 2018–19ರ ಅವಧಿಯನ್ನು ಹೊರತುಪಡಿಸಿ ರಾಜ್ಯದ ವೃದ್ಧಿಯ ದರವು ರಾಷ್ಟ್ರದ ವೃದ್ಧಿಯ ದರಕ್ಕಿಂತ ಹೆಚ್ಚಾಗಿದ್ದಿತು. ಪ್ರಸ್ತುತ ದರದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವನ್ನು ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಅಂಕಿಅಂಶ ನಿರ್ದೇಶನಾಲಯ ₹20,49,379 ಕೋಟಿಗಳು ಎಂದು ಅಂದಾಜಿಸಿತ್ತು. ಎಲ್ಲಾ ವಿಭಾಗೀಯ ಕೊಡುಗೆಗಳು ಈ ಅಂದಾಜಿನ ಮೇಲೆ ಆಧಾರಿತವಾಗಿದ್ದವು. ಆದ್ದರಿಂದ, ಈ ಕೆಳಗೆ ಚರ್ಚಿಸಿರುವ ವಿಭಾಗೀಯ ವಿಶ್ಲೇಷಣೆಯು ಈ ದತ್ತಾಂಶದ ಮೇಲೆಯೇ ಆಧರಿಸಿದೆ.

2017–18 ಮತ್ತು 2021–22ರ ಅವಧಿಯಲ್ಲಿ ವಿಭಾಗೀಯ ಕೊಡುಗೆಯಲ್ಲಿನ ವ್ಯತ್ಯಯವನ್ನು **ನಕ್ಷೆ–1.2** ಚಿತ್ರಿಸುತ್ತದೆ. 2017–18ಕ್ಕೆ ಹೋಲಿಸಿದರೆ, ಕೈಗಾರಿಕಾ ಕ್ಷೇತ್ರದ ತುಲನಾತ್ಮಕ ಪಾಲು ಕಡಿಮೆಯಾದರೆ ಕೃಷಿ ಮತ್ತು ಸೇವಾ ಕ್ಷೇತ್ರದ ಪಾಲು ಹೆಚ್ಚಾಗಿದ್ದಿತು ಎಂಬುದನ್ನು ನಕ್ಷೆಯಿಂದ ಗಮನಿಸಬಹುದು.

**ನಕ್ಷೆ–1.2: ರಾಜ್ಯದ ಒಟ್ಟು ಮೌಲ್ಯಾಧಾರಿತಕ್ಕೆ ವಿಭಾಗೀಯ ಕೊಡುಗೆಯಲ್ಲಿನ ಬದಲಾವಣೆ (2017–18 ಮತ್ತು 2021–22)**




*ಆಕರ: ಕರ್ನಾಟಕದ ಆರ್ಥಿಕ ಸಮೀಕ್ಷೆ 2021–22*

2017–18 ಮತ್ತು 2021–22ರ ಅವಧಿಯ ವಿಭಾಗೀಯ ಬೆಳವಣಿಗೆಯ ಪ್ರವೃತ್ತಿಯನ್ನು **ನಕ್ಷೆ–1.3ರಲ್ಲಿ** ನೀಡಲಾಗಿದೆ. 2019–20ರವರೆಗೆ ಏರಿಕೆಯ ಪ್ರವೃತ್ತಿಯಲ್ಲಿದ್ದ ಕೃಷಿ ಕ್ಷೇತ್ರದ ವೃದ್ಧಿಯ ದರ 2021–22ರಲ್ಲಿ ಸ್ವಲ್ಪ ಇಳಿಕೆಯಾಗಿತ್ತು ಎಂಬುದನ್ನು ನಕ್ಷೆಯಿಂದ ಗಮನಿಸಬಹುದು. ಈ ಮಧ್ಯೆ ಇಳಿಕೆ ಪ್ರವೃತ್ತಿಯಲ್ಲಿದ್ದ ಕೈಗಾರಿಕಾ ಮತ್ತು ಸೇವಾ ಕ್ಷೇತ್ರಗಳ ವೃದ್ಧಿಯ ದರವು 2021–22ರಲ್ಲಿ ಹೆಚ್ಚಳ ಕಂಡಿತು.

**ನಕ್ಷೆ–1.3: ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ವಿಭಾಗೀಯ ಬೆಳವಣಿಗೆ**




| | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಕೃಷಿ | 26.02 | 1.83 | 18.53 | 23.82 | 14.69 |
| ಕೈಗಾರಿಕೆ | 7.86 | 10.09 | –1.43 | –3.18 | 18.73 |
| ಸೇವೆಗಳು | 9.15 | 13.78 | 12.98 | 6.52 | 15.96 |

*ಆಕರ: ಆರ್ಥಿಕ ಮತ್ತು ಅಂಕಿಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

ಜಾನುವಾರು ಹಾಗೂ ಅರಣ್ಯ ಮತ್ತು ದಿಮ್ಮಿಯ ಬೆಳವಣಿಗೆ ದರದಲ್ಲಿನ ಇಳಿಕೆ ಹಾಗೂ ಕರ್ನಾಟಕದಲ್ಲಿನ ಪ್ರವಾಹದಿಂದುಂಟಾದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿನ ವಿಫಲತೆಯು ಕೃಷಿ ಕ್ಷೇತ್ರದಲ್ಲಿನ ವೃದ್ಧಿಯ ದರದ ಇಳಿಕೆಗೆ ಪ್ರಮುಖ ಕಾರಣವಾಗಿತ್ತು. ಹಿಂದಿನ ವರ್ಷಕ್ಕೆ (2020–21) ಹೋಲಿಸಿದರೆ ನಿರ್ಮಾಣ ಮತ್ತು ವಾಯು ಸಾರಿಗೆ ವಲಯಗಳಲ್ಲಿನ ಬೆಳವಣಿಗೆಯ ದರವು ಅನುಕ್ರಮವಾಗಿ ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳಲ್ಲಿ ಒಟ್ಟಾರೆ ಹೆಚ್ಚಳಕ್ಕೆ ಕೊಡುಗೆ ನೀಡಿತ್ತು. 2021–22ರ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿಭಾಗೀಯ ಕೊಡುಗೆಯನ್ನು **ನಕ್ಷೆ–1.4**ರಲ್ಲಿ ನೀಡಲಾಗಿದೆ.

**ನಕ್ಷೆ–1.4: 2021–22ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿಭಾಗೀಯ ಕೊಡುಗೆ**




*ಆಕರ: ಆರ್ಥಿಕ ಮತ್ತು ಅಂಕಿಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ*

## 1.3 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗೆ ಆಧಾರ ಮತ್ತು ಅನುಸರಿಸಿದ ವಿಧಾನ

ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿಯನ್ನು ಭಾರತದ ಸಂವಿಧಾನದ ಅನುಚ್ಛೇದ 151(2)ರ ಪ್ರಕಾರ ಸಿದ್ಧಪಡಿಸಲಾಗಿದೆ ಮತ್ತು ಸಲ್ಲಿಸಲಾಗಿದೆ. ಈ ಅನುಚ್ಛೇದದ ಅನ್ವಯ ರಾಜ್ಯದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ರಾಜ್ಯದ ಶಾಸಕಾಂಗದ ಮುಂದೆ ಮಂಡಿಸಲು ಕ್ರಮ ತೆಗೆದುಕೊಳ್ಳಲು ಅನುವಾಗುವಂತೆ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುವುದು.

ಖಜಾನೆಗಳು, ಆರಂಭಿಕ ಮತ್ತು ಪೂರಕ ಲೆಕ್ಕ ನಿರ್ವಹಣಾ ಜವಾಬ್ದಾರಿಯನ್ನು ಹೊಂದಿರುವ ಕಛೇರಿಗಳು ಹಾಗೂ ಇತರ ಇಲಾಖೆಗಳು ಸಲ್ಲಿಸುವ ಲೆಕ್ಕಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದ ವಿವರಣಾ ಪಟ್ಟಿಗಳಿಂದ ಪ್ರತಿ ವರ್ಷ ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಸಿದ್ಧಪಡಿಸುತ್ತಾರೆ. ಈ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ) ಸ್ವತಂತ್ರವಾಗಿ ಪರಿಶೀಲಿಸುತ್ತಾರೆ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪ್ರಮಾಣೀಕರಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು ಈ ವರದಿಯ ಪ್ರಮುಖ ದತ್ತಾಂಶಗಳಾಗಿವೆ ಇತರ ಮೂಲಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ.

- ಪ್ರಕ್ಷೇಪಣಗಳಿಗೆ ಪ್ರತಿಯಾಗಿ ವಿತ್ತೀಯ ಪ್ರಮಿತಿಗಳು ಮತ್ತು ಹಂಚಿಕೆಯ ಆದ್ಯತೆಗಳ ಹಾಗೂ ಆಯವ್ಯಯ ಅನುಷ್ಠಾನದ ಪರಿಣಾಮಕಾರಿತ್ವವನ್ನು ಹಾಗೂ ಸಂಬಂಧಪಟ್ಟ ನಿಯಮಗಳು ಮತ್ತು ನಿಗದಿತ ಕಾರ್ಯ ವಿಧಾನಗಳ ಅನುಸರಣೆಯನ್ನು ನಿರ್ಧರಿಸಲು ರಾಜ್ಯದ ಆಯವ್ಯಯ ಅಂದಾಜುಗಳು;
- ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–I) ಮತ್ತು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಪರಿಶೋಧನೆ–II) ಕಚೇರಿಯಿಂದ ನಡೆಸಿದ ಲೆಕ್ಕ ಪರಿಶೋಧನೆಯ ಫಲಿತಾಂಶಗಳು;

- ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಂದ ಪಡೆದ ಇತರ ಹಣಕಾಸು ದತ್ತಾಂಶ;
- ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯದಿಂದ ಪಡೆದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ದತ್ತಾಂಶ ಮತ್ತು ಇತರ ರಾಜ್ಯ ಸಂಬಂಧಿತ ಅಂಕಿ ಅಂಶಗಳು;
- ಹದಿನೈದನೆಯ ಹಣಕಾಸು ಆಯೋಗದ ಶಿಫಾರಸುಗಳು;
- ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ 2002; ಮತ್ತು
- ಭಾರತ ಸರ್ಕಾರದ ಮಾರ್ಗಸೂಚಿಗಳು.

## 1.4 ಸರ್ಕಾರಿ ಲೆಕ್ಕಗಳ ರಚನೆ

ರಾಜ್ಯ ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ನಿರ್ವಹಿಸಲಾಗಿದೆ.

**ಸಂಚಿತ ನಿಧಿ**

- ರಾಜಸ್ವ ಮತ್ತು ಬಂಡವಾಳ ಲೆಕ್ಕ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಎಲ್ಲ ಸ್ವೀಕೃತಿಗಳು ಮತ್ತು ವೆಚ್ಚಗಳು ಸಂವಿಧಾನದ 266(1)ನೇ ಅನುಚ್ಛೇದದಡಿ ಸ್ಥಾಪಿಸಲಾದ ರಾಜ್ಯದ ಸಂಚಿತ ನಿಧಿ ಎಂಬ ಹೆಸರಿನ ಒಂದು ಕ್ರೋಢೀಕೃತ ನಿಧಿಯಡಿ ಲೆಕ್ಕ ಮಾಡಲಾಗುತ್ತದೆ.

**ಸಾದಿಲ್ವಾರು ನಿಧಿ**

- ರಾಜ್ಯದ ಸಾದಿಲ್ವಾರು ನಿಧಿಯು ಸಂವಿಧಾನದ 267(2)ನೇ ಅನುಚ್ಛೇದದಡಿ ಸ್ಥಾಪಿಸಲಾಗಿರುವ ರಾಜ್ಯಪಾಲರ ವಿಲೇವಾರಿಯಲ್ಲಿರುವ ಮುಂಗಡ ಸ್ವರೂಪದ ನಿಧಿಯಾಗಿದ್ದು ಸರ್ಕಾರದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಶಾಸಕಾಂಗದ ನಂತರದ ಅನುಮೋದನೆಗೆ ಒಳಪಟ್ಟು ಮುಂಗಡವಾಗಿ ನೀಡಲು ಅವಕಾಶವನ್ನು ಒದಗಿಸುತ್ತದೆ. ರಾಜ್ಯ ಸಂಚಿತ ನಿಧಿಯ ಕ್ರಿಯಾ ಪ್ರಧಾನ ಲೆಕ್ಕ ಶೀರ್ಷಿಕೆಗೆ ವೆಚ್ಚ ಹಾಕಿ ನಿಧಿಗೆ ಪುನರ್ಭರ್ತಿ ಮಾಡಲಾಗುತ್ತದೆ.

**ಸಾರ್ವಜನಿಕ ಲೆಕ್ಕ**

- ರಾಜ್ಯ ಸಂಚಿತ ನಿಧಿಯ ಭಾಗವಲ್ಲದ ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ, ಮೀಸಲು ನಿಧಿ, ಠೇವಣಿಗಳು, ಅಮಾನತ್ತು ಮತ್ತು ಇರಸಾಲುಗಳು ಮುಂತಾದವುಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವೆಚ್ಚಗಳ ಲೆಕ್ಕವನ್ನು ಸಂವಿಧಾನದ 266(2)ನೇ ಅನುಚ್ಛೇದದಡಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಡಿ ಇಡಲಾಗುತ್ತದೆ ಮತ್ತು ಈ ಲೆಕ್ಕದಡಿಯ ವ್ಯವಹಾರಗಳು ಶಾಸಕಾಂಗದ ಅನುಮೋದನೆಗೆ ಒಳಪಟ್ಟಿರುವುದಿಲ್ಲ.

ಭಾರತದ ಸಂವಿಧಾನದ 202ನೇ ವಿಧಿಯ ಅನ್ವಯ ರಾಜ್ಯ ಶಾಸಕಾಂಗದ ಉಭಯ ಸದನಗಳಿಗೆ ಆಯವ್ಯಯವನ್ನು ಮಂಡಿಸಬೇಕು. 'ವಾರ್ಷಿಕ ಹಣಕಾಸು ವಿವರಣಾ ಪಟ್ಟಿ'ಯು ಆಯವ್ಯಯದ ಮುಖ್ಯ ದಾಖಲೆಯಾಗಿದೆ. ಆಯವ್ಯಯವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ.

- **ರಾಜಸ್ವ ಸ್ವೀಕೃತಿಗಳು** : ತೆರಿಗೆ ಆದಾಯ, ತೆರಿಗೆಯೇತರ ಆದಾಯ, ಕೇಂದ್ರ ತೆರಿಗೆಗಳು/ಸುಂಕಗಳ ಪಾಲು ಮತ್ತು ಭಾರತ ಸರ್ಕಾರದ ಅನುದಾನವನ್ನು ಒಳಗೊಂಡಿರುತ್ತದೆ.
- **ರಾಜಸ್ವ ವೆಚ್ಚ** : ಇದು ಭೌತಿಕ ಅಥವಾ ಹಣಕಾಸಿನ ಆಸ್ತಿಗಳ ಸೃಷ್ಟಿಗೆ ಕಾರಣವಾಗದ ಸರ್ಕಾರದ ಎಲ್ಲಾ ಖರ್ಚುಗಳನ್ನು ಒಳಗೊಂಡಿರುತ್ತದೆ. ಇದು ಸರ್ಕಾರಿ ಇಲಾಖೆಗಳು ಮತ್ತು ವಿವಿಧ ಸೇವೆಗಳ ಸಾಮಾನ್ಯ ಕಾರ್ಯ ನಿರ್ವಹಣೆಗೆ ತಗಲುವ ವೆಚ್ಚಗಳು, ಸರ್ಕಾರವು ಮಾಡಿದ ಸಾಲದ ಮೇಲಿನ ಬಡ್ಡಿ ಪಾವತಿಗಳು ಮತ್ತು ವಿವಿಧ ಸಂಸ್ಥೆಗಳಿಗೆ ನೀಡಿದ ಅನುದಾನಗಳಿಗೆ ಸಂಬಂಧಿಸಿದೆ (ಕೆಲವು ಅನುದಾನಗಳು ಆಸ್ತಿಗಳ ಸೃಷ್ಟಿಗೆ ಮೀಸಲಾಗಿರಬಹುದು).

- **ಬಂಡವಾಳ ಸ್ವೀಕೃತಿಗಳು** :
  - **ಋಣ ಸ್ವೀಕೃತಿಗಳು** : ಮಾರುಕಟ್ಟೆ ಸಾಲಗಳು, ಬಾಂಡ್‌ಗಳು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು, ಮಾರ್ಗೋಪಾಯಗಳ ನಿವ್ವಳ ವಹಿವಾಟು, ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.
  - **ಋಣೇತರ ಸ್ವೀಕೃತಿಗಳು** : ಬಂಡವಾಳ ಹಿಂತೆಗೆದುಕೊಳ್ಳುವಿಕೆ, ಸಾಲಗಳ ಮತ್ತು ಮುಂಗಡಗಳ ವಸೂಲಾತಿ.
- **ಬಂಡವಾಳ ವೆಚ್ಚ** : ಭೂಮಿ, ಕಟ್ಟಡ, ಯಂತ್ರೋಪಕರಣಗಳು, ಇತರ ಉಪಕರಣಗಳ ಖರೀದಿ, ಷೇರುಗಳಲ್ಲಿನ ಹೂಡಿಕೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಅಸ್ತಿತ್ವಗಳಿಗೆ ಸರ್ಕಾರ ನೀಡಿದ ಸಾಲಗಳು ಮತ್ತು ಮುಂಗಡಗಳನ್ನು ವೆಚ್ಚವನ್ನು ಒಳಗೊಂಡಿರುತ್ತದೆ.

ಹಣಕಾಸು ಲೆಕ್ಕಗಳ ವಿನ್ಯಾಸವನ್ನು **ಅನುಬಂಧ–1.2**ರಲ್ಲಿ ತೋರಿಸಲಾಗಿದೆ ಮತ್ತು ಸರ್ಕಾರಿ ಲೆಕ್ಕಗಳ ರಚನೆಯ ಚಿತ್ರಾತ್ಮಕ ರೂಪವನ್ನು **ನಕ್ಷೆ–1.5**ರಲ್ಲಿ ನೀಡಲಾಗಿದೆ.

**ನಕ್ಷೆ–1.5: ಸರ್ಕಾರಿ ಲೆಕ್ಕಗಳ ರಚನೆಯ ಚಿತ್ರಾತ್ಮಕ ರೂಪ**



## 1.5 ಆಯವ್ಯಯ ಪ್ರಕ್ರಿಯೆಗಳು

ಭಾರತ ಸಂವಿಧಾನದ 202ನೇ ವಿಧಿಯ ಅನ್ವಯ, ರಾಜ್ಯದ ರಾಜ್ಯಪಾಲರು ಪ್ರತಿ ವರ್ಷದ ರಾಜ್ಯದ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚಗಳ ವಾರ್ಷಿಕ ವಿತ್ತ ವಿವರಣೆಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕು. ಅನುಚ್ಛೇದ 203ರ ಪ್ರಕಾರ, ವಿತ್ತ ವಿವರಣೆಯನ್ನು ರಾಜ್ಯ ಶಾಸಕಾಂಗಕ್ಕೆ ಅನುದಾನಗಳು/ ವಿನಿಯೋಗಗಳ ಬೇಡಿಕೆಗಳ ರೂಪದಲ್ಲಿ ಸಲ್ಲಿಸಲಾಗುತ್ತದೆ. ಅನುಮೋದನೆಯ ನಂತರ, ಸಂಚಿತ ನಿಧಿಯಿಂದ ಅಗತ್ಯವಿರುವ ಹಣವನ್ನು ವಿನಿಯೋಗಿಸಲು ಅನುಚ್ಛೇದ 204ರಡಿಯಲ್ಲಿ ಧನವಿನಿಯೋಗ ಮಸೂದೆಯನ್ನು ಶಾಸಕಾಂಗವು ಅಂಗೀಕರಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ, ಆಯವ್ಯಯ ದಾಖಲೆಗಳು ಮಹಿಳಾ ಉದ್ದೇಶಿತ ಆಯವ್ಯಯ (**ಅಧ್ಯಾಯ–3 ಕಂಡಿಕೆ–3.3**ರಲ್ಲಿ ವಿವರಿಸಲಾಗಿದೆ), ಮಕ್ಕಳ ಆಯವ್ಯಯ (**ಅಧ್ಯಾಯ–3 ಕಂಡಿಕೆ –3.4**ರಲ್ಲಿ ವಿವರಿಸಲಾಗಿದೆ) ಮತ್ತು ಜಿಲ್ಲಾವಾರು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನೆವಾರು ಹಂಚಿಕೆಯ ದಾಖಲೆಗಳನ್ನು ಒಳಗೊಂಡಿವೆ.

ರಾಜ್ಯ ಆಯವ್ಯಯ ಕೈಪಿಡಿಯು ಆಯವ್ಯಯ ರಚನೆಯ ಪ್ರಕ್ರಿಯೆಯನ್ನು ಸೂಚಿಸುತ್ತದೆ ಮತ್ತು ರಾಜ್ಯ ಸರ್ಕಾರವು ಅದರ ವೆಚ್ಚ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮಾರ್ಗದರ್ಶನ ನೀಡುತ್ತದೆ. ಆಯವ್ಯಯದ ಪರಿಶೀಲನೆಯ ಫಲಿತಾಂಶಗಳು ಮತ್ತು ರಾಜ್ಯ ಸರ್ಕಾರದ ಇತರ ಆಯವ್ಯಯ ಉಪಕ್ರಮಗಳ ಅನುಷ್ಠಾನದ ಫಲಿತಾಂಶಗಳನ್ನು ಈ ವರದಿಯ **ಅಧ್ಯಾಯ–3**ರಲ್ಲಿ ಸೇರಿಸಲಾಗಿದೆ.

## 1.6 ರಾಜ್ಯ ಹಣಕಾಸುಗಳ ಕಿರುನೋಟ

2021–22ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಮತ್ತು 2020–21ರ ವಾಸ್ತವಗಳಿಗೆ ಪ್ರತಿಯಾಗಿ ವಾಸ್ತವ ಹಣಕಾಸು ಫಲಿತಾಂಶಗಳ ವಿವರಗಳನ್ನು **ಕೋಷ್ಟಕ–1.2** ಒದಗಿಸುತ್ತದೆ.

**ಕೋಷ್ಟಕ–1.2: ಆಯವ್ಯಯ ಅಂದಾಜುಗಳಿಗೆ ಹೋಲಿಸಿದಂತೆ ವಾಸ್ತವ ಹಣಕಾಸು ಫಲಿತಾಂಶಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಘಟಕಗಳು | 2020–21 (ವಾಸ್ತವ) | 2021–22 (ಆಯವ್ಯಯ ಅವಕಾಶ) | 2021–22 (ವಾಸ್ತವ) | ವಾಸ್ತವಕ್ಕೆ ಆಯವ್ಯಯ ಅವಕಾಶದ ವ್ಯತ್ಯಾಸ (ಶೇಕಡಾವಾರು) |
|---|---|---|---|---|---|
| | ಭಾಗ–ಎ: ರಾಜಸ್ವ ಸ್ವೀಕೃತಿಗಳು | | | | |
| 1 | ತೆರಿಗೆ ರಾಜಸ್ವ | 1,18,746 | 1,35,767 | 1,54,023* | 13.45 |
| i | ತೆರಿಗೆಯೇತರ ರಾಜಸ್ವ | 97,052 | 1,11,494 | 1,20,739 | 8.29 |
| ii | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲು | 21,694 | 24,273 | 33,284 | 37.12 |
| 2 | ಸಹಾಯಾನುದಾನಗಳು ಮತ್ತು ವಂತಿಗೆಗಳು | 7,894 | 8,258 | 11,777 | 42.61 |
| 3 | ರಾಜಸ್ವ ಸ್ವೀಕೃತಿಗಳು (1+2+3) | 30,076 | 28,246 | 29,962 ^ | 6.08 |
| 4 | **ತೆರಿಗೆ ರಾಜಸ್ವ** | **1,56,716** | **1,72,271** | **1,95,762** | **13.64** |
| | ಭಾಗ–ಬಿ: ಬಂಡವಾಳ ಸ್ವೀಕೃತಿಗಳು | | | | |
| 5 | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 270 | 91 | 127 | 39.56 |
| 6 | ಇತರೆ ಬಂಡವಾಳ ಸ್ವೀಕೃತಿಗಳು | 45 | 40 | 6 | (–)85.00 |
| 7 | ಸಾರ್ವಜನಿಕ ಋಣ ಸ್ವೀಕೃತಿಗಳು^^ | 84,528 | 71,332 | 80,641 | 13.05 |
| 8 | ಬಂಡವಾಳ ಸ್ವೀಕೃತಿಗಳು (5+6+7) | **84,843** | **71,463** | **80,774** | 13.03 |
| 9 | **ಒಟ್ಟು ಸ್ವೀಕೃತಿಗಳು (4+8)** | **2,41,559** | **2,43,734** | **2,76,536** | **13.46** |
| | ಭಾಗ–ಸಿ: ವೆಚ್ಚ/ವಿತರಣೆ | | | | |
| 10 | **ರಾಜಸ್ವ ವೆಚ್ಚ** | **1,76,054** | **1,87,405** | **2,09,428** | 11.75 |
| 11 | ಬಡ್ಡಿ ಪಾವತಿಗಳು | 23,433 | 27,161 | 26,276 | (–)3.26 |
| 12 | ಬಂಡವಾಳ ವೆಚ್ಚ | 45,406 | 41,358 | 47,874 | 15.76 |
| 13 | ಸಾಲಗಳು ಮತ್ತು ಮುಂಗಡಗಳು | 2,669 | 2,879 | 4,209 | 46.20 |

| ಕ್ರಮ ಸಂಖ್ಯೆ | ಘಟಕಗಳು | 2020–21 (ವಾಸ್ತವ) | 2021–22 (ಆಯವ್ಯಯ ಅವಕಾಶ) | 2021–22 (ವಾಸ್ತವ) | ವಾಸ್ತವಕ್ಕೆ ಆಯವ್ಯಯ ಅವಕಾಶದ ವ್ಯತ್ಯಾಸ (ಶೇಕಡಾವಾರು) |
|---|---|---|---|---|---|
| 14 | ಸಾರ್ವಜನಿಕ ಋಣಪಾವತಿಗಳು | 11,016 | 14,565 | 13,972 | (–)4.07 |
| 15 | ಸಾದಿಲ್ವಾರು ನಿಧಿಗೆ ವರ್ಗಾವಣೆ | – | – | **420** | |
| **16** | **ಸಂಚಿತ ನಿಧಿಯಿಂದ ಒಟ್ಟು ವಿತರಣೆಗಳು (10+12+13+14+15)** | **2,35,145** | **2,46,207** | **2,75,903** | 12.06 |
| | **ಭಾಗ ಡಿ – ವಿತ್ತೀಯ ಸೂಚಕಗಳು** | | | | |
| 17 | ರಾಜಸ್ವ ಕೊರತೆ (–) (4–10) | 19,338 | 15,134 | 13,666 | 9.70 |
| 18 | ವಿತ್ತೀಯ ಕೊರತೆ (–) {(4+5+6)–(10+12+13+15)} | 67,098 | 59,240 | 66,036 | 11.47 |
| 19 | **ಪ್ರಾಥಮಿಕ ಕೊರತೆ** (–) (18–11) | 43,665 | 32,079 | 39,760 | 23.94 |

*ಆಕರ: ಹಣಕಾಸು ಲೆಕ್ಕಗಳು, ವಾರ್ಷಿಕ ವಿತ್ತ ನಿರೂಪಣೆ ಮತ್ತು ಮಧ್ಯಂತರ ವಿತ್ತ ಯೋಜನೆ 2019–23*

** ತೆರಿಗೆ ಆದಾಯವು ಪ್ರಧಾನ ಲೆಕ್ಕ ಶೀರ್ಷಿಕೆ 0005 – ಸಿಜಿಎಸ್‌ಟಿ (₹9,158.36 ಕೋಟಿ), 0006–ಎಸ್‌ಜಿಎಸ್‌ಟಿ (₹49,929.02 ಕೋಟಿ) ಮತ್ತು 0008 – ಐಜಿಎಸ್‌ಟಿ (ಶೂನ್ಯ) ಗಳನ್ನು ಒಳಗೊಂಡಿದೆ.*

*# ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಒಳಗೊಂಡಿದೆ.*

*^ ಜಿಎಸ್‌ಟಿ ಜಾರಿಯಿಂದ ಉಂಟಾದ ಆದಾಯ ನಷ್ಟಕ್ಕೆ ಪಡೆದ ₹8,976.43 ಕೋಟಿಗಳ ಪರಿಹಾರವನ್ನು ಒಳಗೊಂಡಿದೆ*

*^^ ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ 2020–21 ಮತ್ತು 2021–22 ರಲ್ಲಿ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಮತ್ತು ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು ಕ್ರಮವಾಗಿ ₹72,121 ಮತ್ತು ₹62,532 ಕೋಟಿಯಾಗಿತ್ತು.*

2021–22ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆಯಡಿಯಲ್ಲಿ ಒಟ್ಟು ಸ್ವೀಕೃತಿಗಳು ₹59,087.38 ಕೋಟಿಗಳಷ್ಟಾಗಿತ್ತು. ರಾಜ್ಯ ಸರ್ಕಾರವು 2021–22ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನದಿಂದ ಉಂಟಾದ ರಾಜಸ್ವ ನಷ್ಟಕ್ಕಾಗಿ ಒಟ್ಟು ಪರಿಹಾರವಾಗಿ ₹27,085.34 ಕೋಟಿಗಳನ್ನು ಸ್ವೀಕರಿಸಿತು. ಇದರಲ್ಲಿ, ₹8,976.43 ಕೋಟಿಗಳು ರಾಜ್ಯ ರಾಜಸ್ವ ಸ್ವೀಕೃತಿಗಳಡಿಯ ಅನುದಾನವಾಗಿ ಸ್ವೀಕೃತವಾದವು. ಆದಾಗ್ಯೂ, 2021–22ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಪರಿಹಾರ ನಿಧಿಯಲ್ಲಿನ ಅಸಮರ್ಪಕ ಶಿಲ್ಕಿನಿಂದಾಗಿ ರಾಜ್ಯ ಸರ್ಕಾರವು ಸರಕು ಮತ್ತು ಸೇವಾ ತೆರಿಗೆ ಪರಿಹಾರ ನಿಧಿಯಲ್ಲಿ ಸಂಗ್ರಹಿಸಲಾದ ಉಪಕರದಿಂದ ಮರುಪಾವತಿಯ ಭಾದ್ಯತೆಗಳೊಂದಿಗೆ (ರಾಜ್ಯದ ಯಾವುದೇ ಇತರ ಸಂಪನ್ಮೂಲಗಳಿಂದಲ್ಲ) ರಾಜ್ಯ ಸರ್ಕಾರದ ಋಣ ಸ್ವೀಕೃತಿಯಲ್ಲಿ ₹18,108.91 ಕೋಟಗಳ ಬ್ಯಾಕ್–ಟು–ಬ್ಯಾಕ್ ಸಾಲವನ್ನು ಪಡೆದುಕೊಂಡಿತು.

ಸ್ವೀಕರಿಸಿದ ರಾಜ್ಯದ ಒಟ್ಟು ರಾಜಸ್ವ ಸ್ವೀಕೃತಿಗಳು (₹1,95,762 ಕೋಟಿಗಳು) ಆಯವ್ಯಯ ಅವಕಾಶಗಳಿಗೆ (₹1,72,271 ಕೋಟಿಗಳು) ಹೋಲಿಸಿದರೆ ಶೇಕಡ 13.64ರಷ್ಟು ಹೆಚ್ಚಾಗಿತ್ತು. ಆದಾಗ್ಯೂ, ರಾಜಸ್ವ ವೆಚ್ಚವು (₹2,09,428 ಕೋಟಗಳು) ಸಹ ಆಯವ್ಯಯ ಅವಕಾಶಗಳಿಗೆ (₹1,87,405 ಕೋಟಿ) ಹೋಲಿಸಿದರೆ ಶೇಕಡ 11.75ರಷ್ಟು ಹೆಚ್ಚಾಗಿತ್ತು. ಯೋಜಿಸಿದ್ದಕ್ಕಿಂತ ಹೆಚ್ಚಿನ ರಾಜಸ್ವ ಸ್ವೀಕೃತಿಯಿಂದಾಗಿ, ರಾಜಸ್ವ ಕೊರತೆ ಆಯವ್ಯಯದಲ್ಲಿ ಯೋಜಿಸಿದ್ದಕ್ಕಿಂತ (₹15,134 ಕೋಟಿ) ₹1,468 ಕೋಟಿಯಷ್ಟು ಕೊರತೆ ಕಡಿಮೆಯಾಯಿತು.

## 1.7 ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಕ್ಷಿಪ್ರ ಚಿತ್ರ

ಸರ್ಕಾರದ ಲೆಕ್ಕಗಳು ಸರ್ಕಾರದ ಹಣಕಾಸಿನ ಹೊಣೆಗಾರಿಕೆಗಳನ್ನು ಮತ್ತು ವೆಚ್ಚದಿಂದ ಸೃಷ್ಟಿಸಲಾದ ಆಸ್ತಿಗಳನ್ನು ಬಿಂಬಿಸುತ್ತವೆ. ಹೊಣೆಗಾರಿಕೆಗಳು ಮುಖ್ಯವಾಗಿ ಆಂತರಿಕ ಸಾಲಗಳು, ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕ ಮತ್ತು ಮೀಸಲು ನಿಧಿಗಳಡಿಯ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ ಮತ್ತು ಆಸ್ತಿಗಳು ಮುಖ್ಯವಾಗಿ ಬಂಡವಾಳ ವೆಚ್ಚ, ರಾಜ್ಯ ಸರ್ಕಾರ ನೀಡಿದ ಸಾಲಗಳು

ಮತ್ತು ಮುಂಗಡಗಳು ಮತ್ತು ನಗದು ಶಿಲ್ಕುಗಳನ್ನು ಒಳಗೊಂಡಿರುತ್ತವೆ. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವೃದ್ಧಿಯ ದರದ ಅಂಗಗಳನ್ನು **ಕೋಷ್ಟಕ–1.3**ರಲ್ಲಿ ನೀಡಲಾಗಿದೆ ಮತ್ತು 31 ಮಾರ್ಚ್ 2021ಕ್ಕೆ ಹೋಲಿಸಿದರೆ 31 ಮಾರ್ಚ್ 2022ರಲ್ಲಿದ್ದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿವರವಾದ ಸಾರಾಂಶವನ್ನು **ಅನುಬಂಧ–1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.3: ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸಂಕ್ಷಿಪ್ತ ಸ್ಥಿತಿ**

(₹ ಕೋಟಿಗಳಲ್ಲಿ)

| ಹೊಣೆಗಾರಿಕೆಗಳು | | | | | ಆಸ್ತಿಗಳು | | | | |
|---|---|---|---|---|---|---|---|---|---|
| | | 2020–21 | 2021–22 | *ಶೇಕಡಾವಾರು ಏರಿಕೆ/ಇಳಿಕೆ* | | | 2020–21 | 2021–22 | *ಶೇಕಡಾವಾರು ಏರಿಕೆ/ಇಳಿಕೆ* |
| ಸಂಚಿತ ನಿಧಿ | | | | | | | | | |
| ಎ | ಆಂತರಿಕ ಋಣ | 2,81,140 | 3,29,042 | 17.04 | ಎ | ಒಟ್ಟು ಬಂಡವಾಳ ವೆಚ್ಚ | 3,51,201 | 3,99,069 | 13.63 |
| ಬಿ | ಭಾರತ ಸರ್ಕಾರದ ಸಾಲಗಳು ಮತ್ತು ಮುಂಗಡಗಳು | 26,617 | 45,385* | 70.51 | ಬಿ | ಸಾಲಗಳು ಮತ್ತು ಮುಂಗಡಗಳು | 31,246 | 35,329 | 13.06 |
| ಸಾದಿಲ್ವಾರು ನಿಧಿ | | 80 | 500 | 525 | ಸಾದಿಲ್ವಾರು ನಿಧಿ | | – | – | – |
| ಸಾರ್ವಜನಿಕ ಲೆಕ್ಕ | | | | | | | | | |
| ಎ | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಇತ್ಯಾದಿ | 38,811 | 42,333 | 9.07 | ಎ | ಮುಂಗಡಗಳು | 7 | 7 | – |
| ಬಿ | ಠೇವಣಿಗಳು | 30,874 | 33,682 | 9.10 | ಬಿ | ಜಮೆಗಳು | 1,073 | 1,207 | 12.49 |
| ಸಿ | ಮೀಸಲು ನಿಧಿಗಳು | 43,873 | 53,046 | 20.91 | ಸಿ | ಅಮಾನತ್ತು ಮತ್ತು ಇತರೆ | – | | |
| | | | | | | **ವೆಚ್ಚದ ಮೇಲಿನ ಸ್ವೀಕೃತಿಗಳ ಸಂಚಿತ ಹೆಚ್ಚುವರಿ** | – | **7,188** | – |
| ಡಿ | ಅಮಾನತ್ತು ಮತ್ತು ಇತರೆ | 2,377 | 2,224 | (–)6.44 | | **ನಗದು ಶಿಲ್ಕು (ಮೀಸಲು ನಿಧಿಯಲ್ಲಿನ ಹೂಡಿಕೆಗಳನ್ನು ಒಳಗೊಂಡು)** | **47,143** | **63,412** | **34.51** |
| ಎ | ಜಮೆಗಳು | – | – | – | | **ಒಟ್ಟು** | **4,30,670** | **5,06,212** | **17.54** |
| | **ವೆಚ್ಚದ ಮೇಲಿನ ಸ್ವೀಕೃತಿಗಳ ಸಂಚಿತ ಹೆಚ್ಚುವರಿ** | **6,898** | – | – | | **ರಾಜಸ್ವ ಲೆಕ್ಕದಲ್ಲಿನ ಕೊರತೆ** | – | | – |
| **ಒಟ್ಟು** | | **4,30,670** | **5,06,212** | **17.54** | **ಒಟ್ಟು** | | **4,30,670** | **5,06,212** | **17.54** |

*ಆಕರ: ಹಣಕಾಸು ಲೆಕ್ಕಗಳು*

* *ಭಾರತ ಸರ್ಕಾರಕ್ಕೆ ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು ₹14,869 ಕೋಟಿಗಳಷ್ಟಾಗುತ್ತದೆ ಏಕೆಂದರೆ, ಭಾರತ ಸರ್ಕಾರದ ವೆಚ್ಚ ಇಲಾಖೆಯು ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಋಣ ಸ್ವೀಕೃತಿ ಅಡಿಯಲ್ಲಿ ನೀಡಿದ ಸರಕು ಮತ್ತು ಸೇವಾ ತೆರಿಗೆ ಪರಿಹಾರ ಧನವಾದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳನ್ನು ಹಣಕಾಸು ಆಯೋಗದಿಂದ ನಿಗದಿಪಡಿಸುವ ಯಾವುದೇ ಮಾನದಂಡದಡಿಯಲ್ಲಿ ರಾಜ್ಯದ ಸಾಲ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿತು.*

ಸಂಚಿತ ನಿಧಿಯಲ್ಲಿನ ಸ್ವತ್ತುಗಳ (ಸಾಲಗಳು ಮತ್ತು ಮುಂಗಡಗಳು) ಬೆಳವಣಿಗೆಯ ದರವು 2020–21ರಲ್ಲಿದ್ದ ಶೇಕಡ ಎಂಟರಿಂದ 2021–22ರಲ್ಲಿ ಶೇಕಡ 13ಕ್ಕೆ ಏರಿಕೆಯಾದರೆ, ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ ಹೊಣೆಗಾರಿಕೆಗಳು 2020–21ರಲ್ಲಿದ್ದ ಶೇಕಡ 28ರಿಂದ 2021–22ರಲ್ಲಿ ಶೇಕಡ 17ಕ್ಕೆ ಇಳಿಕೆಯಾಯಿತು. ರಾಜ್ಯದ ಹಣಕಾಸು ಲೆಕ್ಕಗಳು ಎಲ್ಐಸಿ, ಜಿಐಸಿ, ನಬಾರ್ಡ್, ಎನ್‌ಸಿಡಿಸಿ ಇತ್ಯಾದಿಗಳ ಲೆಕ್ಕಗಳಲ್ಲಿನ ₹394.04 ಕೋಟಿಗಳ ವ್ಯತ್ಯಾಸವನ್ನು ಗಣನೆಗೆ ತೆಗೆದುಕೊಂಡ ನಂತರ 2021–22ರ ಅಂತ್ಯದ ವೇಳೆಗೆ ₹3,29,042 ಕೋಟಿಗಳನ್ನು ಬಾಕಿ ಇರುವ ಆಂತರಿಕ ಋಣವಾಗಿ ತೋರಿಸಿದೆ. ವರ್ಷದ ಕೊನೆಯಲ್ಲಿ ರಾಜ್ಯದ ನಗದು ಶುಲ್ಕ (ಮೀಸಲು ನಿಧಿಗಳ ಹೂಡಿಕೆ ಮತ್ತು ಭಾರತೀಯ ರಿಸರ್ವ್‌ಬ್ಯಾಂಕ್‌ನೊಂದಿಗಿನ

ಠೇವಣಿಗಳನ್ನು ಒಳಗೊಂಡು) ₹63,412 ಕೋಟಿಗಳಷ್ಟು ಇದ್ದಿತು. ನಗದು ಶಿಲ್ಕಿನ (ಮೀಸಲು ನಿಧಿಗಳ ಹೂಡಿಕೆ ಮತ್ತು ಭಾರತೀಯ ರಿಸರ್ವ್‌ಬ್ಯಾಂಕ್‌ನೊಂದಿಗಿನ ಠೇವಣಿಗಳನ್ನು ಒಳಗೊಂಡು) ಹೆಚ್ಚಳ ಹಿಂದಿನ ವರ್ಷಕ್ಕಿಂತ ಶೇಕಡ 35ರಷ್ಟಿತ್ತು.

## 1.8 ವಿತ್ತೀಯ ಪ್ರಮಿತಿಗಳು

ಮೂರು ಪ್ರಮುಖ ಹಣಕಾಸಿನ ಪ್ರಮಿತಿಗಳಾದ ರಾಜಸ್ವ, ವಿತ್ತೀಯ ಮತ್ತು ಪ್ರಾಥಮಿಕ ಕೊರತೆಗಳು ನಿರ್ದಿಷ್ಟ ಅವಧಿಯಲ್ಲಿ ಒಟ್ಟಾರೆ ಹಣಕಾಸಿನ ಅಸಮತೋಲನದ ಪ್ರಮಾಣವನ್ನು ಸೂಚಿಸುತ್ತವೆ.

ಕೊರತೆಯ ಸ್ವರೂಪವು ಹಣಕಾಸಿನ ನಿರ್ವಹಣೆಯಲ್ಲಿನ ವಿವೇಚನೆಯ ವ್ಯಾಪ್ತಿಯ ಸೂಚಕವಾಗಿದೆ. ಇದಲ್ಲದೆ, ಕೊರತೆಯನ್ನು ಭರಿಸಲು ಹಣಕಾಸು ಒದಗಿಸುವ ವಿಧಾನಗಳು ಮತ್ತು ಸಂಪನ್ಮೂಲಗಳ ಅನ್ವಯವು ಅದರ ಆರ್ಥಿಕ ಸ್ವಾಸ್ಥ್ಯಕ್ಕೆ ಪ್ರಮುಖ ಸೂಚಕಗಳಾಗಿವೆ. ಈ ವಿಭಾಗವು ಕೊರತೆಗಳ ಪ್ರವೃತ್ತಿಗಳು, ಸ್ವರೂಪ ಮತ್ತು ಪ್ರಮಾಣ ಮತ್ತು ಈ ಕೊರತೆಗಳಿಗೆ ಹಣಕಾಸು ಒದಗಿಸುವ ವಿಧಾನವನ್ನು ಪ್ರಸ್ತುತಪಡಿಸುತ್ತದೆ ಮತ್ತು 2021–22ರ ಆರ್ಥಿಕ ವರ್ಷಕ್ಕೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಅಡಿಯಲ್ಲಿ ನಿಗದಿಪಡಿಸಿದ ಗುರಿಗಳಿಗೆ ಹೋಲಿಸಿದರೆ ರಾಜಸ್ವ ಮತ್ತು ವಿತ್ತೀಯ ಕೊರತೆಗಳ ನೈಜಮಟ್ಟದ ಮೌಲ್ಯಮಾಪನವನ್ನು ಒದಗಿಸುತ್ತದೆ.

### *1.8.1 ಕೊರತೆ/ಹೆಚ್ಚಳಗಳಲ್ಲಿನ ಪ್ರವೃತ್ತಿಗಳು*

2017–18ರಿಂದ 2021–22ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಪ್ರಮುಖ ಹಣಕಾಸಿನ ಪ್ರಮಿತಿಗಳ ಹೆಚ್ಚಳ ಮತ್ತು ಕೊರತೆಗಳ ಪ್ರವೃತ್ತಿಯನ್ನು **ನಕ್ಷೆ–1.6**ರಲ್ಲಿ ಚಿತ್ರಿಸಲಾಗಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದರೆ ಹೆಚ್ಚಳ ಮತ್ತು ಕೊರತೆಯ ಪ್ರವೃತ್ತಿಯನ್ನು **ನಕ್ಷೆ–1.7**ರಲ್ಲಿ ನೀಡಲಾಗಿದೆ.

**ನಕ್ಷೆ–1.6: ಕೊರತೆಯ ಪ್ರಮಿತಿಗಳಲ್ಲಿನ ಪ್ರವೃತ್ತಿಗಳು**




| | 2017-18 | 2018-19 | 2019-20 | 2020-21 | 2021-22 |
|---|---|---|---|---|---|
| ರಾಜಸ್ವ ಹೆಚ್ಚಳ/ಕೊರತೆ | 4,518 | 679 | 1,185 | -19,338 | -13,666 |
| ವಿತ್ತೀಯ ಕೊರತೆ | -31,101 | -38,442 | -38,166 | -67,098 | -66,036 |
| ಪ್ರಾಥಮಿಕ ಕೊರತೆ | -16,128 | -21,828 | -18,263 | -43,665 | -39,760 |

ಆಕರ: ಹಣಕಾಸು ಲೆಕ್ಕಗಳು

**ನಕ್ಷೆ–1.7: ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂವಾದಿಯಾಗಿ ಹೆಚ್ಚಳ/ಕೊರತೆಯ ಪ್ರವೃತ್ತಿಗಳು**




*ಆಕರ: ಆರ್ಥಿಕ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಮತ್ತು ಹಣಕಾಸು ಲೆಕ್ಕಗಳು*

ರಾಜಸ್ವ ಸ್ವೀಕೃತಿಗಳ ಹೆಚ್ಚಳದಿಂದಾಗಿ 2021–22ರಲ್ಲಿ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಡಿಮೆ ಇದ್ದಿತು. ಹಿಂದಿನ ವರ್ಷಕ್ಕಿಂತ ರಾಜಸ್ವ ಸ್ವೀಕೃತಿಗಳ ಬೆಳವಣಿಗೆ ಶೇಕಡ 24.92ರಷ್ಟಿದ್ದು ವೆಚ್ಚದ ಬೆಳವಣಿಗೆ ಶೇಕಡ 18.96 ರಷ್ಟಿತ್ತು.

### *1.8.2 ವಿತ್ತೀಯ ಹೊಣೆಗಾರಿಕೆಗಳಲ್ಲಿ ಪ್ರವೃತ್ತಿಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ*

2017–18ರಿಂದ 2021–22ರ ಅವಧಿಯಲ್ಲಿ ರಾಜ್ಯದ ಬಾಕಿ ಉಳಿದಿರುವ ಹಣಕಾಸಿನ ಹೊಣೆಗಾರಿಕೆಗಳ ಸಂಯೋಜನೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ ಇವುಗಳ ವಿವರಗಳನ್ನು **ಕೋಷ್ಟಕ–1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.4: ವಿತ್ತೀಯ ಹೊಣೆಗಾರಿಕೆಗಳಲ್ಲಿ ಪ್ರವೃತ್ತಿಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಅನುಪಾತ**

**(₹ ಕೋಟಿಗಳಲ್ಲಿ)**

| ಹೊಣೆಗಾರಿಕೆಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಆಂತರಿಕ ಋಣ | 1,48,581 | 1,79,309 | 2,20,337 | 2,81,140 | 3,29,042 |
| ಭಾರತ ಸರ್ಕಾರದ ಸಾಲಗಳು | 14,555 | 14,657 | 13,908 | 26,617 | 45,385* |
| ಸಾರ್ವಜನಿಕ ಲೆಕ್ಕ | 69,922 | 76,410 | 85,172 | 89,748 | 99,147 |
| ಆಯವ್ಯಯೇತರ ಸಾಲಗಳು | 13,173 | 14,862 | 18,103 | 18,421 | 16,682 |
| ಒಟ್ಟು ಆರ್ಥಿಕ ಹೊಣೆಗಾರಿಕೆಗಳು | **2,46,231** | **2,85,238** | **3,37,520** | **4,15,926** | **4,90,256** |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಒಟ್ಟು ಹೊಣೆಗಾರಿಕೆಗಳು (ಶೇಕಡಾವಾರು) | 18.47 | 19.32 | 20.89 | 24.03 | 26.71* |
| ಗುರಿ (ಶೇಕಡಾವಾರು) | 25.00 | 25.00 | 25.00 | 25.00 | 25.00 |

*ಆಕರ : ಹಣಕಾಸು ಲೆಕ್ಕಗಳು*

** ಭಾರತ ಸರ್ಕಾರಕ್ಕೆ ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು 14,869 ಕೋಟಿಗಳಷ್ಟಾಗುತ್ತದೆ. ಏಕೆಂದರೆ ಭಾರತ ಸರ್ಕಾರದ ವೆಚ್ಚ ಇಲಾಖೆಯು ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಋಣ ಸ್ವೀಕೃತಿ ಅಡಿಯಲ್ಲಿ ನೀಡಿದ ಸರಕು ಮತ್ತು ಸೇವಾ ತೆರಿಗೆ ಪರಿಹಾರ ಧನವಾದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳನ್ನು ಹಣಕಾಸು ಆಯೋಗದಿಂದ ನಿಗದಿಪಡಿಸುವ ಯಾವುದೇ ಮಾನದಂಡದ ಅಡಿಯಲ್ಲಿ ರಾಜ್ಯದ ಸಾಲ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿತು.*

ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿನ ಋಣಾತ್ಮಕ ಬೆಳವಣಿಗೆಯಿಂದಾಗಿ 2021-22ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರು ಪ್ರಮಾಣದಲ್ಲಿ ಒಟ್ಟು ಹೊಣೆಗಾರಿಕೆಗಳು ಹೆಚ್ಚಾಗಿದ್ದವು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಒಟ್ಟು ಹೊಣೆಗಾರಿಕೆಯ ಅನುಪಾತವನ್ನು ಒಟ್ಟು ಬಾಕಿ ಇರುವ ಹೊಣೆಗಾರಿಕೆಯಿಂದ ಋಣ ಸ್ವೀಕೃತಿಗಳ ಅಡಿಯಲ್ಲಿ 2020-21 ಮತ್ತು 2021-22ರ ಅವಧಿಯಲ್ಲಿ ರಾಜ್ಯ ಸರ್ಕಾರಕ್ಕೆ ನೀಡಲಾದ ಬ್ಯಾಕ್-ಟು-ಬ್ಯಾಕ್ ಸಾಲವಾಗಿ ನೀಡಲಾದ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಮೊತ್ತವಾದ ₹12,407 ಮತ್ತು ₹18,109 ಕೋಟಿಗಳನ್ನು ಹೊರತುಪಡಿಸಿದ ನಂತರ ಕಂಡು ಹಿಡಿಯಲಾಗಿದೆ ಏಕೆಂದರೆ, ಭಾರತ ಸರ್ಕಾರದ ವೆಚ್ಚ ಮಂತ್ರಾಲಯವು ಇದನ್ನು ಹಣಕಾಸು ಆಯೋಗವು ನಿಗದಿಪಡಿಸುವ ಯಾವುದೇ ಮಾನದಂಡಗಳಂತೆ ರಾಜ್ಯದ ಋಣ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿದೆ.

ರಾಜ್ಯದ ಹಣಕಾಸಿನ ಹೊಣೆಗಾರಿಕೆಗಳು 2017-18ರಲ್ಲಿದ್ದ ₹2,46,231 ಕೋಟಿಗಳಿಂದ 2021-22ರಲ್ಲಿ ₹4,90,256 ಕೋಟಿಗಳಿಗೆ ಶೇಕಡ 87ರಷ್ಟು ಏರಿಕೆಯಾಗಿತ್ತು ಮತ್ತು ಹಿಂದಿನ ವರ್ಷಕ್ಕಿಂತ ಶೇಕಡ 18ರಷ್ಟು ಏರಿಕೆಯಾಗಿತ್ತು. ಮಾರುಕಟ್ಟೆ ಸಾಲಗಳನ್ನೂ ಒಳಗೊಂಡ ಆಂತರಿಕ ಸಾಲವು 2021-22ರಲ್ಲಿ ಶೇಕಡ 67 ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಸಾಲಗಳು ಒಟ್ಟು ಹಣಕಾಸಿನ ಹೊಣೆಗಾರಿಕೆಗಳ ಶೇಕಡ 20ರಷ್ಟಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಒಟ್ಟು ಹೊಣೆಗಾರಿಕೆಗಳು 2017-18ರಲ್ಲಿದ್ದ ಶೇಕಡ 18.47ರಿಂದ 2021-22ರಲ್ಲಿ ಶೇಕಡ 26.71ಕ್ಕೆ ಏರಿದ್ದು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದು, ಕರ್ನಾಟಕ ವಿತ್ತೀಯ ಸುಧಾರಣಾ ನಿಯಮ/ಮಧ್ಯಮಾವಧಿ ವಿತ್ತೀಯ ಯೋಜನೆಯ (ಎಮ್‌ಟಿಎಫ್‌ಪಿ) ಅಡಿಯಲ್ಲಿ ಸೂಚಿಸಲಾಗಿರುವ ಗರಿಷ್ಠ ಮಿತಿಯನ್ನೂ ಮೀರಿದೆ. ಇದು ಪ್ರಮುಖವಾಗಿ ರಾಜ್ಯದ ಆಂತರಿಕ ಸಾಲದ ಕಾರಣದಿಂದಾಗಿದೆ.

## 1.9 ರಾಜ್ಯದ ಹಣಕಾಸಿನ ಸ್ಥಿತಿ

ಹಣಕಾಸಿನ ನಿರ್ವಹಣೆಯಲ್ಲಿ ಅಂತರ-ಉತ್ಪಾದಕ ನೀತಿಯನ್ನು ಮತ್ತು ದೀರ್ಘಕಾಲೀನ ದೃಢ ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮ 2002ನ್ನು ಜಾರಿಗೆ ತರಲಾಯಿತು.

### *1.9.1 ಪ್ರಮುಖ ಹಣಕಾಸಿನ ಪ್ರಮಿತಿಗಳ ಮೇಲೆ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ, 2002ರ ಗುರಿಗಳು ಮತ್ತು ಅದರ ಸಾಧನೆಗಳು*

ಸಾಲಗಳು, ಋಣ ಮತ್ತು ಕೊರತೆಗಳ ಮೇಲಿನ ಮಿತಿಗಳ ಮೂಲಕ ಸಾಕಷ್ಟು ರಾಜಸ್ವ ಹೆಚ್ಚಳ ಮತ್ತು ವಿವೇಚನಾಯುಕ್ತ ಋಣ ನಿರ್ವಹಣೆಯನ್ನು ಕರ್ನಾಟಕ ವಿತ್ತೀಯ ಸುಧಾರಣೆ ಅಧಿನಿಯಮ 2002 ಕಲ್ಪಿಸಿದೆ. ರಾಜಸ್ವ ಮತ್ತು ವಿತ್ತೀಯ ಕೊರತೆಗಳ ಗುರಿಗಳು ಮತ್ತು ಅವುಗಳ ವಾಸ್ತವ ಮಟ್ಟಗಳನ್ನು **ಕೋಷ್ಟಕ-1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ-1.5: ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿಗಳ ಅನುಸರಣೆ**

| ಆರ್ಥಿಕ ನಿಯತಾಂಕಗಳು | ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿ | ಸಾಧನೆ | | | | |
|---|---|---|---|---|---|---|
| | | 2017-18 | 2018-19 | 2019-20 | 2020-21 | 2021-22 |
| ರಾಜಸ್ವ ಹೆಚ್ಚಳ/ಕೊರತೆ (₹ ಕೋಟಿಗಳಲ್ಲಿ) | 2019-20ರವರೆಗೆ ರಾಜಸ್ವ ಹೆಚ್ಚಳವನ್ನು ನಿರ್ವಹಿಸುವುದು | 4,518 | 679 | 1,185 | (-)19,338 | (-)13,666 |
| | ಕೋವಿಡ್-19ರ ಕಾರಣದಿಂದ ಮತ್ತು ಆರ್ಥಿಕತೆ ನಿಧಾನಗತಿಯ ಚೇತರಿಕೆಯಿಂದಾಗಿ ರಾಜಸ್ವ ಹೆಚ್ಚಳವನ್ನು 2020-21 ಮತ್ತು 2021-22ರ ಅವಧಿಯಲ್ಲಿ ಸಾಧಿಸಲು ಸಾಧ್ಯವಾಗದಿರಬಹುದು | √ | √ | √ | ರಾಜ್ಯವು ರಾಜಸ್ವ ಕೊರತೆಯನ್ನು ಎದುರಿಸಿತು | |
| | ಶೇಕಡ 3.00 (2019-20ರ ವರೆಗೆ) | 31,101 (2.33) | 38,442 (2.60) | 38,166 (2.36) | 67,098 (3.88) | 66,036 (3.84) |

| ಆರ್ಥಿಕ ನಿಯತಾಂಕಗಳು | ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮದ ಗುರಿ | ಸಾಧನೆ | | | | |
|---|---|---|---|---|---|---|
| | | 2017–18 | 2018–19 | 2019–20 | 2020–21 | 2021–22 |
| ವಿತ್ತೀಯ ಕೊರತೆ (ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಶೇಕಡಾವಾರು) | ಶೇಕಡ 5.00 (2020–21 ಮತ್ತು ಶೇಕಡ 4.00 (2021–22) | √ | √ | √ | √ | √ |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಾಕಿ ಇರುವ ಋಣದ ಅನುಪಾತ (ಶೇಕಡಾವಾರು) | ಶೇಕಡ 25.00 (2021–22ರ ವರೆಗೆ) ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಋಣದ ಅನುಪಾತವು ಹೆಚ್ಚಾಗಬಹುದು (2021–22) | 18.47 | 19.32 | 20.89 | 24.03 | 26.71* |
| | | √ | √ | √ | √ | ಅನುಪಾತವು ಹೆಚ್ಚಾಗಿತ್ತು |

**ಸೂಚಕಗಳನ್ನು ಲೆಕ್ಕಹಾಕುವಾಗ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದಾದ ಕೊರತೆಯ ಪರಿಹಾರವಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹30,516 ಕೋಟಿ) ಋಣವೆಂದು ಪರಿಗಣಿಸಿಲ್ಲ.*

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಒಟ್ಟು ಹೊಣೆಗಾರಿಕೆಯ ಅನುಪಾತವನ್ನು ಒಟ್ಟು ಬಾಕಿ ಇರುವ ಹೊಣೆಗಾರಿಕೆಯಿಂದ ಋಣ ಸ್ವೀಕೃತಿಗಳಡಿಯಲ್ಲಿ 2020–21 ಮತ್ತು 2021–22ರ ಅವಧಿಯಲ್ಲಿ ರಾಜ್ಯ ಸರ್ಕಾರಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಮೊತ್ತವಾದ ₹12,407 ಮತ್ತು ₹18,109 ಕೋಟಿಗಳನ್ನು ಹೊರತುಪಡಿಸಿದ ನಂತರ ಕಂಡು ಹಿಡಿಯಲಾಗಿದೆ ಏಕೆಂದರೆ, ಭಾರತ ಸರ್ಕಾರದ ವೆಚ್ಚ ಸಚಿವಾಲಯ ಇದನ್ನು ಹಣಕಾಸು ಆಯೋಗವು ನಿಗದಿಪಡಿಸುವ ಯಾವುದೇ ಮಾನದಂಡಗಳಂತೆ ರಾಜ್ಯದ ಋಣ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿದೆ.

ಫೆಬ್ರವರಿ 2014ರಲ್ಲಿ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮಗೆ ತಿದ್ದುಪಡಿಯ ಮೂಲಕ, ಪರಿಚ್ಛೇಧ–2(ಜಿ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಒಟ್ಟು ಹೊಣೆಗಾರಿಕೆಗಳ ವ್ಯಾಪ್ತಿಯನ್ನು ಸಾರ್ವಜನಿಕ ವಲಯ ಉದ್ದಿಮಗಳು ಮತ್ತು ವಿಶೇಷ ಉದ್ದೇಶ ಸಾಧನಗಳು[2] ಹಾಗೂ ಇತರ ಸಮಾನ ಸಾಧನಗಳು ಮಾಡಿದ ಸಾಲಗಳನ್ನು ಒಳಗೊಳ್ಳಲು ವಿಸ್ತರಿಸಲಾಯಿತು. ಇದರಿಂದಾಗಿ, ಈ ಸಾಲಗಳ ಅಸಲು ಮತ್ತು/ಅಥವಾ ಬಡ್ಡಿಯನ್ನು ರಾಜ್ಯದ ಆಯವ್ಯಯದಿಂದಲೇ ಭರಿಸಬೇಕಿತ್ತು. ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಹಣಕಾಸು ಆಯೋಗಗಳು ನಿಗದಿಪಡಿಸುವ ಪ್ರಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ವಿತ್ತೀಯ ಸುಧಾರಣೆ ಆಧಿನಿಯಮಕ್ಕೆ ತಿದ್ದುಪಡಿ ಮಾಡುತ್ತಿದೆ.

2021–22ರಲ್ಲಿ, ರಾಜ್ಯ ಸರ್ಕಾರವು ವಿತ್ತೀಯ ಕೊರತೆಯನ್ನು ಅಂದಾಜಿಸಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಮೂರರಿಂದ ಶೇಕಡ ನಾಲ್ಕಕ್ಕೆ ಏರಿಸಿ ಕರ್ನಾಟಕ ವಿತ್ತೀಯ ಸುಧಾರಣಾ ಅಧಿನಿಯಮವನ್ನು ತಿದ್ದುಪಡಿ ಮಾಡಿತು. ಜೊತೆಗೆ ರಾಜ್ಯವು ಕೋವಿಡ್ ಪೂರ್ವ ಹಂತಕ್ಕೆ ಆರ್ಥಿಕತೆಯ ನಿಧಾನಗತಿಯ ಚೇತರಿಕೆಯಿಂದಾಗಿ ರಾಜಸ್ವ ಕೊರತೆಯನ್ನು ಕಲ್ಪಿಸಿತು. ಅದು ಒಟ್ಟು ಹೊಣೆಗಾರಿಕೆಗಳು ಅಂದಾಜಿಸಿದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 25ಕ್ಕಿಂತ ಅಧಿಕವಾಗಬಹುದು ಎಂದೂ ನಿಗದಿಪಡಿಸಿತ್ತು.

ರಾಜ್ಯ ಸರ್ಕಾರವು 2004–05ರಿಂದ 2019–20ರವರೆಗೂ ರಾಜಸ್ವ ಹೆಚ್ಚಳವನ್ನು ದಾಖಲಿಸಿತು ಮತ್ತು ವಿತ್ತೀಯ ಕೊರತೆ ಮತ್ತು ಸಾಲ– ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ 'ಅನುಪಾತವು ಅಧಿನಿಯಮದ ಅಡಿಯಲ್ಲಿ ನಿಗದಿಪಡಿಸಿದ ಶೇಕಡ ಮೂರು/ಐದರ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 25ರ ಮಿತಿಯೊಳಗೇ ಇತ್ತು. 2020–21 ಮತ್ತು 2021–22ರಲ್ಲಿ ರಾಜ್ಯವು ರಾಜಸ್ವ ಕೊರತೆಯನ್ನು ಅನುಭವಿಸಿತು. ರಾಜಸ್ವದ ಕೊರತೆಯನ್ನು ಸಾಲದ ನಿಧಿಗಳಿಂದ ಪೂರೈಸಲಾಯಿತು. 2020–21ರಲ್ಲಿ, ವಿತ್ತೀಯ ಕೊರತೆ, ಸಾಲ– ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ ಕ್ರಮವಾಗಿ ಶೇಕಡ ಐದು ಮತ್ತು ಶೇಕಡ 25ರ ಮಿತಿಯೊಳಗೆ ಇದ್ದರೆ, 2021–22ರಲ್ಲಿ ವಿತ್ತೀಯ ಕೊರತೆಯು ನಿಗದಿಪಡಿಸಿದ ಶೇಕಡ ನಾಲ್ಕರ

[2] ಸಾರ್ವಜನಿಕ ಉದ್ದಿಮೆಗಳು ಮತ್ತು ವಿಶೇಷ ಉದ್ದೇಶ ಸಾಧನಗಳು ಮಾಡುವ ಸಾಲಗಳು ಆಯವ್ಯಯದ ಹೊರಗಿನ ಸಾಲಗಳಾಗಿವೆ.

ಮಿತಿಯೊಳಗೆ ಇತ್ತು. ಆದಾಗ್ಯೂ 2021–22ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಸಾಲ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜಿಸಿದ ಶೇಕಡ 25ಕ್ಕಿಂತಲೂ ಅಧಿಕವಾಗಿತ್ತು.

### *1.9.2 2021–22ರ ಮಧ್ಯಮಾವಧಿ ವಿತ್ತೀಯ ಯೋಜನೆಯ ಪ್ರಕ್ಷೇಪಣೆಗಳಿಗೆ ಪ್ರತಿಯಾಗಿ ವಾಸ್ತವಗಳು*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯನ್ವಯ ರಾಜ್ಯ ಸರ್ಕಾರವು ವಾರ್ಷಿಕ ಆಯವ್ಯಯದೊಂದಿಗೆ ಐದು ವರ್ಷಗಳ ಹಣಕಾಸು ಯೋಜನೆಯನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕು. ಮಧ್ಯಮಾವಧಿ ವಿತ್ತೀಯ ಯೋಜನೆಯು ನಿಗದಿತ ಹಣಕಾಸಿನ ಸೂಚಕಗಳಿಗೆ ಐದು ವರ್ಷಗಳ ಆವರ್ತನ ಗುರಿಯನ್ನು ನಿಗದಿಪಡಿಸಿದೆ. ಮಧ್ಯಮಾವಧಿ ವಿತ್ತೀಯ ಯೋಜನೆಯು 2021–22ಕ್ಕೆ ಪ್ರಕ್ಷೇಪಿಸಿದ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸವನ್ನು **ಕೋಷ್ಟಕ–1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.6: 2021–22ಕ್ಕೆ ಮಧ್ಯಮಾವಧಿ ವಿತ್ತೀಯ ಅವಧಿಯ ಯೋಜನೆಯ ಪ್ರಕ್ಷೇಪಣೆಗಳಿಗೆ ಪ್ರತಿಯಾಗಿ ವಾಸ್ತವಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಆರ್ಥಿಕ ಸ್ಥಿರಾಂಶಗಳು | 2019–23ರ ಮಧ್ಯಂತರ ವಿತ್ತೀಯ ಅವಧಿಯ ಯೋಜನೆಯ ಪ್ರಕಾರ ಪ್ರಕ್ಷೇಪಣೆಗಳು | ವಾಸ್ತವಗಳು (2021–22) | ವ್ಯತ್ಯಾಸ (ಶೇಕಡಾವಾರು) |
|---|---|---|---|---|
| 1 | ಸ್ವಂತ ತೆರಿಗೆ ರಾಜಸ್ವ | 1,46,600 | 1,20,739 | (–)17.64 |
| 2 | ತೆರಿಗೆಯೇತರ ರಾಜಸ್ವ | 8,078 | 11,777 | 45.79 |
| 3 | ಕೇಂದ್ರದ ತೆರಿಗೆಗಳಲ್ಲಿ ಪಾಲು | 31,164 | 33,284 | 6.80 |
| 4 | ಭಾರತ ಸರ್ಕಾರದಿಂದ ಸಹಾಯಾನುದಾನಗಳು | 15,843 | 29,962 | 89.12 |
| 5 | **ರಾಜಸ್ವ ಸ್ವೀಕೃತಿಗಳು (1+2+3+4)** | **2,01,686** | **1,95,762** | **(–)2.94** |
| 6 | ರಾಜಸ್ವ ವೆಚ್ಚ | 2,00,713 | 2,09,428 | 4.34 |
| 7 | ಒಟ್ಟು ಋಣ | 4,27,056 | 4,90,256 | 14.80* |
| 8 | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 20,12,532 | 17,21,336 | (–)14.47 |
| 9 | **ರಾಜಸ್ವ ಕೊರತೆ (–)/ಅಧಿಕ (+) (5–6)** | **973** | **(–)13,666** | **(–)1,304.62** |
| 10 | ವಿತ್ತೀಯ ಕೊರತೆ (–)/ ಅಧಿಕ (+) | 58,363 | 66,036 | 13.15 |
| 11 | ಋಣ–ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ (ಶೇಕಡಾವಾರು) | 21.22 | 26.71** | 5.49 |
| 12 | ಪ್ರಸ್ತುತ ದರದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರ (ಶೇಕಡಾವಾರು) | 11.5 | (–)0.56 | 10.94 |

*ಆಕರ: ಹಣಕಾಸು ಲೆಕ್ಕಗಳು ಮತ್ತು ಮಧ್ಯಂತರ ವಿತ್ತೀಯ ಅವಧಿಯ ಯೋಜನೆ 2019–23*

* *ಪರಿಣಾಮಕಾರಿ ಒಟ್ಟು ಸಾಲಗಳು ₹4,59,740 ಕೋಟಿಗಳಷ್ಟಾಗುತ್ತದೆ. ಏಕೆಂದರೆ, ಭಾರತ ಸರ್ಕಾರದ ವೆಚ್ಚದ ಇಲಾಖೆಯು ರಾಜ್ಯಕ್ಕೆ ಬ್ಯಾಕ್ ಟು ಬ್ಯಾಕ್ ಸಾಲವಾಗಿ ಋಣ ಸ್ವೀಕೃತಿ ಅಡಿಯಲ್ಲಿ ನೀಡಿದ ಸರಕು ಮತ್ತು ಸೇವಾ ತೆರಿಗೆ ಪರಿಹಾರ ಧನವಾದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿಗಳನ್ನು ಹಣಕಾಸು ಆಯೋಗದಿಂದ ನಿಗದಿಪಡಿಸುವ ಯಾವುದೇ ಮಾನದಂಡದ ಅಡಿಯಲ್ಲಿ ರಾಜ್ಯದ ಸಾಲ ಎಂದು ಪರಿಗಣಿಸುವುದಿಲ್ಲ ಎಂದು ನಿರ್ಧರಿಸಿತು ಮತ್ತು ಪರಿಣಾಮಕಾರಿ ವ್ಯತ್ಯಯವು ಶೇಕಡ 7.65 ಆಗುತ್ತದೆ.*

** *2020–21 ಮತ್ತು 2021–22ರಲ್ಲಿ ಭಾರತ ಸರ್ಕಾರದಿಂದ ಸರಕು ಮತ್ತು ಸೇವಾ ತೆರಿಗೆ ಪರಿಹಾರಕ್ಕೆ ಬದಲಾಗಿ ಸ್ವೀಕರಿಸಿದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹30,516 ಕೋಟಿ) ಸೂಚಕವನ್ನು ಲೆಕ್ಕಹಾಕಲು ಸಾಲ ಎಂದು ಪರಿಗಣಿಸಲಾಗಿಲ್ಲ.*

ಮೇಲಿನ ಕೋಷ್ಟಕದಲ್ಲಿ ನೋಡಿದಂತೆ, ಎಲ್ಲಾ ಪ್ರಮುಖ ವಿತ್ತೀಯ ಪ್ರಮಿತಿಗಳಿಗೆ[3] ಸಂಬಂಧಿಸಿದಂತೆ ಮಧ್ಯಮಾವಧಿ ವಿತ್ತೀಯ ಯೋಜನೆಯಡಿಯಲ್ಲಿ ರಾಜಸ್ವ ಸ್ವೀಕೃತಿಗಳಿಗೆ ಮಾಡಿದ ಪ್ರಕ್ಷೇಪಕ್ಕಿಂತ ಕಡಿಮೆ

[3] ರಾಜಸ್ವ ಹೆಚ್ಚಳ/ಕೊರತೆ, ವಿತ್ತೀಯ ಕೊರತೆ, ಋಣ–ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ ಮತ್ತು ಪ್ರಸಕ್ತ ದರಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರ ಮುಂತಾದ ವಿತ್ತೀಯ ಸೂಚಕಗಳು.

ಬೆಳವಣಿಗೆಯಾದ ಕಾರಣದಿಂದ ಮಧ್ಯಮಾವಧಿ ವಿತ್ತೀಯ ಯೋಜನೆಯಡಿ ಯಾವುದೇ ಪ್ರಕ್ಷೇಪವನ್ನು ಸಾಧಿಸಿಲ್ಲ.

## 1.10 2021–22ರ ಅವಧಿಯಲ್ಲಿ ಪ್ರಮುಖ ವಿತ್ತೀಯ ಸೂಚಕಗಳ ಮೇಲೆ ಕೆಲವು ವಹಿವಾಟುಗಳ ಪರಿಣಾಮ

2021–22ರಲ್ಲಿನ ಕೆಲವು ಪ್ರಮುಖ ವಹಿವಾಟುಗಳ ಪರಿಶೀಲನೆಯು, ಹಣಕಾಸು ಲೆಕ್ಕಗಳಲ್ಲಿನ ಟಿಪ್ಪಣಿಗಳ ಕಂಡಿಕೆ 9ರಲ್ಲಿ ಮತ್ತು **ಕೋಷ್ಟಕ–1.7**ರಲ್ಲಿ ವಿವರಿಸಿದಂತೆ ಕೆಲವು ಲೆಕ್ಕ ಹೊಂದಾಣಿಕೆಗಳಿಂದ ರಾಜಸ್ವ ಕೊರತೆ ಮತ್ತು ವಿತ್ತೀಯ ಕೊರತೆಯು ಪ್ರಭಾವಿತವಾಗಿದೆ ಎಂಬುದನ್ನು ಪ್ರಕಟಪಡಿಸಿತು.

**ಕೋಷ್ಟಕ–1.7: 2021–22ರ ಅವಧಿಯಲ್ಲಿ ಕೆಲವು ಪ್ರಮುಖ ವಹಿವಾಟುಗಳ ಪರಿಣಾಮ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಹಿವಾಟಿನ ಸ್ವರೂಪ | ರಾಜಸ್ವ ಕೊರತೆ | | ವಿತ್ತೀಯ ಕೊರತೆ | |
|---|---|---|---|---|---|
| | | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು | ಹೆಚ್ಚಿಗೆ ಹೇಳಿರುವುದು | ಕಡಿಮೆ ಹೇಳಿರುವುದು |
| 1 | ರಾಜಸ್ವ ವೆಚ್ಚದ ಬದಲು ಬಂಡವಾಳ ವೆಚ್ಚದಡಿ ಭರಿಸಿರುವುದು | – | 187.98 | – | – |
| 1a | ರಾಜಸ್ವ ವೆಚ್ಚದ ಬದಲು ಬಂಡವಾಳ ವೆಚ್ಚದಡಿ ಭರಿಸಿರುವುದು (ಸಹಾಯಾನುದಾನ) | – | 81.00 | – | – |
| 2 | ಬಂಡವಾಳ ವೆಚ್ಚದ ಬದಲು ರಾಜಸ್ವ ವೆಚ್ಚದಡಿ ಭರಿಸಿರುವುದು | 47.57 | – | – | – |
| 3 | ಹಸಿರು ತೆರಿಗೆ ಉಪಕರದ ಸ್ವೀಕೃತಿಗಳನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡದಿರುವುದು | – | 13.84 | – | 13.84 |
| 4 | ರಸ್ತೆ ಸುರಕ್ಷತಾ ಉಪಕರದಡಿಯಲ್ಲಿ ರಾಜಸ್ವ ವರ್ಗಾವಣೆ ಮಾಡದಿರುವುದು | – | 91.31 | – | 91.31 |
| 5 | ಬಡ್ಡಿ ಹೊಂದಾಣಿಕೆಗಳು | 5.02 | – | – | – |
| ಒಟ್ಟು | | 52.59 | 374.13 | – | 105.15 |

*ಆಕರ: ಲೆಕ್ಕಗಳಿಗೆ ಟಿಪ್ಪಣಿಗಳು 2020–21 ಮತ್ತು ಪರಿಶೋಧನೋತ್ತರದ ವಿಶ್ಲೇಷಣೆ*

ಮೇಲೆ ಕಾಣಿಸಿದ ವಹಿವಾಟುಗಳನ್ನು ಕೆಳಗೆ ಚರ್ಚಿಸಲಾಗಿದೆ:

- **ಅಧ್ಯಾಯ–3ರ ಕಂಡಿಕೆ–3.6.2.2**ರಲ್ಲಿ ಚರ್ಚಿಸಿದಂತೆ ಬಂಡವಾಳ ಶೀರ್ಷಿಕೆಯಡಿಯಲ್ಲಿನ ₹187.98 ಕೋಟಿ ವೆಚ್ಚವನ್ನು ರಾಜಸ್ವ ಸ್ವಭಾವದ ವೆಚ್ಚಕ್ಕಾಗಿ ಬಳಸಲಾಯಿತು.
- ಜೊತೆಗೆ **ಅಧ್ಯಾಯ–3ರ ಕಂಡಿಕೆ–3.6.2.2**ರಲ್ಲಿ ಚರ್ಚಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ₹81.00 ಕೋಟಿ ಸಾಮಾನ್ಯ ಸಹಾಯಾನುದಾನ ವೆಚ್ಚವನ್ನು ರಾಜಸ್ವ ವೆಚ್ಚದ ಬದಲಿಗೆ ಬಂಡವಾಳ ವೆಚ್ಚದಡಿ ಭರಿಸಲಾಗಿತ್ತು.
- **ಅಧ್ಯಾಯ–3ರ ಕಂಡಿಕೆ–3.6.2.2**ರಲ್ಲಿ ಚರ್ಚಿಸಿದಂತೆ ರಾಜಸ್ವ ಶೀರ್ಷಿಕೆಯಡಿಯ ₹47.57 ಕೋಟಿ ವೆಚ್ಚವನ್ನು ಬಂಡವಾಳ ಸ್ವರೂಪದ ವೆಚ್ಚಕ್ಕಾಗಿ ಬಳಸಲಾಗಿತ್ತು.
- **ಅಧ್ಯಾಯ–2ರ ಕಂಡಿಕೆ 2.6.2**(ಬಿ) ಮತ್ತು (ಸಿ) ಗಳಲ್ಲಿ ಚರ್ಚಿಸಿದಂತೆ, ರಾಜ್ಯದ ಸಂಚಿತ ನಿಧಿಯಡಿ ಸಂಗ್ರಹಿಸಲಾಗಿದ್ದ ಹಸಿರು ತೆರಿಗೆ ಉಪಕರ (₹13.84 ಕೋಟಿ) ಮತ್ತು ರಸ್ತೆ ಸುರಕ್ಷತಾ ಉಪಕರಗಳನ್ನು (₹91.31 ಕೋಟಿ) ಮೀಸಲು ನಿಧಿಗಳಡಿ ಇರುವ ನಿಧಿ ಲೆಕ್ಕಕ್ಕೆ ವರ್ಗಾಯಿಸಿರಲಿಲ್ಲ.

- ರಾಜ್ಯ ಸರ್ಕಾರವು ಮೀಸಲು ನಿಧಿಗಳಲ್ಲಿನ ಹೂಡಿಕೆ ಮಾಡದೆ ಉಳಿದ ಮತ್ತು ಬಡ್ಡಿ ಸಹಿತ ಠೇವಣಿಗಳಡಿಯ ಶಿಲ್ಕುಗಳ ಮೇಲೆ ಬಡ್ಡಿ ಪಾವತಿಸಬೇಕಿತ್ತು. ವರ್ಷದ ಆರಂಭದಲ್ಲಿ ಹೂಡಿಕೆ ಮಾಡದ ಶಿಲ್ಕು ಇತರೆ ಠೇವಣಿಗಳು–ಸರ್ಕಾರಿ ನೌಕರರ ವ್ಯಾಖ್ಯಾನಿತ ವಂತಿಗೆ ನಿವೃತ್ತಿ ವೇತನ ಯೋಜನೆ ಅಡಿಯಲ್ಲಿ ₹11.47 ಕೋಟಿ ಮತ್ತು ಮೀಸಲು ನಿಧಿಗಳು–ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯಡಿಯಲ್ಲಿ ₹1,146.00 ಕೋಟಿಯಾಗಿತ್ತು. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಪ್ರಕಾರ ಸರ್ಕಾರಿ ನೌಕರರ ವ್ಯಾಖ್ಯಾನಿತ ವಂತಿಗೆ ನಿವೃತ್ತಿ ಯೋಜನೆ ಮತ್ತು ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯ ಮೇಲಿನ ಬಡ್ಡಿ ಹೊಣೆಗಾರಿಕೆಯು ಕ್ರಮವಾಗಿ ಶೇಕಡ 7.1 ಮತ್ತು 3.35 ಆಗಿದ್ದು ಒಟ್ಟು ಬಾಕಿ ಇರುವ ಬಡ್ಡಿಯು ₹39.20 ಕೋಟಿಗಳಾಗಿತ್ತು. ಈ ₹39.20 ಕೋಟಿಗಳಿಗೆ ₹44.22 ಕೋಟಿ ಬಡ್ಡಿಗಾಗಿ ಅವಕಾಶವನ್ನು ಒದಗಿಸಲಾಯಿತು ಮತ್ತು ಇದು ₹5.02 ಕೋಟಿಗಳಷ್ಟು ರಾಜಸ್ವ ಕೊರತೆ ಹೆಚ್ಚಿಗೆ ತೋರಿಸುವಲ್ಲಿ ಪರಿಣಮಿಸಿತು.

# ಅಧ್ಯಾಯ– 2

# ರಾಜ್ಯದ ಹಣಕಾಸು ವ್ಯವಹಾರಗಳು

# ಅಧ್ಯಾಯ 2 – ರಾಜ್ಯದ ಹಣಕಾಸು ವ್ಯವಹಾರಗಳು

## 2.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಹಣಕಾಸು ವ್ಯವಹಾರಗಳ ವಿಶಾಲ ದೃಷ್ಟಿಕೋನವನ್ನು ಒದಗಿಸುತ್ತದೆ, ಹಿಂದಿನ ವರ್ಷಕ್ಕೆ ಸಾಪೇಕ್ಷವಾಗಿ ಪ್ರಮುಖ ಹಣಕಾಸಿನ ಅಸ್ಥಿರತೆಗಳಲ್ಲಿನ ನಿರ್ಣಾಯಕ ಬದಲಾವಣೆಗಳನ್ನು, ರಾಜ್ಯದ ಹಣಕಾಸು ಲೆಕ್ಕಗಳನ್ನು ಆಧರಿಸಿ 2017–18ರಿಂದ 2021–22ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಒಟ್ಟಾರೆ ಪ್ರವೃತ್ತಿಗಳು, ರಾಜ್ಯದ ಋಣ ಸಹಿಷ್ಣುತೆ ಮತ್ತು ಪ್ರಮುಖ ಸಾರ್ವಜನಿಕ ಲೆಕ್ಕಗಳ ವಹಿವಾಟುಗಳನ್ನು ವಿಶ್ಲೇಷಿಸುತ್ತದೆ.

## 2.2 2021–22ರಲ್ಲಿ ಪ್ರಮುಖ ಹಣಕಾಸಿನ ಒಟ್ಟುಗೂಡಿಸುವಿಕೆಯಲ್ಲಿನ ಪ್ರಮುಖ ಬದಲಾವಣೆಗಳು

ಹಿಂದಿನ ವರ್ಷಕ್ಕೆ (2020–21) ಹೋಲಿಸಿದಂತೆ 2021–22ರ ಅವಧಿಯಲ್ಲಿ ರಾಜ್ಯದ ಹಣಕಾಸಿನ ಒಟ್ಟುಗಳಲ್ಲಿನ ಪ್ರಮುಖ ಬದಲಾವಣೆಗಳ ಪಕ್ಷಿನೋಟವನ್ನು **ಕೋಷ್ಟಕ–2.1** ಪ್ರಸ್ತುತಪಡಿಸುತ್ತದೆ. ವಿವರಗಳನ್ನು **ಅನುಬಂಧ–2.1**ರಲ್ಲಿ ನೀಡಲಾಗಿದೆ. 2021–22ರ ಸ್ವೀಕೃತಿಗಳು ಮತ್ತು ವಿತರಣೆಯ ವಿವರಗಳು ಹಾಗೂ ಹಿಂದಿನ ನಾಲ್ಕು ವರ್ಷಗಳಲ್ಲಿ ಒಟ್ಟಾರೆ ಹಣಕಾಸಿನ ಸ್ಥಿತಿಯನ್ನು **ಅನುಬಂಧ–2.2**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.1: 2020–21ಕ್ಕೆ ಹೋಲಿಸಿದಂತೆ 2021–22ರಲ್ಲಿ ಪ್ರಮುಖ ಹಣಕಾಸಿನ ಒಟ್ಟುಗಳಲ್ಲಿನ ಬದಲಾವಣೆಗಳು**

| | |
|---|---|
| **ರಾಜಸ್ವ ಸ್ವೀಕೃತಿಗಳು** | ✓ ರಾಜ್ಯದ ರಾಜಸ್ವ ಸ್ವೀಕೃತಿಗಳು ಶೇಕಡ 24.92 ಹೆಚ್ಚಾಗಿದೆ.<br>✓ ರಾಜ್ಯದ ಸ್ವಂತ ತೆರಿಗೆ ಸ್ವೀಕೃತಿಗಳು ಶೇಕಡ 24.41ರಷ್ಟು ಹೆಚ್ಚಾಗಿದೆ.<br>✓ ರಾಜ್ಯದ ಸ್ವಂತ ತೆರಿಗೆಯೇತರ ಸ್ವೀಕೃತಿಗಳು ಶೇಕಡ 49.19ರಷ್ಟು ಹೆಚ್ಚಾಗಿದೆ.<br>✓ ರಾಜ್ಯದ ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲು ಶೇಕಡ 53.42ರಷ್ಟು ಹೆಚ್ಚಾಗಿದೆ.<br>✓ ಭಾರತ ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳು ಶೇಕಡ 0.38ರಷ್ಟು ಅಂಚಿನಲ್ಲಿ ಕಡಿಮೆಯಾಗಿದೆ. |
| **ರಾಜಸ್ವ ವೆಚ್ಚ** | ✓ ರಾಜಸ್ವ ವೆಚ್ಚವು ಶೇಕಡ 18.96ರಷ್ಟು ಹೆಚ್ಚಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡ 13.91ರಷ್ಟು ಹೆಚ್ಚಾಗಿದೆ.<br>✓ ಸಾಮಾಜಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡ 29.29ರಷ್ಟು ಹೆಚ್ಚಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ರಾಜಸ್ವ ವೆಚ್ಚವು ಶೇಕಡ 12.51ರಷ್ಟು ಹೆಚ್ಚಾಗಿದೆ.<br>✓ ಸಹಾಯಾನುದಾನಗಳ ಮೇಲಿನ ವೆಚ್ಚವು ಶೇಕಡ 16.46ರಷ್ಟು ಹೆಚ್ಚಾಗಿದೆ. |
| **ಬಂಡವಾಳ ವೆಚ್ಚ** | ✓ ಬಂಡವಾಳ ವೆಚ್ಚವು ಶೇಕಡ 5.44ರಷ್ಟು ಹೆಚ್ಚಾಗಿದೆ.<br>✓ ಸಾಮಾನ್ಯ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡ 22.06ರಷ್ಟು ಹೆಚ್ಚಾಗಿದೆ.<br>✓ ಸಾಮಾಜಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡ 14.56ರಷ್ಟು ಹೆಚ್ಚಾಗಿದೆ.<br>✓ ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚವು ಶೇಕಡ 3.22ರಷ್ಟು ಹೆಚ್ಚಾಗಿದೆ. |

| | |
|---|---|
| **ಸಾಲಗಳು ಮತ್ತು ಮುಂಗಡಗಳು** | ✓ ಸಾಲಗಳು ಮತ್ತು ಮುಂಗಡಗಳ ವಸೂಲಾತಿಯು ಶೇಕಡ 52.96ರಷ್ಟು ಕಡಿಮೆಯಾಗಿದೆ.<br>✓ ಸಾಲಗಳು ಮತ್ತು ಮುಂಗಡಗಳ ವಿತರಣೆಯು ಶೇಕಡ 57.70ರಷ್ಟು ಹೆಚ್ಚಾಗಿದೆ. |
| **ಸಾರ್ವಜನಿಕ ಋಣ** | ✓ ಸಾರ್ವಜನಿಕ ಋಣ ಸ್ವೀಕೃತಿಗಳು ಶೇಕಡ 4.60ರಷ್ಟು ಕಡಿಮೆಯಾಗಿದೆ.<br>✓ ಸಾರ್ವಜನಿಕ ಋಣ ಮರುಪಾವತಿಗಳು ಶೇಕಡ 26.83ರಷ್ಟು ಹೆಚ್ಚಾಗಿದೆ. |
| **ಸಾರ್ವಜನಿಕ ಲೆಕ್ಕ** | ✓ ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು ಶೇಕಡ 20.50ರಷ್ಟು ಹೆಚ್ಚಾಗಿದೆ.<br>✓ ಸಾರ್ವಜನಿಕ ಲೆಕ್ಕ ವಿತರಣೆಗಳು ಶೇಕಡ 17.62ರಷ್ಟು ಹೆಚ್ಚಾಗಿದೆ. |
| **ನಗದು ಶಿಲ್ಕು** | ✓ ನಗದು ಶಿಲ್ಕು (ಮೀಸಲು ನಿಧಿಗಳ ಹೂಡಿಕೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳೂ ಸೇರಿ) ₹16,269.18 ಕೋಟಿಗಳಷ್ಟು ಹೆಚ್ಚಾಗಿದೆ (ಶೇಕಡ 34.51). |

ಮೇಲಿನ ಪ್ರತಿಯೊಂದು ಸೂಚಕಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿಶ್ಲೇಷಿಸಲಾಗಿದೆ.

## 2.3 ನಿಧಿಯ ಆಕರಗಳು ಮತ್ತು ಅನ್ವಯ

2021–22ರಲ್ಲಿ ರಾಜ್ಯದ ನಿಧಿಯ ಆಕರಗಳು ಮತ್ತು ಅನ್ವಯಗಳನ್ನು 2020–21 ರೊಂದಿಗೆ **ಕೋಷ್ಟಕ–2.2** ರಲ್ಲಿ ಹೋಲಿಸಲಾಗಿದ್ದರೆ **ನಕ್ಷೆ–2.1** ಮತ್ತು **ನಕ್ಷೆ–2.2**ರಲ್ಲಿ 2021–22ರಲ್ಲಿ ರಾಜ್ಯ ಸಂಚಿತ ನಿಧಿಯಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳ ಶೇಕಡಾವಾರು ವಿವರಗಳನ್ನು ನೀಡಲಾಗುತ್ತದೆ.

**ಕೋಷ್ಟಕ–2.2: 2020–21 ಮತ್ತು 2021–22ರಲ್ಲಿ ನಿಧಿಗಳ ಆಕರ ಮತ್ತು ಅನ್ವಯಗಳ ವಿವರಗಳು.**

**(₹ ಕೋಟಿಗಳಲ್ಲಿ)**

| | ವಿವರಗಳು | 2020–21 | 2021–22 | ಹೆಚ್ಚಳ/ಇಳಿಕೆ |
|---|---|---|---|---|
| **ಆಕರಗಳು** | ಆರಂಭಿಕ ನಗದು ಶಿಲ್ಕು (ಮೀಸಲು ನಿಧಿಗಳ ಹೂಡಿಕೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳೂ ಸೇರಿ) | 34,463 | 47,143 | 12,680 |
| | ರಾಜಸ್ವ ಸ್ವೀಕೃತಿಗಳು | 1,56,716 | 1,95,762 | 39,046 |
| | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 270 | 127 | (–)143 |
| | ಸಾರ್ವಜನಿಕ ಋಣ ಸ್ವೀಕೃತಿಗಳು (ನಿವ್ವಳ)* | 73,512 | 66,669 | (–)6,843 |
| | ಸಾರ್ವಜನಿಕ ಲೆಕ್ಕ ಸ್ವೀಕೃತಿಗಳು (ನಿವ್ವಳ) | 6,264 | 15,217 | 8,953 |
| | **ಒಟ್ಟು** | **2,71,225** | **3,24,918** | **53,693** |
| **ಅನ್ವಯಗಳು** | ರಾಜಸ್ವ ವೆಚ್ಚಗಳು | 1,76,054 | 2,09,428 | 33,374 |
| | ಬಂಡವಾಳ ವೆಚ್ಚ | 45,406 | 47,874 | 2,468 |
| | ಸಾಲಗಳು ಮತ್ತು ಮುಂಗಡಗಳ ವಿತರಣೆ | 2,669 | 4,209 | 1,540 |
| | ಮುಕ್ತಾಯ ನಗದು ಶಿಲ್ಕು (ಮೀಸಲು ನಿಧಿಗಳ ಹೂಡಿಕೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿನ ಠೇವಣಿಗಳೂ ಸೇರಿ) | 47,143 | 63,412 | 16,269 |
| | **ಒಟ್ಟು** | **2,71,272** | **3,24,923** | **53,651** |

*ಆಕರ: ಹಣಕಾಸು ಲೆಕ್ಕಗಳು*

** ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಸಾರ್ವಜನಿಕ ಋಣ ಸ್ವೀಕೃತಿಗಳು (ನಿವ್ವಳ) 2020–21ರಲ್ಲಿ ₹61,105 ಕೋಟಿ ಮತ್ತು 2021–22ರಲ್ಲಿ ₹48,560 ಕೋಟಿ ಆಗುತ್ತದೆ.*

ನಕ್ಷೆ–2.1: ಸಂಪನ್ಮೂಲಗಳ ಸಂಯೋಜನೆ (ಶೇಕಡ)




ನಕ್ಷೆ–2.2: ಸಂಪನ್ಮೂಲಗಳ ಅನ್ವಯ (ಶೇಕಡ)




*ಆಕರ: ಹಣಕಾಸು ಲೆಕ್ಕಗಳು*

## 2.4 ರಾಜ್ಯದ ಸಂಪನ್ಮೂಲಗಳು

ರಾಜ್ಯದ ಸಂಪನ್ಮೂಲಗಳು, ರಾಜಸ್ವ ಸ್ವೀಕೃತಿಗಳು, ಬಂಡವಾಳ ಸ್ವೀಕೃತಿಗಳು ಮತ್ತು ನಿವ್ವಳ ಸಾರ್ವಜನಿಕ ಲೆಕ್ಕದ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ. ಇವುಗಳ ಸಂಯೋಜನೆಯನ್ನು ಈಗಾಗಲೇ **ಅಧ್ಯಾಯ–1ರ ಕಂಡಿಕೆ–1.4**ರಲ್ಲಿ ಚರ್ಚಿಸಲಾಗಿದೆ. 2021–22ರಲ್ಲಿನ ರಾಜ್ಯದ ಒಟ್ಟಾರೆ ಸ್ವೀಕೃತಿಗಳ ಘಟಕಗಳು ಮತ್ತು ಉಪಘಟಕಗಳನ್ನು **ನಕ್ಷೆ–2.3**ರಲ್ಲಿ ತೋರಿಸಲಾಗಿದೆ.

### *2.4.1 ರಾಜಸ್ವ ಸ್ವೀಕೃತಿಗಳು*

ಕರ್ನಾಟಕ ರಾಜ್ಯದ ಹಣಕಾಸಿನ ಸ್ಥಿತಿಯು ಹೆಚ್ಚಾಗಿ ಆದಾಯದ ಭಾಗದಿಂದ ಪ್ರಭಾವಿತವಾಗಿರುತ್ತದೆ. 2017–18ರಿಂದ 2020–21ರ ಅವಧಿಯಲ್ಲಿ ಸರಾಸರಿ ಶೇಕಡ 65ರಷ್ಟು ಆದಾಯವು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದೆ. 2021–22ರಲ್ಲಿ, ರಾಜ್ಯದ ಸ್ವಂತ ಸಂಪನ್ಮೂಲಗಳು ಒಟ್ಟು ಆದಾಯದ ಶೇಕಡ 68ರಷ್ಟಿತ್ತು. ಉಳಿದದ್ದು ತೆರಿಗೆಗಳು ಮತ್ತು ಸುಂಕಗಳ ರಾಜ್ಯದ ಪಾಲು ಮತ್ತು ಸಹಾಯಧನದ ಕೊಡುಗೆಗಳ ರೂಪದಲ್ಲಿ ಭಾರತ ಸರ್ಕಾರದಿಂದ ವರ್ಗಾವಣೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ತೆರಿಗೆ ಆದಾಯವು ಮೌಲ್ಯದ ದೃಷ್ಟಿಯಲ್ಲಿ ₹23,687 ಕೋಟಿ ಮತ್ತು ಬೆಳವಣಿಗೆಯ ದರ 24.41ರಷ್ಟು ಜಾಸ್ತಿಯಾಗಿದೆ, ಆದರೆ, ಅದು ರಾಜಸ್ವ ಸ್ವೀಕೃತಿಯ ಪಾಲಿನ ಶೇಕಡವಾರಿಗೆ ಹೋಲಿಸಿದರೆ, ಶೇಕಡ 62ರಷ್ಟರಲ್ಲೇ ಇದೆ. ಮತ್ತೊಂದೆಡೆ, ರಾಜ್ಯವು ತೆರಿಗೆಯೇತರ ಆದಾಯವನ್ನು ಮೌಲ್ಯದ ದೃಷ್ಟಿಯಲ್ಲಿ ₹3,883 ಕೋಟಿಗಳಷ್ಟು ಸುಧಾರಿಸಿದೆ. 2017–18ರಿಂದ 2020–21ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಯ ಶೇಕಡ ನಾಲ್ಕರಿಂದ ಐದರಷ್ಟಿದ್ದ ತೆರಿಗೆಯೇತರ ಆದಾಯವು 2021–22ರಲ್ಲಿ ಶೇಕಡ ಆರಕ್ಕೆ ಹೆಚ್ಚಳವಾಯಿತು.

**ನಕ್ಷೆ–2.3: 2021–22ರಲ್ಲಿ ರಾಜ್ಯದ ಸ್ವೀಕೃತಿಗಳ ಸಂಯೋಜನೆ**




* ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಋಣ ಸ್ವೀಕೃತಿಗಳು ₹62,532 ಕೋಟಿಗಳಾಗುತ್ತದೆ, ಹಾಗಾಗಿ ಪರಿಣಾಮಕಾರಿ ಬಂಡವಾಳ ಸ್ವೀಕೃತಿಗಳು ₹62,665ಕೋಟಿ ಮತ್ತು ಪರಿಣಾಮಕಾರಿ ಒಟ್ಟು ಸ್ವೀಕೃತಿಗಳು ₹2,73,644 ಕೋಟಿಗಳಾಗುತ್ತದೆ

ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಉಂಟಾದ ಆದಾಯದ ನಷ್ಟಕ್ಕೆ ಪರಿಹಾರವನ್ನು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಗಳಿಗೆ ಇತರೆ ವರ್ಗಾವಣೆಗಳು/ಅನುದಾನಗಳು ಅಡಿಯಲ್ಲಿ ಲೆಕ್ಕಹಾಕಿದ್ದರಿಂದ ಸ್ವಂತ ತೆರಿಗೆ ಆದಾಯ ಒಟ್ಟು ರಾಜಸ್ವ ಸ್ವೀಕೃತಿಯ ಶೇಕಡ 62ರಲ್ಲೇ ಉಳಿಯಿತು, ಇಲ್ಲದಿದ್ದಲ್ಲಿ ಅದು ರಾಜಸ್ವ ಸ್ವೀಕೃತಿಯ ಶೇಕಡ 66ರಷ್ಟಾಗುತ್ತಿತ್ತು ಎಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ಜನವರಿ 2023).

ಆದಾಗ್ಯೂ, ಪರಿಹಾರದ ಅವಧಿ 2021–22ಕ್ಕೆ ಕೊನೆಗೊಂಡಿರುವುದರಿಂದ ರಾಜ್ಯವು ರಾಜಸ್ವ ಕೊರತೆಯನ್ನು ನೀಗಿಸಲು ರಾಜಸ್ವ ವಸೂಲಾತಿಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕಾಗಿದೆ.

### *2.4.2 ರಾಜಸ್ವ ಸ್ವೀಕೃತಿಗಳ ವೃದ್ಧಿ ಮತ್ತು ಪ್ರವೃತ್ತಿ*

2017–18 ರಿಂದ 2021–22ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳನ್ನು ಮತ್ತು ಆದಾಯದ ಪ್ಲವನತೆಯನ್ನು **ಕೋಷ್ಟಕ–2.3** ಒದಗಿಸುತ್ತದೆ. ಇದಲ್ಲದೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿ ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು ಮತ್ತು ರಾಜಸ್ವ ಸ್ವೀಕೃತಿಗಳ ಸಂಯೋಜನೆಯನ್ನು ಕ್ರಮವಾಗಿ **ನಕ್ಷೆ–2.4** ಮತ್ತು **ನಕ್ಷೆ–2.5**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.3: ರಾಜಸ್ವ ಸ್ವೀಕೃತಿಗಳಲ್ಲಿನ ಪ್ರವೃತ್ತಿಗಳು ಮತ್ತು ವೃದ್ಧಿ**

| ಪ್ರಮಿತಿಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ರಾಜಸ್ವ ಸ್ವೀಕೃತಿಗಳು (₹ಕೋಟಿಗಳಲ್ಲಿ) | 1,47,000 | 1,64,979 | 1,75,443 | 1,56,716 | 1,95,762 |
| ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರ (ಶೇಕಡ) | 10.35 | 12.23 | 6.34 | (–)10.67 | 24.92 |
| ಸ್ವಂತ ತೆರಿಗೆ ರಾಜಸ್ವ (₹ ಕೋಟಿಗಳಲ್ಲಿ) | 87,130 | 96,830 | 1,02,363 | 97,052 | 1,20,739 |
| ತೆರಿಗೆಯೇತರ ರಾಜಸ್ವ (₹ ಕೋಟಿಗಳಲ್ಲಿ) | 6,477 | 6,773 | 7,681 | 7,894 | 11,777 |
| ಸ್ವಂತ ರಾಜಸ್ವದ ವೃದ್ಧಿಯ ದರ (ಸ್ವಂತ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ) (ಶೇಕಡ) | 5.47 | 10.68 | 6.22 | (–)4.63 | 26.27 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (₹ ಕೋಟಿಗಳಲ್ಲಿ) | 13,33,240 | 14,76,496 | 16,15,457 | 17,30,991 | 17,21,336 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರ (ಶೇಕಡ) | 10.40 | 10.74 | 9.41 | 7.15 | (–)0.56 |
| ರಾಜಸ್ವ ಸ್ವೀಕೃತಿ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡ) | 11.03 | 11.17 | 10.86 | 9.05 | 11.37 |
| ಪ್ಲವನತೆ ಅನುಪಾತಗಳು [4] | | | | | |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗೆ ರಾಜಸ್ವ ಪ್ಲವನತೆ [5] | 1.00 | 1.14 | 0.67 | (–)1.49 | (–)44.50 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗೆ ರಾಜ್ಯದ ಸ್ವಂತ ರಾಜಸ್ವ ಪ್ಲವನತೆ [6] | 0.53 | 0.99 | 0.66 | (–)10.64 | (–)46.91 |

*ಆಕರ: ಹಣಕಾಸು ಲೆಕ್ಕಗಳು ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಮೀಕ್ಷೆ*

4 ಪ್ಲವನತೆಯ ಅನುಪಾತವು ಮೂಲ ವ್ಯತ್ಯಯದ ಬದಲಾವಣೆಗೆ ವಿತ್ತೀಯ ವ್ಯತ್ಯಯದ ಹೊದಿಕೊಳ್ಳುವಿಕೆ ಅಥವಾ ಸ್ಪಂದಿಸುವಿಕೆಯ ಮಟ್ಟವನ್ನು ಸೂಚಿಸುತ್ತದೆ. ಉದಾಹರಣೆಗೆ, ರಾಜಸ್ವ ಪ್ಲವನತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ಶೇಕಡ 0.63 ಇದೆ ಎಂದರೆ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಶೇಕಡ ಒಂದರಷ್ಟು ಹೆಚ್ಚಾದರೆ, ರಾಜಸ್ವ ಸ್ವೀಕೃತಿಯು ಶೇಕಡ 0.63 ಅಂಕಗಳಿಂದ ಹೆಚ್ಚಾಗುತ್ತವೆ ಎಂದು ಸೂಚಿಸುತ್ತದೆ.

5 ರಾಜಸ್ವ ಪ್ಲವನತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರಕ್ಕೆ ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವನ್ನು ಸೂಚಿಸುತ್ತದೆ.

6 ಸ್ವಂತ ಆದಾಯದ ಪ್ಲವನತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರಕ್ಕೆ ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯದ ಬೆಳವಣಿಗೆಯ ದರವನ್ನು ಸೂಚಿಸುತ್ತದೆ. ಇದು ಭಾರತ ಸರ್ಕಾರದಿಂದ ಪಡೆದ ಬಾಬ್ತುಗಳನ್ನು ಹೊರತುಪಡಿಸುತ್ತದೆ.

**ನಕ್ಷೆ–2.4: ರಾಜಸ್ವ ಸ್ವೀಕೃತಿಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಮೀಕ್ಷೆ*

**ನಕ್ಷೆ–2.5: ರಾಜಸ್ವ ಸ್ವೀಕೃತಿಗಳ ಅಂಗಗಳ ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು*

**ರಾಜ್ಯದ ರಾಜಸ್ವ ಸ್ವೀಕೃತಿಗಳಿಗೆ ಸಂಬಂಧಿಸಿದ ಸಾಮಾನ್ಯ ಪ್ರವೃತ್ತಿಗಳು ಈ ಕೆಳಗಿನಂತಿವೆ:**

- 2017–18ರಲ್ಲಿ ₹1,47,000 ಕೋಟಿಗಳಿದ್ದ ರಾಜಸ್ವ ಸ್ವೀಕೃತಿಗಳು 2021–22ರಲ್ಲಿ ₹1,95,762 ಕೋಟಿಗಳಿಗೆ ಏರಿ ಶೇಕಡ 33.17ರಷ್ಟು ಹೆಚ್ಚಾಗಿದೆ. 2021–22ರಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಯು ಶೇಕಡ 18.96ರಷ್ಟು ಹೆಚ್ಚಾಗಿದೆ.
- 2021–22ರಲ್ಲಿ ಸುಮಾರು 68 ಪ್ರತಿಶತದಷ್ಟು ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ಸಂಪನ್ಮೂಲಗಳಿಂದ ಬಂದಿದ್ದರೆ, ಕೇಂದ್ರ ತೆರಿಗೆ ವರ್ಗಾವಣೆಗಳು ಮತ್ತು ಅನುದಾನಗಳು ಒಟ್ಟಾಗಿ 32 ಪ್ರತಿಶತ ಕೊಡುಗೆ ನೀಡಿವೆ. ಇದು ಕರ್ನಾಟಕದ ಹಣಕಾಸಿನ ಸ್ಥಿತಿಯು ಹೆಚ್ಚಾಗಿ ಸ್ವಂತ ಸಂಪನ್ಮೂಲಗಳಿಂದ ಪ್ರಭಾವಿತವಾಗಿದೆ ಎಂಬುದನ್ನು ಸೂಚಿಸುತ್ತದೆ.

- 2021–22ರಲ್ಲಿ, ರಾಜಸ್ವ ಸ್ವೀಕೃತಿಗಳಲ್ಲಿನ ಶೇಕಡ 24.92ರಷ್ಟರ (₹39,046 ಕೋಟಿ) ಹೆಚ್ಚಳ ಮುಖ್ಯವಾಗಿ ಸ್ವಂತ ತೆರಿಗೆ ಆದಾಯ, ತೆರಿಗೆಯೇತರ ಆದಾಯ ಮತ್ತು ಕೇಂದ್ರದ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು ಅನುಕ್ರಮವಾಗಿ ಶೇಕಡ 24.41, ಶೇಕಡ 49.19, ಮತ್ತು ಶೇಕಡ 53.42ರಷ್ಟು ಹೆಚ್ಚಾದ ಕಾರಣದಿಂದಾಗಿದೆ.
- ಮೊದಲ ಮೂರು ವರ್ಷ ಧನಾತ್ಮಕವಾಗಿದ್ದ ರಾಜ್ಯದ ರಾಜಸ್ವ ಪ್ಲವನತೆಯು 2020–21 ಮತ್ತು 2021–22 ಋಣಾತ್ಮಕವಾಗಿ ಬದಲಾಗಿದೆ. 2020–21ರಲ್ಲಿ ಇದು ರಾಜಸ್ವ ಸ್ವೀಕೃತಿಯ ಋಣಾತ್ಮಕ ಬೆಳವಣಿಗೆ ಕಾರಣದಿಂದಾದರೆ, 2021–22ರಲ್ಲಿ ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಋಣಾತ್ಮಕ ಬೆಳವಣಿಗೆಯ ದರದ ಕಾರಣದಿಂದಾಗಿದೆ.

### *2.4.3 ರಾಜ್ಯದ ಸ್ವಂತ ಸಂಪನ್ಮೂಲಗಳು*

ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಅದರ ಸ್ವಂತ ತೆರಿಗೆ ಮತ್ತು ತೆರಿಗೆಯೇತರ ಮೂಲಗಳ ಆದಾಯವನ್ನು ಒಳಗೊಂಡಿರುವ ಸ್ವಂತ ಸಂಪನ್ಮೂಲಗಳಿಂದ ಅಳೆಯಬೇಕು

2017–22ರ ಅವಧಿಯಲ್ಲಿ ಪ್ರಮುಖ ತೆರಿಗೆ ಮತ್ತು ತೆರಿಗೆಯೇತರ ಆದಾಯಕ್ಕೆ ಸಂಬಂಧಿಸಿದಂತೆ ಒಟ್ಟು ಸಂಗ್ರಹಣೆಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಅವುಗಳ ಸಂಬಂಧಿತ ಪಾಲನ್ನು **ಅನುಬಂಧ–2.2**ರಲ್ಲಿ ನೀಡಲಾಗಿದೆ.

**(ಅ) ಸ್ವಂತ ತೆರಿಗೆ ಆದಾಯ**

2017–22ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಪ್ರವೃತ್ತಿಗಳನ್ನು **ನಕ್ಷೆ–2.6** ರಲ್ಲಿ ನೀಡಲಾಗಿದೆ.

**ನಕ್ಷೆ–2.6: 2017–22ರ ಅವಧಿಯಲ್ಲಿ ಸ್ವಂತ ತೆರಿಗೆ ಆದಾಯದ ವೃದ್ಧಿ/ಕುಸಿತ**




*ಆಕರ: ಹಣಕಾಸು ಲೆಕ್ಕಗಳು*

2017–18ರಿಂದ 2021–22ರ ಅವಧಿಯಲ್ಲಿ ಸಂಗ್ರಹಿಸಲಾದ ರಾಜ್ಯದ ಸ್ವಂತ ತೆರಿಗೆ ಆದಾಯದ ಘಟಕವಾರು ವಿವರಗಳನ್ನು **ಕೋಷ್ಟಕ–2.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.4: 2017–22ರ ಅವಧಿಯಲ್ಲಿ ರಾಜ್ಯದ ಸ್ವಂತ ತೆರಿಗೆ ಆದಾಯದ ಅಂಗಗಳು**

(₹ ಕೋಟಿಗಳಲ್ಲಿ)

| ರಾಜ್ಯದ ಸ್ವಂತ ತೆರಿಗೆ ರಾಜಸ್ವದ ಘಟಕಗಳು | | | | | | |
|---|---|---|---|---|---|---|
| ರಾಜಸ್ವ ಶೀರ್ಷಿಕೆ | 2017–18 | 2018–19 | 2019–20 | 2020–21 | 2021–22 | ಗತಿ |
| ಮಾರಾಟ, ವ್ಯಾಪಾರದ ಮೇಲಿನ ತೆರಿಗೆಗಳು | 25,093 | 14,003 | 16,424 | 16,028 | 19,274 | |
| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 24,182 | 41,956 | 42,147 | 37,711 | 49,929 | |
| ರಾಜ್ಯ ಅಬಕಾರಿ | 17,949 | 19,944 | 21,584 | 23,332 | 26,378 | |
| ವಾಹನಗಳ ಮೇಲಿನ ತೆರಿಗೆ | 6,209 | 6,568 | 6,763 | 5,607 | 6,915 | |
| ಮುದ್ರಾಂಕ ಮತ್ತು ನೋಂದಣಿ ಶುಲ್ಕಗಳು | 9,024 | 10,775 | 11,308 | 10,576 | 14,020 | |
| ಭೂಕಂದಾಯ | 195 | 144 | 203 | 184 | 181 | |
| ಇತರೆ ತೆರಿಗೆಗಳು | 4,478 | 3,440 | 3,934 | 3,614 | 4,042 | |
| ಒಟ್ಟು | **87,130** | **96,830** | **1,02,363** | **97,052** | **1,20,739** | |

*ಆಕರ: ಹಣಕಾಸು ಲೆಕ್ಕಗಳು*

ರಾಜ್ಯದ ಸ್ವಂತ ತೆರಿಗೆ ಆದಾಯವು 2017–18ರಲ್ಲಿನ ₹87,130 ಕೋಟಿಗಳಿಂದ 2021–22ರಲ್ಲಿ ₹1,20,739 ಕೋಟಿಗೆ ಏರಿ ₹33,609 ಕೋಟಿಗಳಷ್ಟು ಹೆಚ್ಚಾಗಿದೆ. 2020–21ರಲ್ಲಿ ಕೋವಿಡ್ 19ರ ಹಿಡುಗಿನ ಕಾರಣದಿಂದ ಹೇರಲ್ಪಟ್ಟಿದ್ದ ಲಾಕ್‌ಡೌನ್ ನಿಂದಾಗಿ ಋಣಾತ್ಮಕವಾಗಿದ್ದ ಸ್ವಂತ ತೆರಿಗೆ ಆದಾಯದ ಸರಾಸರಿ ವಾರ್ಷಿಕ ಬೆಳವಣಿಗೆ ದರವು 2021–22ರಲ್ಲಿ ಹೆಚ್ಚಳವಾಯಿತು. ಇದು ಧನಾತ್ಮಕ ಬೆಳವಣಿಗೆಯ ದರಕ್ಕೆ ಕಾರಣವಾಯಿತು. ಪ್ರಸಕ್ತ ವರ್ಷದಲ್ಲಿ ತೆರಿಗೆ ಆದಾಯದ ಪ್ರಮುಖ ಕೊಡುಗೆಗಳೆಂದರೆ ಸರಕು ಮತ್ತು ಸೇವಾ ತೆರಿಗೆ (ಶೇಕಡ. 41), ರಾಜ್ಯ ಅಬಕಾರಿ (ಶೇಕಡ 22), ಮಾರಾಟ, ವ್ಯಾಪಾರ ಇತ್ಯಾದಿಗಳ ಮೇಲಿನ ತೆರಿಗೆಗಳು (ಶೇಕಡ 16) ಮತ್ತು ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು (ಶೇಕಡ 12).

ರಾಜ್ಯದ ಹಣಕಾಸು ಮತ್ತು ಸಾಲದ ಸ್ಥಿತಿಯನ್ನು ಪರಿಶೀಲಿಸಲು ಮತ್ತು ಸರಿಪಡಿಸುವ ಕ್ರಮಗಳನ್ನು ಸೂಚಿಸಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಹಣಕಾಸು ನಿರ್ವಹಣಾ ಪರಿಶೀಲನಾ ಸಮಿತಿ ಫೆಬ್ರವರಿ 2022ರಲ್ಲಿ ನಡೆಸಿದ ಸಭೆಯಲ್ಲಿ 2021–22ರಲ್ಲಿ ರಾಜ್ಯದ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಣೆ ಸುಧಾರಣೆ ಕಂಡಿದೆ ಎಂದು ಒಪ್ಪಿಕೊಂಡಿದೆ. ಅಧಿನಿಯಮ ಜಾರಿಯಾದಂದಿನಿಂದ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಣೆಯಲ್ಲಿ ಭಾರೀ ಹೆಚ್ಚಳ ತೋರಿಸಿದೆ ಎಂದೂ ಗಮನಿಸಿದೆ. ತೆರಿಗೆ ಆದಾಯಗಳನ್ನು ಇನ್ನೂ ಉತ್ತಮಗೊಳಿಸಲು ಮಾಹಿತಿ ತಂತ್ರಜ್ಞಾನ ಸೇವೆ ಅಳವಡಿಸಿಕೊಳ್ಳಲು ಮತ್ತು ಇತರೆ ತೆರಿಗೆ ಇಲಾಖೆಗಳಲ್ಲಿ ಅಗತ್ಯವಿರುವ ತೆರಿಗೆ ಸುಧಾರಣೆಗಳನ್ನು ಕೈಗೊಳ್ಳುವಂತೆ ಸಮಿತಿಯು ಸಲಹೆ ನೀಡಿದೆ.

### ರಾಜ್ಯ ಸರಕು ಮತ್ತು ಸೇವಾ ತೆರಿಗೆ

2020–21 ಮತ್ತು 2021–22ರಲ್ಲಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಅಡಿಯಲ್ಲಿ ಆದಾಯದ ವಾಸ್ತವವಾದ ಸಂಗ್ರಹವನ್ನು **ಕೋಷ್ಟಕ–2.5**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.5: ಕರ್ನಾಟಕ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ ಸ್ವೀಕೃತಿಗಳು**

(₹ ಕೋಟಿಗಳಲ್ಲಿ)

| ರಾಜ್ಯ ಸರಕು ಮತ್ತು ಸೇವಾ ತೆರಿಗೆ | 2020–21 | 2021–22 | ಏರಿಕೆ/ಇಳಿಕೆ |
|---|---|---|---|
| ತೆರಿಗೆ | 19,003 | 24,084 | 5,081 |
| ಸಮಗ್ರ ಸರಕು ಮತ್ತು ಸೇವಾ ತೆರಿಗೆಯಿಂದ ತೆರಿಗೆಗಳ ಹಂಚಿಕೆ | 3,430 | 3,099 | (–)331 |
| ಇತರೆ | 15,278 | 22,746 | 7,468 |
| ಒಟ್ಟು ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಣೆ | **37,711** | **49,929** | **12,218** |

*ಆಕರ: ಹಣಕಾಸು ಲೆಕ್ಕಗಳು*

ಸರಕು ಮತ್ತು ಸೇವಾ ತೆರಿಗೆ (ರಾಜ್ಯಗಳಿಗೆ ಪರಿಹಾರ) ಕಾಯಿದೆ, 2017ರ ಪ್ರಕಾರ, ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದ ಲೆಕ್ಕದಲ್ಲಿ ಉಂಟಾಗುವ ಆದಾಯದಲ್ಲಿನ ಕೊರತೆಯನ್ನು ಮೂಲ ವರ್ಷದಿಂದ ಶೇಕಡ 14ರಷ್ಟು ವಾರ್ಷಿಕ ವೃದ್ಧಿಯನ್ನು ಪರಿಗಣಿಸಿ ಐದು ವರ್ಷಗಳ ಅವಧಿಗೆ ರಾಜ್ಯಗಳಿಗೆ ಪರಿಹಾರ ನೀಡಲಾಗುತ್ತದೆ. 2020-21 ಮತ್ತು 2021-22ರ ಅವಧಿಯಲ್ಲಿ ಪರಿಹಾರವನ್ನು ಭಾಗಶಃ ಅನುದಾನಗಳಂತೆ ಮತ್ತು ಭಾಗಶಃ ಬ್ಯಾಕ್ ಟು ಬ್ಯಾಕ್ ಸಾಲಗಳಂತೆ ಒದಗಿಸಲಾಯಿತು.

2021-22ರಲ್ಲಿ, ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹವು ₹49,929.02 ಕೋಟಿಗಳಾಗಿದ್ದು, 2020-21ಕ್ಕಿಂತ ₹12,128 ಕೋಟಿಗಳಷ್ಟು (ಶೇಕಡ 32.40) ಏರಿಕೆಯಾಗಿದೆ. ಇದರಲ್ಲಿ ಸಮಗ್ರ ಸರಕು ಮತ್ತು ಸೇವಾ ತೆರಿಗೆಯ ಮುಂಗಡ ಹಂಚಿಕೆ ₹3,099.36 ಕೋಟಿಗಳು ಸೇರಿಕೊಂಡಿವೆ. ಇದಲ್ಲದೆ ರಾಜ್ಯವು ಹೆಚ್ಚುವರಿಯಾಗಿ, ಕೇಂದ್ರ ಸರಕು ಮತ್ತು ಸೇವಾ ತೆರಿಗೆಯಿಂದ ನಿವ್ವಳ ಆದಾಯದ ಪಾಲು ₹9,158.36 ಕೋಟಿಗಳನ್ನು ಪಡೆದುಕೊಂಡಿದೆ. ಅದ್ದರಿಂದ, 2021-22ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಅಡಿಯಲ್ಲಿ ಒಟ್ಟು ಸ್ವೀಕೃತಿಗಳು ₹59,087.38[7] ಕೋಟಿಗಳಾಗಿದೆ. ರಾಜ್ಯವು 2021-22ರಲ್ಲಿ ಸರಕು ಮತ್ತು ಸೇವಾ ತೆರಿಗೆಯ ಅನುಷ್ಠಾನದಿಂದ ಉಂಟಾದ ಆದಾಯ ನಷ್ಟದ ಖಾತೆಯಲ್ಲಿ ಪರಿಹಾರವಾಗಿ ₹27,085.34 ಕೋಟಿಗಳಷ್ಟು ಒಟ್ಟು ಪರಿಹಾರವನ್ನು ಸ್ವೀಕರಿಸಿತು. ಇದರಲ್ಲಿ, ₹8,976.43 ಕೋಟಿಗಳನ್ನು ರಾಜ್ಯ ಸರ್ಕಾರವು ರಾಜಸ್ವ ಸ್ವೀಕೃತಿ ಅಡಿಯಲ್ಲಿ ಅನುದಾನವಾಗಿ ಸ್ವೀಕರಿಸಿತು. ಆದರೆ, 2021-22ರ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಅಸಮರ್ಪಕ ಶಿಲ್ಕಿನ ಕಾರಣ ರಾಜ್ಯವು ಸರಕು ಮತ್ತು ಸೇವಾ ತೆರಿಗೆ ಪರಿಹಾರ ನಿಧಿಯಲ್ಲಿ ಸಂಗ್ರಹಿಸಲಾದ ಉಪಕರದಿಂದ ಮರುಪಾವತಿಯ ಬಾಧ್ಯತೆಗಳೊಂದಿಗೆ (ರಾಜ್ಯದ ಯಾವುದೇ ಇತರ ಸಂಪನ್ಮೂಲಗಳಿಂದಲ್ಲ) ರಾಜ್ಯ ಸರ್ಕಾರದ ಋಣ ಸ್ವೀಕೃತಿಗಳಡಿಯಲ್ಲಿ ₹18,108.91 ಕೋಟಿ ಬ್ಯಾಕ್-ಟು-ಬ್ಯಾಕ್ ಸಾಲವನ್ನು ಸಹ ಪಡೆದುಕೊಂಡಿತು.

2021-22ರ ಅವಧಿಗೆ ಯೋಜಿತ ಆದಾಯದ ₹79,335.44 ಕೋಟಿಗಳಿಗೆ ಪ್ರತಿಯಾಗಿ ರಾಜ್ಯದಿಂದ ಸಂಗ್ರಹಿಸಲಾದ ನೈಜ ತೆರಿಗೆಗಳು (ಸರಕು ಮತ್ತು ಸೇವಾ ತೆರಿಗೆ ಪೂರ್ವ ತೆರಿಗೆಗಳು ಮತ್ತು ರಾಜ್ಯ ಸರಕು ಮತ್ತು ಸೇವಾ ತೆರಿಗೆ) ಸಮಗ್ರ ಸರಕು ಮತ್ತು ಸೇವಾ ತೆರಿಗೆ ಹಂಚಿಕೆ ಮತ್ತು 2021-22ರ ಸರಕು ಮತ್ತು ಸೇವಾ ತೆರಿಗೆ ನಷ್ಟ ಪರಿಹಾರ ಸೇರಿದಂತೆ ಒಟ್ಟು ₹76,949.86 ಕೋಟಿಗಳನ್ನು ಪಡೆಯಲಾಗಿದೆ. ರಾಜ್ಯವು ₹2,385.58 ಕೋಟಿಗಳಷ್ಟು ಕಡಿಮೆ ಸರಕು ಮತ್ತು ಸೇವಾ ತೆರಿಗೆ ನಷ್ಟ ಪರಿಹಾರವನ್ನು ಪಡೆದಿದೆ.

**(ಆ) ತೆರಿಗೆಯೇತರ ಆದಾಯ**

ತೆರಿಗೆಯೇತರ ಸ್ವೀಕೃತಿಗಳನ್ನು (ಶುಲ್ಕಗಳು, ಬಳಕೆದಾರರ ಶುಲ್ಕಗಳು, ಬಡ್ಡಿ ಸ್ವೀಕೃತಿಗಳು, ಇತ್ಯಾದಿ) ಸಾಮಾನ್ಯವಾಗಿ ಶಾಸನಬದ್ಧವಲ್ಲದ ಆದೇಶಗಳ ಮೂಲಕ ಸಂಗ್ರಹಿಸಲಾಗುತ್ತದೆ. ತೆರಿಗೆಯೇತರ ಸ್ವೀಕೃತಿಗಳ ಆಕರಗಳು ವಿತ್ತೀಯ ಸೇವೆಗಳಿಂದ ಸ್ವೀಕೃತಿಗಳನ್ನು ಒಳಗೊಂಡಿವೆ. ಉದಾಹರಣೆಗೆ ಬಾಕಿ ಇರುವ ಮುಂಗಡಗಳ ಮೇಲಿನ ಬಡ್ಡಿಸ್ವೀಕೃತಿಗಳು, ಲಾಭಾಂಶಗಳು ಮತ್ತು ಈಕ್ವಿಟಿ ಹೂಡಿಕೆಗಳಿಂದ ಲಾಭಗಳು, ಖನಿಜಗಳು, ಅರಣ್ಯಗಳು ಮತ್ತು ವನ್ಯಜೀವಿಗಳಂತಹ ಆಸ್ತಿಗಳ ಅಭಿರಕ್ಷಕರಾಗಿ ಅವುಗಳ ಉಪಯೋಗ ಪಡೆಯಲು ಅನುಮತಿಸುವ ರಾಜಧನ ಶುಲ್ಕಗಳು ಅಥವಾ ಅಂತಹ ಇತರ ಸೇವೆಗಳು ಮತ್ತು ಸರ್ಕಾರದ ಉಪಕರಣದ ಮೂಲಕ ಒದಗಿಸಲಾದ ವಿವಿಧ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಬಳಕೆದಾರರ ಶುಲ್ಕಗಳು ಇತ್ಯಾದಿಗಳು.

2017-18ರಿಂದ 2019-20ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳಲ್ಲಿ ತೆರಿಗೆಯೇತರ ಆದಾಯದ ಪಾಲು ಶೇಕಡ ನಾಲ್ಕು ಇದ್ದರೆ, ಅದು 2020-21ರಲ್ಲಿ ಶೇಕಡ ಐದಕ್ಕೆ ಮತ್ತು 2021-22ರಲ್ಲಿ ಶೇಕಡ ಆರಕ್ಕೆ ಏರಿಕೆಯಾಯಿತು. ರಾಜಸ್ವ ಸ್ವೀಕೃತಿಯ ಪಾಲಿನಲ್ಲಿ ಅಲ್ಪ ಪ್ರಮಾಣದ ಏರಿಕೆ ಇದ್ದರೂ ಮೌಲ್ಯದ ವಿಚಾರದಲ್ಲಿ ತೆರಿಗೆಯೇತರ ಆದಾಯವು, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇಕಡ 49.19 ರಷ್ಟು ಹೆಚ್ಚಳಗೊಂಡಿತ್ತು. ಪ್ರಮುಖ ಹೆಚ್ಚಳವು ಮುಖ್ಯವಾಗಿ ಕಬ್ಬಿಣೇತರ ಗಣಿ ಮತ್ತು ಲೋಹ ಉದ್ಯಮಗಳು ಮತ್ತು ಷೇರು ಲಾಭಾಂಶಗಳು ಮತ್ತು

[7] ಪ್ರಧಾನ ಲೆಕ್ಕಶೀರ್ಷಿಕೆ-0005-ಸಮಗ್ರ ಸರಕು ಮತ್ತು ಸೇವಾ ತೆರಿಗೆ (₹9,158.36 ಕೋಟಿ), 0006-ರಾಜ್ಯ ಸರಕು ಮತ್ತು ಸೇವಾ ತೆರಿಗೆ (₹49,929.02 ಕೋಟಿ) ಮತ್ತು 0008-ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಶೂನ್ಯ).

ಲಾಭಗಳು ಇವುಗಳ ಅಡಿಯಲ್ಲಿ ಅನುಕ್ರಮವಾಗಿ ಶೇಕಡ 62.03 ಮತ್ತು ಶೇಕಡ 332.10ರಷ್ಟಿತ್ತು. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರು ಪ್ರಮಾಣದಲ್ಲಿ ರಾಜ್ಯವು ದೇಶದಲ್ಲೇ ಅತೀ ಕಡಿಮೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ತೆರಿಗೆಯೇತರ ಆದಾಯದ ಅನುಪಾತದಲ್ಲಿ ಒಂದಾಗಿತ್ತು. ಅನುಪಾತವು ಹಿಂದಿನ ವರ್ಷಗಳಂತೆಯೇ ಶೇಕಡ ಒಂದಕ್ಕಿಂತ ಕಡಿಮೆಯಾಗಿಯೇ ಮುಂದುವರೆಯಿತು.

ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಉತ್ತರವಾಗಿ ಆರ್ಥಿಕ ಇಲಾಖೆಯು ತಾನು ತೆರಿಗೆಯೇತರ ಆದಾಯಗಳ ನಿಯತಕಾಲಿಕ ಪರಿಷ್ಕರಣೆಯ ಅಗತ್ಯತೆಯನ್ನು ಒತ್ತಿ ಹೇಳಿರುವುದಾಗಿ ಮತ್ತು ಜೂನ್ 2022ರಲ್ಲಿ ಮತ್ತೊಮ್ಮೆ ಸುತ್ತೋಲೆಯನ್ನು ಜಾರಿಮಾಡಿರುವುದಾಗಿ ತಿಳಿಸಿತು.

2017–18ರಿಂದ 2021–22ರ ಅವಧಿಯಲ್ಲಿ ಸಂಗ್ರಹಿಸಲಾದ ತೆರಿಗೆಯೇತರ ಆದಾಯದ ಘಟಕವಾರು ವಿವರಗಳನ್ನು **ಕೋಷ್ಟಕ–2.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.6: ರಾಜ್ಯದ ತೆರಿಗೆಯೇತರ ಆದಾಯದ ಅಂಗಗಳು**

(₹ ಕೋಟಿಗಳಲ್ಲಿ)

| ರಾಜ್ಯದ ತೆರಿಗೆಯೇತರ ರಾಜಸ್ವದ ಘಟಕಗಳು | | | | | | |
|---|---|---|---|---|---|---|
| ರಾಜಸ್ವ ಶೀರ್ಷಿಕೆ | 2017–18 | 2018–19 | 2019–20 | 2020–21 | 2021–22 | ಗೆರೆ |
| ಬಡ್ಡಿ ಸ್ವೀಕೃತಿಗಳು | 1,178 | 1,112 | 895 | 920 | 1,315 | |
| ಲಾಭಾಂಶ ಮತ್ತು ಲಾಭಗಳು | 79 | 38 | 54 | 81 | 350 | |
| ಕಬ್ಬಿಣೇತರ ಗಣಿ ಮತ್ತು ಲೋಹ ಉದ್ದಿಮೆ | 2,747 | 3,027 | 3,629 | 3,893 | 6,308 | |
| ಇತರೆ ತೆರಿಗೆಯೇತರ ಸ್ವೀಕೃತಿಗಳು | 2,473 | 2,596 | 3,103 | 3,000 | 3,804 | |
| (ಎ) ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ | 364 | 330 | 599 | 419 | 522 | |
| (ಬಿ) ಇತರೆ ಆಡಳಿತಾತ್ಮಕ ಸೇವೆಗಳು | 271 | 253 | 305 | 388 | 417 | |
| (ಸಿ) ಅರಣ್ಯೀಕರಣ ಮತ್ತು ವನ್ಯಜೀವಿ | 314 | 309 | 267 | 276 | 281 | |
| (ಡಿ) ಶಿಕ್ಷಣ, ಕ್ರೀಡೆ ಮತ್ತು ಕಲೆ | 176 | 200 | 183 | 175 | 287 | |
| (ಇ) ಪೊಲೀಸ್ | 253 | 241 | 308 | 367 | 500 | |
| (ಎಫ್) ರಸ್ತೆಗಳು ಮತ್ತು ಸೇತುವೆಗಳು | 103 | 105 | 71 | 50 | 60 | |
| (ಜಿ) ಇತರೆ | 992 | 1,158 | 1,370 | 1,325 | 1,737 | |
| ಒಟ್ಟು | 6,477 | 6,773 | 7.681 | 7,894 | 11,777 | |

*ಆಕರ: ಹಣಕಾಸು ಲೆಕ್ಕಗಳು*

ಕಬ್ಬಿಣೇತರ ಗಣಿ ಮತ್ತು ಲೋಹ ಉದ್ದಿಮೆ ಕೈಗಾರಿಕೆಗಳ ಅಡಿಯಲ್ಲಿನ ಹೆಚ್ಚಳವು ಮುಖ್ಯವಾಗಿ ರಾಜಧನದ ಹೆಚ್ಚಳದ ಕಾರಣದಿಂದಾಗಿದೆ. ಷೇರು ಲಾಭಾಂಶಗಳು ಮತ್ತು ಲಾಭಗಳ ಅಡಿಯಲ್ಲಿನ ಹೆಚ್ಚಳವು ರಾಜ್ಯ ಸರ್ಕಾರವು ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿದ ಲಾಭದ ಶೇಕಡ 30ಕ್ಕೆ ಕಡಿಮೆ ಇಲ್ಲದಂತೆ ಷೇರು ಲಾಭಾಂಶಗಳು ಪಡೆಯಲು ತೆಗೆದುಕೊಂಡ ಕ್ರಮದಿಂದಾಗಿದೆ. ಪ್ರಸ್ತುತ ವರ್ಷದಲ್ಲಿ ರಾಜಧನಗಳ ಅಡಿಯಲ್ಲಿ ತೆರಿಗೆಯೇತರ ಆದಾಯ ಹೆಚ್ಚಳಗೊಂಡಿದ್ದರೂ, ಇದನ್ನು ಈ ಕೆಳಗೆ ಚರ್ಚಿಸಿದಂತೆ ಹೊಸ ತಂತ್ರಜ್ಞಾನಗಳನ್ನು ಅನುಷ್ಠಾನಗೊಳಿಸುವ ಮೂಲಕ ಅಕ್ರಮ ಗಣಿಗಾರಿಕೆ ಚಟುವಟಿಕೆಗಳನ್ನು ನಿಗ್ರಹಿಸುವುದರಿಂದ ಇನ್ನಷ್ಟು ಹೆಚ್ಚಳಗೊಳಿಸಬಹುದಾಗಿತ್ತು:

**ಅಕ್ರಮ ಗಣಿಗಾರಿಕೆಯಿಂದಾಗಿ ತೆರಿಗೆಯೇತರ ಆದಾಯದ ನಷ್ಟ**

ಖನಿಜಗಳು (ಪರಮಾಣು ಮತ್ತು ಹೈಡ್ರೋಕಾರ್ಬನ್ ಶಕ್ತಿ ಖನಿಜಗಳನ್ನು ಹೊರತುಪಡಿಸಿ) ರಿಯಾಯಿತಿ ನಿಯಮಗಳು, 2016ರ ನಿಯಮ 2(1) (ಸಿ) ಅಡಿಯಲ್ಲಿ ವ್ಯಾಖ್ಯಾನಿಸಿದಂತೆ, ಅಕ್ರಮ ಗಣಿಗಾರಿಕೆ ಎಂದರೆ ಯಾವುದೇ ವ್ಯಕ್ತಿ ಅಥವಾ ಕಂಪನಿ, ಯಾವುದೇ ಪ್ರದೇಶದಲ್ಲಿ ಊರ್ಜಿತ ಖನಿಜ ರಿಯಾಯಿತಿ ಹೊಂದಿರದ

ನಡೆಸಿದ ಸ್ಥಳ ಶೋಧನೆ, ನಿರೀಕ್ಷಿತ ಅಥವಾ ಗಣಿಗಾರಿಕೆ ನಡೆಸುವುದು. ಇದರೊಂದಿಗೆ, ಯಾವುದೇ ವ್ಯಕ್ತಿಯಿಂದ ಅನ್ವೇಷಣಾ ಪರವಾನಗಿ (ಲೈಸೆನ್ಸ್), ಗಣಿಗಾರಿಕೆ ಗುತ್ತಿಗೆ ಅಥವಾ ಸಂಯೋಜಿತ ಪರವಾನಗಿ ಇಲ್ಲದೆ ಯಾವುದೇ ಖನಿಜವನ್ನು ಹೊರತೆಗೆಯುವುದು, ಸಾಗಾಣಿಕೆ ಮಾಡುವುದು ಅಥವಾ ಹೊರತೆಗೆಯಲು ಅಥವಾ ಸಾಗಾಣಿಕೆ ಮಾಡಲು ಕಾರಣವಾಗುವುದು ಅಥವಾ ಪರಿಚ್ಛೇದ 23(ಸಿ) ಅಡಿಯಲ್ಲಿ ಮಾಡಿದ ನಿಯಮಗಳನ್ನು ಉಲ್ಲಂಘನೆ ಮಾಡುವುದು ಕಾನೂನು ಬಾಹಿರ ಮತ್ತು ಅದರಿಂದಾಗಿ ಅಕ್ರಮ. ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯ ಬೇಡಿಕೆ, ವಸೂಲಿ ಮತ್ತು ಬಾಕಿ (ಡಿಸಿಬಿ) ರಿಜಿಸ್ಟರ್‌ನ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದವು:

- 2018–19ರಲ್ಲಿ ಎಲ್ಲಾ ಖನಿಜಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಪ್ರದೇಶದಿಂದ (ಲೀಸ್ ಏರಿಯಾ) ಹೊರಗಡೆ ಮಾಡಲಾದ ಆಹರಣದ (ಎಕ್ಸ್‌ಟ್ರಾಕ್ಷನ್) ಪ್ರಮಾಣವನ್ನು ಡ್ರೋನ್ ಸಮೀಕ್ಷೆ ಮೂಲಕ ಪರಿಮಾಣೀಕರಿಸಿತ್ತು. ಅನುಮತಿ ಪ್ರದೇಶದ ಹೊರಗಿನ ಆಹರಣದ ಆನಂತರದ ಪರಿಮಾಣೀಕರಣವನ್ನು ಜಿಲ್ಲಾ ತನಿಖಾಧಿಕಾರಿಗಳಿಂದ ಅವರ ತನಿಖೆಯ ಮೂಲಕ ನಡೆಸಲಾಗಿತ್ತು. ಎಲ್ಲಾ ಜಿಲ್ಲೆಗಳ ಬೇಡಿಕೆ, ವಸೂಲಿ ಮತ್ತು ಬಾಕಿ ರಿಜಿಸ್ಟರ್‌ಗಳ ಪರಿಶೀಲನೆಯು ಖನಿಜಗಳ ಅಂದರೆ, ವಿವಿಧ ಗ್ರಾನೈಟುಗಳು, ಸಾಮಾನ್ಯ ಕಟ್ಟಡ ನಿರ್ಮಾಣ ಕಲ್ಲುಗಳು, ಮರಳು ಇತ್ಯಾದಿಗಳ ಗುತ್ತಿಗೆ ಪ್ರದೇಶದ ಹೊರಗಡೆ ಆಹರಣ ಇತ್ತು ಮತ್ತು ಅಲ್ಲಿ ಮಾನ್ಯ ಪರವಾನಗಿ ಇಲ್ಲದೆ ಖನಿಜಗಳ ರವಾನೆ ಇತ್ತು ಎಂಬುದನ್ನು ಸೂಚಿಸಿತು. ಖನಿಜಗಳ ಅಕ್ರಮ ಹೊರತೆಗೆಯುವಿಕೆ ಮತ್ತು ರವಾನೆಯ ವಿವರಗಳನ್ನು ಕೆಳಗಿನ **ಕೋಷ್ಟಕ–2.7**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–2.7: ಬೇಡಿಕೆ, ವಸೂಲಿ ಮತ್ತು ಬಾಕಿ ರಿಜಿಸ್ಟರ್ ಪ್ರಕಾರ ಖನಿಜಗಳ ಗುತ್ತಿಗೆ ಪ್ರದೇಶದ ಹೊರಗಡೆ ಆಹರಣ ಮತ್ತು ಪರವಾನಗಿ ಇಲ್ಲದೆ ರವಾನೆಯ ವಿವರಗಳು**

| ವರ್ಷ | ವಿವರಗಳು | ಪರಿಮಾಣ ಮೆಟ್ರಿಕ್ ಟನ್ನುಗಳಲ್ಲಿ |
|---|---|---|
| **2017–18ರವರೆಗೆ** | ಗುತ್ತಿಗೆ ಪ್ರದೇಶದ ಹೊರಗಡೆ ಅಹರಣ | 5,50,15,120.300 |
| | ಪರವಾನಗಿ ಇಲ್ಲದೆ ರವಾನೆ | ಲಭ್ಯವಿಲ್ಲ |
| **2018–19** | ಗುತ್ತಿಗೆ ಪ್ರದೇಶದ ಹೊರಗಡೆ ಆಹರಣ | 2,53,95,590.000 |
| | ಪರವಾನಗಿ ಇಲ್ಲದೆ ರವಾನೆ | 4,36,50,178.293 |
| **2019–20** | ಗುತ್ತಿಗೆ ಪ್ರದೇಶದ ಹೊರಗಡೆ ಆಹರಣ | 23,53,857.000 |
| | ಪರವಾನಗಿ ಇಲ್ಲದೆ ರವಾನೆ | 54,41,134.890 |
| **2020–21** | ಗುತ್ತಿಗೆ ಪ್ರದೇಶದ ಹೊರಗಡೆ ಆಹರಣ | 1,92,774.700 |
| | ಪರವಾನಗಿ ಇಲ್ಲದೆ ರವಾನೆ | 37,93,750.020 |

ಮೇಲಿನ **ಕೋಷ್ಟಕ–2.7**ರಿಂದ 8,29,56,835 ಟನ್ನುಗಳಷ್ಟು ಖನಿಜಗಳು ಗುತ್ತಿಗೆ ಪ್ರದೇಶದ ಹೊರಗಡೆ ಆಹರಣವಾಗಿತ್ತು ಮತ್ತು ಸುಮಾರು 5,28,85,063.203 ಟನ್ನುಗಳಷ್ಟು ಖನಿಜಗಳು ಪರವಾನಗಿ ಇಲ್ಲದೆ ರವಾನೆಯಾಗಿತ್ತು ಎಂಬುದು ಸ್ಪಷ್ಟವಾಗಿದೆ. ಇದರಿಂದಾಗಿ, ರಾಜ್ಯವು ತೆರಿಗೆಯೇತರ ಆದಾಯದ ನಷ್ಟ ಅನುಭವಿಸಿತು. ಇಲಾಖೆಯೊಂದಿಗೆ 2021–22ರ ಬೇಡಿಕೆ, ವಸೂಲಿ ಮತ್ತು ಬಾಕಿಗಳ ಲಭ್ಯವಿರದಿದ್ದರಿಂದ, ಲೆಕ್ಕಪರಿಶೋಧನೆಯು 2020–21ಕ್ಕೆ ಆದಾಯದ ನಷ್ಟವನ್ನು ಅಂದಾಜಿಸಿತು, ಅದು ₹1,18,17,870[8] ರಷ್ಟಿತ್ತು. ಇದರೊಂದಿಗೆ, ಜಿಲ್ಲಾ ಖನಿಜ ನಿಧಿಯ ವಸೂಲಾತಿಯಲ್ಲಿ ಕೊರತೆ ಇತ್ತು. ಇಲಾಖೆಯು ದಂಡವನ್ನು ವಿಧಿಸಿತ್ತು ಮತ್ತು ನೋಟೀಸುಗಳನ್ನು ಜಾರಿಗೊಳಿಸಿತ್ತಾದರೂ, ರಾಜಧನಗಳು ಮತ್ತು ದಂಡಗಳನ್ನು ವಸೂಲು ಮಾಡಲು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

[8] ಬೂದು ಗ್ರಾನೈಟ್: 867 ಮೆಟ್ರಿಕ್ ಟನ್ * ₹350 ಪ್ರತಿ ಮೆಟ್ರಿಕ್ ಟನ್‌ಗೆ = ₹3,03,450
ಕಟ್ಟಡ ಕಲ್ಲು : 187334 ಮೆಟ್ರಿಕ್ ಟನ್ * ₹60 ಪ್ರತಿ ಮೆಟ್ರಿಕ್ ಟನ್‌ಗೆ = ₹1,12,40,040
ಸಾಮಾನ್ಯ ಮರಳು: 4573 ಮೆಟ್ರಿಕ್ ಟನ್ * ₹60 ಪ್ರತಿ ಮೆಟ್ರಿಕ್ ಟನ್‌ಗೆ = ₹2,74,380
ಒಟ್ಟು = ₹1,18,17,870

ಹಣಕಾಸು ನಿರ್ವಹಣಾ ಪರಿಶೀಲನಾ ಸಮಿತಿಯು ತೆರಿಗೆಯೇತರ ಆದಾಯದ ಹೆಚ್ಚಳವನ್ನು ಪ್ರಶಂಸಿಸುತ್ತಾ ತೆರಿಗೆಯೇತರ ಆದಾಯದ ವಸೂಲಾತಿಯನ್ನು ಇನ್ನಷ್ಟು ಹೆಚ್ಚಿಸಲು ಗಣಿಗಾರಿಕೆ ಮತ್ತು ಷೇರುಲಾಭಾಂಶ ಆದಾಯದ ಇತರೆ ಮಾರ್ಗಗಳನ್ನು ಹುಡುಕುವಂತೆ ಶಿಫಾರಸು ಮಾಡಿತು.

### *2.4.4 ಕೇಂದ್ರದಿಂದ ವರ್ಗಾವಣೆಗಳು*

ಕಾರ್ಪೊರೇಷನ್ ತೆರಿಗೆ, ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬಕಾರಿ ಸುಂಕಗಳು ಮುಂತಾದ ಕೇಂದ್ರ ತೆರಿಗೆ ಸುಂಕಗಳಲ್ಲಿ ರಾಜ್ಯ ಸರ್ಕಾರದ ಪಾಲನ್ನು ಕೇಂದ್ರ ಸರ್ಕಾರವು ವರ್ಗಾಯಿಸುತ್ತದೆ. 2017–18ರಿಂದ 2021–22ರವರೆಗಿನ ಈ ತೆರಿಗೆ ವರ್ಗಾವಣೆಗಳಲ್ಲಿನ ಪ್ರವೃತ್ತಿಗಳನ್ನು **ಕೋಷ್ಟಕ–2.8**ರಲ್ಲಿ ತೋರಿಸಲಾಗಿದೆ

**ಕೋಷ್ಟಕ–2.8: ಕೇಂದ್ರ ತೆರಿಗೆ ವರ್ಗಾವಣೆಯ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) | 447.56 | 8,858.76 | 8,773.82 | 6,236.01 | 9,158.36 |
| ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) | 3,204.72 | 707.00 | – | – | – |
| ಕಾರ್ಪೋರೇಶನ್ ತೆರಿಗೆ | 9,721.29 | 12,481.94 | 10,542.17 | 6,656.01 | 9,823.19 |
| ಕಾರ್ಪೋರೇಶನ್ ತೆರಿಗೆ ಹೊರತುಪಡಿಸಿ ಆದಾಯ ತೆರಿಗೆ | 8,208.94 | 9,192.40 | 8,260.51 | 6,837.75 | 9,623.93 |
| ಸೀಮಾ ಸುಂಕ | 3,203.80 | 2,544.18 | 1,959.84 | 1,110.05 | 2,573.81 |
| ಕೇಂದ್ರ ಅಬಕಾರಿ ಸುಂಕಗಳು | 3,348.80 | 1,690.77 | 1,362.62 | 714.26 | 1,539.33 |
| ಸೇವಾ ತೆರಿಗೆ | 3,617.15 | 331.65 | – | 119.03 | 528.33 |
| ಸಂಪತ್ತಿನ ಮೇಲೆ ತೆರಿಗೆ | (–) 0.29 | 4.58 | 0.46 | – | 2.63 |
| ಆದಾಯ ಮತ್ತು ವೆಚ್ಚದ ಮೇಲೆ ಇತರೆ ತೆರಿಗೆಗಳು | – | 65.01 | – | – | 0.07 |
| ಇತರೆ ತೆರಿಗೆಗಳು ಮತ್ತು ಸುಂಕಗಳು, ಸರಕುಗಳು ಮತ್ತು ಸೇವೆಗಳು | (–) 0.01 | 18.54 | 19.58 | 21.00 | 33.93 |
| ಒಟ್ಟು | **31,751.96** | **35,894.83** | **30,919.00** | **21,694.11** | **33,283.58** |
| ಹಿಂದಿನ ವರ್ಷದ ಮೇಲೆ ವೃದ್ಧಿಯ ಶೇಕಡ | 10.40 | 13.05 | (–) 13.86 | (–)29.84 | 53.42 |
| ರಾಜಸ್ವ ತೆರಿಗೆಗಳಿಗೆ ಕೇಂದ್ರ ತೆರಿಗೆ ವರ್ಗಾವಣೆಗಳ ಶೇಕಡಾವಾರು | 21.60 | 21.76 | 17.62 | 13.84 | 17.00 |

*ಆಕರ: ಹಣಕಾಸು ಲೆಕ್ಕಗಳು*

ಹದಿನೈದನೆಯ ಹಣಕಾಸು ಆಯೋಗವು ಕೇಂದ್ರ ತೆರಿಗೆಗಳ ನಿವ್ವಳ ಆದಾಯದಲ್ಲಿ ರಾಜ್ಯದ ಪಾಲನ್ನು ಶೇಕಡ 3.647ಕ್ಕೆ ನಿಗದಿಪಡಿಸಲು ಶಿಫಾರಸು ಮಾಡಿದೆ. 2021–22ರಲ್ಲಿ, ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯಗಳ ಅವಿಭಜಿತ ಮೊತ್ತದ ಪಾಲಿನ ಒಟ್ಟು ₹16,06,318 ಕೋಟಿಗಳಲ್ಲಿ, ರಾಜ್ಯದ ಪಾಲಿನ ನಿವ್ವಳ. ಪಾಲು ₹33,283.58 ಕೋಟಿಗಳು[9] ಆಗಿದೆ. ಇದರಲ್ಲಿ ಸೇವಾ ತೆರಿಗೆಯ ₹528.33 ಕೋಟಿಗಳು ಸೇರಿದೆ.

[9] ಒಟ್ಟು ₹33,283.58 ಕೋಟಿ ವಿಕೇಂದ್ರೀಕರಣದಲ್ಲಿ, ಕಾರ್ಪೊರೇಶನ್ ತೆರಿಗೆ ಶೇಕಡ 3.92, ಸೀಮಾ ಸುಂಕ ಶೇಕಡ 3.97, ಕೇಂದ್ರ ಅಬಕಾರಿ ಸುಂಕ ಶೇಕಡ 4.29, ಆದಾಯ ತೆರಿಗೆ ಶೇಕಡ 3.67, ಸೇವಾ ತೆರಿಗೆ ಶೇಕಡ 4.43, ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಶೇಕಡ 3.62, ಆದಾಯ ಮತ್ತು ವೆಚ್ಚದ ಮೇಲಿನ ಇತರ ತೆರಿಗೆಗಳು ಶೇಕಡ 3.68 ಮತ್ತು ಇತರ ತೆರಿಗೆಗಳು ಮತ್ತು ಸುಂಕಗಳು ಶೇಕಡ 3.75.

### 2.4.5 ಭಾರತ ಸರ್ಕಾರದ ಸಹಾಯಾನುದಾನಗಳು

ಭಾರತ ಸರ್ಕಾರದಿಂದ ಸ್ವೀಕೃತವಾದ ಸಹಾಯಾನುದಾನಗಳು 2017–18ರಲ್ಲಿ ₹21,641 ಕೋಟಿಗಳಿಂದ 2019–20ರಲ್ಲಿ ₹34,480 ಕೋಟಿಗಳಿಗೆ ಹೆಚ್ಚಳವಾಗಿದ್ದು, 2020–21ರಿಂದ ಇಳಿಕೆಯ ಪ್ರವೃತ್ತಿ ತೋರಿದೆ. ಅದು **ಕೋಷ್ಟಕ–2.9**ರಲ್ಲಿ ತೋರಿಸಿದ ಹಾಗೆ 2020–21ರಲ್ಲಿ ₹30,076 ಕೋಟಿಗೆ ಇಳಿಕೆಯಾದರೆ, 2021–22ರಲ್ಲಿ ₹29,962 ಕೋಟಿಗೆ ಇಳಿಕೆಯಾಯಿತು.

**ಕೋಷ್ಟಕ–2.9: ಭಾರತ ಸರ್ಕಾರದಿಂದ ಸಹಾಯಾನುದಾನ**

(₹ ಕೋಟಿಗಳಲ್ಲಿ)

| ಶೀರ್ಷಿಕೆ | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನಗಳು | 11,617 | 10,393 | 12,214 | 9,852 | 12,659 |
| ಇತರೆ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನಗಳು[10] | 7,316 | 11,714 | 17,593 | 14,667 | 11,064 |
| ಹಣಕಾಸು ಆಯೋಗದ ಅನುದಾನಗಳು | 2,708 | 3,374 | 4,673 | 5,557 | 6,239 |
| **ಒಟ್ಟು** | **21,641** | **25,481** | **34,480** | **30,076** | **29,962** |
| ಹಿಂದಿನ ವರ್ಷಕ್ಕೆ ಏರಿಕೆ/ಇಳಿಕೆಯ ಶೇಕಡಾವಾರು | 37.81 | 17.74 | 35.32 | (–)12.77 | (–)0.38 |
| ರಾಜಸ್ವ ಸ್ವೀಕೃತಿಗಳಿಗೆ ಸಹಾಯಾನುದಾನದ ಶೇಕಡಾವಾರು | 14.72 | 15.44 | 19.65 | 19.19 | 15.31 |

*ಆಕರ: ಹಣಕಾಸು ಲೆಕ್ಕಗಳು*

ಹಿಂದಿನ ವರ್ಷಕ್ಕೆ ಹೋಲಿಸಿದರೆ, 2021–22ರಲ್ಲಿ ₹114 ಕೋಟಿಗಳ ಇಳಿಕೆಯಾಗಿದೆ. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅನುದಾನ ಮತ್ತು ಹಣಕಾಸು ಆಯೋಗದ ಅನುದಾನಗಳು ಕ್ರಮವಾಗಿ ₹2,807ಕೋಟಿ ಮತ್ತು ₹682 ಕೋಟಿಗಳಷ್ಟು ಏರಿಕೆಯಾಗಿತ್ತು. ಇತರೆ ವರ್ಗಾವಣೆ/ರಾಜ್ಯಗಳಿಗೆ ಅನುದಾನದ ಅಡಿಯಲ್ಲಿ (₹3,603 ಕೋಟಿ) ಇಳಿಕೆಯಾಗಿತ್ತು.

**(ಅ) ಹದಿನೈದನೆ ಹಣಕಾಸು ಆಯೋಗದ ಶಿಫಾರಸುಗಳು**

27 ನವೆಂಬರ್ 2017ರಂದು ಸಂವಿಧಾನದ 280ನೇ ವಿಧಿಯ ಅಡಿಯಲ್ಲಿ ರಾಷ್ಟ್ರಾಧ್ಯಕ್ಷರು ಸ್ಥಾಪಿಸಿದ ಹದಿನೈದನೆಯ ಹಣಕಾಸು ಆಯೋಗದ ಉಲ್ಲೇಖಿತ ನಿಯಮಗಳ ಪ್ರಕಾರ, ಐದು ವರ್ಷಗಳವರೆಗೆ (2020–2025) ತೆರಿಗೆಗಳ ಆದ್ಯಂತ ಹಂಚಿಕೆಗೆ ಶಿಫಾರಸುಗಳನ್ನು ನೀಡಲು ಆಯೋಗವು ಎರಡು ವರದಿಗಳನ್ನು ಸಲ್ಲಿಸಿದೆ. ಮೊದಲ ವರದಿಯು 2020–21ರ ಹಣಕಾಸು ವರ್ಷಕ್ಕೆ ಶಿಫಾರಸನ್ನು ಹೊಂದಿದ್ದರೆ, ಎರಡನೇ ಮತ್ತು ಅಂತಿಮ ವರದಿಯು 2021–22ರಿಂದ 2024–25ರ ಅವಧಿಗೆ ಶಿಫಾರಸುಗಳನ್ನು ನೀಡಿದೆ. ಎರಡನೇ ಮತ್ತು ಅಂತಿಮ ವರದಿಯು ಈ ಕೆಳಗಿನವುಗಳನ್ನು ರಾಜ್ಯಕ್ಕೆ ಶಿಫಾರಸು ಮಾಡಿದೆ:

- ತೆರಿಗೆಗಳ ನಿವ್ವಳ ಆದಾಯದಲ್ಲಿ ಕರ್ನಾಟಕದ ಪರಸ್ಪರ ಪಾಲುಗಳು (ವಿಭಜಿಸಬಹುದಾದ ಒಟ್ಟು) ಶೇಕಡ 3.647.
- ರಾಜಸ್ವ ಕೊರತೆಗಾಗಿ ಸಹಾಯಾನುದಾನ ₹1,631 ಕೋಟಿಗಳು.
- ಸ್ಥಳೀಯ ಸಂಸ್ಥೆಗಳ ಸಬಲೀಕರಣ–ನಗರ ಸ್ಥಳೀಯ ಸಂಸ್ಥೆಗಳಿಗೆ (ಯುಎಲ್‌ಬಿ) ₹1,171 ಕೋಟಿಗಳು ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ (ಆರ್‌ಎಲ್‌ಬಿ) ₹2,377 ಕೋಟಿಗಳು.
- ವಿಪತ್ತು ಅಪಾಯ ನಿರ್ವಹಣೆ ₹1,054 ಕೋಟಿಗಳು.
- ಆರೋಗ್ಯ ಅನುದಾನಗಳು ₹551.53 ಕೋಟಿಗಳು

[10] ಇದು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿಗೆ ಕೊಡುಗೆ ಮತ್ತು ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನದಿಂದ ಉಂಟಾಗುವ ರಾಜಸ್ವ ನಷ್ಟಕ್ಕೆ ಪರಿಹಾರವನ್ನು ಒಳಗೊಂಡಿದೆ..

ತೆರಿಗೆಗಳ ನಿವ್ವಳ ಆದಾಯವನ್ನು **ಕಂಡಿಕೆ 2.4.4.**ರಲ್ಲಿ ಚರ್ಚಿಸಲಾಗಿದ್ದರೆ, ಸ್ವೀಕರಿಸಿದ ಉಳಿದ ಅನುದಾನಗಳನ್ನು ಕೆಳಗೆ ಚರ್ಚಿಸಲಾಗಿದೆ.

**1. ರಾಜಸ್ವ ಕೊರತೆಗಾಗಿ ಸಹಯಾನುದಾನಗಳು**

ಹದಿನೈದನೇ ಹಣಕಾಸು ಆಯೋಗವು ಪೂರ್ವ ವಿಕೇಂದ್ರೀಕರಣ ನಂತರದ ಕೊರತೆ ರಾಜ್ಯಕ್ಕೆ ಆದಾಯ ಕೊರತೆ ಅನುದಾನಗಳನ್ನು ಶಿಫಾರಸು ಮಾಡಿತು. ಇದರ ಆಧಾರದ ಮೇಲೆ, ರಾಜ್ಯವು 2021–22ರ ವರ್ಷಕ್ಕೆ ₹1,631 ಕೋಟಿ ಆದಾಯ ಕೊರತೆ ಅನುದಾನಗಳನ್ನು ಸ್ವೀಕರಿಸಬೇಕಿತ್ತು. ರಾಜ್ಯವು ಸಂಪೂರ್ಣ ಮೊತ್ತವನ್ನು ಸ್ವೀಕರಿಸಿತು.

**2. ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ/ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ**

ಹದಿನೈದನೇ ಹಣಕಾಸು ಆಯೋಗವು ಶಿಫಾರಸು ಮಾಡಿದಂತೆ 2021–21ರಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಡಿದ ಶಿಫಾರಸುಗಳು ಮತ್ತು ವರ್ಗಾವಣೆಯನ್ನು **ಕೋಷ್ಟಕ–2.10**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.10: 2021–22ರಲ್ಲಿ ಶಿಫಾರಸು ಮಾಡಿದ ಅನುದಾನ ಮತ್ತು ವಾಸ್ತವ ಬಿಡುಗಡೆ**

**(₹ ಕೋಟಿಗಳಲ್ಲಿ)**

| ವರ್ಷ | ಅನುದಾನದ ಸ್ವರೂಪ | ಗ್ರಾಮೀಣ ಸ್ಥಳೀಯ ಸಂಸ್ಥೆಗಳು | | | ನಗರ ಸ್ಥಳೀಯ ಸಂಸ್ಥೆಗಳು | | | ರಾಜ್ಯ ವಿಪತ್ತು ಅಪಾಯ ನಿರ್ವಹಣಾ ನಿಧಿ | | |
|---|---|---|---|---|---|---|---|---|---|---|
| | | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ | ಶಿಫಾರಸು ಮಾಡಿದ್ದು | ವಾಸ್ತವ | ಕೊರತೆ | ಶಿಫಾರಸು ಮಾಡಿದ್ದು | ವಾಸ್ತವ | **ಕೊರತೆ** |
| **2020–21** | ಮೂಲ ಅನುದಾನಗಳು | 1,608.50 | 1,608.50 | – | 1,549 | 1,549 | – | 1,054 | 1,054 | – |
| | ಬಂಧಿತ ಅನುದಾನಗಳು | 1,608.50 | 1,608.50 | – | | | | | | |
| **2021–22** | ಮೂಲ ಅನುದಾನಗಳು | 950.80 | 949.30 | 1.50 | 1,171 | 890 | 281 | 1,054 | 1,054 | – |
| | ಬಂಧಿತ ಅನುದಾನಗಳು | 1,426.20 | | | | | | | | |
| **ಒಟ್ಟು** | ಮೂಲ ಅನುದಾನಗಳು | **2,559.30** | **2,557.80** | **1.50** | **2,720** | **2,439** | **281** | **2,108** | **2,108** | – |
| | ಬಂಧಿತ ಅನುದಾನಗಳು | **3,034.70** | **1608.50** | – | | | | | | |

*ಆಕರ: 15ನೇ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು*

ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ಒಟ್ಟು ₹2,377 ಕೋಟಿಗಳ ಅನುದಾನದಲ್ಲಿ ಶೇಕಡ 40ರಷ್ಟು ಮೂಲ ಅನುದಾನ ಮತ್ತು ಶೇಕಡ 60ರಷ್ಟು ಬಂಧಿತ ಅನುದಾನ ನೈರ್ಮಲ್ಯ ಮತ್ತು ಬಯಲು ಶೌಚ ಮುಕ್ತ ಸೌಲಭ್ಯ ನಿರ್ವಹಣೆ (ಶೇಕಡ 30), ಕುಡಿಯುವ ನೀರು ಪೂರೈಕೆ, ಮಳೆ ನೀರು ಕೊಯ್ಲು ಮತ್ತು ನೀರಿನ ಮರುಬಳಕೆಗಾಗಿ (ಶೇಕಡ 30) ನೀಡಿದ ಅನುದಾನಗಳಾಗಿವೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ (₹1,171 ಕೋಟಿಗಳ) ಅನುದಾನವು ಮಿಲಿಯನ್ ಪ್ಲಸ್ ನಗರಗಳಿಗೆ (₹421 ಕೋಟಿಗಳು) ಮತ್ತು ಮಿಲಿಯನ್ ಪ್ಲಸ್ ಅಲ್ಲದ ನಗರಗಳಿಗೆ (₹750 ಕೋಟಿಗಳು) ಅನುದಾನವನ್ನು ಒಳಗೊಂಡಿದೆ. ಮಿಲಿಯನ್ ಪ್ಲಸ್ ನಗರಗಳಿಗೆ ಅನುದಾನವನ್ನು ವಾತಾವರಣ ಗುಣಮಟ್ಟ ಸುಧಾರಣೆಗಾಗಿ ಮತ್ತು ಸೇವಾ ಮಾನದಂಡವನ್ನು ಸಾಧಿಸುವ ಸಲುವಾಗಿ ಎರಡು ಕಂತುಗಳಲ್ಲಿ ನೀಡಲಾಗುತ್ತದೆ. ಮಿಲಿಯನ್ ಪ್ಲಸ್ ನಗರಗಳನ್ನು ಹೊರತು ಪಡಿಸಿ ಇತರ ನಗರಗಳಿಗೆ ಅನುದಾನವನ್ನು ಎರಡು ಸಮಾನ ಕಂತುಗಳಲ್ಲಿ ಒಂದು ಮೂಲಭೂತ ಅನುದಾನ ಮತ್ತು ಇನ್ನೊಂದು ಕುಡಿಯುವ ನೀರು ಮತ್ತು ಘನ ತ್ಯಾಜ್ಯ

ನಿರ್ವಹಣೆಗಾಗಿ ಬಂಧಿತ ಅನುದಾನ ನೀಡಲಾಗುತ್ತದೆ. 2021–22ರಲ್ಲಿ ಶಿಫಾರಸುಗಳಿಗೆ ಪ್ರತಿಯಾಗಿ ಅನುದಾನಗಳ ಸ್ವೀಕೃತಿಯಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುಕ್ರಮವಾಗಿ ₹1.50ಕೋಟಿ ಮತ್ತು ₹281 ಕೋಟಿಗಳಷ್ಟು ಕೊರತೆ ಇತ್ತು.

**3. ವಿಪತ್ತು ಪರಿಹಾರ ಅಡಿಯಲ್ಲಿ ಬಿಡುಗಡೆಗಳು**

ಹದಿನೈದನೇ ಹಣಕಾಸು ಆಯೋಗದ ಶಿಫಾರಸಿನಂತೆ ವಿಪತ್ತು ಪ್ರತಿಕ್ರಿಯೆಯ ಜೊತೆಗೆ ವಿಪತ್ತು ಉಪಶಮನವು ರಾಜ್ಯ ವಿಪತ್ತು ಅಪಾಯ ನಿರ್ವಹಣಾ ನಿಧಿ ಆಗಿದೆ. 2021–22ರಲ್ಲಿ ರಾಜ್ಯಕ್ಕೆ ₹1,054 ಕೋಟಿಗಳ ಹಂಚಿಕೆಯಾಗಿದ್ದು, ಕೇಂದ್ರದ ಪಾಲು ₹791 ಕೋಟಿಗಳು ಮತ್ತು ರಾಜ್ಯದ ಪಾಲು ₹263 ಕೋಟಿಗಳಾಗಿವೆ. 2021–22ರಲ್ಲಿ ರಾಜ್ಯವು ಸಂಪೂರ್ಣ ಶಿಫಾರಸು ಮೊತ್ತವನ್ನು ಸ್ವೀಕರಿಸಿದೆ. ಕೇಂದ್ರದ ಮತ್ತು ರಾಜ್ಯದ ಕೊಡುಗೆಯನ್ನು ಸಾರ್ವಜನಿಕ ಲೆಕ್ಕದಡಿಯ ನಿಧಿ ಖಾತೆಗೆ ವರ್ಗಾಯಿಸಲಾಗಿದೆ.

**4. ಆರೋಗ್ಯ ಅನುದಾನಗಳು**

ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ರೋಗನಿರ್ಣಯದ ಮೂಲಸೌಕರ್ಯ ಸೌಲಭ್ಯವನ್ನು ಬೆಂಬಲಿಸಲು, ಉಪ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮೂಲಸೌಕರ್ಯ ಒದಗಿಸಲು ಹಾಗೂ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಆರೋಗ್ಯ ಕ್ಷೇತ್ರಕ್ಕೆ 2021–22ರ ಅವಧಿಯಲ್ಲಿ ₹551.53 ಕೋಟಿ ಅನುದಾನವನ್ನು ಹದಿನೈದನೇ ಹಣಕಾಸು ಆಯೋಗವು ಶಿಫಾರಸು ಮಾಡಿತ್ತು. 2021–22ರಲ್ಲಿ ಆರೋಗ್ಯ ಅನುದಾನದ ಸ್ವೀಕೃತಿಯಲ್ಲಿ ಯಾವುದೇ ಕೊರತೆಯಿರಲಿಲ್ಲ.

### *2.4.6 ಬಂಡವಾಳ ಸ್ವೀಕೃತಿಗಳು*

ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿಗಳು ಸಾರ್ವಜನಿಕ ಋಣ, ಹೂಡಿಕೆಯ ಹಿಂಪಡೆತದ ಹುಟ್ಟುವಳಿಗಳಿಂದ (ಇತರೆ ಬಂಡವಾಳ ಸ್ವೀಕೃತಿಗಳು ಶೀರ್ಷಿಕೆಯಡಿ) ಬರುವ ಋಣಭಾರವಲ್ಲದ ಆದಾಯಗಳನ್ನು ಮತ್ತು ಸಾಲಗಳು ಮತ್ತು ಮುಂಗಡಗಳ ವಸೂಲಾತಿಗಳನ್ನು ಒಳಗೊಂಡಿರುತ್ತವೆ. ಸಾರ್ವಜನಿಕ ಋಣ ತೀರುವಳಿಯ ನಂತರದ ಸಾರ್ವಜನಿಕ ಋಣ ಮತ್ತು ಇತರ ಬಂಡವಾಳ ಸ್ವೀಕೃತಿಗಳು ಸೇರಿ ನಿವ್ವಳ ಬಂಡವಾಳ ಸ್ವೀಕೃತಿಯಾಗುತ್ತದೆ. 2017–18ರಿಂದ 2021–22ರ ಅವಧಿಯಲ್ಲಿ ಬಂಡವಾಳ ಸ್ವೀಕೃತಿಗಳ ಸಂಯೋಜನೆ ಮತ್ತು ಬೆಳವಣಿಗೆಯ ಪ್ರವೃತ್ತಿಯನ್ನು **ಕೋಷ್ಟಕ–2.11**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.11: ಬಂಡವಾಳ ಸ್ವೀಕೃತಿಗಳ ವೃದ್ಧಿ ಮತ್ತು ಸಂಯೋಜನೆಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ರಾಜ್ಯದ ಆದಾಯದ ಮೂಲಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ನಿವ್ವಳ ರಾಜಸ್ವ ಋಣ ಸ್ವೀಕೃತಿಗಳು | 16,853 | 30,831 | 40,279 | 73,512 | 66,669 |
| ಸಂಕೀರ್ಣ ಬಂಡವಾಳ ಸ್ವೀಕೃತಿಗಳು | 4 | (–) 6 | 45 | 45 | 06 |
| ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 137 | 31 | 203 | 270 | 127 |
| ನಿವ್ವಳ ಬಂಡವಾಳ ಸ್ವೀಕೃತಿಗಳು | **16,994** | **30,856** | **40,527** | **73,827** | **66,802** |
| ಬಂಡವಾಳ ಸ್ವೀಕೃತಿಗಳ ವೃದ್ಧಿಯ ದರ (ಶೇಕಡ) | (–) 28.79 | 81.57 | 31.34 | 82.17 | (–)9.52 |
| ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳ ವೃದ್ಧಿಯ ದರ (ಶೇಕಡ) | (–) 29.00 | 82.94 | 30.64 | 82.51 | (–)9.31 |

*ಆಕರ : ಹಣಕಾಸು ಲೆಕ್ಕಗಳು*

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹18,109 ಕೋಟಿ (2020–21ರ ಅವಧಿಯಲ್ಲಿ ₹12,407 ಕೋಟಿ) ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು

ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ನಿವ್ವಳ ಸಾರ್ವಜನಿಕ ಋಣ ಸ್ವೀಕೃತಿಗಳು ₹48,560 ಕೋಟಿಗಳಾಗುತ್ತದೆ (2020–21ರ ಅವಧಿಯಲ್ಲಿ ₹61,105 ಕೋಟಿಗಳು).

ನಿವ್ವಳ ಬಂಡವಾಳ ಸ್ವೀಕೃತಿಗಳು 2017–18ರಲ್ಲಿದ್ದ ₹16,994 ಕೋಟಿಗಳಿಂದ 2021–22ರಲ್ಲಿ ₹66,802 ಕೋಟಿಗಳಿಗೆ ಏರಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ನಿವ್ವಳ ಬಂಡವಾಳ ಸ್ವೀಕೃತಿಗಳಲ್ಲಿ ಇಳಿಕೆ ಇತ್ತು. ಇದು ಪ್ರಮುಖವಾಗಿ ರಾಜ್ಯದಿಂದ ಮಾರುಕಟ್ಟೆ ಸಾಲಗಳ ಇಳಿತದ ಕಾರಣದಿಂದ ಆಗಿದೆ. ಋಣ ಸ್ವೀಕೃತಿಗಳು ಬಂಡವಾಳ ಸ್ವೀಕೃತಿಗಳಲ್ಲಿ ಪ್ರಧಾನ ಪಾಲನ್ನು ಹೊಂದಿದ್ದವು ಮತ್ತು 2017–18ರಿಂದ 2021–22ರ ಅವಧಿಯಲ್ಲಿ ಇದು ಸುಮಾರು 99 ಪ್ರತಿಶತದಷ್ಟಿತ್ತು. ಇವುಗಳಲ್ಲಿ ಸಾಲಗಳು ಮತ್ತು ಮುಂಗಡಗಳ ಮೇಲಿನ ವಸೂಲಾತಿಯು ಈ ಅವಧಿಯಲ್ಲಿ ತೀರಾ ಅಲ್ಪವಾಗಿತ್ತು. 2021–22ರ ಅಂತ್ಯಕ್ಕೆ ಬಾಕಿ ಉಳಿದಿರುವ ಸಾಲಗಳು ಮತ್ತು ಮುಂಗಡಗಳಲ್ಲಿ ವಸೂಲಾತಿ ಶೇಕಡ ಒಂದಕ್ಕಿಂತ ಕಡಿಮೆಯಾಗಿದೆ.

ಸಾರ್ವಜನಿಕ ಋಣದ ಸ್ವೀಕೃತಿಗಳಲ್ಲಿ ಮಾರುಕಟ್ಟೆ ಸಾಲಗಳು ಶೇಕಡ 73ರಷ್ಟಿದ್ದು ಪ್ರಮುಖ ಪಾಲನ್ನು ಹೊಂದಿದ್ದವು. ನಂತರ ಸ್ಥಾನದಲ್ಲಿ ಭಾರತ ಸರ್ಕಾರದ ಸಾಲಗಳು (ಶೇಕಡ 25) ಮತ್ತು ಸಂಧಾನದ ಸಾಲಗಳು (ಶೇಕಡ ಎರಡು) ಇವೆ. ಭಾರತ ಸರ್ಕಾರದ ಸಾಲಗಳು ಇತರ ಸಾಲಗಳನ್ನು[11] ಕೂಡ ಒಳಗೊಂಡಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ 2017–18 ರಿಂದ 2020–21ರ ಅವಧಿಯಲ್ಲಿ ಹಿಂದಿನ ವರ್ಷಗಳಲ್ಲಿ ತೆಗೆದುಕೊಂಡ ಸಾರ್ವಜನಿಕ ಸಾಲದ ಮರುಪಾವತಿಗೆ ಶೇಕಡ 23.14ರಷ್ಟು ಸಾರ್ವಜನಿಕ ಸಾಲದ ಸ್ವೀಕೃತಿಗಳನ್ನು ಬಳಸಲಾಗಿದೆ ಮತ್ತು ಉಳಿದ ಶೇಕಡ 76.86ರಷ್ಟನ್ನು ಇತರ ಉದ್ದೇಶಗಳಿಗಾಗಿ ಬಳಸಲಾಗಿದೆ. ಆದಾಗ್ಯೂ, 2021–22ರಲ್ಲಿ ಸಾರ್ವಜನಿಕ ಋಣದ ಸ್ವೀಕೃತಿಗಳಲ್ಲಿ ಶೇಕಡ 17.33ರಷ್ಟನ್ನು ಹಿಂದಿನ ವರ್ಷಗಳಲ್ಲಿ ತೆಗೆದುಕೊಂಡ ಸಾರ್ವಜನಿಕ ಸಾಲದ ಮರುಪಾವತಿಗೆ ಬಳಸಲಾಗಿದೆ.

### *2.4.7 ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆ*

ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ರಾಜ್ಯದ ಕಾರ್ಯಕ್ಷಮತೆಯನ್ನು ಸ್ವಂತ–ತೆರಿಗೆ ಮತ್ತು ತೆರಿಗೆಯೇತರ ಮೂಲಗಳನ್ನು ಒಳಗೊಂಡಿರುವ ತನ್ನದೇ ಆದ ಸಂಪನ್ಮೂಲಗಳ ಪರಿಭಾಷೆಯಲ್ಲಿ ನಿರ್ಣಯಿಸಲಾಗುತ್ತದೆ. ರಾಜ್ಯ ಸರ್ಕಾರವು ಪ್ರಸ್ತುತ ಪಡಿಸುವ ಆಯವ್ಯಯವು ನಿರ್ದಿಷ್ಟ ಆರ್ಥಿಕ ವರ್ಷಕ್ಕೆ ಆದಾಯ ಮತ್ತು ವೆಚ್ಚದ ಪ್ರಕ್ಷೇಪಗಳು/ಅಂದಾಜುಗಳನ್ನು ಸೂಚಿಸುತ್ತದೆ. ಆಯವ್ಯಯ ಅಂದಾಜಿನ ವಿಚಲನಗಳು ವಿವಿಧ ಅಂಶಗಳಿಂದಾಗಿ ಅಪೇಕ್ಷಿತ ಹಣಕಾಸಿನ ಗುರಿಗಳನ್ನು ಸಾಧಿಸದಿರುವುದು/ಉತ್ತಮಗೊಳಿಸದಿರುವಿಕೆಯನ್ನು ಸೂಚಿಸುತ್ತದೆ. ಅವುಗಳಲ್ಲಿ ಕೆಲವು ಸರ್ಕಾರದ ನಿಯಂತ್ರಣದಲ್ಲಿವೆ ಮತ್ತು ಕೆಲವು ಅದರ ನಿಯಂತ್ರಣಕ್ಕೆ ಮೀರಿವೆ. 2021–22ರಲ್ಲಿ ಹದಿನೈದನೇ ಹಣಕಾಸು ಆಯೋಗ ಮತ್ತು ಆಯವ್ಯಯ ಅಂದಾಜುಗಳ ಮೌಲ್ಯಮಾಪನಕ್ಕೆ ಹೋಲಿಸಿದರೆ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳನ್ನು **ಕೋಷ್ಟಕ–2.12** ಪ್ರಸ್ತುತಪಡಿಸುತ್ತದೆ.

**ಕೋಷ್ಟಕ–2.12: 2021–22ರಲ್ಲಿ ಪ್ರಕ್ಷೇಪಗಳಿಗೆ ಮುಖಾಮುಖಿಯಾಗಿ ತೆರಿಗೆ ಮತ್ತು ತೆರಿಗೆಯೇತರ ಸ್ವೀಕೃತಿಗಳು**

| | 15ನೇ ಹಣಕಾಸು ಆಯೋಗದ ನಿರ್ಧರಣೆ | ಆಯವ್ಯಯ ಅಂದಾಜು | ವಾಸ್ತವ | ವಾಸ್ತವದ ಮೇಲಿನ ವ್ಯತ್ಯಾಸ ಶೇಕಡಾವಾರು | |
|---|---|---|---|---|---|
| | (₹ ಕೋಟಿಗಳಲ್ಲಿ) | | | ಆಯವ್ಯಯ ಅಂದಾಜು | 15ನೇ ಹಣಕಾಸು ಆಯೋಗದ ನಿರ್ಧರಣೆ |
| ಸ್ವಂತ ತೆರಿಗೆ ರಾಜಸ್ವ | 1,04,835 | 1,11,494 | 1,20,739 | 8.29 | 15.17 |
| ತೆರಿಗೆಯೇತರ ರಾಜಸ್ವ | 7,738 | 8,258 | 11,777 | 42.61 | 52.20 |

*ಆಕರ: 15ನೇ ಹಣಕಾಸು ಆಯೋಗದ ವರದಿ ಮತ್ತು ಹಣಕಾಸು ಲೆಕ್ಕಗಳು*

[11] ಇತರೆ ಸಾಲಗಳು ಬ್ಯಾಕ್–ಟು–ಬ್ಯಾಕ್ ಹೊರಗಿನ ಸಾಲಗಳನ್ನು ಒಳಗೊಂಡಿದೆ

ಮೇಲಿನ ಕೋಷ್ಟಕದಿಂದ ನೋಡಿದಂತೆ, ಸ್ವಂತ ತೆರಿಗೆ ಆದಾಯ ಮತ್ತು ತೆರಿಗೆಯೇತರ ಆದಾಯಕ್ಕೆ ಸಂಬಂಧಿಸಿದಂತೆ ಹದಿನೈದನೇ ಹಣಕಾಸು ಆಯೋಗದ ನಿರೀಕ್ಷೆಯು ವಾಸ್ತವಾಂಶಗಳು ಕ್ರಮವಾಗಿ ಶೇಕಡ 8 ಮತ್ತು ಶೇಕಡ 15 ಹಾಗೂ ತೆರಿಗೆಯೇತರ ಆದಾಯದ ಆಯವ್ಯಯ ಪ್ರಕ್ಷೇಪಗಳ ಮತ್ತು ವಾಸ್ತವಾಂಶಗಳ ವ್ಯತ್ಯಾಸವು ಶೇಕಡ 43ರಷ್ಟು ಮತ್ತು ಶೇಕಡ 52ರಷ್ಟು ಅಂದಾಜಿಗಿಂತ ಹೆಚ್ಚಾಗಿದ್ದು, ಇದು ಬಯಸಿದ ಗುರಿಯನ್ನು ಗಣನೀಯವಾಗಿ ಸಾಧಿಸಿರುವುದನ್ನು ಸೂಚಿಸುತ್ತದೆ.

## 2.5 ಸಂಪನ್ಮೂಲಗಳ ಅನ್ವಯ

ಪ್ರಮುಖ ಸಾರ್ವಜನಿಕ ವೆಚ್ಚದ ಹೊಣೆಗಾರಿಕೆಯು ಸರಕಾರದ್ದೇ ಆದ್ದರಿಂದ ಸರ್ಕಾರದ ಮಟ್ಟದಲ್ಲಿ ವೆಚ್ಚದ ಹಂಚಿಕೆಯ ವಿಶ್ಲೇಷಣೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ವೆಚ್ಚವು ಹಣಕಾಸಿನ ಹೊಣೆಗಾರಿಕೆಯ ಶಾಸನಗಳ ಚೌಕಟ್ಟಿನೊಳಗಿರಬೇಕಾಗಿದೆ. ಆದ್ದರಿಂದ, ರಾಜ್ಯ ಮಟ್ಟದಲ್ಲಿ ನಡೆಯುವ ಹಣಕಾಸಿನ ತಿದ್ದುಪಡಿ ಮತ್ತು ಬಲವರ್ಧನೆಯ ಪ್ರಕ್ರಿಯೆಯು ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿಗೆ ಉದ್ದೇಶಿಸಲಾದ ವೆಚ್ಚಗಳನ್ನು ಕಡೆಗಣಿಸಲಾಗಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು.

ವಿವೇಚನಾಶೀಲ ಹಣಕಾಸಿನ ನಿರ್ವಹಣೆಯು ರಾಜಸ್ವ ವೆಚ್ಚಕ್ಕಿಂತಲು ಹೆಚ್ಚು ರಾಜಸ್ವ ಸ್ವೀಕೃತಿಗಳನ್ನು ಸಂಗ್ರಹಿಸಿ ಉಳಿಕೆಯನ್ನು ಸಾಧಿಸುವ ಗುರಿಯನ್ನು ಹೊಂದಿರಬೇಕು. ಸಾಲವಾಗಿ ತಂದ ಹಣವನ್ನು ನೇರವಾಗಿ ಆದಾಯವನ್ನು ಹುಟ್ಟುಹಾಕುವ ಅಥವ ಪರೋಕ್ಷವಾಗಿ ಉತ್ಪಾದನೆಗೆ ಕಾರಣವಾಗುವ ಉದ್ದೇಶಗಳಿಗೆ ಬಳಸುವುದರಿಂದ ತೆರಿಗೆ ಅಥವಾ ತೆರಿಗೆಯೇತರ ಆದಾಯಗಳ ಸೃಷ್ಟಿಯಾಗಿ ಅದನ್ನು ಋಣಸೇವೆ ಮತ್ತು ಸಾಲಗಳ ಮರುಪಾವತಿಗಾಗಿ ಬಳಸಬಹುದು.

### *2.5.1 ವೆಚ್ಚದ ಬೆಳವಣಿಗೆ ಮತ್ತು ಸಂಯೋಜನೆ*

2017–18ರಿಂದ 2021–22ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಒಟ್ಟು ವೆಚ್ಚದ ಮೂಲಭೂತ ಪ್ರಮಿತಿಗಳು, ರಾಜಸ್ವ, ಬಂಡವಾಳ, ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಅದರ ಸಂಯೋಜನೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದೊಂದಿಗೆ ಅವುಗಳ ಹೋಲಿಕೆಯನ್ನು **ಕೋಷ್ಟಕ–2.13**ರಲ್ಲಿ ಒದಗಿಸಲಾಗಿದೆ.

**ಕೋಷ್ಟಕ–2.13: ಒಟ್ಟು ವೆಚ್ಚ – ಪ್ರವೃತ್ತಿಗಳು ಮತ್ತು ಸಂಯೋಜನೆ**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಒಟ್ಟು ವೆಚ್ಚ | 1,78,242 | 2,03,446 | 2,13,857 | 2,24,129 | 2,61,511 |
| ರಾಜಸ್ವ ವೆಚ್ಚ | 1,42,482 | 1,64,300 | 1,74,258 | 1,76,054 | 2,09,428 |
| ಬಂಡವಾಳ ವೆಚ್ಚ | 30,667 | 34,659 | 35,530 | 45,406 | 47,874 |
| ಸಾಲಗಳು ಮತ್ತು ಮುಂಗಡಗಳು | 5,093 | 4,487 | 4,069 | 2,669 | 4,209 |
| ರಾ ಒ ಆಂ ಉ ದ ಶೇಕಡಾವಾರಾಗಿ | | | | | |
| ಒಟ್ಟು ವೆಚ್ಚ/ರಾ ಒ ಆಂ ಉ | 13.37 | 13.78 | 13.24 | 12.95 | 15.19 |
| ರಾಜಸ್ವ ವೆಚ್ಚ/ ರಾ ಒ ಆಂ ಉ | 10.69 | 11.13 | 10.79 | 10.17 | 12.17 |
| ಬಂಡವಾಳ ವೆಚ್ಚ/ ರಾ ಒ ಆಂ ಉ | 2.30 | 2.35 | 2.20 | 2.62 | 2.78 |
| ಸಾಲಗಳು ಮತ್ತು ಮುಂಗಡಗಳು/ ರಾ ಒ ಆಂ ಉ | 0.38 | 0.30 | 0.25 | 0.15 | 0.24 |

*ಆಕರ: ಹಣಕಾಸು ಲೆಕ್ಕಗಳು*

2017–18 ರಿಂದ 2021–22ರ ಅವಧಿಯಲ್ಲಿ ಸರಾಸರಿಯಾಗಿ ಒಟ್ಟು ವೆಚ್ಚದ ಶೇಕಡ 80ರಷ್ಟು ರಾಜಸ್ವ ಲೆಕ್ಕದಲ್ಲಿದೆ. 2021–22ರಲ್ಲಿ ಇದು ಶೇಕಡ 80ರಷ್ಟಿದ್ದು, ಬಂಡವಾಳ ವೆಚ್ಚದ (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಪಾಲು ಶೇಕಡ 20ರಷ್ಟಿತ್ತು. 2017–18 ರಿಂದ 2021–22ರವರೆಗಿನ ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಮತ್ತು ಸಾಲಗಳು ಮತ್ತು ಮುಂಗಡಗಳ ಪಾಲನ್ನು **ನಕ್ಷೆ–2.7**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.7: ಒಟ್ಟು ಖರ್ಚು–ಅದರ ಘಟಕಗಳ ಪಾಲು ಪ್ರವೃತ್ತಿಗಳು**




*ಆಕರ: ಹಣಕಾಸು ಲೆಕ್ಕಗಳು.*

ಸಾಮಾನ್ಯ, ಸಾಮಾಜಿಕ, ಆರ್ಥಿಕ, ಸಾಲಗಳು ಮತ್ತು ಮುಂಗಡಗಳು ಮತ್ತು ಸಹಾಯಧನದ ಅಡಿಯಲ್ಲಿನ ಚಟುವಟಿಕೆಗಳ ಮೂಲಕ ಒಟ್ಟು ವೆಚ್ಚದ ಪ್ರವೃತ್ತಿಗಳನ್ನು **ನಕ್ಷೆ–2.8**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.8: ಒಟ್ಟು ಖರ್ಚು–ಚಟುವಟಿಕೆಗಳ ವೆಚ್ಚಗಳು**




*ಆಕರ: ಹಣಕಾಸು ಲೆಕ್ಕಗಳು.*

ಮೇಲಿನ **ನಕ್ಷೆ–2.8**ರಿಂದ ಸಾಮಾನ್ಯ ಸೇವೆಗಳ ಸಂಬಂಧಿತ ಪಾಲು 2018–19ರಿಂದ ಏರಿಕೆ ಪ್ರವೃತ್ತಿಯಲ್ಲಿದೆ (ಅತ್ಯಲ್ಪ). 2017–18ರಿಂದ 2021–22ರ ಅವಧಿಯಲ್ಲಿ ಇತರ ಘಟಕಗಳ ಸಾಪೇಕ್ಷ ಪಾಲು ಕನಿಷ್ಠ ಅಂತರ ವರ್ಷದ ವ್ಯತ್ಯಾಸಗಳೊಂದಿಗೆ ಸ್ಥಿರತೆಯನ್ನು ಪ್ರದರ್ಶಿಸಿದೆ.

### *2.5.2 ರಾಜಸ್ವ ವೆಚ್ಚ*

ಪ್ರಸ್ತುತ ಮಟ್ಟದ ಸೇವೆಗಳು ಮತ್ತು ಹಿಂದಿನ ಬಾಧ್ಯತೆಯ ಪಾವತಿಯನ್ನು ನಿರ್ವಹಿಸಲು ರಾಜಸ್ವ ವೆಚ್ಚವನ್ನು ಭರಿಸಲಾಗುವುದು.

ರಾಜಸ್ವ ವೆಚ್ಚವು ವೇತನಗಳು ಮತ್ತು ಸಂಬಳಗಳು, ಬಡ್ಡಿ ಪಾವತಿಗಳು, ಪಿಂಚಣಿಗಳು, ಕಾರ್ಯ ನಿರ್ವಹಣೆ ಮತ್ತು ಬಂಡವಾಳ ಕಾಮಗಾರಿಗಳ ನಿರ್ವಹಣೆಗೆ ಖರ್ಚು, ಸಹಾಯಧನಗಳು ಮತ್ತು ಸ್ಥಳೀಯ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಇತರರಿಗೆ ವರ್ಗಾವಣೆ ಮಾಡಲಾದ ವೆಚ್ಚವನ್ನು

ಒಳಗೊಂಡಿರುತ್ತದೆ. ರಾಜಸ್ವ ವೆಚ್ಚವನ್ನು ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಂತಹ ವಿವಿಧ ಕಾರ್ಯ ಪ್ರಧಾನ ವರ್ಗಗಳಾಗಿ ವಿಂಗಡಿಸಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಮೇಲಿನ ವೆಚ್ಚವನ್ನು ಭೌತಿಕ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಸೃಷ್ಟಿಸಲು ಭರಿಸಲಾಗುತ್ತದೆ ಮತ್ತು ಆದ್ದರಿಂದ ಉತ್ಪಾದಕ ವೆಚ್ಚವೆಂದು ಪರಿಗಣಿಸಲಾಗುತ್ತದೆ, ಆದರೆ ಸಾಮಾನ್ಯ ಸೇವೆಗಳು ಮತ್ತು ಋಣ ಸೇವೆಯ ಮೇಲಿನ ವೆಚ್ಚವನ್ನು ಅನುತ್ಪಾದಕವೆಂದು ಪರಿಗಣಿಸಲಾಗುತ್ತದೆ.

ಒಟ್ಟಾರೆ ರಾಜಸ್ವ ವೆಚ್ಚ, ಅದರ ವೃದ್ಧಿಯ ದರ, ಒಟ್ಟು ವೆಚ್ಚಕ್ಕೆ ಅದರ ಅನುಪಾತ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ರಾಜಸ್ವ ಸ್ವೀಕೃತಿಗಳ ಅನುಪಾತವನ್ನು **ಕೋಷ್ಟಕ–2.14**ರಲ್ಲಿ ಸೂಚಿಸಲಾಗಿದೆ. ರಾಜಸ್ವ ವೆಚ್ಚದ ಪ್ಲವನತೆಯೊಂದಿಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ ಪ್ರಪ್ರಥಮ ಬಾರಿಗೆ (2021–22ರಲ್ಲಿ) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಋಣಾತ್ಮಕ ಬೆಳವಣಿಗೆಯಿಂದಾಗಿ ಋಣಾತ್ಮಕವಾಗಿದೆ. 2021–22ಕ್ಕೆ ಸಂಬಂಧಿಸಿದ ರಾಜಸ್ವ ವೆಚ್ಚದ ವಲಯ ಹಂಚಿಕೆಯನ್ನು **ನಕ್ಷೆ–2.9**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.14: ಆದಾಯವೆಚ್ಚ – ಮೂಲ ಪ್ರಮಿತಿಗಳು**

(₹ ಕೋಟಿಗಳಲ್ಲಿ)

| ಪ್ರಮಿತಿಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಒಟ್ಟು ವೆಚ್ಚ | 1,78,242 | 2,03,446 | 2,13,857 | 2,24,129 | 2,61,511 |
| ರಾಜಸ್ವ ವೆಚ್ಚ | 1,42,482 | 1,64,300 | 1,74,258 | 1,76,054 | 2,09,428 |
| ರಾಜಸ್ವ ವೆಚ್ಚದ ವೃದ್ಧಿಯ ದರ (ಶೇಕಡ) | 8.01 | 15.31 | 6.06 | 1.03 | 18.96 |
| ಒಟ್ಟು ವೆಚ್ಚಕ್ಕೆ ಶೇಕಡಾವಾರಾಗಿ ರಾಜಸ್ವ ವೆಚ್ಚ | 79.94 | 80.76 | 81.48 | 78.55 | 80.08 |
| ರಾಜಸ್ವ ವೆಚ್ಚ/ರಾಒಆಉ (ಶೇಕಡ) | 10.69 | 11.13 | 10.79 | 10.17 | 12.17 |
| ರಾಜಸ್ವ ಸ್ವೀಕೃತಿಗಳ ಶೇಕಡಾವಾರಾಗಿ ರಾಜಸ್ವ ವೆಚ್ಚ | 96.93 | 99.59 | 99.32 | 112.34 | 106.98 |
| ರಾಜಸ್ವ ವೆಚ್ಚದ ಪ್ಲವನತೆ | | | | | |
| ರಾಒಆಉ (ಅನುಪಾತ) | 0.77 | 1.43 | 0.64 | 0.14 | (–)33.86 |
| ರಾಜಸ್ವ ಸ್ವೀಕೃತಿಗಳು (ಅನುಪಾತ) | 0.77 | 1.25 | 0.96 | 0.10 | 0.76 |

*ಆಕರ: ಸಂಬಂಧಿತ ವರ್ಷಗಳ ಹಣಕಾಸು ಲೆಕ್ಕಗಳು*

ರಾಜಸ್ವ ವೆಚ್ಚವು 2017–18ರಲ್ಲಿದ್ದ ₹1,42,482 ಕೋಟಿಗಳಿಂದ 2021–22ರಲ್ಲಿ ₹2,09,428 ಕೋಟಿಗಳಿಗೆ ಏರಿಕೆಯಾಗಿದ್ದು, ಶೇಕಡ. 50ರಷ್ಟು ಹೆಚ್ಚಳವಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಡ್ಡಿಪಾವತಿ (ಶೇಕಡ 12.13), ಸಹಾಯಧನ (ಶೇಕಡ 53.10), ಪಿಂಚಣಿ (ಶೇಕಡ 9.14), ವೇತನ (ಶೇಕಡ 15.39) ಇತ್ಯಾದಿಗಳ ಹೆಚ್ಚಳದಿಂದಾಗಿ ಶೇಕಡ 19ರಷ್ಟು ಅಧಿಕವಾಗಿದೆ.

**ನಕ್ಷೆ–2.9: ರಾಜಸ್ವ ವೆಚ್ಚದ ವಿಭಾಗವಾರು ವಿತರಣೆ**




*ಆಕರ: ಹಣಕಾಸು ಲೆಕ್ಕಗಳು .*

2021–22ರಲ್ಲಿ, ರಾಜಸ್ವ ವೆಚ್ಚವು, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರಿನಂತೆ ಎರಡು ಅಂಶಗಳಿಂದಾಗಿ ಹೆಚ್ಚಳಗೊಂಡಿದೆ, ಅಂದರೆ, ರಾಜಸ್ವ ವೆಚ್ಚದ ಬೆಳವಣಿಗೆ ದರದ ಹೆಚ್ಚಳ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಇಳಿಕೆ. ಸ್ಪಷ್ಟವಾಗಿ ಹೇಳುವುದಾದರೆ ಹಿಂದಿನ ವರ್ಷಕ್ಕಿಂತ ರಾಜಸ್ವ ವೆಚ್ಚದಲ್ಲಿ ₹33,374 ಕೋಟಿಗಳಷ್ಟು (ಶೇಕಡ 18.96) ಹೆಚ್ಚಳವಾಗಿದೆ. ಮಧ್ಯಮಾವಧಿ ವಿತ್ತೀಯ ಯೋಜನೆಯ (2019–23) ಅಂದಾಜಿಗೆ (₹2,00,713 ಕೋಟಿಗಳು) ಹೋಲಿಸಿದರೆ ರಾಜಸ್ವ ವೆಚ್ಚವು ₹8,715 ಕೋಟಿಗಳಷ್ಟು ಹೆಚ್ಚಾಗಿದೆ. 2021–22ರಲ್ಲಿ, ರಾಜಸ್ವ ವೆಚ್ಚಕ್ಕೆ ಹೋಲಿಸಿದರೆ ರಾಜಸ್ವ ಸ್ವೀಕೃತಿಯ ಬೆಳವಣಿಗೆ ದರದ ಹೆಚ್ಚಳದಿಂದಾಗಿ ರಾಜಸ್ವ ವೆಚ್ಚ/ರಾಜಸ್ವ ಸ್ವೀಕೃತಿಗಳ ದರವು 2020–21ರಲ್ಲಿನ 112.34 ರಿಂದ 106.98ಕ್ಕೆ ಇಳಿಕೆಯಾಗಿದೆ.

### 2.5.2.1 ರಾಜಸ್ವ ವೆಚ್ಚದಲ್ಲಿ ಪ್ರಮುಖ ಬದಲಾವಣೆಗಳು

ಪ್ರಸ್ತುತ ವರ್ಷ ಮತ್ತು ಹಿಂದಿನ ವರ್ಷದಲ್ಲಿ ರಾಜ್ಯದ ಆದಾಯ ವೆಚ್ಚಗಳಿಗೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿನ ಗಮನಾರ್ಹ ವ್ಯತ್ಯಾಸಗಳನ್ನು **ಕೋಷ್ಟಕ–2.15** ವಿವರಿಸುತ್ತದೆ.

**ಕೋಷ್ಟಕ–2.15: 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ರಾಜಸ್ವ ವೆಚ್ಚದಲ್ಲಿನ ವ್ಯತ್ಯಾಸ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕ ಶೀರ್ಷಿಕೆ | 2020–21 | 2021–22 | ಏರಿಕೆ (+)/ ಇಳಿಕೆ (–) | ಶೇಕಡಾವಾರು |
|---|---|---|---|---|
| 2202–ಸಾಮಾನ್ಯ ಶಿಕ್ಷಣ | 22,907.10 | 27,600.96 | 4,693.86 | 20.49 |
| 2408–ಆಹಾರ, ದಾಸ್ತಾನು ಮತ್ತು ಉಗ್ರಾಣ | 3,162.28 | 6,718.68 | 3,556.40 | 112.46 |
| 2215–ನೀರು ಸರಬರಾಜು ಮತ್ತು ನೈರ್ಮಲ್ಯ | 1,495.56 | 4,821.96 | 3,326.40 | 222.42 |
| 2801–ವಿದ್ಯುತ್ | 14,276.92 | 17,444.93 | 3,168.01 | 22.19 |
| 2049–ಬಡ್ಡಿ ಪಾವತಿಗಳು | 21,920.39 | 24,983.61 | 3,063.22 | 13.97 |
| 2515–ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | 6,970.56 | 5,767.03 | (–)1,203.53 | (–)17.27 |
| 2041–ವಾಹನಗಳ ಮೇಲೆ ತೆರಿಗೆ | 731.90 | 264.89 | (–)467.00 | (–)63.81 |
| 2401–ಸಸ್ಯ ಸಂಗೋಪನೆ | 6,606.43 | 6,182.86 | (–)423.57 | (–)6.41 |
| 2425–ಸಹಕಾರ | 2,215.60 | 1,948.05 | (–)267.55 | (–)12.08 |
| 2701– ಮಧ್ಯಮ ನೀರಾವರಿ | 1,402.62 | 1,215.72 | (–)186.90 | (–)13.33 |

*ಆಕರ: ಹಣಕಾಸು ಲೆಕ್ಕಗಳು*

ಹಿಂದಿನ ವರ್ಷಕ್ಕೆ ಹೋಲಿಸಿದರೆ, ರಾಜಸ್ವ ವೆಚ್ಚದ ಶೇಕಡಾವಾರು ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು, ವಾಹನಗಳ ಮೇಲಿನ ತೆರಿಗೆ, ಸಸ್ಯ ಸಂಗೋಪನೆ, ಸಹಕಾರ ಮತ್ತು ಮಧ್ಯಮ ನೀರಾವರಿ ಅಡಿಯಲ್ಲಿ ಇಳಿಕೆ ಕಂಡರೆ, ಅದು ಸಾಮಾನ್ಯ ಶಿಕ್ಷಣ, ಆಹಾರ, ದಾಸ್ತಾನು ಮತ್ತು ಉಗ್ರಾಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಿದ್ಯುತ್ ಮತ್ತು ಬಡ್ಡಿ ಪಾವತಿಗಳ ಅಡಿಯಲ್ಲಿ ಹೆಚ್ಚಿನ ಏರಿಕೆ ಕಂಡಿತು.

### 2.5.2.2 ಉದ್ದೇಶ ಶೀರ್ಷಿಕೆ ಅಡಿಯಲ್ಲಿನ ವೆಚ್ಚ

ಹಣಕಾಸು ಲೆಕ್ಕಗಳು ಒಳಶೀರ್ಷಿಕೆ ಹಂತದವರೆಗಿನ ವಹಿವಾಟುಗಳನ್ನು ಮಾತ್ರ ತೋರಿಸುತ್ತವೆ. ಆದ್ದರಿಂದ, ಪಟ್ಟಿ ಮಾಡಲಾದ 117 ಉದ್ದೇಶ ಶೀರ್ಷಿಕೆಗಳಲ್ಲಿ, 22 ಉದ್ದೇಶ ಶೀರ್ಷಿಕೆಗಳಲ್ಲಿ ವಾಸ್ತವಿಕ ಬಾಬ್ತುಗಳ ಮೇಲೆ ಮಾಡಿದ ವೆಚ್ಚದ (₹100 ಕೋಟಿಗಿಂತ ಹೆಚ್ಚು) ಆಯವ್ಯಯ ಹಂಚಿಕೆ ಮತ್ತು ವೆಚ್ಚದ ವ್ಯಾಪ್ತಿಯನ್ನು **ಕೋಷ್ಟಕ–2.16**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.16: ಉದ್ದೇಶ ಶೀರ್ಷಿಕೆವಾರು ಆಯವ್ಯಯ ಅನುಮೋದನೆಗೆ ಪ್ರತಿಯಾಗಿ ವೆಚ್ಚ**

(₹ ಕೋಟಿಗಳಲ್ಲಿ)

| ಶೀರ್ಷಿಕೆ | ಆಯವ್ಯಯ | ವೆಚ್ಚ | ಬಳಕೆ ಶೇಕಡಾವಾರು |
|---|---|---|---|
| ವೇತನಗಳು* | 17,789.03 | 17,058.10 | 95.89 |
| ದಿನಗೂಲಿಗಳು | 188.47 | 174.31 | 92.49 |
| ಬಂಡವಾಳ ಆಸ್ತಿಗಳ ರಚನೆಗೆ ಅನುದಾನಗಳು | 1,495.40 | 1,449.22 | 96.91 |
| ಗುತ್ತಿಗೆ/ಹೊರಗುತ್ತಿಗೆ | 1,190.18 | 1,155.35 | 97.07 |
| ಸಾಮಾನ್ಯ ವೆಚ್ಚಗಳು | 1,266.66 | 1,237.59 | 97.70 |
| ಇತರೆ ವೆಚ್ಚಗಳು | 14,078.98 | 13,326.63 | 94.66 |
| ಕಟ್ಟಡ ವೆಚ್ಚಗಳು | 350.73 | 344.72 | 98.29 |
| ಸಹಾಯಾನುದಾನ–ವೇತನಗಳು | 5,013.59 | 4,919.17 | 98.12 |
| ಸಹಾಯಾನುದಾನ–ಸಾಮಾನ್ಯ | 3,187.42 | 3,185.19 | 99.93 |
| ಸಹಾಯಧನ | 28,219.84 | 28,218.94 | 100.00 |
| ವಿದ್ಯಾರ್ಥಿವೇತನಗಳು ಮತ್ತು ಪ್ರೋತ್ಸಾಹಕಗಳು | 621.54 | 617.44 | 99.34 |
| ಬಂಡವಾಳ ವೆಚ್ಚಗಳು | 2,481.49 | 2,840.59 | 114.47 |
| ಭಾರಿ ಕಾಮಗಾರಿಗಳು | 3,132.13 | 3,127.67 | 99.86 |
| ಸಾರಿಗೆ ವೆಚ್ಚಗಳು | 446.25 | 442.01 | 99.05 |
| ನಿರ್ವಹಣಾ ವೆಚ್ಚಗಳು | 4,087.07 | 4,076.85 | 99.75 |
| ಸರಕುಗಳು ಮತ್ತು ಸರಬರಾಜು | 430.98 | 358.94 | 83.28 |
| ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 21,099.91 | 21,099.35 | 100.00 |

*ಆಕರ : ಹಣಕಾಸು ಲೆಕ್ಕಗಳು*

** ಉದ್ದೇಶ ಶೀರ್ಷಿಕೆ ಕ್ರೋಢೀಕೃತ ಸಂಬಳಗಳು ಅಧಿಕಾರಿಗಳ ವೇತನ, ಸಿಬ್ಬಂದಿ ವೇತನ, ಮಧ್ಯಂತರ ಪರಿಹಾರ, ತುಟ್ಟಿಭತ್ಯೆ, ಇತರ ಭತ್ಯೆಗಳು, ವೈದ್ಯಕೀಯ ಭತ್ಯೆ ಮತ್ತು ವೈದ್ಯಕೀಯ ವೆಚ್ಚಗಳ ಮರುಪಾವತಿಯನ್ನು ಒಳಗೊಂಡಿರುತ್ತದೆ.*

ಒಟ್ಟು ₹2,93,185.31 ಕೋಟಿಗಳ ಆಯವ್ಯಯ ಅವಕಾಶದಲ್ಲಿ 2021–22ರಲ್ಲಿ ವಿವಿಧ ಉದ್ದೇಶ ಶೀರ್ಷಿಕೆಗಳ ಮೇಲಿನ ವಾಸ್ತವಿಕ ವೆಚ್ಚವು ₹2,82,335.70 ಕೋಟಿಗಳಾಗಿವೆ (ಶೇಕಡ 96.30). ಮೇಲೆ ತಿಳಿಸಿದ 17 ಉದ್ದೇಶ ಶೀರ್ಷಿಕೆಗಳಲ್ಲಿ (ವೇತನಗಳನ್ನೂ ಒಳಗೊಂಡು), ಒಂದು ಉದ್ದೇಶ ಶೀರ್ಷಿಕೆ ತನ್ನ ಆಯವ್ಯಯ ಹಂಚಿಕೆಯನ್ನು ಮೀರಿದ್ದರೆ, 14 ಉದ್ದೇಶ ಶೀರ್ಷಿಕೆಗಳು ತಮ್ಮ ಹಂಚಿಕೆಯ 80 ರಿಂದ 90 ಪ್ರತಿಶತಕ್ಕಿಂತ ಹೆಚ್ಚಿನದನ್ನು ಬಳಸಿಕೊಂಡಿವೆ. ಉಳಿದ ಎರಡು ಶೀರ್ಷಿಕೆಗಳು– ಸಹಾಯಧನ ಮತ್ತು ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು ಶೇಕಡ 100ರಷ್ಟು ಬಳಸಿಕೊಂಡಿವೆ.

### 2.5.2.3 ಬದ್ಧ ವೆಚ್ಚಗಳು

ಬಹುಪಾಲು ರಾಜಸ್ವ ವೆಚ್ಚಗಳು ಬದ್ಧ ವೆಚ್ಚಗಳ ಸ್ವರೂಪದಲ್ಲಿದೆ. ಮಧ್ಯಂತರ ವಿತ್ತೀಯ ಯೋಜನೆ 2022–26ರಲ್ಲಿ ಬದ್ಧ ವೆಚ್ಚವನ್ನು ಯೋಜನಾ ಆಧಾರಿತವಲ್ಲದ ಬದ್ಧ ವೆಚ್ಚ ಮತ್ತು ಯೋಜನಾ ಆಧಾರಿತ ಬದ್ಧ ವೆಚ್ಚ

ಎಂದು ವರ್ಗೀಕರಿಸಲಾಗಿದೆ. ಯೋಜನಾ ಆಧಾರಿತ ಬದ್ಧ ವೆಚ್ಚವು ಸಹಾಯಧನ, ಸಾಮಜಿಕ ಭದ್ರತೆ ಪಿಂಚಣಿ, ಆರ್ಥಿಕ ಸಹಾಯ, ಸಹಾಯಾನುದಾನಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಇತ್ಯಾದಿಗಳನ್ನು ಒಳಗೊಂಡಿದೆ. ಮತ್ತೊಂದೆಡೆ, ಯೋಜನಾ ಆಧಾರಿತವಲ್ಲದ  ಬದ್ಧ ವೆಚ್ಚಗಳು ವೇತನಗಳು, ಬಡ್ಡಿ ಪಾವತಿಗಳು, ಪಿಂಚಣಿ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಒಳಗೊಂಡಿದೆ. 2017–18ರಿಂದ 2021–22ರ ಅವಧಿಯ ಈ ಎಲ್ಲಾ ಘಟಕಗಳ ವೆಚ್ಚವನ್ನು **ಕೋಷ್ಟಕ–2.17** ಮತ್ತು **ನಕ್ಷೆ–2.10**ರಲ್ಲಿ ಚಿತ್ರಿಸಲಾಗಿದೆ. ಬದ್ಧ ವೆಚ್ಚದಲ್ಲಿನ ಏರುಮುಖ ಪ್ರವೃತ್ತಿಯು ವೆಚ್ಚಗಳಿಗೆ ಆದ್ಯತೆ ನೀಡುವಲ್ಲಿ ಮತ್ತು ಸಾಮಾಜಿಕ ಮತ್ತು ಆರ್ಥಿಕ ಮೂಲ ಸೌಕರ್ಯಗಳ ಬೆಳೆಯುತ್ತಿರುವ ಅಗತ್ಯಗಳನ್ನು ಪೂರೈಸಲು ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸುವಲ್ಲಿ ರಾಜ್ಯದ ಕುಶಲತೆಯ ಮೇಲೆ ಪರಿಣಾಮ ಬೀರುತ್ತದೆ.

ಆರ್ಥಿಕ ನಿರ್ವಹಣಾ ಪರಿಶೀಲನಾ ಸಮಿತಿಯು (ಎಫ್ಎಮ್ಆರ್‌ಸಿ) ಬದ್ಧ ವೆಚ್ಚದಲ್ಲಿ ಹೆಚ್ಚಳ, ಅದರಿಂದಾಗಿ ಅಭಿವೃದ್ಧಿಶೀಲ ವೆಚ್ಚಗಳಿಗೆ ನಿಧಿಗಳನ್ನು ವಿಚಲನಗೊಳಿಸಲು ಕಡಿಮೆ ಸಾಧ್ಯತೆಯನ್ನೂ ಗಮನಿಸಿದೆ. ಆದ್ದರಿಂದ, ಅದು ಕರ್ನಾಟಕ ಆಡಳಿತಾತ್ಮಕ ಸುಧಾರಣಾ ಆಯೋಗ–2[12] (ಕೆಎಆರ್‌ಸಿ–2) ಸರ್ಕಾರಕ್ಕೆ ಸಲ್ಲಿಸಿರುವ ತನ್ನ ವರದಿಗಳ ಶಿಫಾರಸುಗಳನ್ನು ಅಂದರೆ, ಗ್ರಾಮ ಪಂಚಾಯತಿಗಳು, ಪುರಸಭೆಗಳು, ನಗರ ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಇತ್ಯಾದಿಗಳ ಆದಾಯ ಸುಧಾರಿಸುವುದು, 'ವ್ಯರ್ಥ ವೆಚ್ಚ ಕಡಿತಗೊಳಿಸುವ ಕಾರ್ಯಪಡೆ' (ಕಟ್ ವೇಸ್ಟ್ ಟಾಸ್ಕ್ ಫೋರ್ಸ್) ಸ್ಥಾಪಿಸಿ ಸರ್ಕಾರಿ ಸಂಪನ್ಮೂಲಗಳ ವ್ಯರ್ಥ ಬಳಕೆಯನ್ನು ತಪ್ಪಿಸುವುದು, ವಿವಿಧ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅರ್ಹ ಫಲಾನುಭವಿಗಳನ್ನು ಗುರುತಿಸಲು ವಿವಿಧ ಇಲಾಖೆಗಳಲ್ಲಿ ದತ್ತಾಂಶ ಸಂಗ್ರಹ ನಿರ್ವಹಿಸುವುದು ಇತ್ಯಾದಿ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಮೂಲಕ ವೆಚ್ಚವನ್ನು ತರ್ಕಬದ್ಧಗೊಳಿಸುವಂತೆ ಸಲಹೆ ನೀಡಿದೆ.

**ಕೋಷ್ಟಕ–2.17: ಬದ್ಧ ವೆಚ್ಚದ ಅಂಗಗಳು**

(₹ ಕೋಟಿಗಳಲ್ಲಿ)

| ಘಟಕಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ವೇತನಗಳು | 10,546 | 13,315 | 14,561 | 14,783 | 17,058 |
| ಪಂಚಾಯತ್ ರಾಜ್ ಸಂಸ್ಥೆಗಳ ವೇತನಗಳು (ಅನುದಾನಗಳು) | 12,412 | 14,709 | 16,960 | 17,250 | 18,502 |
| ಬಡ್ಡಿ ಪಾವತಿಗಳು# | 14,973 | 16,614 | 19,903 | 23,433 | 26,276 |
| ಪಿಂಚಣಿಗಳು | 11,684 | 15,109 | 18,404 | 18,936 | 20,666 |
| ಸಹಾಯಧನಗಳು@ | 14,148 | 15,400 | 17,534 | 18,432 | 28,219 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 11,812 | 24,888 | 19,023 | 18,312 | 16,916 |
| ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ* | 25,131 | 26,720 | 27,514 | 26,537 | 27,949 |
| ಸಾಮಾಜಿಕ ಭದ್ರತೆ ಪಿಂಚಣಿಗಳು | 4,055 | 5,460 | 7,243 | 7,603 | 7,908 |
| ಆಡಳಿತಾತ್ಮಕ ವೆಚ್ಚಗಳು | 2,404 | 2,136 | 2,467 | 2,610 | 2,530 |
| ದಿನಗೂಲಿಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ | 567 | 714 | 923 | 1,080 | 1,330 |
| **ಒಟ್ಟು** | **1,07,732** | **1,35,065** | **1,44,532** | **1,48,978** | **1,67,354** |
| ರಾಜಸ್ವ ಸ್ವೀಕೃತಿಗಳ ಶೇಕಡಾವಾರಾಗಿ | | | | | |
| ವೇತನಗಳು | 7.17 | 8.07 | 8.30 | 9.43 | 8.71 |
| ಪಂಚಾಯತ್ ರಾಜ್ ಸಂಸ್ಥೆಗಳ ವೇತನಗಳು (ಅನುದಾನಗಳು) | 8.44 | 8.92 | 9.67 | 11.01 | 9.45 |

[12] ಇಲಾಖೆಗಳಲ್ಲಿನ ಅನಗತ್ಯ ಪದವೃಂದ/ಸಿಬ್ಬಂದಿಗಳನ್ನು ಗುರುತಿಸಲು ಮತ್ತು ತಂತ್ರಜ್ಞಾನದ ಬಳಕೆಯಿಂದಾಗಿ ಇಲಾಖೆಗಳನ್ನು ವಿಲೀನಗೊಳಿಸುವ ಸಾಧ್ಯತೆಯ ಎಲ್ಲಾ ಹಂತಗಳಲ್ಲಿ ಇಲಾಖೆಯನ್ನು ನಿರ್ಬಂಧಿಸಲು ಮತ್ತು ಸಿಬ್ಬಂದಿ ಬಲವನ್ನು ತರ್ಕಬದ್ಧಗೊಳಿಸಲು ಆವರ್ತಕ ಶಿಫಾರಸುಗಳಿಗಾಗಿ ಕರ್ನಾಟಕ ಆಡಳಿತಾತ್ಮಕ ಸುಧಾರಣಾ ಆಯೋಗ–2ಅನ್ನು ಸ್ಥಾಪಿಸಲಾಯಿತು.

| ಘಟಕಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಬಡ್ಡಿ ಪಾವತಿಗಳು# | 10.18 | 10.07 | 11.34 | 14.95 | 13.42 |
| ಪಿಂಚಣಿಗಳು | 7.95 | 9.16 | 10.49 | 12.08 | 10.56 |
| ಸಹಾಯಧನಗಳು@ | 9.62 | 9.33 | 9.99 | 11.76 | 14.41 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 8.04 | 15.08 | 10.84 | 11.68 | 8.64 |
| ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ* | 17.10 | 16.20 | 15.68 | 16.93 | 14.28 |
| ಸಾಮಾಜಿಕ ಭದ್ರತೆ ಪಿಂಚಣಿ | 2.76 | 3.31 | 4.13 | 4.85 | 4.04 |
| ಆಡಳಿತಾತ್ಮಕ ವೆಚ್ಚಗಳು | 1.64 | 1.29 | 1.41 | 1.67 | 1.29 |
| ದಿನಗೂಲಿಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ | 0.39 | 0.43 | 0.53 | 0.69 | 0.68 |
| ಒಟ್ಟು | 73.29 | 81.86 | 82.38 | 95.05 | 85.48 |
| ರಾಜಸ್ವ ವೆಚ್ಚದ ಶೇಕಡಾವಾರಾಗಿ | | | | | |
| ವೇತನಗಳು | 7.40 | 8.10 | 8.36 | 8.40 | 8.15 |
| ಪಂಚಾಯತ್ ರಾಜ್ ಸಂಸ್ಥೆಗಳ ವೇತನಗಳು (ಅನುದಾನಗಳು) | 8.71 | 8.96 | 9.73 | 9.80 | 8.83 |
| ಬಡ್ಡಿ ಪಾವತಿಗಳು# | 10.51 | 10.11 | 11.42 | 13.31 | 12.55 |
| ಪಿಂಚಣಿಗಳು | 8.20 | 9.20 | 10.56 | 10.76 | 9.87 |
| ಸಹಾಯಧನಗಳು@ | 9.93 | 9.37 | 10.06 | 10.47 | 13.47 |
| ಸಹಾಯಾನುದಾನ ಮತ್ತು ಹಣಕಾಸು ನೆರವು | 8.29 | 15.15 | 10.92 | 10.40 | 8.08 |
| ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ* | 17.64 | 16.26 | 15.79 | 15.07 | 13.35 |
| ಸಾಮಾಜಿಕ ಭದ್ರತೆ ಪಿಂಚಣಿ | 2.84 | 3.32 | 4.16 | 4.32 | 3.78 |
| ಆಡಳಿತಾತ್ಮಕ ವೆಚ್ಚಗಳು | 1.69 | 1.30 | 1.41 | 1.48 | 1.21 |
| ದಿನಗೂಲಿಗಳು ಮತ್ತು ಗುತ್ತಿಗೆ/ಹೊರಗುತ್ತಿಗೆ ವೇತನಗಳು | 0.40 | 0.43 | 0.53 | 0.61 | 0.64 |
| ಒಟ್ಟು | 75.61 | 82.20 | 82.94 | 84.62 | 79.93 |

*ಆಕರ: ಹಣಕಾಸು ಲೆಕ್ಕಗಳು*

# ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿಯನ್ನು ಒಳಗೊಂಡಿರುತ್ತದೆ.

@ ಹಣಕಾಸಿನ ಸಹಾಯದ ರೂಪದಲ್ಲಿ ಸಹಾಯಧನಗಳನ್ನು ಹೊರತುಪಡಿಸುತ್ತದೆ

* ಪಂಚಾಯತ್ ರಾಜ್ ಸಂಸ್ಥೆಗಳ ಸಂಬಳೇತರ ಬಾಬ್ತುಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಇತರ ವೆಚ್ಚಗಳ ಬಾಬ್ತುಗಳನ್ನು ಒಳಗೊಂಡಿದೆ.

**ನಕ್ಷೆ–2.10: ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚದ ಪಾಲು**




*ಆಕರ: ಹಣಕಾಸು ಲೆಕ್ಕಗಳು*

ಮೇಲಿನವುಗಳಿಂದ ನೋಡಬಹುದಾದಂತೆ, 2017–18ರಿಂದ 2021–22ರ ಅವಧಿಯಲ್ಲಿ ಬದ್ಧ ವೆಚ್ಚವು ರಾಜಸ್ವ ವೆಚ್ಚದ ಶೇಕಡ 76ರಿಂದ ಶೇಕಡ 85ರ ನಡುವೆ ಇದ್ದಿತು. 2017–18ರಿಂದ 2021–22ರಲ್ಲಿ ಬದ್ಧವಲ್ಲದ ವೆಚ್ಚವು ಶೇಕಡ 16 ಮತ್ತು 25ರ ನಡುವೆ ಇತ್ತು. 2021–22ರಲ್ಲಿ ಇತರ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಗೆ ಲಭ್ಯವಿರುವ ರಾಜಸ್ವ ವೆಚ್ಚವು ಶೇಕಡ 20 ಮತ್ತು ಒಟ್ಟು ವೆಚ್ಚದ ಶೇಕಡ 16ರಷ್ಟಿತ್ತು.

### 2.5.2.4 ವೇತನಗಳು ಮತ್ತು ಮಜೂರಿಗಳು

ವೇತನದ ಮೇಲಿನ ವೆಚ್ಚವು 2017–18ರಲ್ಲಿದ್ದ ₹22,958 ಕೋಟಿಗಳಿಂದ 2021–22ರಲ್ಲಿ ₹35,560 ಕೋಟಿಗಳಿಗೆ ಏರಿಕೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 11ರಷ್ಟು ಅಧಿಕವಾಗಿದೆ. ಇದು 2021–22ರಲ್ಲಿ ರಾಜಸ್ವ ವೆಚ್ಚದ ಶೇಕಡ 17ರಷ್ಟಿದೆ. ಇದು ಪಂಚಾಯತ್ ರಾಜ್ ಸಂಸ್ಥೆಗಳ ವೇತನವನ್ನು ಒಳಗೊಂಡಿತ್ತು, ಆದರೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ವೇತನಗಳನ್ನು ಒಳಗೊಂಡಿರುವುದಿಲ್ಲ. ಹೀಗೆ, ವೇತನಗಳ ಮೇಲಿನ ವೆಚ್ಚವನ್ನು ಕಡಿಮೆ ತೋರಿಸಿದಂತಾಗಿದೆ. 2021–22ರಲ್ಲಿ, ದೈನಂದಿನ ವೇತನ ಮತ್ತು ಗುತ್ತಿಗೆ/ಹೊರಗುತ್ತಿಗೆ ನೌಕರರ ಮೇಲಿನ ವೆಚ್ಚವು ₹1,329.66 ಕೋಟಿಯಷ್ಟಿತ್ತು. ಇದು ಹಿಂದಿನ ವರ್ಷಕ್ಕಿಂತ ₹249.89 ಕೋಟಿಯಷ್ಟು ಹೆಚ್ಚಾಗಿದೆ.

31 ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಉತ್ತರವಾಗಿ, ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ನಿಧಿಗಳು ಅನುದಾನದ ರೂಪದಲ್ಲಿರುತ್ತವೆ ಮತ್ತು ಹಣಕಾಸು ಲೆಕ್ಕಗಳು ಒಳಶೀರ್ಷಿಕೆ ವೆಚ್ಚವನ್ನು ಮಾತ್ರ ತೋರಿಸುವುದರಿಂದ ನಗರ ಸ್ಥಳೀಯ ಸಂಸ್ಥೆಗಳ ಸಂಬಳವನ್ನು ಪ್ರತ್ಯೇಕವಾಗಿ ಕಾಣಿಸಲಾಗುವುದಿಲ್ಲ ಎಂದು ಆರ್ಥಿಕ ಇಲಾಖೆ ಉತ್ತರಿಸಿತು (ಡಿಸೆಂಬರ್ 2021). 2022–23ರ ಹಣಕಾಸು ವರ್ಷದಿಂದ ನಗರ ಸ್ಥಳೀಯ ಸಂಸ್ಥೆಗಳ ವೇತನ ವೆಚ್ಚವನ್ನು ತೋರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಹೇಳಿತು.

### 2.5.2.5 ಪಿಂಚಣಿಗಳು

2021–22ರಲ್ಲಿ ಪಿಂಚಣಿಗಳ ಮೇಲಿನ ವೆಚ್ಚವು ₹20,666 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕಿಂತ ವೆಚ್ಚದಲ್ಲಿ ₹1,730 ಕೋಟಿಗಳ ಅಲ್ಪ ಹೆಚ್ಚಳವಾಗಿದೆ.

- **ಹೊಸ ಪಿಂಚಣಿ ವ್ಯವಸ್ಥೆ**

01 ಏಪ್ರಿಲ್ 2006ರಂದು ಅಥವಾ ನಂತರ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ಎಲ್ಲಾ ಉದ್ಯೋಗಿಗಳಿಗೆ ನಿರ್ಧಾರಿತ ವಂತಿಗೆ ಪಿಂಚಣಿ ಯೋಜನೆ (ಎನ್‌ಪಿಎಸ್) ಎಂಬ ಹೆಸರಿನ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದ್ದು 01 ಏಪ್ರಿಲ್ 2010ರಿಂದ ಸಂಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿದೆ. ಯೋಜನೆಯನ್ನು ಕಾರ್ಯಗತಗೊಳಿಸಲು ಖಜಾನೆ ನಿರ್ದೇಶನಾಲಯದಲ್ಲಿ ಮೀಸಲಾದ ಹೊಸ ಪಿಂಚಣಿ ವ್ಯವಸ್ಥೆ ಕೋಶವನ್ನು ರಚಿಸಲಾಗಿದೆ. ರಾಜ್ಯ ಸರ್ಕಾರವು ಪಿಂಚಣಿ ನಿಧಿ ನಿಯಂತ್ರಣ ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ವಿನ್ಯಾಸಗೊಳಿಸಿದ ಹೊಸ ಪಿಂಚಣಿ ವ್ಯವಸ್ಥೆ ಶೈಲಿಯನ್ನು ಅಳವಡಿಸಿಕೊಂಡಿದೆ ಮತ್ತು ಹೊಸ ಪಿಂಚಣಿ ವ್ಯವಸ್ಥೆಗಾಗಿ ರಾಷ್ಟ್ರೀಯ ಭದ್ರತೆಗಳ ನ್ಯಾಸ ನಿಯಮಿತ (ಎನ್‌ಎಸ್‌ಡಿಎಲ್) ಸಂಸ್ಥೆಯನ್ನು ಕೇಂದ್ರ ದಾಖಲೆ ಸಂರಕ್ಷಣಾ ಏಜೆನ್ಸಿಯಾಗಿ ನೇಮಿಸಿದೆ. ಆಕ್ಸಿಸ್ ಬ್ಯಾಂಕ್ ನಿಧಿಗಳ ಕಾರ್ಯಾಚರಣೆಯ ಉಸ್ತುವಾರಿ ಟ್ರಸ್ಟಿ ಬ್ಯಾಂಕ್ ಆಗಿದೆ.

ಖಜಾನೆಗಳ ಆಯುಕ್ತರು ಒದಗಿಸಿದ (ಆಗಸ್ಟ್ 2022) ಯೋಜನೆ ಮತ್ತು ರಾಜ್ಯ ಸರ್ಕಾರ ಮತ್ತು ನೌಕರರು ನೀಡಿದ ವಂತಿಗೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:

- ಸರ್ಕಾರಿ ವಲಯ ಮತ್ತು ಸ್ವಾಯತ್ತ ಸಂಸ್ಥೆಗಳ ವಲಯದ ಅಡಿಯಲ್ಲಿ ಖಾಯಂ ನಿವೃತ್ತಿ ಖಾತೆ ಸಂಖ್ಯೆ (ಪಿಆರ್‌ಎಎನ್) ಪಡೆದಿರುವ ನೌಕರರ ಸಂಖ್ಯೆಯು ಕ್ರಮವಾಗಿ 2,54,282 ಮತ್ತು 35,676 ಆಗಿದೆ;

- 2021–22ರ ಅವಧಿಯಲ್ಲಿ, 'ಹೊಸ ವಂತಿಗೆ ಪಿಂಚಣಿ ಯೋಜನೆಗಳು–ಸೇವೆಯಲ್ಲಿದ್ದಾಗ ನಿವೃತ್ತಿ ಹೊಂದಿದ/ಮರಣ ಹೊಂದಿದ ವ್ಯಕ್ತಿಗಳು/ಕುಟುಂಬಗಳಿಗೆ ಸೌಲಭ್ಯದ ವಿಸ್ತರಣೆ (2071–01–104–2–07) ಶೀರ್ಷಿಕೆಯಡಿ ಸಂಚಿತ ನಿಧಿಯಿಂದ ₹0.61 ಕೋಟಿ ಪಾವತಿಸಲಾಗಿದೆ ಮತ್ತು ಹೊಸ ನಿಗದಿತ ಪಿಂಚಣಿ ಯೋಜನೆಯಡಿ ಸೇರಿಸಲಾಗಿದೆ;
- 2021–22ರಲ್ಲಿ, ನೌಕರರ ಕೊಡುಗೆ (ನಿಗದಿತ ಮತ್ತು ಹಳೆಯ ಬಾಕಿ[13]) ₹6,517.75 ಕೋಟಿಗಳು ಮತ್ತು ಸರ್ಕಾರದ ಕೊಡುಗೆ ₹7,836.94 ಕೋಟಿಗಳು ಆಗಿದ್ದಿತು;
- 2021–22ರಲ್ಲಿ, ನಿರ್ಧರಿತ ವಂತಿಗೆ ಪಿಂಚಣಿ ಯೋಜನೆಗೆ ಒಟ್ಟು ವಂತಿಗೆಯು ₹2,776.34 ಕೋಟಿಗಳಾಗಿದ್ದವು. ಸರ್ಕಾರವು ₹2,776.34 ಕೋಟಿಗಳ ವಂತಿಗೆಗೆ ಪ್ರತಿಯಾಗಿ ₹2,777.08 ಕೋಟಿಗಳನ್ನು ಸಾರ್ವಜನಿಕ ಲೆಕ್ಕದ ಪ್ರಧಾನ ಶೀರ್ಷಿಕೆ 8342–117–ನಿರ್ಧರಿತ ವಂತಿಗೆ ಪಿಂಚಣಿ ಯೋಜನೆ ಅಡಿಯಲ್ಲಿ ವರ್ಗಾಯಿಸಿದೆ.

ಮಧ್ಯಮಾವಧಿ ವಿತ್ತೀಯ ಯೋಜನೆ 2022–26ರಲ್ಲಿ ಹೊಸ ಪಿಂಚಣಿ ವ್ಯವಸ್ಥೆ ಘಟಕದಲ್ಲಿ ಒಂದು ಹೊಸ ವ್ಯವಸ್ಥಿಕ ಸುಧಾರಣೆಯನ್ನು ತರಲಾಗಿದೆ. ಖಜಾನೆ–2ರ ಅಡಿಯಲ್ಲಿನ ಹೊಸ ಪಿಂಚಣಿ ವ್ಯವಸ್ಥೆ ಘಟಕ, ಆರ್ಥಿಕ ಹೊಣೆಗಾರಿಕೆ ಮತ್ತು ರಾಜ್ಯ ಸರ್ಕಾರದ ಎಲ್ಲಾ ಆರ್ಥಿಕ ಸಂಬಂಧಿ ಚಟುವಟಿಕೆಗಳನ್ನು ನಿರ್ವಹಿಸುವ ಸಂಘಟಿತ ಆರ್ಥಿಕ ನಿರ್ವಹಣಾ ವ್ಯವಸ್ಥೆ, ವಿವಿಧ ಆಸಕ್ತದಾರರು (ಸ್ಟೇಕ್ ಹೋಲ್ಡರ್ಸ್) ಅಂದರೆ, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆಗಳ ಇಲಾಖೆ, ಏಜೆನ್ಸಿ ಬ್ಯಾಂಕುಗಳು, ಟ್ರಸ್ಟೀ ಬ್ಯಾಂಕ್ ಮತ್ತು ಕೇಂದ್ರ ದಾಖಲೆ ಸಂರಕ್ಷಣಾ ಸಂಸ್ಥೆ (ಸಿಆರ್‌ಎ) ಯೊಂದಿಗೆ ಪರಸ್ಪರ ಪ್ರತಿಕ್ರಿಯೆಯನ್ನು ಕಲ್ಪಿಸಿದೆ. 2021–22ರಲ್ಲಿ ಕೈಗೊಂಡ ಕೆಲವು ಸುಧಾರಣೆಗಳು ಹೀಗಿವೆ:

- ಜೆನರಿಕ್ ಇಂಟಗ್ರೇಷನ್: ಒಂದು ವೇಳೆ, ಕೊಡುಗೆ ದರದಲ್ಲಿ ಯಾವುದೇ ಬದಲಾವಣೆಯಾದರೆ, ಈ ಲಕ್ಷಣವನ್ನು ಅದೇ ಶಾಶ್ವತ ನಿವೃತ್ತಿ ಖಾತೆ ಸಂಖ್ಯೆ ಖಾತೆಗೆ ಸಮ್ಮಿಳಿತಗೊಳಿಸಲು ಅಭಿವೃದ್ಧಿಗೊಳಿಸಲಾಗಿದೆ;
- ಶಾಶ್ವತ ನಿವೃತ್ತಿ ಖಾತೆ ಸಂಖ್ಯೆ ಖಾತೆಯಿಂದ ಮೊತ್ತದ ಹಿಂತೆಗೆತ ಮತ್ತು ಒಂದು ವೇಳೆ ಮೃತವ್ಯಕ್ತಿಯ ನಾಮಿನಿಯು ಕುಟುಂಬ ಪಿಂಚಣಿಯನ್ನು ಆಯ್ದುಕೊಂಡರೆ, ಅದನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡುವುದು;
- ಒಂದು ವೇಳೆ, ಹಳೆ ಪಿಂಚಣಿ ಪದ್ಧತಿಗೆ ಮತ್ತೆ ತಿರುಗಿ ಬಂದ ಸಂದರ್ಭದಲ್ಲಿ, ನೌಕರರ ಕೊಡುಗೆ ಮತ್ತು ಗಳಿಕೆಗಳನ್ನು ನೌಕರರ ಸಾಮಾನ್ಯ ಭವಿಷ್ಯ ನಿಧಿ ಖಾತೆಗೆ ವರ್ಗಾಯಿಸಲಾಗುವುದು;
- 2021–22ರ ಅವಧಿಯಲ್ಲಿ, 17,333 ನೌಕರರ ಬಾಕಿ ಪಾವತಿಯನ್ನು ಸಂಪೂರ್ಣ ಗೊಳಿಸಲಾಯಿತು;
- ತಪ್ಪಿನಿಂದಾಗಿ ತಿರಸ್ಕೃತಗೊಳ್ಳುವುದನ್ನು ನಿವಾರಿಸಲು ಆಂಶಿಕ (ಪಾರ್ಶಿಯಲ್) ಎಸ್‌ಸಿಎಫ್ ಅಪ್‌ಲೋಡ್ ಎಂಬ ಹೊಸ ಪ್ರಕ್ರಿಯೆಯನ್ನು ಪ್ರಾರಂಭಿಸಲಾಯಿತು.

### 2.5.2.6 ಬಡ್ಡಿ ಪಾವತಿಗಳು

ಬಡ್ಡಿ ಪಾವತಿಗಳು 2017–18 ರಲ್ಲಿನ ₹14,973 ಕೋಟಿಗಳಿಂದ 2021–22ರಲ್ಲಿ ₹26,276 ಕೋಟಿಗಳಿಗೆ ಏರಿ ₹11,303 ಕೋಟಿಗಳಷ್ಟು (ಶೇಕಡ 75) ಹೆಚ್ಚಾಗಿದೆ. 2020–21ಕ್ಕೆ ಹೋಲಿಸಿದರೆ, ಬಡ್ಡಿ ಪಾವತಿಯು ಶೇಕಡ 12.13ರಷ್ಟು ಹೆಚ್ಚಾಗಿದೆ. 2021–22ರಲ್ಲಿನ ಬಡ್ಡಿ ಪಾವತಿಗಳು ಆಂತರಿಕ ಸಾಲದ ಮೇಲಿನ ಬಡ್ಡಿ (₹21,549 ಕೋಟಿಗಳು), ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳ ಮೇಲಿನ ಬಡ್ಡಿ, (₹2,9,73 ಕೋಟಿಗಳು), ಕೇಂದ್ರ ಸರ್ಕಾರದಿಂದ ಸಾಲಗಳ ಮೇಲಿನ ಬಡ್ಡಿ (₹418 ಕೋಟಿಗಳು), ಆಯವ್ಯಯ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹1,292 ಕೋಟಿಗಳು), ಮೀಸಲು ನಿಧಿಗಳ ಮೇಲೆ ಬಡ್ಡಿ (₹43 ಕೋಟಿಗಳು) ಮತ್ತು ಇತರ ಬಾಧ್ಯತೆಗಳ ಮೇಲಿನ ಬಡ್ಡಿಗಳನ್ನು (₹1 ಕೋಟಿ) ಒಳಗೊಂಡಿತ್ತು.

---

[13] ಉದ್ಯೋಗಿ ತನ್ನ ಸೇವೆಗೆ ಪ್ರವೇಶಿಸಿದ ದಿನಾಂಕದಿಂದ ಯೋಜನೆಯ ಅನುಷ್ಠಾನದ ದಿನಾಂಕದವರೆಗೆ ನೀಡಬೇಕಾದ ಕೊಡುಗೆಯನ್ನು ಉಲ್ಲೇಖಿಸುತ್ತದೆ.

ಆಂತರಿಕ ಸಾಲದ ಮೇಲಿನ ಬಡ್ಡಿಯು 2020–21ರಲ್ಲಿನ ₹18,627 ಕೋಟಿಗಳಿಂದ 2021–22ರಲ್ಲಿ ₹21,549 ಕೋಟಿಗಳಿಗೆ ಶೇಕಡ 16ರಷ್ಟು ಏರಿಕೆಯಾಗಿದೆ. ಈ ಏರಿಕೆಯು ಮಾರುಕಟ್ಟೆ ಸಾಲದ ಮೇಲಿನ ಬಡ್ಡಿ ಪಾವತಿಯ ₹3,107 ಕೋಟಿಗಳ (ಶೇಕಡ 18) ಹೆಚ್ಚಳದಿಂದಾಗಿದೆ. ಕೇಂದ್ರ ಸರ್ಕಾರದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ 2020–21ರಲ್ಲಿದ್ದ ₹532 ಕೋಟಿಗಳಿಂದ 2021–22ರಲ್ಲಿ ₹418 ಕೋಟಿಗೆ ಇಳಿಕೆಯಾಗಿ ₹114 ಕೋಟಿಗಳಷ್ಟು ಕಡಿಮೆಯಾಯಿತು. ಇದು ರಾಜ್ಯದ/ಕೇಂದ್ರಾಡಳಿತ ಪ್ರದೇಶಗಳ ಯೋಜನೆಗಳ ಕಾರ್ಯಕ್ರಮದ ಮೇಲಿನ ಬಡ್ಡಿಯ ಇಳಿಕೆಯಿಂದಾಗಿದೆ (ಶೇಕಡ 21).

### 2.5.2.7 ಸಹಾಯಧನಗಳು

2021–22ರಲ್ಲಿ ಸಹಾಯಧನಗಳ ಮೇಲಿನ ವೆಚ್ಚದಲ್ಲಿ ಹೆಚ್ಚಳವಾಗಿದೆ ಎಂಬುದನ್ನು **ಕೋಷ್ಟಕ–2.18**ರಲ್ಲಿ ನೀಡಲಾದ ವಿವರಗಳಿಂದ ನೋಡಬಹುದಾಗಿದೆ. ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಸಹಾಯಧನಗಳು 2020–21ರಲ್ಲಿದ್ದ ಶೇಕಡ 11 ರಿಂದ 2021–22ರಲ್ಲಿ ಶೇಕಡ 14ಕ್ಕೆ ಏರಿದ್ದು, ರಾಜಸ್ವ ವೆಚ್ಚದ ಶತಾಂಶವಾಗಿ 2020–21ರಲ್ಲಿದ್ದ ಶೇಕಡ 10ರಿಂದ 2021–22ರಲ್ಲಿ ಶೇಕಡ 13ಕ್ಕೆ ಹೆಚ್ಚಳವಾಯಿತು.

**ಕೋಷ್ಟಕ–2.18: 2017–18ರಿಂದ 2021–22ರ ಅವಧಿಯಲ್ಲಿ ಸಹಾಯಧನಗಳ ಮೇಲಿನ ವೆಚ್ಚ**

| | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಸಹಾಯಧನಗಳು (₹ ಕೋಟಿಗಳಲ್ಲಿ) | 14,148 | 15,400 | 17,534 | 18,432 | 28,219 |
| ರಾಜಸ್ವ ಸ್ವೀಕೃತಿಗಳ ಶತಾಂಶವಾಗಿ ಸಹಾಯಧನಗಳು | 9.62 | 9.33 | 9.99 | 11.76 | 14.41 |
| ರಾಜಸ್ವ ವೆಚ್ಚಗಳ ಶತಾಂಶವಾಗಿ ಸಹಾಯಧನಗಳು | 9.93 | 9.37 | 10.06 | 10.47 | 13.47 |

*ಆಕರ: ಹಣಕಾಸು ಲೆಕ್ಕಗಳು*

ನಾಲ್ಕು ದೊಡ್ಡ ಸಹಾಯಧನ ಘಟಕಗಳೆಂದರೆ ರೈತರಿಗೆ ಕೃಷಿ ಪಂಪ್‌ಸೆಟ್ಟುಗಳ ಬಳಕೆಗೆ ಉಚಿತ ವಿದ್ಯುತ್ ಪೂರೈಕೆಗಾಗಿ ಒದಗಿಸಲಾದ ವಿದ್ಯುತ್ ಸಹಾಯಧನ, ಆಹಾರ ಸಹಾಯಧನ, ಸಾರಿಗೆ ಮತ್ತು ಬೆಳೆ ಸಾಲಗಳಿಗೆ ಬಡ್ಡಿ ಸಹಾಯಧನ. ಕಳೆದ ಐದು ವರ್ಷಗಳ ವಿವರಗಳನ್ನು **ಅನುಬಂಧ–2.3**ರಲ್ಲಿ ತೋರಿಸಲಾಗಿದೆ ಮತ್ತು 2021–22ರ ವಿವರಗಳನ್ನು **ನಕ್ಷೆ–2.11**ರಲ್ಲಿ ತೋರಿಸಲಾಗಿದೆ.

**ನಕ್ಷೆ–2.11: 2021–22ರಲ್ಲಿ ಸಹಾಯಧನಗಳು**

(₹ ಕೋಟಿಗಳಲ್ಲಿ)




*ಆಕರ: ಹಣಕಾಸು ಲೆಕ್ಕಗಳು*

- **ಹಣಕಾಸಿನ ನೆರವು, ಪ್ರೋತ್ಸಾಹ ಇತ್ಯಾದಿಗಳ ರೂಪದಲ್ಲಿ ಸಹಾಯಧನ.**

ರಾಜ್ಯ ಸರ್ಕಾರವು ಒದಗಿಸುವ ಸಹಾಯಧನಗಳೆಂದರೆ ಎರಡು ವಿಧಗಳಾಗಿರಬಹುದು. ನೇರ[14] ಮತ್ತು ಪರೋಕ್ಷ ಸಹಾಯಧನ. ನೇರ ಸಹಾಯಧನ ಎಂದರೆ ರಾಜ್ಯವು ಸಹಾಯಧನ ಸ್ವರೂಪದಲ್ಲಿ ವೆಚ್ಚವನ್ನು ಸ್ಪಷ್ಟವಾಗಿ ಒದಗಿಸುವುದು ಮತ್ತು ಪರೋಕ್ಷ ಸಹಾಯಧನವು ಸರ್ಕಾರದ ಕೆಲವು ಯೋಜನೆಗಳಿಗೆ ಅನುದಾನವನ್ನು ಒದಗಿಸುವುದು. ಈ ಸಹಾಯಧನಗಳು ಅಪ್ರತ್ಯಕ್ಷ ರೀತಿಯ ಅಥವಾ ತೆರಿಗೆ ರಿಯಾಯಿತಿಗಳ ಸ್ವರೂಪವನ್ನು ತೆಗೆದುಕೊಳ್ಳಬಹುದು.

ಹಣಕಾಸಿನ ನೆರವಿನ ರೂಪದ ಈ ಸಹಾಯಧನಗಳು 2017–18ರಲ್ಲಿನ ₹3,318 ಕೋಟಿಗಳಿಂದ 2021–22ರಲ್ಲಿ ₹3,698 ಕೋಟಿಗಳಿಗೆ ಏರಿಕೆಯಾಗಿದೆ. ಅವು ಮುಖ್ಯವಾಗಿ ಬೀಜಗಳ ಪೂರೈಕೆಗೆ ಹಣಕಾಸಿನ ನೆರವು, ನೇಕಾರರ ಪ್ಯಾಕೇಜ್, ಆಶ್ರಯ ಯೋಜನೆ, ಸೂಕ್ಷ್ಮ/ಹನಿ ನೀರಾವರಿ, ಕನಿಷ್ಠ ನೆಲಬೆಲೆ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಇತ್ಯಾದಿಗಳನ್ನು ಒಳಗೊಂಡಿವೆ. 2017–18ರಿಂದ 2021–22ರವರೆಗೆ ಒದಗಿಸಿದ ಈ ಸಹಾಯಧನಗಳನ್ನು **ಅನುಬಂಧ–2.4**ರಲ್ಲಿ ವಿವರಿಸಲಾಗಿದೆ. ಹೀಗೆ, ಆರ್ಥಿಕ ಸಹಾಯದ ರೂಪದಲ್ಲಿರುವ ಸಹಾಯಧನಗಳನ್ನು ಗಣನೆಗೆ ತೆಗೆದುಕೊಂಡರೆ, ಅವುಗಳ ವಾಸ್ತವವಾದ ವೆಚ್ಚವು ₹31,917 ಕೋಟಿಗಳಷ್ಟಾಗುತ್ತದೆ. ಸರ್ಕಾರಿ ವಲಯದ ಉದ್ದಿಮೆಗಳಿಂದ ಪ್ರತಿಫಲ ಶೇಕಡ 1ಕ್ಕಿಂತಲೂ ಕಡಿಮೆ ಇರುವುದರಿಂದ ವಿವಿಧ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯದ ಸಂಪೂರ್ಣ ಅನುದಾನ ಹೂಡಿಕೆಯನ್ನು ಪರಶೀಲಿಸುವ ಅಗತ್ಯವಿದೆ ಎಂದು ಕರ್ನಾಟಕ ಆರ್ಥಿಕ ಸಮೀಕ್ಷೆ 2021–22ರಲ್ಲಿ ತಿಳಿಸಿದೆ. ಹೂಡಿಕೆಗಳನ್ನು ತಂದ ಸಾಲಗಳಿಂದ ಮಾಡಿರುವುದರಿಂದ ಹಿಡಿದಿಡುವ ವೆಚ್ಚ (ಹೋಲ್ಡಿಂಗ್ ಕಾಸ್ಟ್) ಶೇಕಡ 7ರ ದರದಲ್ಲಿ ₹4,946ಕೋಟಿಗಳಷ್ಟಾಗುತ್ತದೆ ಮತ್ತು ಇದು ಪರೋಕ್ಷ ಸಹಾಯಧನದ ರೂಪದಲ್ಲಿದೆ.

### 2.5.2.8 ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು

- **ಸ್ಥಳೀಯ ಸಂಸ್ಥೆಗಳು**

2017–18ರಿಂದ 2021–22ರ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಅನುದಾನದ ಮೂಲಕ ಒದಗಿಸಲಾದ ಸಹಾಯದ ಪ್ರಮಾಣವನ್ನು **ಕೋಷ್ಟಕ–2.19** ಮತ್ತು **ಕೋಷ್ಟಕ–2.20**ರಲ್ಲಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ–2.19: ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ನೆರವು**

(₹ ಕೋಟಿಗಳಲ್ಲಿ)

| ಸಂಸ್ಥೆಯ ಹೆಸರು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಪಂಚಾಯತ್ ರಾಜ್ ಸಂಸ್ಥೆಗಳು | 31,054.63 | 35,897.61 | 38,049.61 | 38,106.18 | 39,835.19 |
| ನಗರ ಸ್ಥಳೀಯ ಸಂಸ್ಥೆಗಳು | 6,489.76 | 5,425.31 | 6,424.72 | 5,681.04 | 6,615.83 |
| **ಒಟ್ಟು** | **37,544.39** | **41,322.92** | **44,474.33** | **43,787.22** | **46,451.02** |

*ಆಕರ : ಹಣಕಾಸು ಲೆಕ್ಕಗಳು*

ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸುಗಳ ಮುಂದುವರಿದ ಭಾಗವಾಗಿ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮೂರು ವಿಭಿನ್ನ ಕಾರ್ಯಕ್ರಮ ಒಳ ಶೀರ್ಷಿಕೆಗಳಾದ 196, 197 ಮತ್ತು 198ರ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಹಾಯವು 2017–18ರಲ್ಲಿ ₹31,054.63 ಕೋಟಿಗಳಿದ್ದು 2021–22ರಲ್ಲಿ ₹39,835.19 ಕೋಟಿಗಳಿಗೆ ಏರಿಕೆಯಾಗಿದೆ ಮತ್ತು 2017–

[14] ಸರ್ಕಾರದ ಕೆಲವು ಯೋಜನೆಗಳಿಗೆ ಸಹಾಯಧನ ಅಥವಾ ಬಡ್ಡಿ ರಿಯಾಯಿತಿಯ ರೂಪದಲ್ಲಿ ವೆಚ್ಚವನ್ನು ಒದಗಿಸುವುದು ನೇರ ಸಹಾಯಧನವಾಗಿದೆ. ಈ ಸಹಾಯಧನಗಳು ಹೆಚ್ಚುವರಿ ಬೆಂಬಲದ ಶಾಶ್ವತ ಮೂಲವಾಗುವುದಿಲ್ಲ ಮತ್ತು ಆ ಮೂಲಕ ಸುಧಾರಣೆಗಳನ್ನು ಕೈಗೊಳ್ಳುವುದರಿಂದ ಈ ವಲಯಗಳನ್ನು ತಡೆಯುವಲ್ಲಿ ಸವಾಲು ಇದೆ ಎಂದು ಒತ್ತಿ ಹೇಳಲಾಯಿತು.

18ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ನೆರವು ₹6,489.76 ಕೋಟಿಗಳಿಂದ 2021–22ರಲ್ಲಿ ₹6,615.83ಕೋಟಿಗಳಿಗೆ ಏರಿಕೆಯಾಗಿದೆ.

2021–22ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾವಣೆಯಾದ ಒಟ್ಟು ₹39,835 ಕೋಟಿಗಳ ಪೈಕಿ, ₹18,502 ಕೋಟಿ (ಶೇಕಡ 46) ವೇತನಕ್ಕಾಗಿತ್ತು. ರಾಜ್ಯ ಸರ್ಕಾರದ ಕಾರ್ಯಗಳಾದ ಶಿಕ್ಷಣ, ನೀರು ಸರಬರಾಜು ಮತ್ತು ನೈರ್ಮಲ್ಯ, ವಸತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಿರುವುದು ವೇತನಕ್ಕಾಗಿ ಹೆಚ್ಚಿನ ಹಂಚಿಕೆಗೆ ಕಾರಣವಾಯಿತು. ಇದು ಜಿಲ್ಲಾ ಪಂಚಾಯತಿಗಳಿಗೆ (₹79.36 ಕೋಟಿಗಳು), ಗ್ರಾಮ ಪಂಚಾಯತಿಗಳಿಗೆ (₹1,411.40ಕೋಟಿಗಳು) ಮತ್ತು ತಾಲ್ಲೂಕು ಪಂಚಾಯತಿಗಳಿಗೆ (₹164.85 ಕೋಟಿಗಳು) ಬಿಡುಗಡೆಯಾದ ₹1,655.61 ಕೋಟಿಗಳ ಹದಿನೈದನೆಯ ಹಣಕಾಸು ಆಯೋಗದ ಅನುದಾನವನ್ನೂ ಒಳಗೊಂಡಿದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾದ ನೆರವು ಹಿಂದಿನ ವರ್ಷಕ್ಕಿಂತ ₹934.79 ಕೋಟಿಗಳಷ್ಟು ಹೆಚ್ಚಾಗಿದ್ದು, ಇದರಲ್ಲಿ ವೇತನದ ಅಂಶವೂ ಸೇರಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ₹6,615.83 ಕೋಟಿಗಳ ನೆರವಿನಲ್ಲಿ, ₹1,070.00 ಕೋಟಿಗಳು (ಶೇಕಡ 16) ಬಂಡವಾಳ ಆಸ್ತಿಗಳ ಸೃಷ್ಟಿಗೆ ನೀಡಲಾಗಿದೆ. ಇದು ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಹದಿನಾಲ್ಕನೆಯ ಹಣಕಾಸು ಆಯೋಗದ ಅನುದಾನವನ್ನು (₹1,029.50 ಕೋಟಿ) ಒಳಗೊಂಡಿದೆ.

- **ಇತರೆ ಸಂಸ್ಥೆಗಳು**

2021–22ರಲ್ಲಿ, ಇತರ ಸಂಸ್ಥೆಗಳಿಗೆ ನೀಡಿದ ಸಹಾಯವು (₹8,590.60 ಕೋಟಿಗಳು) ಶಾಸನಬದ್ಧ ಸಂಸ್ಥೆಗಳು ಮತ್ತು ಅಭಿವೃದ್ಧಿ ಪ್ರಾಧಿಕಾರಗಳಿಗೆ (₹2,564 ಕೋಟಿಗಳು), ಸರ್ಕಾರೇತರ ಸಂಸ್ಥೆಗಳು (₹1,902 ಕೋಟಿಗಳು), ಸಾರ್ವಜನಿಕ ವಲಯ ಉದ್ದಿಮೆಗಳು (₹34 ಕೋಟಿಗಳು) ಮತ್ತು ಇತರರಿಗೆ (₹4,090 ಕೋಟಿಗಳು) ನೀಡಿದ ಸಹಾಯವನ್ನು ಒಳಗೊಂಡಿದ್ದು ವಿವರಗಳನ್ನು **ಕೋಷ್ಟಕ–2.20**ರಲ್ಲಿ ನೀಡಲಾಗಿದೆ. ಸಹಕಾರಿ ಸಂಸ್ಥೆಗಳಿಗೆ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ ಕ್ರಮವಾಗಿ ₹220ಕೋಟಿಗಳು ಮತ್ತು ₹934 ಕೋಟಿಗಳು ಹೆಚ್ಚಾಗಿದೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಹಿಂದಿನ ವರ್ಷಕ್ಕೆ ಹೋಲಿಸಿದರೆ ₹6ಕೋಟಿಗಳ ಅಲ್ಪ ಇಳಿಕೆಯಾಗಿದೆ.

**ಕೋಷ್ಟಕ–2.20: ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು**

(₹ ಕೋಟಿಗಳಲ್ಲಿ)

| ಸಂಸ್ಥೆಯ ಹೆಸರು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಶಿಕ್ಷಣ ಸಂಸ್ಥೆಗಳು (ವಿಶ್ವ ವಿದ್ಯಾಲಯಗಳೂ ಸೇರಿ) | 1,293.70 | 1,081.29 | 1,405.90 | 1,140.43 | 1,134.75 |
| ಸಹಕಾರಿ ಸೊಸೈಟಿಗಳು ಮತ್ತು ಸಹಕಾರಿ ಸಂಸ್ಥೆಗಳು | 1,191.32 | 1,477.76 | 1,275.78 | 1,186.04 | 1,405.67 |
| ಇತರ ಸಂಸ್ಥೆಗಳು ಮತ್ತು ಮಂಡಳಿಗಳು (ಸಾರ್ವಜನಿಕ ವಲಯ ಉದ್ದಿಮೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಶಾಸನಬದ್ಧ ಸಂಸ್ಥೆಗಳೂ ಸೇರಿ) | 7,067.08 | 6,720.59 | 7,446.88 | 7,656.90 | 8,590.60 |
| ಒಟ್ಟು | **9,552.10** | **9,279.64** | **10,128.56** | **9,983.37** | **11,131.02** |

*ಆಕರ: ಹಣಕಾಸು ಲೆಕ್ಕಗಳು*

ಸ್ಥಳೀಯ ಸಂಸ್ಥೆಗಳ ವರ್ಗಾವಣೆಗಳನ್ನು ರಾಜ್ಯದ ನಾಲ್ಕನೆಯ ಹಣಕಾಸು ಆಯೋಗ ಮಾಡಿದ ಶಿಫಾರಸುಗಳೊಂದಿಗೆ ವಿಶ್ಲೇಷಿಸಲಾಯಿತು ಮತ್ತು ಕಂಡು ಹಿಡಿದ ಅಂಶಗಳನ್ನು ಕೆಳಗೆ ಚರ್ಚಿಸಲಾಗಿದೆ:

ಭಾರತದ ಸಂವಿಧಾನದ ಅನುಚ್ಛೇದ 243 (ಐ) ಮತ್ತು (ವೈ), ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993,ರ ಪರಿಚ್ಛೇದ 267, 2015ರಲ್ಲಿ ಮಾರ್ಪಡಿಸಿದಂತೆ, ಮತ್ತು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ, 1976ರ ಪರಿಚ್ಛೇದ 503ಸಿ ಮತ್ತು ಕರ್ನಾಟಕ

ಮುನಿಸಿಪಾಲಿಟಿಗಳ ಅಧಿನಿಯಮ, 1964ರ ಪರಿಚ್ಛೇದ 302ಬಿ ಇವುಗಳು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಹಣಕಾಸು ಆಯೋಗವನ್ನು (ಎಸ್‌ಎಫ್‌ಸಿ) ರಚಿಸಲು ಅವಕಾಶ ಒದಗಿಸಿವೆ. ರಾಜ್ಯ ಹಣಕಾಸು ಆಯೋಗಗಳು ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಎರಡರ ಹಣಕಾಸು ಸಮಸ್ಯೆಗಳನ್ನು ಗಮನಿಸಬೇಕಾಗುತ್ತದೆ. ಈ ಕಾರ್ಯವ್ಯವಸ್ಥೆ ಜಾರಿಗೆ ಬರುವ ಮುನ್ನ, ರಾಜ್ಯ ಸರ್ಕಾರಗಳು ಸ್ಥಳೀಯ ಸಂಸ್ಥೆಗಳಿಗೆ ರಾಜ್ಯದ ಕಾನೂನುಗಳು ಮತ್ತು ತನ್ನ ವಿವೇಚನೆ ಬಳಸಿ ನಿಧಿಗಳನ್ನು ವರ್ಗಾಯಿಸುತ್ತಿತ್ತು. ರಾಜ್ಯದ ರಾಜ್ಯಪಾಲರು ಅನುಚ್ಛೇದ 243(ಐ)ರ ಅಡಿಯಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿಯಾದ (1992) ಒಂದು ವರ್ಷದ ಒಳಗೆ ಮತ್ತು ಆ ನಂತರ ಪ್ರತೀ ಐದು ವರ್ಷ ಕೊನೆಗೊಳ್ಳುವಾಗ ರಾಜ್ಯ ಹಣಕಾಸು ಆಯೋಗವನ್ನು ಪಂಚಾಯತ್‌ಗಳ ಆರ್ಥಿಕ ಪರಿಸ್ಥಿತಿಯನ್ನು ಸಮೀಕ್ಷಿಸಲು ಮತ್ತು ಅದೇ ರೀತಿ 74ನೇ ತಿದ್ದುಪಡಿಯ ನಂತರ ಅನುಚ್ಛೇದ 243(ವೈ) ಅಡಿಯಲ್ಲಿ ರಚಿತವಾಗಿ ರಾಜ್ಯ ಹಣಕಾಸು ಆಯೋಗವು ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿಯನ್ನು ಸಮೀಕ್ಷಿಸಬೇಕು ಮತ್ತು ರಾಜ್ಯಪಾಲರಿಗೆ ಶಿಫಾರಸುಗಳನ್ನು ಮಾಡಬೇಕು.

ಕರ್ನಾಟಕದ ರಾಜ್ಯಪಾಲರು, ಈವರೆಗೂ ನಾಲ್ಕು ಹಣಕಾಸು ಆಯೋಗಗಳನ್ನು ನೇಮಿಸಿದ್ದಾರೆ. ರಾಜ್ಯ ಹಣಕಾಸು ಆಯೋಗಗಳ ವಿವರಗಳನ್ನು ಕೆಳಗಿನ **ಕೋಷ್ಟಕ–2.20(ಎ)** ನಲ್ಲಿ ನೀಡಲಾಗಿದೆ.

**ಕೋಷ್ಟಕ–2.20(ಎ): ರಾಜ್ಯದಲ್ಲಿ ರಚಿತವಾದ ವಿವಿಧ ಹಣಕಾಸು ಆಯೋಗಗಳ ವಿವರಗಳು**

| ವಿವರಗಳು | ಮೊದಲನೆ ಹಣಕಾಸು ಆಯೋಗ | ಎರಡನೇ ಹಣಕಾಸು ಆಯೋಗ | ಮೂರನೆ ಹಣಕಾಸು ಆಯೋಗ | ನಾಲ್ಕನೇ ಹಣಕಾಸು ಆಯೋಗ |
|---|---|---|---|---|
| ರಚನೆಯಾದ ದಿನಾಂಕ | 10 ಜೂನ್ 1994 | 25 ಅಕ್ಟೋಬರ್ 2000 | 28 ಆಗಸ್ಟ್ 2006 | 21 ಡಿಸೆಂಬರ್ 2015 |
| ಸಲ್ಲಿಸಿದ ದಿನಾಂಕ | ಆಗಸ್ಟ್ 1996 | ಡಿಸೆಂಬರ್ 2002 | ಡಿಸೆಂಬರ್ 2008 | ಮೇ 2018 |
| ತೀರ್ಪಿನ (ಅವಾರ್ಡ್) ಅವಧಿ | 1997–98 ರಿಂದ 2001–02 | 2006–07 ರಿಂದ 2010–11 | 2011–12 ರಿಂದ 2015–16 | 2018–19 ರಿಂದ 2022–23 |

ನಾಲ್ಕನೆಯ ರಾಜ್ಯ ಹಣಕಾಸು ಆಯೋಗದ ರಚನೆಯಲ್ಲಿ ವಿಳಂಬವಾದ್ದರಿಂದ ಮೂರನೆಯ ರಾಜ್ಯ ಹಣಕಾಸು ಆಯೋಗದ ಅವಧಿಯನ್ನು 2017–18ರವರೆಗೂ ವಿಸ್ತರಿಸಲಾಯಿತು. ನಾಲ್ಕನೆಯ ಹಣಕಾಸು ಆಯೋಗದ ಶಿಫಾರಸುಗಳೆಂದರೆ:

- ಪ್ರಪ್ರಥಮವಾಗಿ ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ನಡುವೆ ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವೆ ಮತ್ತು ಕಡೆಯ ಹಂತದ ಹಂಚಿಕೆಗಳಲ್ಲಿ ಸಂಸ್ಥೆ ಸಂಸ್ಥೆಗಳ ನಡುವೆ. ವಾಸ್ತವಿಕ ಹಂಚಿಕೆಗಳು ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯ (ನಾನ್ ಲೋನ್ ನೆಟ್ ಓನ್ ರೆವೆನ್ಯೂ ರಿಸೀಪ್ಟ್–ಎನ್‌ಎಲ್‌ಎನ್‌ಒಆರ್‌ಆರ್) ಹಂಚಿಕೆ ಆಧಾರದ ಮೇಲೆ ಇದ್ದು ಮೂಲ ವರ್ಷ 2018–19 ಆಗಿದ್ದು ಆ ನಂತರ ಪ್ರತೀ ವರ್ಷ.
- ಪ್ರಥಮ ಹಂತದ ಹಂಚಿಕೆಯಲ್ಲಿ, ಅದು ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳು ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯದಲ್ಲಿ, ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ಪಾಲುಗಳು ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯದಲ್ಲಿ 52:48ರ ಅನುಪಾತದಲ್ಲಿ ಇರಬೇಕು.
- ಎರಡನೆಯ ಹಂತದ ಹಂಚಿಕೆಯಲ್ಲಿ, ಇದು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಂಬಂಧಿತ ಪಾಲುಗಳು, ಮೊದಲ ಹಂತದಲ್ಲಿ ನಿರ್ಧರಿಸಿದ ಸ್ಥಳೀಯ ಸಂಸ್ಥೆಗಳ ಪಾಲಾದ ಶೇಕಡ 48ರಲ್ಲಿ ಶೇಕಡ ಒಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೆಚ್ಚುವರಿ ಅನುದಾನ. ಇನ್ನು ಉಳಿದ ಶೇಕಡ 47ರಲ್ಲಿ, ಪಂಚಾಯತ್ ರಾಜ್ ಸಂಸ್ಥೆಗಳು (ಪಿಆರ್‌ಐ) ಮತ್ತು ನಗರ ಸ್ಥಳೀಯ ಸಂಸ್ಥೆಗಳ (ಯುಎಲ್‌ಬಿ) ಸಂಬಂಧಿತ ಪಾಲುಗಳು 75:25ರ ಅನುಪಾತದಲ್ಲಿರಬೇಕು. ಇದು ಶೇಕಡ 35.25 ಇದ್ದು ಪೂರ್ಣ ಸಂಖ್ಯೆಯಾದ ಶೇಕಡ 35 ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ಶೇಕಡ 11.75ರ ಪೂರ್ಣಸಂಖ್ಯೆಯಾದ ಶೇಕಡ 12 ಅನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯದಲ್ಲಿ ಆಗುತ್ತದೆ.

- ಮೂರನೆಯ ಹಂತದ ಹಂಚಿಕೆಯು ಪಂಚಾಯತ್ ರಾಜ್ ಸಂಸ್ಥೆಗಳ ನಡುವೆ ಹಂತವಾರು ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವೆ ಕ್ಲಾಸ್ವಾರು ನಿಧಿಯ ಪಾಲುಗಳ ಹಂಚಿಕೆ ಮತ್ತು ನಾಲ್ಕನೆಯ ಹಂತದಲ್ಲಿ ಸಂಸ್ಥೆಗಳ ನಡುವೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪ್ರತೀ ಹಂತದಲ್ಲಿ ಪ್ರತೀ ಘಟಕ ಮತ್ತು ನಗರ ಸ್ಥಳೀಯ ಸಂಸ್ಥೆಗಳಲಿ ಪ್ರತೀ ಕ್ಲಾಸ್‌ನಲ್ಲಿ ಪ್ರತ ಘಟಕ.

ಪ್ರಥಮ ಮತ್ತು ಎರಡನೆಯ ಹಂತದ ಹಂಚಿಕೆಗಳನ್ನು **ಕೋಷ್ಟಕ–2.20 (ಬಿ)** ನಲ್ಲಿ ನೀಡಲಾಗಿದೆ.

**ಕೋಷ್ಟಕ–2.20(ಬಿ): ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯದಲ್ಲಿ ಸ್ಥಳೀಯ ಸಂಸ್ಥೆಗಳ ಸಂಬಂಧಿತ ಪಾಲು**

(₹ ಕೋಟಿಗಳಲ್ಲಿ)

| ವಿವರಗಳು | 2018–19 | 2019–20 | 2020–21 | 2021–22 |
|---|---|---|---|---|
| ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯ* | 1,14,357.00 | 1,24,540.90 | 1,18,735.26 | 1,41,492.43 |
| ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಂಚಿಕೆ # | 33,845.99 | 35,545.48 | 34,889.18 | 38,179.59 |
| ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ # | 4,383.25 | 4,762.94 | 4,271.55 | 5,586.32 |
| ಒಟ್ಟು ಹಂಚಿಕೆಗಳು | 38,229.24 | 40,308.42 | 39,160.73 | 43,765.91 |
| ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯದಲ್ಲಿ ಸ್ಥಳೀಯ ಸಂಸ್ಥೆಗಳ ಪಾಲು (ಶೇಕಡಾವಾರು) | 33.43 | 32.36 | 32.98 | 30.93 |

* ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯವನ್ನು ಲೆಕ್ಕ ಹಾಕುವಾಗ ಉಪಕರ (ಸೆಸ್) ಮತ್ತು ವಸೂಲಿ ಶುಲ್ಕಗಳನ್ನು ಪರಿಗಣಿಸಿಲ್ಲ. ಮುಂದುವರೆದಂತೆ, 2020–21 ಮತ್ತು 2021–22ರ ಅವಧಿಯಲ್ಲಿ ಬ್ಯಾಕ್ ಟು ಬ್ಯಾಕ್ ಸಾಲವಾಗಿ ಸ್ವೀಕರಿಸಿದ ಪರಿಹಾರವನ್ನು ಪರಿಗಣಿಸಿಲ್ಲ.

# ಹದಿಮೂರು, ಹದಿನಾಲ್ಕು ಮತ್ತು ಹದಿನೈದನೆಯ ಹಣಕಾಸು ಆಯೋಗದ ಹಂಚಿಕೆಗಳನ್ನು ಒಳಗೊಂಡಿಲ್ಲ.

ಮೇಲಿನ ಕೋಷ್ಟಕದಿಂದ ಸಾಲ ಅಲ್ಲದ ನಿವ್ವಳ ಸ್ವಂತ ರಾಜಸ್ವ ಆದಾಯದಲ್ಲಿ ಸ್ಥಳೀಯ ಸಂಸ್ಥೆಗಳ ಪಾಲು ಸರಾಸರಿ ಶೇಕಡ 32.43 ಆಗಿತ್ತು ಎಂಬುದನ್ನು ಗಮನಿಸಬಹುದಾಗಿದೆ, ಇದು ನಾಲ್ಕನೆಯ ಹಣಕಾಸು ಆಯೋಗ ಶಿಫಾರಸು ಮಾಡಿದ ಶೇಕಡ 48ಕ್ಕಿಂತಾ ತುಂಬಾ ಕಡಿಮೆ ಇದೆ.

### 2.5.2.9 ಕೋವಿಡ್–19 ವೆಚ್ಚ

ಸರ್ಕಾರಿ ಲೆಕ್ಕಗಳನ್ನು ಆರು ಹಂತದ ವರ್ಗೀಕರಣದಲ್ಲಿ ಪ್ರಸ್ತುತಪಡಿಸಲಾಗುವುದು, ಇದರಲ್ಲಿ ಉದ್ದೇಶ ಲೆಕ್ಕಶೀರ್ಷಿಕೆ ವೆಚ್ಚದ ಉದ್ದೇಶ/ಗುರಿಯನ್ನು ಪ್ರತಿನಿಧಿಸುತ್ತದೆ. ಕೋವಿಡ್–19 ಪಿಡುಗು ಆವರಿಸಿದಾಗ 2019–20ರ ಆಯವ್ಯಯ ಮುಗಿದಿತ್ತು ಮತ್ತು 2020–21ರ ಆಯವ್ಯಯವನ್ನು ಸಹ ಮಂಡಿಸಲಾಗಿತ್ತು. ಆದ್ದರಿಂದ, ಕೋವಿಡ್–19ರ ಸಂಬಂಧ ಆಯವ್ಯಯ ಮತ್ತು ವೆಚ್ಚ ಅಸಾಧ್ಯವಾಗಿತ್ತು. ಆದಾಗ್ಯೂ, 2020–21ರ ಅವಧಿಯಲ್ಲೂ ಸಹ ಕೋವಿಡ್–19ಗಾಗಿ ಪ್ರತ್ಯೇಕ ಉದ್ದೇಶ ಶೀರ್ಷಿಕೆಯನ್ನು ವಿನ್ಯಾಸಗೊಳಿಸಲಿಲ್ಲ. ಇದರ ಪರಿಣಾಮವಾಗಿ, ಕೋವಿಡ್–19ಕ್ಕೆ ಸಂಬಂಧಿಸಿದಂತೆ ಹಂಚಿಕೆ ಹಾಗೂ ವೆಚ್ಚವನ್ನು ಲೆಕ್ಕಪತ್ರಗಳಲ್ಲಿ ತೋರಿಸಲಿಲ್ಲ.

2019–20ರಿಂದ 2021–22ರ ಅವಧಿಯಲ್ಲಿ ಕೋವಿಡ್–19ರ ನಿಯಂತ್ರಣಕ್ಕಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ಮತ್ತು ಕಂದಾಯ ಇಲಾಖೆಗಳಿಗೆ ಬಿಡುಗಡೆ ಮಾಡಿದ ನಿಧಿಗಳು ಮತ್ತು ಬಳಕೆಯ ವಿಶ್ಲೇಷಣೆಯನ್ನು **ಕೋಷ್ಟಕ–2.20(ಸಿ)**ನಲ್ಲಿ ನೀಡಲಾಗಿದೆ.

**ಕೋಷ್ಟಕ-2.20(ಸಿ): ಕೋವಿಡ್-19ರ ನಿಯಂತ್ರಣಕ್ಕಾಗಿ 2019-20ರಿಂದ 2021-22ರ ಅವಧಿಯಲ್ಲಿ ಬಿಡುಗಡೆ ಮಾಡಿದ ಮತ್ತು ಬಳಸಿದ ನಿಧಿಗಳ ವಿವರ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಇಲಾಖೆ | ಮೂಲ/ಅನುಷ್ಠಾನ ಸಂಸ್ಥೆ | ಬಿಡುಗಡೆ ಮಾಡಿದ ನಿಧಿ | ಬಳಸಿದ ನಿಧಿ |
|---|---|---|---|---|
| 1 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಜ್ಯ ಸರ್ಕಾರ-ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ | 4,547.06 | 4,037.30 |
| 2 | ವೈದ್ಯಕೀಯ ಶಿಕ್ಷಣ | ರಾಜ್ಯ ಮುಖ್ಯಮಂತ್ರಿಗಳ ಕಲ್ಯಾಣ ನಿಧಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ರಾಷ್ಟ್ರೀಯ ಆರೋಗ್ಯ ಅಭಿಯಾನ | 1,132.86 | 1,120.87 |
| 3 | ಕಂದಾಯ | ಕೇಂದ್ರ ಮತ್ತು ರಾಜ್ಯದ ಪಾಲು | 1,958.58 | 1,958.58 |
| ಒಟ್ಟು ಮೊತ್ತ | | | 7,638.5 | 7,116.75 |

*ಆಕರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಒದಗಿಸಲ್ಪಟ್ಟ ಮಾಹಿತಿ*

ಮೇಲಿನ ಕೋಷ್ಟಕದಿಂದ ಕೋವಿಡ್-19ರ ನಿಯಂತ್ರಣಕ್ಕಾಗಿ ಬಿಡುಗಡೆ ಮಾಡಿದ ಮೊತ್ತದ ಶೇಕಡ 92ರಷ್ಟನ್ನು ಬಳಸಲಾಗಿದೆ. ಇಲಾಖೆಗಳಿಗೆ ಬಿಡುಗಡೆ ಮಾಡಿದ ಬಾಕಿ ₹521.75 ಕೋಟಿ ಹಣವು ಇಲಾಖೆಯ ಸಂಬಂಧಿಸಿದ ನಿಯಂತ್ರಣ ಮತ್ತು ವಿತರಣಾ ಅಧಿಕಾರಿಗಳೊಂದಿಗೆ ಬಳಸದೆ ಉಳಿದಿದೆ.-

### *2.5.3 ಬಂಡವಾಳ ವೆಚ್ಚ*

ಬಂಡವಾಳ ವೆಚ್ಚವು ಪ್ರಾಥಮಿಕವಾಗಿ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಇತ್ಯಾದಿಗಳಂತಹ ಸ್ಥಿರ ಮೂಲ ಸೌಕರ್ಯ ಸ್ವತ್ತುಗಳ ರಚನೆಯ ಮೇಲಿನ ವೆಚ್ಚವನ್ನು ಒಳಗೊಂಡಿರುತ್ತದೆ. ಬಂಡವಾಳ ವೆಚ್ಚವನ್ನು ಆಯವ್ಯಯ ಬೆಂಬಲ ಮತ್ತು ಹೆಚ್ಚುವರಿ ಆಯವ್ಯಯ ಸಂಪನ್ಮೂಲಗಳು/ಆಯವ್ಯಯದ ಹೊರಗಿನ ಸಾಲಗಳಿಂದ ಭರಿಸಲಾಗುತ್ತದೆ. ಇತ್ತೀಚೆಗೆ ಮೂಲಭೂತ ಸೌಕರ್ಯ ಅಗತ್ಯತೆಗಳು ಬಹುಪಟ್ಟು ಹೆಚ್ಚಿವೆ ಮತ್ತು ಬಂಡವಾಳ ವೆಚ್ಚದ ಬಹು ಭಾಗವನ್ನು ಕೈಗೊಳ್ಳಲು ವಿಶೇಷ ಉದ್ದೇಶ ಸಾಧನಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದ ಬಂಡವಾಳ ವೆಚ್ಚವು (ಸಾಲ ಮತ್ತು ಮುಂಗಡಗಳ ವಿತರಣೆಯು ಸೇರಿದಂತೆ) 2017-18ರಲ್ಲಿನ ₹35,760 ಕೋಟಿಗಳಿಂದ 2020-21ರಲ್ಲಿ ₹48,075 ಕೋಟಿಗಳಿಗೆ ಏರಿಕೆಯಾಗಿದೆ. 2021-22ರಲ್ಲಿ ಬಂಡವಾಳ ವೆಚ್ಚವು ಹಿಂದಿನ ವರ್ಷಕ್ಕಿಂತ ₹4,008 ಕೋಟಿಗಳಷ್ಟು ಹೆಚ್ಚಾಗಿ ₹52,083 ಕೋಟಿಗಳಷ್ಟಿತ್ತು.

**ನಕ್ಷೆ-2.12: 2017-18 ರಿಂದ 2021-22ರವರೆಗಿನ ಐದು ವರ್ಷಗಳ ಅವಧಿಯಲ್ಲಿ ಬಂಡವಾಳ ವೆಚ್ಚದ (ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಂತೆ) ಪ್ರವೃತ್ತಿ**




*ಆಕರ: ಹಣಕಾಸು ಲೆಕ್ಕಗಳು*

ಮೇಲಿನ ನಕ್ಷೆಯಲ್ಲಿ ನೋಡಿದಂತೆ, ವಾಸ್ತವಿಕ ವೆಚ್ಚವು 2017–18, 2020–21 ಮತ್ತು 2021–22ರಲ್ಲಿ ಅಂದಾಜು ಬಂಡವಾಳ ವೆಚ್ಚಕ್ಕಿಂತ ಹೆಚ್ಚಾಗಿದೆ. 2018–19 ಮತ್ತು 2019–20ರಲ್ಲಿ, ವಾಸ್ತವಿಕ ಬಂಡವಾಳ ವೆಚ್ಚವು ಅಂದಾಜಿಗಿಂತ ಕ್ರಮವಾಗಿ ಶೇಕಡ ಐದು ಮತ್ತು ಶೇಕಡ ಏಳರಷ್ಟು ಕಡಿಮೆಯಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2021–22ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಬಂಡವಾಳ ವೆಚ್ಚದ ಪ್ರಮುಖ ಹೆಚ್ಚಳ ಅಥವಾ ಇಳಿಕೆಯ ಪ್ರಕರಣಗಳನ್ನು **ಕೋಷ್ಟಕ–2.21**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.21: 2020–21ಕ್ಕೆ ಹೋಲಿಸಿದಂತೆ 2021–22ರಲ್ಲಿ ಬಂಡವಾಳ ವೆಚ್ಚ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕಶೀರ್ಷಿಕೆ | 2020–21 | 2021–22 | ಹೆಚ್ಚಳ (+)/ ಇಳಿಕೆ (–) | ವ್ಯತ್ಯಾಸ ಶೇಕಡ |
|---|---|---|---|---|
| 4059–ಲೋಕೋಪಯೋಗಿ ಕಾಮಗಾರಿಗಳ ಮೇಲೆ ಬಂಡವಾಳ ವೆಚ್ಚ | 838.53 | 778.26 | (–)60.27 | (–)7.19 |
| 4202–ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಮೇಲಣ ಬಂಡವಾಳ ವೆಚ್ಚ | 1,167.87 | 1,634.07 | 466.2 | 39.92 |
| 4210–ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ಮೇಲಣ ಬಂಡವಾಳ ವೆಚ್ಚ | 2,099.44 | 2,574.84 | 475.4 | 22.64 |
| 4215–ನೀರು ಸರಬರಾಜು ಮತ್ತು ನೈರ್ಮಲ್ಯ ಮೇಲಣ ಬಂಡವಾಳ ವೆಚ್ಚ | 3,211.90 | 1,967.79 | (–)1,244.11 | (–)38.73 |
| 4217–ನಗರಾಭಿವೃದ್ಧಿ ಮೇಲಣ ಬಂಡವಾಳ ವೆಚ್ಚ | 3,332.11 | 4,541.04 | 1,208.93 | 36.28 |
| 4225– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣದ ಮೇಲಣ ಬಂಡವಾಳ ವೆಚ್ಚ | 1,163.80 | 1,952.86 | 789.06 | 67.80 |
| 4701–ಮಧ್ಯಮ ನೀರಾವರಿ ಮೇಲಣ ಬಂಡವಾಳ ವೆಚ್ಚ | 14,993.82 | 16,361.95 | 1,368.13 | 9.12 |
| 4702–ಸಣ್ಣ ನೀರಾವರಿ ಮೇಲಣ ಬಂಡವಾಳ ವೆಚ್ಚ | 2,585.90 | 2,512.53 | (–)73.37 | (–)2.84 |
| 4711–ನೆರೆ ಪರಿಹಾರ ಯೋಜನೆಗಳ ಮೇಲಣ ಬಂಡವಾಳ ವೆಚ್ಚ | 157.74 | 142.09 | (–)15.65 | (–)9.92 |
| 4801–ವಿದ್ಯುತ್ ಯೋಜನೆಗಳ ಮೇಲಣ ಬಂಡವಾಳ ವೆಚ್ಚ | 650.12 | 200.00 | (–)450.12 | (–)69.24 |
| 5054–ರಸ್ತೆಗಳು ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ | 10,548.97 | 9,806.83 | (–)742.14 | (–)7.04 |
| 5055–ರಸ್ತೆ ಸಾರಿಗೆ ಮೇಲಿನ ಬಂಡವಾಳ ವೆಚ್ಚ | 368.59 | 312.72 | (–)55.87 | (–)15.16 |

*ಆಕರ : ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕವು ಪ್ರಮುಖವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು (ಶೇಕಡ 67.80) ಮತ್ತು ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ (ಶೇಕಡ 39.92) ಅಡಿಯಲ್ಲಿ ಬಂಡವಾಳ ವೆಚ್ಚವನ್ನು ಮಾಡಲಾಗಿದೆ ಎಂದು ತಿಳಿಸುತ್ತದೆ.

ರಾಜ್ಯ ಸರ್ಕಾರದ ವೆಚ್ಚ ಸುಧಾರಣಾ ಆಯೋಗ (ಇಆರ್‌ಸಿ) ತನ್ನ ಮೊದಲ ವರದಿಯಲ್ಲಿ (ಫೆಬ್ರವರಿ 2010) ಬಂಡವಾಳ ಹೂಡಿಕೆಗಳನ್ನು ಹೆಚ್ಚಿಸಲು ಮತ್ತು ವಿವೇಚನಾಯುಕ್ತ ಹಂಚಿಕೆಗಳ ಮೂಲಕ ಹಣಕಾಸಿನ ಅನಿಶ್ಚಿತತೆಗಳಿಂದ ರಕ್ಷಿಸಲು ಶಿಫಾರಸು ಮಾಡಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಲ್ಲಿ ಬಂಡವಾಳ ವೆಚ್ಚವನ್ನು (ಸಾಲ ಸೇವೆಯನ್ನು ಹೊರತುಪಡಿಸಿ) ನಿರ್ವಹಿಸುವಂತೆ ಶಿಫಾರಸು ಮಾಡಿತ್ತು. ಆದಾಗ್ಯೂ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಂಡವಾಳ ವೆಚ್ಚದ ಅನುಪಾತವು 2017–18ರಿಂದ 2021–22ರ ಅವಧಿಯಲ್ಲಿ ಕೇವಲ ಶೇಕಡ ಎರಡರಿಂದ ಮೂರು ಆಗಿತ್ತು

### *2.5.4 ಬಂಡವಾಳ ವೆಚ್ಚದ ಗುಣಮಟ್ಟ*

ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಚೌಕಟ್ಟಿನ ನಂತರದಲ್ಲಿ, ಸರ್ಕಾರವು ತನ್ನ ವಿತ್ತೀಯ ಕೊರತೆಯನ್ನು (ಸಾಲಗಳು) ಕಡಿಮೆ ಮಟ್ಟದಲ್ಲಿ ಇಟ್ಟುಕೊಳ್ಳುತ್ತದೆ ಹಾಗೂ ತನ್ನ ಬಂಡವಾಳ ವೆಚ್ಚ/ ಹೂಡಿಕೆಯ (ಸಾಲಗಳು ಮತ್ತು ಮುಂಗಡಗಳು ಸೇರಿದಂತೆ) ಅವಶ್ಯಕತೆಗಳನ್ನು ಪೂರೈಸುತ್ತದೆ ಎಂದು

ನಿರೀಕ್ಷಿಸಲಾಗಿದೆ. ಇದಲ್ಲದೆ, ರಾಜ್ಯ ಸರ್ಕಾರವು ಸಾಲದ ರೂಪದಲ್ಲಿ ಪಡೆದ ಮೊತ್ತಗಳನ್ನು ಸಹಾಯ ಧನಗಳಿಗೆ ಅನ್ವಯಿಸುವ ಬದಲು ತನ್ನ ಹೂಡಿಕೆಯ ಮೇಲೆ ಸಾಕಷ್ಟು ಲಾಭವನ್ನು ಗಳಿಸುವ ಕ್ರಮಗಳನ್ನು ಪ್ರಾರಂಭಿಸುವ ಮತ್ತು ಹಣಕಾಸಿನ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆಯನ್ನು ತುಂಬಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಈ ವಿಭಾಗವು ಹಿಂದಿನ ವರ್ಷಗಳಿಗೆ ಹೋಲಿಸಿದರೆ 2021–22ರಲ್ಲಿ ಸರ್ಕಾರವು ಕೈಗೊಂಡ ಹೂಡಿಕೆಗಳು ಮತ್ತು ಇತರ ಬಂಡವಾಳ ವೆಚ್ಚಗಳ ಸ್ಥೂಲ ಹಣಕಾಸು ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತದೆ.

#### 2.5.4.1 ಕಂಪನಿಗಳು, ನಿಗಮಗಳು ಮತ್ತು ಇತರ ಸಂಸ್ಥೆಗಳಲ್ಲಿ ಹೂಡಿಕೆಗಳು

31 ಮಾರ್ಚ್ 2022ರಲ್ಲಿದ್ದಂತೆ ಸರ್ಕಾರವು ₹70,657.43 ಕೋಟಿಗಳನ್ನು 91 ಸರ್ಕಾರಿ ಕಂಪನಿಗಳು[15] (₹61,059.93 ಕೋಟಿಗಳು), ಒಂಬತ್ತು ಶಾಸನಬದ್ಧ ನಿಗಮಗಳು (₹3,070.55 ಕೋಟಿಗಳು), 44 ಕೂಡು ಬಂಡವಾಳ ಕಂಪನಿಗಳು (₹6,070.66 ಕೋಟಿಗಳು) ಮತ್ತು ಸಹಕಾರ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ (₹456.29 ಕೋಟಿ) ಹೂಡಿಕೆ ಮಾಡಿದೆ. 2021–22ರಲ್ಲಿ, ಸರ್ಕಾರವು ಸಕ್ರಿಯ ಸರ್ಕಾರಿ ಕಂಪನಿಗಳಲ್ಲಿ (₹329.25 ಕೋಟಿಗಳು), ಕೂಡು ಬಂಡವಾಳ ಕಂಪನಿಗಳು (₹1,933.37 ಕೋಟಿ), ಶಾಸನಬದ್ಧ ನಿಗಮಗಳಲ್ಲಿ (₹136.50 ಕೋಟಿಗಳು) ಮತ್ತು ಸಹಕಾರಿ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ (₹1.63ಕೋಟಿ) ಈಕ್ವಿಟಿಯಾಗಿ ₹2,400.75 ಕೋಟಿಗಳನ್ನು ಹೂಡಿಕೆ ಮಾಡಿದೆ. ಶಾಸನಬದ್ಧ ನಿಗಮಗಳು ಮತ್ತು ಸರ್ಕಾರಿ ಕಂಪನಿಗಳ ಅಡಿಯಲ್ಲಿ ಹೂಡಿಕೆಯು ವಿವಿಧ ವಿಭಾಗಗಳ[16] ಅಡಿಯಲ್ಲಿ ಹರಡಿತ್ತು.

2021–22ರಲ್ಲಿ, ಸಂಸ್ಥೆಗಳಲ್ಲಿ ಸರ್ಕಾರದ ಷೇರು ಬಂಡವಾಳದ ಹೂಡಿಕೆಯ ಹಿಂಪಡೆತದಿಂದ ಸಹಕಾರ ಸಂಸ್ಥೆಗಳಲ್ಲಿನ ಹೂಡಿಕೆ ಲೆಕ್ಕವನ್ನು ₹0.48 ಕೋಟಿಗಳಷ್ಟು ಕಡಿಮೆಗೊಳಿಸಲಾಯಿತು. ಅದರ ಹುಟ್ಟುವಳಿಯನ್ನು" ವಿವಿಧ ಬಂಡವಾಳ ಸ್ವೀಕೃತಿಗಳು" ಶೀರ್ಷಿಕೆಯಡಿ ಪರಿಗಣಿಸಲಾಗುತ್ತದೆ.

- **ಹೂಡಿಕೆಯ ಮೇಲಿನ ಪ್ರತಿಫಲ**

ಕಳೆದ ಐದು ವರ್ಷಗಳಲ್ಲಿ ಹೂಡಿಕೆಯ ವಿವರಗಳು ಮತ್ತು ಅದರ ಪ್ರತಿಫಲವನ್ನು **ಕೋಷ್ಟಕ–2.22**ರಲ್ಲಿ ಸೂಚಿಸಲಾಗಿದೆ. ಹೂಡಿಕೆಯ ಮೇಲಿನ ಪ್ರತಿಫಲವು ಅತ್ಯಲ್ಪವಾಗಿದೆ ಎಂಬುದು ಕೋಷ್ಟಕದಿಂದ ಸ್ಪಷ್ಟವಾಗಿದೆ.

**ಕೋಷ್ಟಕ–2.22: ಹೂಡಿಕೆಯ ಮೇಲಿನ ಪ್ರತಿಫಲ**

| | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ವರ್ಷದ ಕೊನೆಯಲ್ಲಿದ್ದಂತೆ ಹೂಡಿಕೆಗಳು (₹ ಕೋಟಿಗಳಲ್ಲಿ) | 65,145.88 | 66,518.28 | 67,816.71 | 68,256.68 | 70,657.43 |
| ಪ್ರತಿಫಲ (₹ ಕೋಟಿಗಳಲ್ಲಿ) | 78.83 | 38.30 | 53.64 | 80.70 | 349.77 |
| ಪ್ರತಿಫಲ (ಶೇಕಡ) | 0.12 | 0.10 | 0.10 | 0.12 | 0.49 |
| ಸರ್ಕಾರದ ಸಾಲಗಳ ಮೇಲಿನ ಸರಾಸರಿ ಬಡ್ಡಿಯ ದರ (ಶೇಕಡ) | 6.40 | 6.25 | 6.39 | 6.22 | 6.00 |
| ಬಡ್ಡಿಯ ದರ ಮತ್ತು ಹೂಡಿಕೆಯ ಮೇಲಿನ ಪ್ರತಿಫಲಗಳ ನಡುವಿನ ವ್ಯತ್ಯಾಸ | 6.30 | 6.15 | 6.29 | 6.10 | 5.51 |

*ಆಕರ: ಹಣಕಾಸು ಲೆಕ್ಕಗಳು*

ಹೂಡಿಕೆ ಮೇಲಿನ ಪ್ರತಿಫಲವು 2017–18ರಲ್ಲಿದ್ದ ₹78.83 ಕೋಟಿಗಳಿಂದ 2021–22ರಲ್ಲಿ ₹349.77 ಕೋಟಿಗೆ ಏರಿಕೆಯಾಯಿತು ಮತ್ತು ಹಿಂದಿನ ವರ್ಷಕ್ಕೆ ಹೋಲಿಸಿದರೆ, ಶೇಕಡ 333.42ರಷ್ಟು

[15] ನಿಷ್ಕ್ರಿಯ ಸರ್ಕಾರಿ ಕಂಪನಿಗಳಲ್ಲಿ ಹೂಡಿದ ₹68 ಕೋಟಿಗಳನ್ನು ಒಳಗೊಂಡಿದೆ.

[16] ನೀರಾವರಿ (₹36,779.37 ಕೋಟಿಗಳು), ಇಂಧನ (₹12,025.66 ಕೋಟಿಗಳು), ಮೂಲಭೂತ ಸೌಲಭ್ಯ (₹4,933.65 ಕೋಟಿಗಳು), ಹಣಕಾಸು (₹3,641.80 ಕೋಟಿಗಳು) ಸಾರಿಗೆ (₹1,670.21 ಕೋಟಿಗಳು), ವಸತಿ (₹1,450.97 ಕೋಟಿಗಳು), ಕೈಗಾರಿಕೆಗಳು (₹1,288.27 ಕೋಟಿಗಳು) ಮತ್ತು ಇತರ ವಿಭಾಗಗಳು (₹8,836.50 ಕೋಟಿಗಳು)

ಏರಿಕೆಯಾಯಿತು. ಏರಿಕೆಯು ಪ್ರಮುಖವಾಗಿ ಕರ್ನಾಟಕ ರಾಜ್ಯ ಖನಿಜಗಳ ನಿಗಮ ನಿಯಮಿತ (₹140.61 ಕೋಟಿ), ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (₹86.49 ಕೋಟಿ), ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ (₹33.12 ಕೋಟಿ) ಇತ್ಯಾದಿಗಳಲ್ಲಿ ಇತ್ತು.

ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಉತ್ತರವಾಗಿ, ಆರ್ಥಿಕ ಇಲಾಖೆಯು ಲಾಭಗಳಿಸುತ್ತಿರುವ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಷೇರು ಲಾಭಾಂಶವನ್ನು ವಸೂಲಿಮಾಡಲು ಕೇಂದ್ರ ಸರ್ಕಾರವು ನಡೆಸುತ್ತಿರುವ ಕಾರ್ಯಪ್ರಕ್ರಿಯೆಯ ರೀತಿಯಲ್ಲೇ ನಡೆಸಲಾಗುವುದು ಎಂದು ಹೇಳಿತು (ಡಿಸೆಂಬರ್ 2021). ಮೊದಲನೆಯ ಹೆಜ್ಜೆಯಾಗಿ, ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿದ ಲಾಭಾಂಶದಲ್ಲಿ ಶೇಕಡ 30ಕ್ಕೆ ಕಡಿಮೆ ಇರದಂತೆ, ಷೇರು ಲಾಭಾಂಶವನ್ನು ಪಾವತಿಸಬೇಕು ಎಂದು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಮಾರ್ಗಸೂಚಿಗಳನ್ನು ಜಾರಿಮಾಡಿದೆ (ನವೆಂಬರ್ 2021) ಎಂದು ಹೇಳಿತು. ತತ್ಪರಿಣಾಮವಾಗಿ, ವಸೂಲಿ ಮಾಡಿದ ಷೇರು ಲಾಭಾಂಶದಲ್ಲಿ ಹೆಚ್ಚಳವಾಗಿದೆ. ಹಣಕಾಸು ನಿರ್ವಹಣಾ ಪರಿಶೀಲನಾ ಸಮಿತಿಯು ಸಹಾ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಷೇರು ಲಾಭಾಂಶ ಆದಾಯದ ಬಗ್ಗೆ ಆಶಾವಾದ ವ್ಯಕ್ತಪಡಿಸಿದೆ.

- **ನಷ್ಟದ ಕಂಪನಿಗಳಲ್ಲಿ ಹೂಡಿಕೆ**

ಮೇಲೆ ಹೇಳಿದ ಸರ್ಕಾರದ ಹೂಡಿಕೆಯು ಗಣನಾರ್ಹ ನಷ್ಟವನ್ನು ಅನುಭವಿಸುತ್ತಿರುವ ಮತ್ತು ಸಾಕಷ್ಟು ಪ್ರಮಾಣದ ಮೊತ್ತವನ್ನು ಹೂಡಿರುವ ಈ ಕೆಳಗಿನ ಕಂಪನಿಗಳು/ನಿಗಮಗಳಲ್ಲಿ ಹೂಡಿರುವ ₹42,194.32 ಕೋಟಿಗಳನ್ನು (ಶೇಕಡ 60) ಒಳಗೊಂಡಿತ್ತು (**ಕೋಷ್ಟಕ–2.23**)

**ಕೋಷ್ಟಕ–2.23: ನಷ್ಟದಲ್ಲಿರುವ ಕಂಪನಿಗಳಲ್ಲಿ ಮಾಡಿರುವ ಹೂಡಿಕೆಗಳು**

(₹ ಕೋಟಿಗಳಲ್ಲಿ)

| ಕಂಪನಿ/ನಿಗಮಗಳು | 2018–19ರ ಅಂತ್ಯದಲ್ಲಿದ್ದಂತೆ ಸಂಚಿತ ನಷ್ಟ | 2019–20ರ ಅಂತ್ಯದಲ್ಲಿದ್ದಂತೆ ಸಂಚಿತ ನಷ್ಟ | 2020–21ರ ಅಂತ್ಯದಲ್ಲಿದ್ದಂತೆ ಸಂಚಿತ ನಷ್ಟ | 2021–22ರವರೆಗೆ ಮಾಡಿದ ಹೂಡಿಕೆಗಳು |
|---|---|---|---|---|
| ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯೂಕೆಆರ್‌ಟಿಸಿ) | 881.55 | 1,068.00 | 1,068 | 266.85 |
| ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ) | 610.65 | 699.92 | 699.92 | 183.43 |
| ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆಎಸ್‌ಎಫ್‌ಸಿ) | 386.17 | 361.35 | 318.46 | 1,328.41 |
| ಸರ್ಕಾರಿ ಕಂಪನಿಗಳು | | | | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್‌ಎಲ್) | 2,811.73 | 2,946.51 | 3,419.93 | 23,745.34 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕೆಎನ್‌ಎನ್‌ಎಲ್) | 4,469.21 | 5,149.92 | 6,333.94 | 13,034.03 |
| ಮೈಸೂರು ಸಕ್ಕರೆ ಕಂಪನಿ ನಿಯಮಿತ (ಮೈಶುಗರ್) | 460.89 | 460.89 | 463.89 | 335.78 |
| ಮೈಸೂರು ಪೇಪರ್ ಮಿಲ್ಸ್ ನಿಯಮಿತ (ಎಮ್‌ಪಿಎಮ್) | 425.95 | 425.95 | 519.50 | 237.37 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) | 1,955.76 | 2,637.98 | 5,128.24 | 1,269.18 |
| ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) | 1,002.44 | 1,995.03 | 3,112.65 | 978.14 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಸೆಸ್ಕಾಂ) | 875.74 | 1,242.37 | 1,965.56 | 815.79 |
| ಒಟ್ಟು | **13,880.09** | **16,987.92** | **23,030.09** | **42,194.32** |

*ಆಕರ : ಹಣಕಾಸು ಲೆಕ್ಕಗಳು*

2021–22ರವರೆಗೆ, ಸರ್ಕಾರವು ಈ ಕಂಪನಿಗಳಲ್ಲಿ ₹42,194.32 ಕೋಟಿಗಳ ಹೂಡಿಕೆ ಮಾಡಿದೆ ಮತ್ತು ಸಂಚಿತ ನಷ್ಟವು ₹23,030.09 ಕೋಟಿ ಆಗಿದೆ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಹೂಡಿಕೆಯು ಪ್ರಮುಖವಾಗಿ ನೀರಾವರಿ, ಇಂಧನ ಮತ್ತು ಮೂಲಭೂತ ಸೌಕರ್ಯ ವಲಯದ ಅಡಿಯಲ್ಲಿ ನಷ್ಟವನ್ನು ಅನುಭವಿಸುತ್ತಿದೆ. ಕೃಷಿ ಉತ್ಪಾದನೆ, ಗ್ರಾಮೀಣ ಉದ್ಯೋಗ ಮತ್ತು ಕೈಗಾರಿಕಾ ಬೆಳವಣಿಗೆಗೆ ಕೊಡುಗೆ ನೀಡುವುದರಿಂದ ಹೂಡಿಕೆಯು ಅನಿವಾರ್ಯವಾಗಿದೆ ಎಂದು ಹೇಳಿದೆ (ಜನವರಿ 2023).

ಸಾರ್ವಜನಿಕ ವಲಯ ಉದ್ದಿಮೆಗಳು ಶೇಕಡ 30ರಷ್ಟನ್ನು ಷೇರು ಲಾಭಾಂಶವೆಂದು ಪಾವತಿಸುವಂತೆ ನಿರ್ದೇಶನ ನೀಡಿದ ಮೇಲೆ 2021–22ರ ಅವಧಿಯಲ್ಲಿ ಷೇರು ಲಾಭಾಂಶದ ವಸೂಲಾತಿಯಲ್ಲಿ ಹೆಚ್ಚಾಗಿದೆ ಎಂದೂ ತಿಳಿಸಿದೆ. ಷೇರು ಲಾಭಾಂಶ ಹೆಚ್ಚಳಗೊಳಿಸಲು ಆರ್ಥಿಕ ಇಲಾಖೆ ಪ್ರಾರಂಭಿಸಿದ ಕ್ರಮವನ್ನು ಪ್ರಶಂಸಿಸಲಾಗಿದೆ.

### 2.5.4.2 ರಾಜ್ಯ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು

ಕಂಪನಿಗಳು, ನಿಗಮಗಳು ಮತ್ತು ಸಹಕಾರ ಸಂಸ್ಥೆಗಳಲ್ಲಿ ಹೂಡಿಕೆಯ ಜೊತೆಗೆ, ಸರ್ಕಾರವು ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡಗಳನ್ನು ಸಹ ನೀಡುತ್ತದೆ. 31 ಮಾರ್ಚ್ 2022ರಲ್ಲಿದ್ದಂತೆ ಬಾಕಿ ಉಳಿದಿರುವ ಸಾಲಗಳು ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಕಳೆದ ಐದು ವರ್ಷಗಳಲ್ಲಿ ಬಡ್ಡಿ ಪಾವತಿಗಳಿಗೆ ಹೋಲಿಸಿದರೆ ಬಡ್ಡಿ ಸ್ವೀಕೃತಿಗಳನ್ನು **ಕೋಷ್ಟಕ–2.24** ಪ್ರಸ್ತುತ ಪಡಿಸುತ್ತದೆ.

**ಕೋಷ್ಟಕ–2.24: ಕಳೆದ ಐದು ವರ್ಷಗಳಲ್ಲಿ ವಿತರಿಸಲಾದ ಮತ್ತು ವಸೂಲಿಯಾದ ಸಾಲಗಳ ಪ್ರಮಾಣ**

(₹ ಕೋಟಿಗಳಲ್ಲಿ)

| | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಬಾಕಿ ಇರುವ ಸಾಲಗಳ ಆರಂಭಿಕ ಶಿಲ್ಕು | 15,578 | 20,525 | 24,981 | 28,847 | 31,247 |
| ವರ್ಷದಲ್ಲಿ ನೀಡಿದ ಮೊತ್ತ | 5,092 | 4,487 | 4,069 | 2,669 | 4,209 |
| ವರ್ಷದಲ್ಲಿ ವಸೂಲಾದ ಮೊತ್ತ | 137 | 31 | 203 | 270 | 127 |
| ಬಾಕಿ ಇರುವ ಸಾಲಗಳ ಅಂತಿಮ ಶಿಲ್ಕು | 20,533 | 24,981 | 28,847 | 31,246 | 35,329 |
| ನಿವ್ವಳ ಸೇರ್ಪಡೆ | 4,955 | 4,456 | 3,866 | 2,399 | 4,082 |
| ಪಡೆದ ಬಡ್ಡಿ | 99 | 108 | 357 | 278 | 309 |

*ಆಕರ : ಹಣಕಾಸು ಲೆಕ್ಕಗಳು*

- 31 ಮಾರ್ಚ್ 2022ರಂತೆ ಬಾಕಿ ಉಳಿದಿರುವ ಸಾಲಗಳ ಮೊತ್ತವು ₹35,329 ಕೋಟಿಗಳಾಗಿವೆ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳಿಗೆ ಸಂಬಂಧಿಸಿದಂತೆ ಮಾರ್ಚ್ 2021ರ ಅಂತ್ಯದ ವೇಳೆಗೆ ಇದ್ದ ಬಾಕಿಯ ಮೇಲಿನ ಬಡ್ಡಿಯು ₹4,904.26 ಕೋಟಿಗಳಷ್ಟಿದೆ. 2021–22ರಲ್ಲಿ, ಸ್ವೀಕರಿಸಿದ ಬಡ್ಡಿಯು ₹309 ಕೋಟಿಗಳಾಗಿದ್ದು ಇದು ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳ ಮೇಲಿನ ಬಾಕಿಯಿರುವ ಬಡ್ಡಿಯ ಶೇಕಡ 6.30ರಷ್ಟಿದೆ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿದ ಸಾಲಗಳಿಗೆ ಸಂಬಂಧಿಸಿದಂತೆ ಮಾರ್ಚ್ 2022ರಲ್ಲಿಂತೆ ಬಾಕಿ ಬಡ್ಡಿಯು ₹5,478.54 ಕೋಟಿಗಳು ಆಗಿತ್ತು. ಆದರೆ, ರಾಜ್ಯ ಸರ್ಕಾರವು ನಿರ್ವಹಿಸುತ್ತಿರುವ ಸಾಲಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಬಡ್ಡಿಯ ವಿವರಗಳು ಲಭ್ಯವಿಲ್ಲ.
- 2021–22ರಲ್ಲಿ ಮುಂಗಡ ನೀಡಿದ ಒಟ್ಟು ಸಾಲಗಳಲ್ಲಿ (₹4,209 ಕೋಟಿ), ಸಾಮಾಜಿಕ ಸೇವೆಗಳು ₹2,770 ಕೋಟಿಗಳು (ಶೇಕಡ 66), ಆರ್ಥಿಕ ಸೇವೆಗಳು ₹1,435 ಕೋಟಿಗಳು (ಶೇಕಡ 34) ಮತ್ತು ಉಳಿದ ₹4 ಕೋಟಿಗಳು ಸರ್ಕಾರಿ ನೌಕರರಿಗೆ ಸಂಬಂಧಿಸಿವೆ. ಸಾಮಾಜಿಕ ಸೇವೆಗಳಲ್ಲಿ ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿಗಳು ಪ್ರಮುಖ ಪಾಲನ್ನು (₹2,767 ಕೋಟಿಗಳು) ಪಡೆದಿವೆ ಮತ್ತು ಆರ್ಥಿಕ ಸೇವೆಗಳಲ್ಲಿ ಕೈಗಾರಿಕೆ ಮತ್ತು ಖನಿಜಗಳು ₹1,266 ಕೋಟಿಗಳನ್ನು ಪಡೆದಿದೆ.

- 21 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಾಲಗಳ ವಸೂಲಾತಿಯ ವಿವರವಾದ ಲೆಕ್ಕಗಳನ್ನು ಮಹಾಲೇಖಾಪಾಲರು (ಲೆ ಮತ್ತು ಹ) ಅವರ ಕಛೇರಿಯಲ್ಲಿ ನಿರ್ವಹಿಸಲಾಗುತ್ತದೆ ಮತ್ತು 842 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇದನ್ನು ಇಲಾಖೆಗಳ ಮುಖ್ಯಸ್ಥರು/ಸರ್ಕಾರದ ಮುಖ್ಯ ನಿಯಂತ್ರಣ ಅಧಿಕಾರಿಗಳು ನಿರ್ವಹಿಸುತ್ತಾರೆ.
- 2019–20ರಿಂದ 2020–21ವರೆಗೆ ಏರಿಕೆ ಪ್ರವೃತ್ತಿಯಲ್ಲಿದ್ದ ಸಾಲ ಮತ್ತು ಮುಂಗಡಗಳ ವಸೂಲಾತಿಯು 2021–22ರಲ್ಲಿ ಮತ್ತೊಮ್ಮೆ ಇಳಿಕೆ ಕಂಡಿತು.
- ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸುವ ಸಾಲದ ಲೆಕ್ಕಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 2022ರ ಅಂತ್ಯಕ್ಕೆ ವಸೂಲು ಮಾಡಬೇಕಿರುವ ಒಟ್ಟು ₹10,908.42 ಕೋಟಿಗಳ ಸಾಲಗಳು ಮತ್ತು ಮುಂಗಡಗಳ (ಅಸಲು: ₹5,429.88 ಕೋಟಿಗಳು ಮತ್ತು ಬಡ್ಡಿ: ₹5,478.54 ಕೋಟಿಗಳು) ವಸೂಲಾತಿಯ ಅವಧಿ ಮೀರಿದೆ **(ಅನುಬಂಧ–2.5)**.
- ಇಲಾಖೆಗಳ ಮುಖ್ಯಸ್ಥರು/ಮುಖ್ಯ ನಿಯಂತ್ರಣ ಅಧಿಕಾರಿಗಳು ನಿರ್ವಹಿಸುವ ಸಾಲಗಳ ಅವಧಿ ಮೀರಿದ ಅಸಲು ಮತ್ತು ಬಡ್ಡಿಗೆ ಸಂಬಂಧಿಸಿದಂತೆ 842 ಸಂಸ್ಥೆಗಳಲ್ಲಿ 13[17] ಸಂಸ್ಥೆಗಳು ಮಾತ್ರ ಅಗತ್ಯ ಮಾಹಿತಿಯನ್ನು ಒದಗಿಸಿರುವುದರಿಂದ 2021–22ರ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ–7ರಲ್ಲಿ ತೋರಿಸಿರುವ ಮಾಹಿತಿಯು ಅಪೂರ್ಣವಾಗಿದೆ.
- ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡಗಳು–3 (ಐಜಿಎಎಸ್–3) ನಿಗದಿಸಿದಂತೆ ಆಯಾ ಸಾಲಗಳಿಗೆ ಸಂಬಂಧಿಸಿದ ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳಿಲ್ಲದೆ ಮಂಜೂರಾದ ಸಾಲಗಳನ್ನು ಪ್ರಕಟಪಡಿಸುವ ಅಗತ್ಯವಿದೆ. 2021–22ರಲ್ಲಿ ರಾಜ್ಯ ಸರ್ಕಾರವು ಮಂಜೂರು ಮಾಡಿದ ₹4,206.81 ಕೋಟಿಗಳ ಮೊತ್ತದ 65 ಸಾಲಗಳಲ್ಲಿ, ₹2,893.02 ಕೋಟಿಗಳ ಮೊತ್ತದ 47 ಸಾಲಗಳನ್ನು ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸದೆ ಮಂಜೂರು ಮಾಡಲಾಗಿದೆ. ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ–18ರಲ್ಲಿ ವಿವರಗಳು ಹೆಚ್ಚುವರಿ ಪ್ರಕಟಗಳಾಗಿ ಲಭ್ಯವಿದೆ.

**ಕೋಷ್ಟಕ–2.25**ರಲ್ಲಿ ಸೂಚಿಸಿದಂತೆ ಮೂರು ವರ್ಷಗಳಲ್ಲಿ ನೀಡಿದ ಷರತ್ತು ಮತ್ತು ನಿಬಂಧನೆಗಳ ವಿಶ್ಲೇಷಣೆಯು 2019–20 ಮತ್ತು 2020–21 ನೀಡಿದ ಸಾಲಗಳ ಶೇಕಡ 50ರಷ್ಟಕ್ಕೂ ಹೆಚ್ಚಿನವುಗಳಿಗೆ ಸಂಬಂಧಿಸಿದಂತೆ, ಮಾರ್ಚ್ 2022ರ ಕೊನೆಯಲ್ಲೂ ಜಾರಿಗೊಳಿಸಬೇಕಿದೆ.

**ಕೋಷ್ಟಕ–2.25: 2019–20ರಿಂದ 2021–22ರವರೆಗೂ ರಾಜ್ಯ ಸರ್ಕಾರವು ನೀಡಿದ ಸಾಲಗಳ ವಿವರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಒಟ್ಟು ಸಾಲಗಳ ಸಂಖ್ಯೆ | ಒಟ್ಟು ಮೊತ್ತ | ವರ್ಷದ ಕೊನೆಯಲ್ಲಿ ಬಾಕಿ ಇದ್ದ ಷರತ್ತುಗಳು ಮತ್ತು ನಿಬಂಧನೆಗಳು | | ಮಾರ್ಚ್2022ರಲ್ಲಿ ಬಾಕಿ ಇದ್ದ ಷರತ್ತುಗಳು ಮತ್ತು ನಿಬಂಧನೆಗಳು | |
|---|---|---|---|---|---|---|
| | | | ಸಾಲಗಳ ಸಂಖ್ಯೆ | ಮೊತ್ತ | ಸಾಲಗಳ ಸಂಖ್ಯೆ | ಮೊತ್ತ |
| 2019–20 | 62 | 5,46,386.66 | 42 | 5,02,536.81 | 29 | 3,48,525.61 |
| 2020–21 | 66 | 4,06,395.41 | 50 | 2,81,789.22 | 31 | 1,69,819.52 |
| 2021–22 | 65 | 4,20,681.45 | 47 | 2,89,302.55 | – | – |

ಸಾಲಗಳ ಅತ್ಯಲ್ಪ ವಸೂಲಾತಿ ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸದೆ ಸಾಲಗಳನ್ನು ಮಂಜೂರು ಮಾಡುವುದನ್ನು 2006–07ರಿಂದಲೂ ಗಮನಿಸಲಾಗುತ್ತಿದೆ. ರಾಜ್ಯ ಸರ್ಕಾರವು ಪದೇ ಪದೇ ಷರತ್ತು ಮತ್ತು ನಿಬಂಧನೆಗಳ ಪರಿಷ್ಕರಣೆಯ ಬಗ್ಗೆ ಸುತ್ತೋಲೆಗಳನ್ನು ಹೊರಡಿಸುತ್ತಿದೆ. ಆದಾಗ್ಯೂ, ಸಾಲಗಳ/ಬಡ್ಡಿಗಳ ವಸೂಲಾತಿಗಾಗಿ ಅಥವಾ ವಿವಿಧ ಇಲಾಖೆಗಳಿಂದ ತನ್ನ ಸುತ್ತೋಲೆ ಸೂಚನೆಗಳ ಅನುಪಾಲನೆಯಾಗದಿದ್ದಲ್ಲಿ ಜಾರಿ ಮಾಡಬೇಕಿದ್ದ ಕ್ರಮಗಳ ಬಗ್ಗೆ ಯಾವುದೇ ಕ್ರಮವನ್ನು ಜಾರಿಗೊಳಿಸಿಲ್ಲ.

[17] 2020–21ರ ಅಂತ್ಯಕ್ಕೆ 842 ಸಂಸ್ಥೆಗಳಲ್ಲಿ 8 ಸಂಸ್ಥೆಗಳು ಮಾತ್ರ ಅಗತ್ಯ ಮಾಹಿತಿಯನ್ನು ಒದಗಿಸಿದ್ದವು.

### 2.5.4.3 ಅಪೂರ್ಣ ಯೋಜನೆಗಳಲ್ಲಿ ಬಂಡವಾಳದ ಬಂಧನ

ನ್ಯಾಯಾಲಯದಲ್ಲಿ ದಾವೆ ಹಾಗೂ ಇನ್ನಿತರ ಕಾರಣಗಳಿಂದ ಸ್ಥಗಿತಗೊಂಡ ಕಾಮಗಾರಿಗಳನ್ನು ಒಳಗೊಂಡಿರುವ ಅಪೂರ್ಣ ಕಾಮಗಾರಿಗಳಲ್ಲಿ ಹಣ ಬಂಧಿತವಾಗಿರುವುದು ವೆಚ್ಚದ ಗುಣಮಟ್ಟದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ. 31 ಮಾರ್ಚ್ 2022ರಂದು ಇದ್ದಂತೆ ಅಪೂರ್ಣ ಯೋಜನೆಗಳ ವರ್ಷವಾರು ವಿವರವನ್ನು **ಕೋಷ್ಟಕ–2.26**ರಲ್ಲಿ ತೋರಿಸಲಾಗಿದೆ ಮತ್ತು ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ–2.27**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.26: 31 ಮಾರ್ಚ್ 2022ರಲ್ಲಿದ್ದಂತೆ ಒಂದು ಕೋಟಿಗಿಂತ ಹೆಚ್ಚಿನ ಅಪೂರ್ಣ ಯೋಜನೆಗಳ ವರ್ಷಾವಾರು ವಿವರ (₹ಕೋಟಿಗಳಲ್ಲಿ)**

| ವರ್ಷದ ಕೊನೆಗೆ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| 2012–13ರ ವರೆಗೂ | 9 | 17.68 | 14.78 |
| 2013–14 | 5 | 13.30 | 8.79 |
| 2014–15 | 10 | 21.44 | 20.61 |
| 2015–16 | 20 | 189.33 | 97.51 |
| 2016–17 | 48 | 120.16 | 108.40 |
| 2017–18 | 46 | 254.71 | 216.61 |
| 2018–19 | 256 | 1,430.18 | 1,037.89 |
| 2019–20 | 328 | 1,953.30 | 1,331.12 |
| 2020–21 | 308 | 1,353.35 | 939.65 |
| 2021–22 | 178 | 584.91 | 312.15 |
| **ಒಟ್ಟು** | **1,208** | **5,938.36** | **4,087.51** |

**ಕೋಷ್ಟಕ–2.27: 31 ಮಾರ್ಚ್ 2022ರಲ್ಲಿದ್ದಂತೆ ಒಂದು ಕೋಟಿಗಿಂತ ಹೆಚ್ಚಿನ ಅಪೂರ್ಣ ಯೋಜನೆಗಳ ಇಲಾಖಾವಾರು ವಿವರ (₹ಕೋಟಿಗಳಲ್ಲಿ)**

| ಕಾಮಗಾರಿಗಳ ವಿವರ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| ರಸ್ತೆಗಳು ಮತ್ತು ಸೇತುವೆಗಳು | 928 | 4,496.93 | 3,115.07 |
| ನೀರಾವರಿ | 215 | 1,267.62 | 834.68 |
| ಕಟ್ಟಡಗಳು | 25 | 106.11 | 93.90 |
| ಇತರೆ | 40 | 67.70 | 43.86 |
| **ಒಟ್ಟು** | **1,208** | **5,938.36** | **4,087.51** |

*ಆಕರ: ಹಣಕಾಸು ಲೆಕ್ಕಗಳು*

31.03.2022ರ ಅಥವಾ ಅದಕ್ಕೂ ಮೊದಲು ಪೂರ್ಣವಾಗಬೇಕಾಗಿದ್ದ 1,208 ಯೋಜನೆಗಳ ಆರಂಭಿಕ ಅಂದಾಜು ₹5,938.36 ಕೋಟಿಗಳಲ್ಲಿ ₹4,087.51 ಕೋಟಿಗಳು ವೆಚ್ಚವಾಗಿದೆ. ಯೋಜನೆಗಳ ವಿಳಂಬವು ಐದು ವರ್ಷಗಳಿಗಿಂತ ಹೆಚ್ಚು (92), ಐದು ವರ್ಷಗಳಿಗಿಂತ ಕಡಿಮೆ ಆದರೆ ಒಂದು ವರ್ಷಕ್ಕಿಂತ ಹೆಚ್ಚು (938) ಮತ್ತು ಒಂದು ವರ್ಷಕ್ಕಿಂತ ಕಡಿಮೆ (178) ವ್ಯಾಪ್ತಿಯಲ್ಲಿದೆ. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಮತ್ತು ನೀರಾವರಿ ಇಲಾಖೆಗಳು ಕಾಮಗಾರಿಗಳ ವಿಳಂಬಕ್ಕೆ ಯಾವುದೇ ಕಾರಣಗಳನ್ನು ನೀಡಿಲ್ಲ.

31 ಮಾರ್ಚ್ 2022ಕ್ಕೆ ಅಪೂರ್ಣವಾಗಿದ್ದ 1,208 ಯೋಜನೆಗಳಲ್ಲಿ ಶೇಕಡ 60 ಯೋಜನೆಗಳು ಮೂರು ವರ್ಷಗಳಿಗೂ ಹೆಚ್ಚು ಕಾಲದಿಂದ ಅಪೂರ್ಣವಾಗಿಯೇ ಉಳಿದಿವೆ. ವಿತ್ತೀಯ ನಿರ್ವಹಣೆ ಸುಧಾರಣಾ ಸಮಿತಿಯು ಸಮಯ ಮತ್ತು ವೆಚ್ಚದ ಹೆಚ್ಚಳವನ್ನು ಕಡಿಮೆ ಮಾಡಲು, ಪೂರ್ಣಗೊಳ್ಳುತ್ತಿರುವ ಯೋಜನೆಗಳಿಗೆ ಆದ್ಯತೆಯ ಮೇಲೆ ಹಣವನ್ನು ಒದಗಿಸಬೇಕು ಎಂದು ಸಲಹೆ ನೀಡಿದೆ (ಜುಲೈ 2018). ಆದಾಗ್ಯೂ, 31 ಮಾರ್ಚ್ 2021ರಲ್ಲಿ 1,133 ಇದ್ದ ಅಪೂರ್ಣ ಯೋಜನೆಗಳ ಸಂಖ್ಯೆಯು 31 ಮಾರ್ಚ್ 2022ಕ್ಕೆ 1,208ಕ್ಕೆ ಏರಿರುವುದನ್ನು ಲೆಕ್ಕ ಪರಿಶೋಧನೆಯು ಗಮನಿಸಿದೆ. ಇದು ಮುಖ್ಯವಾಗಿ ರಸ್ತೆಗಳು ಮತ್ತು ಸೇತುವೆಗಳು ಮತ್ತು ನೀರಾವರಿ ಅಡಿಯಲ್ಲಿನ ಯೋಜನೆಗಳ ಸಂಖ್ಯೆಯಲ್ಲಿನ ಹೆಚ್ಚಳದಿಂದಾಗಿದೆ.

ಇದಲ್ಲದೆ, ಆಯಾ ವರ್ಷಗಳಲ್ಲಿ ಯೋಜನೆಗಳ ಅನುಷ್ಠಾನಕ್ಕಾಗಿ ಎರವಲು ಪಡೆದ ನಿಧಿಗಳು ನಿರರ್ಥಕವೆಂದು ಸಾಬೀತಾಗುತ್ತದೆ ಮತ್ತು ಸಾಲ ಮತ್ತು ಬಡ್ಡಿ ಹೊಣೆಗಾರಿಕೆಗಳ ಸೇವೆಯ ವಿಷಯದಲ್ಲಿ ರಾಜ್ಯವು ಹೆಚ್ಚುವರಿ ಹೊರೆಯನ್ನು ಹಂಚಿಕೊಳ್ಳಬೇಕಾಯಿತು. ಈ ಮೇಲಿನ ಎಲ್ಲಾ ಯೋಜನೆಗಳನ್ನು ಹೆಚ್ಚಿನ ವಿಳಂಬವಿಲ್ಲದೆ ಪೂರ್ಣಗೊಳಿಸಲು ಮತ್ತು ಸಮಯ ಮಿತಿ ಮೀರಿದ ಕಾರಣ ವೆಚ್ಚವನ್ನು ತಪ್ಪಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

### 2.5.5 ವೆಚ್ಚದ ಆದ್ಯತೆಗಳು

ಸಾಮಾಜಿಕ ವಲಯ ಮತ್ತು ಆರ್ಥಿಕ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ವೆಚ್ಚದ ಜವಾಬ್ದಾರಿಗಳು ಹೆಚ್ಚಾಗಿ ರಾಜ್ಯದ ವಿಷಯಗಳಾಗಿವೆ. ಮಾನವ ಅಭಿವೃದ್ಧಿಯ ಮಟ್ಟವನ್ನು ಹೆಚ್ಚಿಸಲು ರಾಜ್ಯಗಳು ಶಿಕ್ಷಣ, ಆರೋಗ್ಯ, ಇತ್ಯಾದಿ ಪ್ರಮುಖ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚವನ್ನು ಹೆಚ್ಚಿಸುವ ಅಗತ್ಯವಿದೆ. ನಿರ್ದಿಷ್ಟ ವೆಚ್ಚ ಶೀರ್ಷಿಕೆಗೆ ನೀಡಿದ ಹಂಚಿಕೆಯು ಸಾಮಾನ್ಯ ವರ್ಗಗಳ ರಾಜ್ಯದ/ರಾಷ್ಟ್ರೀಯ ಸರಾಸರಿಗಿಂತಲು ಕಡಿಮೆಯಿದ್ದರೆ ಕಡಿಮೆ ಹಣಕಾಸಿನ ಆದ್ಯತೆಯನ್ನು (ಒಟ್ಟಾರೆ ವೆಚ್ಚಕ್ಕೆ ವೆಚ್ಚದ ವಿಭಾಗದ ಅನುಪಾತ) ನಿರ್ದಿಷ್ಟ ವಿಭಾಗಕ್ಕೆ ನೀಡಲಾಗಿದೆ ಎನಿಸುತ್ತದೆ. ಈ ಅಂಗಗಳ ಅನುಪಾತವು ಹೆಚ್ಚಾಗಿದ್ದರೆ ವೆಚ್ಚದ ಗುಣಮಟ್ಟವನ್ನು ಉತ್ತಮವೆಂದು ಪರಿಗಣಿಸಲಾಗುತ್ತದೆ. ಪ್ರಸ್ತುತ 2021–22ರಲ್ಲಿ ಸಾಮಾನ್ಯ ವರ್ಗಗಳ ರಾಜ್ಯಗಳ ಮತ್ತು ನೆರೆಯ ರಾಜ್ಯಗಳಿಗೆ ಸಾಪೇಕ್ಷವಾಗಿ ಅಭಿವೃದ್ಧಿ ವೆಚ್ಚ, ಸಾಮಾಜಿಕ ವೆಚ್ಚ ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಹಣಕಾಸಿನ ಆದ್ಯತೆಯನ್ನು **ಕೋಷ್ಟಕ–2.28** ವಿಶ್ಲೇಷಿಸುತ್ತದೆ.

**ಕೋಷ್ಟಕ–2.28: 2021–22ರಲ್ಲಿ ರಾಜ್ಯಗಳ ಹಣಕಾಸಿನ ಆದ್ಯತೆ**

(ಶೇಕಡಾವಾರು)

| | ಒವೆ/ರಾಒಆಉ | ಬಂವೆ/ಒವೆ | ಅವೆ/ಒವೆ | ಶಿಕ್ಷಣ/ಒವೆ | ಆರೋಗ್ಯ/ಒವೆ |
|---|---|---|---|---|---|
| ಸಾಮಾನ್ಯ ವರ್ಗಗಳ ರಾಜ್ಯಗಳು | 15.84 | 14.41 | 66.74 | 14.66 | 6.20 |
| ಕೇರಳ | 18.10 | 10.44 | 50.95 | 15.27 | 7.32 |
| ತಮಿಳುನಾಡು | 14.27 | 13.80 | 64.22 | 13.02 | 6.45 |
| ಆಂಧ್ರಪ್ರದೇಶ | 14.78 | 10.42 | 66.69 | 14.39 | 6.34 |
| ತೆಲಂಗಾಣ | 15.17 | 21.44 | 73.91 | 8.14 | 4.19 |
| ಮಹಾರಾಷ್ಟ್ರ | 12.43 | 12.32 | 62.06 | 17.13 | 5.30 |
| ಮಧ್ಯಪ್ರದೇಶ | 19.25 | 19.53 | 74.34 | 13.55 | 5.63 |
| ಕರ್ನಾಟಕ | 15.19 | 19.92 | 73.14 | 11.53 | 5.87 |

*ಆಕರ: ಹಣಕಾಸು ಲೆಕ್ಕಗಳು*

*ಒವೆ: ಒಟ್ಟು ವೆಚ್ಚ, ಬಂವೆ: ಬಂಡವಾಳ ವೆಚ್ಚ, ಅವೆ: ಅಭಿವೃದ್ಧಿ ವೆಚ್ಚ (ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಅಡಿಯಲ್ಲಿ ಒಟ್ಟು ವೆಚ್ಚವನ್ನು ಒಳಗೊಂಡಿದೆ).*

2021–22ರ ಹೋಲಿಕೆ ವಿಶ್ಲೇಷಣೆಯು ಕೆಳಗಿನವುಗಳನ್ನು ತಿಳಿಯಪಡಿಸಿತು:

- ರಾಜ್ಯದ ಬಂಡವಾಳ ವೆಚ್ಚ ಮತ್ತು ಅಭಿವೃದ್ಧಿ ವೆಚ್ಚಕ್ಕೆ ಒಟ್ಟಾರೆ ಅಭಿವೃದ್ಧಿ ವೆಚ್ಚದ ಅನುಪಾತವು ಸಾಮಾನ್ಯ ವರ್ಗಗಳ ರಾಜ್ಯಗಳ ಅನುಪಾತಕ್ಕಿಂತ ಹೆಚ್ಚಾಗಿದೆ. ಇದು ವೆಚ್ಚದ ಗುಣಮಟ್ಟ ಸಾಮಾನ್ಯ ವರ್ಗಗಳ ರಾಜ್ಯಗಳಿಗೆ ಹೋಲಿಸಿದಾಗ ಉತ್ತಮವಾಗಿದೆ ಎಂದು ಸೂಚಿಸುತ್ತದೆ.
- ರಾಜ್ಯದ ಒಟ್ಟು ವೆಚ್ಚಕ್ಕೆ ಬಂಡವಾಳ ವೆಚ್ಚದ ಅನುಪಾತವು ತೆಲಂಗಾಣವನ್ನು ಬಿಟ್ಟು ಎಲ್ಲಾ ನೆರೆ ರಾಜ್ಯಗಳಿಗಿಂತ ಹೆಚ್ಚಾಗಿದೆ.
- ನೆರೆಯ ರಾಜ್ಯಗಳಿಗೆ (ತೆಲಂಗಾಣ ಮತ್ತು ಮಧ್ಯಪ್ರದೇಶ ಹೊರತು ಪಡಿಸಿ) ಹೋಲಿಸಿದರೆ ರಾಜ್ಯದ ಅಭಿವೃದ್ಧಿ ವೆಚ್ಚ/ಒಟ್ಟು ವೆಚ್ಚದ ಅನುಪಾತವು ಹೆಚ್ಚಿತ್ತು.
- ಶಿಕ್ಷಣ ಕ್ಷೇತ್ರದಡಿಯ ವೆಚ್ಚ/ಒಟ್ಟು ವೆಚ್ಚದ ಅನುಪಾತವು ತೆಲಂಗಾಣ ಹೊರತುಪಡಿಸಿ ಎಲ್ಲಾ ನೆರೆಯ ರಾಜ್ಯಗಳಿಗಿಂತ ಮತ್ತು ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಕಡಿಮೆಯಾಗಿದೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಆದ್ಯತೆಯನ್ನು ನೀಡಬೇಕಾಗಿದೆ,
- ಹಿಂದಿನ ವರ್ಷಗಳಿಗೆ ಹೋಲಿಸಿದರೆ 2021–22ರಲ್ಲಿ ಆರೋಗ್ಯ/ಒಟ್ಟು ವೆಚ್ಚ ಅನುಪಾತವು ಹೆಚ್ಚಿದ್ದರೂ, ಸಾಮಾನ್ಯ ವರ್ಗದ ರಾಜ್ಯಗಳ ಮತ್ತು ನೆರೆಯ ರಾಜ್ಯಗಳಾದ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಅನುಪಾತಕ್ಕೆ ಹೋಲಿಸಿದರೆ ರಾಜ್ಯದ ಅನುಪಾತವು ಕಡಿಮೆ ಇರುವುದರಿಂದ ಆರೋಗ್ಯ ಕ್ಷೇತ್ರಕ್ಕೆ ಆದ್ಯತೆಯನ್ನು ನೀಡಬೇಕಾಗಿದೆ.

## 2.6 ಸಾರ್ವಜನಿಕ ಲೆಕ್ಕ

ಸಂಚಿತ ನಿಧಿಯ ಭಾಗವಲ್ಲದ ಸಣ್ಣ ಉಳಿತಾಯ, ಭವಿಷ್ಯ ನಿಧಿ, ಮೀಸಲು ನಿಧಿಗಳು, ಠೇವಣಿಗಳು, ಅಮಾನತ್ತು, ಇರಸಾಲು ಇತ್ಯಾದಿ ಕೆಲವು ವಹಿವಾಟುಗಳಿಗೆ ಸಂಬಂಧಿಸಿದಂತೆ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಸಂವಿಧಾನದ ಅನುಚ್ಛೇದ 266(2) ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇರಿಸಲಾಗುತ್ತದೆ ಮತ್ತು ರಾಜ್ಯ ಶಾಸಕಾಂಗದಿಂದ ಮತಕ್ಕೆ ಒಳಪಡುವುದಿಲ್ಲ. ಈ ವಹಿವಾಟುಗಳು ಕೇವಲ ವಹಿವಾಟುಗಳಾಗಿ ಸಾಗುವುದರಿಂದ ಸಾರ್ವಜನಿಕ ಹಣದ ಪಾಲನೆಗಾಗಿ ಸರ್ಕಾರವು ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತದೆ.

### *2.6.1 ನಿವ್ವಳ ಸಾರ್ವಜನಿಕ ಲೆಕ್ಕದ ಶಿಲ್ಕುಗಳು*

2017–18ರಿಂದ 2021–22ರವರೆಗಿನ ಅವಧಿಯಲ್ಲಿ ಸಾರ್ವಜನಿಕ ಲೆಕ್ಕದ ನಿವ್ವಳ ವಹಿವಾಟುಗಳನ್ನು **ಕೋಷ್ಟಕ–2.29**ರಲ್ಲಿ ಸೂಚಿಸಲಾಗಿದೆ ಮತ್ತು ಸಾರ್ವಜನಿಕ ಲೆಕ್ಕದ ಶಿಲ್ಕುಗಳ ಸಂಯೋಜನೆಯಲ್ಲಿನ ವಾರ್ಷಿಕ ಬದಲಾವಣೆಗಳನ್ನು **ನಕ್ಷೆ–2.13**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–2.29: ವರ್ಷದ ಮಾರ್ಚ್ 31ರಂತೆ ಸಾರ್ವಜನಿಕ ಲೆಕ್ಕದಲ್ಲಿ ಆಂಗವಾರು ನಿವ್ವಳ ಬಾಕಿಗಳು**

(₹ ಕೋಟಿಗಳಲ್ಲಿ)

| ವಲಯ | ಉಪವಲಯ | 2017–18 | 2018–19 | 2019–20 | 2020–21 | 2021–22 |
|---|---|---|---|---|---|---|
| ಐ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಮುಂತಾದವುಗಳು | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಮುಂತಾದವುಗಳು | 2,811 | 3,292 | 4,156 | 3,632 | 3,522 |
| ಜೆ. ಮೀಸಲು ನಿಧಿಗಳು | (ಎ) ಬಡ್ಡಿ ಇರುವ ಮೀಸಲು ನಿಧಿಗಳು | (–) 1,194 | 393 | 839 | (–)99 | (–)46 |
| | (ಬಿ) ಬಡ್ಡಿ ಇಲ್ಲದಿರುವ ಮೀಸಲು ನಿಧಿಗಳು | 4,212 | 2,804 | 3,889 | 6,374 | 9,219 |
| ಕೆ. ಠೇವಣಿಗಳು ಮತ್ತು ಮುಂಗಡಗಳು | (ಎ) ಬಡ್ಡಿ ಇರುವ ಠೇವಣಿಗಳು | (–) 3 | 62 | 99 | 16 | (–)18 |
| | (ಬಿ) ಬಡ್ಡಿ ಇಲ್ಲದಿರುವ ಠೇವಣಿಗಳು | 1,837 | 3,006 | 3,074 | (–)702 | 2,826 |
| | (ಸಿ) ಮುಂಗಡಗಳು | – | – | – | – | – |
| ಎಲ್. ಅಮಾನತ್ತು ಮತ್ತು ಇತರೆ | (ಎ) ಅಮಾನತ್ತುಗಳು | 17 | (–) 15 | 178 | (–)242 | (–)60 |
| | (ಬಿ) ಇತರೆ ಲೆಕ್ಕಗಳು | (–) 1,526 | (–) 6,072 | (–) 1,542 | (–)2,679 | (–)93 |
| | (ಸಿ) ಹೊರದೇಶಗಳ ಸರ್ಕಾರಗಳೊಂದಿಗಿನ ಲೆಕ್ಕಗಳು | – | – | – | – | – |
| | (ಡಿ) ಇತರೆ | – | – | – | – | – |
| ಎಮ್. ಇರಸಾಲುಗಳು | (ಎ) ಮನಿಆರ್ಡರ್‌ಗಳು ಮತ್ತು ಇತರೆ ಇರಸಾಲುಗಳು | (–) 51 | (–) 81 | (–) 263 | (–)53 | – |
| | (ಬಿ) ಅಂತರ ಸರ್ಕಾರಿ ಹೊಂದಾಣಿಕೆ ಲೆಕ್ಕಗಳು | (–) 25 | 42 | (–) 84 | 17 | (–)133 |
| ಒಟ್ಟು | | **6,078** | **3,431** | **10,346** | **6,264** | **15,217** |

*ಆಕರ: ಹಣಕಾಸು ಲೆಕ್ಕಗಳು*

*ಟಿಪ್ಪಣಿ : (+) ಎನ್ನುವುದು ಖರ್ಚು ಶಿಲ್ಕನ್ನು ಮತ್ತು (–) ಎನ್ನುವುದು ಜಮೆ ಶಿಲ್ಕನ್ನು ಸೂಚಿಸುತ್ತದೆ*

**ನಕ್ಷೆ–2.13: ಸಾರ್ವಜನಿಕ ಲೆಕ್ಕದ ಶಿಲ್ಕುಗಳ ಸಂಯೋಜನೆಯಲ್ಲಿ ವಾರ್ಷಿಕ ಬದಲಾವಣೆಗಳು**

(₹ ಕೋಟಿಗಳಲ್ಲಿ)




| | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಮುಂತಾದವುಗಳು | 2,811 | 3,292 | 4,156 | 3,632 | 3,532 |
| ಮೀಸಲು ನಿಧಿಗಳು | 3,018 | 3,197 | 4,728 | 6,275 | 9,173 |
| ಠೇವಣಿಗಳು ಮತ್ತು ಮುಂಗಡಗಳು | 1,834 | 3,068 | 3,173 | 685 | 2,808 |
| ಅಮಾನತ್ತು ಮತ್ತು ಇತರೆ | –1,509 | –6,087 | –1,364 | –2,921 | –152 |
| ಇರಸಾಲುಗಳು | –76 | –39 | –347 | –35 | –133 |

*ಆಕರ: ಹಣಕಾಸು ಲೆಕ್ಕಗಳು*

ಸಾರ್ವಜನಿಕ ಲೆಕ್ಕದಲ್ಲಿ ನಿವ್ವಳ ಸ್ವೀಕೃತಿಗಳು 2017–18ರಲ್ಲಿ ₹6,078 ಕೋಟಿಗಳಷ್ಟಿದ್ದು 2021–22ರಲ್ಲಿ ₹15,217 ಕೋಟಿಗಳಿಗೆ ಏರಿಕೆಯಾಗಿದೆ. ಹಿಂದಿನ ವರ್ಷಕ್ಕಿಂತ 2021–22ರಲ್ಲಿ ನಿವ್ವಳ ಶಿಲ್ಕಿನಲ್ಲಿ (₹8,953 ಕೋಟಿ) ಏರಿಕೆಯು ಠೇವಣಿ ಮತ್ತು ಮುಂಗಡಗಳು (ಬಡ್ಡಿರಹಿತ ಠೇವಣಿಗಳು) ಮತ್ತು ಮೀಸಲು ನಿಧಿಗಳ (ಬಡ್ಡಿರಹಿತ ಮೀಸಲು ನಿಧಿಗಳು) ಅಡಿಯಲ್ಲಿನ ಏರಿಕೆಯಿಂದಾಗಿದೆ. ಮೀಸಲು ನಿಧಿಗಳು, ಸಣ್ಣ ಉಳಿತಾಯ, ಭವಿಷ್ಯ ನಿಧಿಗಳ ಅಡಿಯಲ್ಲಿನ ನಿವ್ವಳ ಲಭ್ಯತೆಯು ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವಲ್ಲಿ ಪ್ರಮುಖ ಪಾಲನ್ನು ಹೊಂದಿವೆ. ಅಮಾನತ್ತು ಮತ್ತು ಇತರೆ ವಿಭಾಗಗಳಡಿಯಲ್ಲಿ, ನಗದೀಕರಣವಾಗದ ಚೆಕ್ಕುಗಳ ವಹಿವಾಟುಗಳಲ್ಲಿ ಇಳಿಕೆ ಕಂಡುಬಂದಿದ್ದು 2020–21ರಲ್ಲಿದ್ದ ₹2,679 ಕೋಟಿಗಳಿಗೆ ಹೋಲಿಸಿದರೆ 2021–22ರ ಅವಧಿಯಲ್ಲಿ ₹93 ಕೋಟಿಗಳಷ್ಟಾಗಿದೆ.

### *2.6.2 ಮೀಸಲು ನಿಧಿಗಳು*

ರಾಜ್ಯ ಸರ್ಕಾರದ ಲೆಕ್ಕಗಳಲ್ಲಿ (ಸಾರ್ವಜನಿಕ ಲೆಕ್ಕ) ಸೆಕ್ಟರ್ 'ಜೆ' ಅಡಿಯಲ್ಲಿ ನಿರ್ದಿಷ್ಟ ಮತ್ತು ಸ್ಪಷ್ಟವಾಗಿ ನಿರೂಪಿಸಲಾದ ಉದ್ದೇಶಗಳಿಗಾಗಿ ಮೀಸಲು ನಿಧಿಗಳನ್ನು ರಚಿಸಲಾಗಿದೆ. ಈ ನಿಧಿಯನ್ನು ಭಾರತದ ಸಂಚಿತ ನಿಧಿ ಅಥವಾ ರಾಜ್ಯ ಸಂಚಿತ ನಿಧಿಯಿಂದ ಅಥವಾ ಹೊರಗಿನ ಏಜೆನ್ಸಿಗಳ ಕೊಡುಗೆಗಳು ಅಥವಾ ಅನುದಾನಗಳಿಂದ ತುಂಬಲಾಗುತ್ತದೆ. ಈ ನಿಧಿಗಳಿಗೆ ನೀಡಿದ ಕೊಡುಗೆಗಳನ್ನು ಸಂಚಿತ ನಿಧಿಯಡಿಯಲ್ಲಿ ಖರ್ಚು ಎಂದು ಪರಿಗಣಿಸಲಾಗುತ್ತದೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿಯಡಿಯಲ್ಲಿ ಲೆಕ್ಕ ಹಾಕಲಾಗುತ್ತದೆ ಮತ್ತು ಇದಕ್ಕಾಗಿ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗುತ್ತದೆ. ವರ್ಷದ ಕೊನೆಯಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸುವ ಸಮಯದಲ್ಲಿ, ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ. ನಿಧಿಗಳನ್ನು ಮುಂದೆ 'ಬಡ್ಡಿಸಹಿತ ನಿಧಿಗಳು' ಮತ್ತು 'ಬಡ್ಡಿರಹಿತ ನಿಧಿಗಳು' ಎಂದು ವರ್ಗೀಕರಿಸಬಹುದು.

ಸರ್ಕಾರದ ಹೊಣೆಗಾರಿಕೆಯ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಮೀಸಲು ನಿಧಿಗಳ ವಿಶ್ಲೇಷಣೆ, ನಿಧಿಗಳ ಸ್ವೀಕೃತಿ ಮತ್ತು ವೆಚ್ಚವನ್ನು ಕೆಳಗೆ ವಿವರಿಸಲಾಗಿದೆ.

**(ಎ) ಸಂಚಿತ ಋಣ ಪರಿಹಾರ ನಿಧಿ**

ಹನ್ನೆರಡನೆ ಹಣಕಾಸು ಆಯೋಗ ಶಿಫಾರಸಿನಂತೆ ಸರ್ಕಾರವು, ಎಲ್ಲಾ ಸಾಲಗಳ ಕಾಲಕಾಲದ ತೀರುವಳಿಗಾಗಿ 2012–13ರಲ್ಲಿ ಸಂಚಿತ ಋಣ ಪರಿಹಾರ ನಿಧಿಯನ್ನು ಸ್ಥಾಪಿಸಿ ನಿಧಿಗೆ ಮೂಲಧನವಾಗಿ ₹1,000

ಕೋಟಿಗಳನ್ನು ವರ್ಗಾಯಿಸಿತು. ಈ ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕು ನಿರ್ವಹಿಸುತ್ತಿದ್ದು ಮೂಲಧನವನ್ನು ಭಾರತ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಿದೆ. ಸರ್ಕಾರದ ಅಧಿಸೂಚನೆಯ ಪ್ರಕಾರ (ಫೆಬ್ರವರಿ 2013) ರಾಜ್ಯ ಸರ್ಕಾರವು ಹಿಂದಿನ ಹಣಕಾಸು ವರ್ಷದ ಕೊನೆಯಲ್ಲಿ ಬಾಕಿ ಉಳಿದಿರುವ ಹೊಣೆಗಾರಿಕೆಗಳ (ಆಯವ್ಯಯದ ಹೊರಗಿನ ಸಾಲಗಳನ್ನು ಹೊರತುಪಡಿಸಿ) ಶೇಕಡ 0.50ರಷ್ಟು ಮೊತ್ತವನ್ನು ನಿಧಿಗೆ ಕನಿಷ್ಟ ವಾರ್ಷಿಕ ವಂತಿಗೆಯನ್ನು ನೀಡಬಹುದು. 2021–22ರ ಅವಧಿಯಲ್ಲಿ, ಕನಿಷ್ಠ ಅಗತ್ಯವಾದ ₹1,854.44 ಕೋಟಿಗಳಿಗೆ ಪ್ರತಿಯಾಗಿ ರಾಜ್ಯ ಸರ್ಕಾರವು ಪ್ರಧಾನ ಲೆಕ್ಕ ಶೀರ್ಷಿಕೆ–2048 ಅಡಿಯಲ್ಲಿ ಸಂಚಿತ ಋಣ ಪರಿಹಾರ ನಿಧಿಗೆ ₹3,780 ಕೋಟಿಗಳ ವಂತಿಗೆ ನೀಡಿದೆ. ಲೆಕ್ಕ ಪುಸ್ತಕಗಳ ಪ್ರಕಾರ ವರ್ಷದ ಕೊನೆಯಲ್ಲಿ ನಿಧಿಯ ಅಡಿಯಲ್ಲಿನ ಶಿಲ್ಕು ₹8,600 ಕೋಟಿಗಳಷ್ಟಿತ್ತು.

**(ಬಿ) ಹಸಿರು ತೆರಿಗೆ**

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಕಾಯಿದೆ, 2002ರ ಪ್ರಕಾರ ಸರ್ಕಾರವು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಹಸಿರು ತೆರಿಗೆ[18] ಎಂಬ ಉಪಕರದ ಸಂಗ್ರಹವನ್ನು ಜಾರಿಗೆ ತಂದಿದೆ.

ಮಾರ್ಚ್ 31, 2016ಕ್ಕೆ ಕೊನೆಗೊಂಡ ರಾಜ್ಯ ಹಣಕಾಸುಗಳ ಕುರಿತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ **ಕಂಡಿಕೆ–1.3.1.1**–ಅಸಮರ್ಪಕ ಲೆಕ್ಕಪತ್ರ ನಿರ್ವಹಣೆ ಮತ್ತು ಹಸಿರು ತೆರಿಗೆ ಉಪಕರ ಸಂಗ್ರಹಗಳ ಬಳಕೆಯಾಗದಿರುವುದು' ಅಡಿಯಲ್ಲಿ ಹಸಿರು ತೆರಿಗೆ ಉಪಕರ ಶೀರ್ಷಿಕೆಯಡಿ ಸಂಗ್ರಹಿಸಿದ ಮೊತ್ತವನ್ನು ರಾಜಸ್ವ ಸ್ವೀಕೃತಿಗಳ ಶೀರ್ಷಿಕೆ '0041–00–102–0–11–ಹಸಿರು ತೆರಿಗೆ' ಮತ್ತು ವೆಚ್ಚವನ್ನು '2041–00–001–0–07–ವಾಯು ಮಾಲಿನ್ಯ ಮತ್ತು ಇತರ ಚಟುವಟಿಕೆಗಳನ್ನು ನಿಯಂತ್ರಿಸುವ ಕ್ರಮಗಳ ಅನುಷ್ಠಾನ' ಅಡಿಯಲ್ಲಿ ಲೆಕ್ಕ ಹಾಕಬೇಕು ಎಂದು ಹೇಳಲಾಗಿದೆ. ಹಸಿರು ತೆರಿಗೆ ಉಪಕರ ಸಂಗ್ರಹವನ್ನು ವರ್ಗಾಯಿಸಲು ಮೀಸಲು ನಿಧಿ ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳ ಅಡಿಯಲ್ಲಿ '8229–00–200–0–63–ಹಸಿರು ತೆರಿಗೆ' ಲೆಕ್ಕ ಶೀರ್ಷಿಕೆಯನ್ನು ತೆರೆಯಲಾಗಿದೆ .

2021–22ರ ವರ್ಷದಲ್ಲಿ, ಯಾವುದೇ ಮೊತ್ತವನ್ನು ವರ್ಗಾಯಿಸಿಲ್ಲ/ಲೆಕ್ಕ ಹಾಕಿಲ್ಲ. 2021–22ರ ಅವಧಿಯಲ್ಲಿ ₹13.84 ಕೋಟಿಗಳ ಸ್ವೀಕೃತಿಗಳನ್ನು (2020–21ರಲ್ಲಿ ₹10.86 ಕೋಟಿಗಳು) ನಿಧಿಗೆ ವರ್ಗಾಯಿಸಲಾಗಿಲ್ಲ. 31 ಮಾರ್ಚ್ 2022ರಂತೆ ನಿಧಿಯ ಲೆಕ್ಕದಲ್ಲಿ ಅಂತಿಮ ಶಿಲ್ಕು ₹50.17 ಕೋಟಿ ಆಗಿತ್ತು.

ಹಸಿರು ತೆರಿಗೆ ಉಪಕರದ ಮೊತ್ತವಾದ 2020–21 ಮತ್ತು 2021–22ರ ಅವಧಿಯಲ್ಲಿ ಅನುಕ್ರಮವಾಗಿ ರಾಜಸ್ವ ಸ್ವೀಕೃತಿಗಳ ಶೀರ್ಷಿಕೆ "0041–00–102–0–11 ಅಡಿಯಲ್ಲಿ ಸಂಗ್ರಹಿಸಿದ ₹10.86 ಕೋಟಿ ಮತ್ತು ₹13.84 ಕೋಟಿಗಳು ಮತ್ತು 2020–21 ಮತ್ತು 2021–22ರ ಅವಧಿಯಲ್ಲಿ ರಾಜಸ್ವ ವೆಚ್ಚ ಶೀರ್ಷಿಕೆ 2041–00–001–0–07–059 ಅಡಿಯಲ್ಲಿ ಭರಿಸಿದ ವೆಚ್ಚವಾದ ಅನುಕ್ರಮವಾಗಿ, ₹0.18 ಕೋಟಿ ಮತ್ತು ₹8.95 ಕೋಟಿಗಳನ್ನು ಹಸಿರುತೆರಿಗೆ ನಿಧಿಗೆ ವರ್ಗಾಯಿಸಲಾಗಿದೆ ಎಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿದೆ (ಜನವರಿ 2023) .

ಆದಾಗ್ಯೂ, ಇದು ವರ್ಷದ ಆರ್ಥಿಕ ಪ್ರಮಿತಿಗಳಿಗೆ ವ್ಯತ್ಯಯವನ್ನುಂಟುಮಾಡುವುದರಿಂದ, ಸಂಗ್ರಹಿಸಿದ ಸ್ವೀಕೃತಿಗಳು ಮತ್ತು ಭರಿಸಿದ ವೆಚ್ಚವನ್ನು ಆರ್ಥಿಕ ಇಲಾಖೆಯು ಅದೇ ವರ್ಷದಲ್ಲಿ ವರ್ಗಾಯಿಸುವ ಅಗತ್ಯತೆ ಇದೆ.

[18] ವಾಯುಮಾಲಿನ್ಯವನ್ನು ನಿಯಂತ್ರಿಸಲು ವಿವಿಧ ಕ್ರಮಗಳ ಅನುಷ್ಠಾನದ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿದ ದರಗಳಲ್ಲಿ ವಿಧಿಸಲಾದ ತೆರಿಗೆಗೆ ಜೊತೆಯಾಗಿ ನೋಂದಣಿ ಪ್ರಮಾಣಪತ್ರದ ನವೀಕರಣದ ಸಮಯದಲ್ಲಿ ಹದಿನೈದು ವರ್ಷಗಳನ್ನು ಪೂರೈಸಿದ ದ್ವಿಚಕ್ರ ವಾಹನಗಳು ಮತ್ತು ಸಾರಿಗೆಯೇತರ ವಾಹನಗಳು ಹಾಗೂ ಏಳು ವರ್ಷಗಳನ್ನು ಪೂರೈಸಿದ ಸಾರಿಗೆ ವಾಹನಗಳಿಗೆ ಸಂಬಂಧಿಸಿದಂತೆ ವಿಧಿಸುವ ಉಪಕರವೇ ಹಸಿರು ತೆರಿಗೆಯಾಗಿದೆ.

**(ಸಿ) ರಸ್ತೆ ಸುರಕ್ಷತೆ ಉಪಕರ**

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಕಾಯಿದೆ, 2017ರ ಪ್ರಕಾರ ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ರಸ್ತೆ ಸುರಕ್ಷತಾ ನಿಧಿಯನ್ನು ಸ್ಥಾಪಿಸಲು ಅವಕಾಶವನ್ನು ಒದಗಿಸಿದೆ. ರಸ್ತೆ ಸುರಕ್ಷತಾ ಉಪಕರವನ್ನು ವಿವಿಧ ವರ್ಗದ ಮೋಟಾರು ವಾಹನಗಳಿಗೆ ವಿವಿಧ ದರಗಳಲ್ಲಿ ವಾಹನ ನೋಂದಣಿ ಸಮಯದಲ್ಲಿ ಒಮ್ಮೆ ವಿಧಿಸಲಾಗುತ್ತದೆ ಮತ್ತು ಸಂಗ್ರಹಿಸಲಾಗುತ್ತದೆ.

ಆರಂಭದಲ್ಲಿ ರಾಜಸ್ವ ಸ್ವೀಕೃತಿಯಾಗಿ ಪರಿಗಣಿಸಲಾದ ರಸ್ತೆ ಸುರಕ್ಷತಾ ಉಪಕರವನ್ನು ಮೊದಲು ಲೆಕ್ಕ ಶೀರ್ಷಿಕೆ "0041–00–102–0–12–ರಸ್ತೆ ಸುರಕ್ಷತಾ ಉಪಕರದ" ಅಡಿಯಲ್ಲಿ ಲೆಕ್ಕ ಹಾಕಿದ ತರುವಾಯ ಈ ಉದ್ದೇಶಕ್ಕಾಗಿ ವಿಶೇಷವಾಗಿ ರಚಿಸಲಾದ ಮೀಸಲು ನಿಧಿಗೆ ಹೊಂದಾಣಿಕೆ ನಮೂದುಗಳ ಮೂಲಕ ಲೆಕ್ಕಶೀರ್ಷಿಕೆ 8229–00–200–0–64–ರಸ್ತೆ ಸುರಕ್ಷತೆ ನಿಧಿಗೆ ವರ್ಗಾಯಿಸಬೇಕಾಗುತ್ತದೆ. 2021–22ರ ವರ್ಷದಲ್ಲಿ ಈ ಸಂಬಂಧ ಯಾವುದೇ ವಹಿವಾಟು ನಡೆದಿಲ್ಲ. ಆದರೆ, 2021–22ರ ಸ್ವೀಕೃತಿಗಳಾದ ₹91.31 ಕೋಟಿಗಳು ಮತ್ತು 2020–21ನೇ ಸಾಲಿನ ₹87.65 ಕೋಟಿಗಳ ಮೊತ್ತದ ಸ್ವೀಕೃತಿಗಳನ್ನು ಲೆಕ್ಕ ಹಾಕಲಾಗಿದೆ ಅದರೆ ನಿಧಿಗೆ ವರ್ಗಾಯಿಸಲಾಗಿಲ್ಲ. 31 ಮಾರ್ಚ್ 2022ರಲ್ಲಿದ್ದಂತೆ ನಿಧಿಯ ಲೆಕ್ಕದಲ್ಲಿರುವ ಮುಕ್ತಾಯ ಶಿಲ್ಕು ₹469.58 ಕೋಟಿಗಳು ಆಗಿತ್ತು.

ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಉತ್ತರ ನೀಡುವಾಗ, ಆರ್ಥಿಕ ಇಲಾಖೆಯು ಸಂಚಿತ ನಿಧಿಯಿಂದ ಮೀಸಲು ನಿಧಿಗೆ ಸ್ವೀಕೃತಿಗಳು ಮತ್ತು ವೆಚ್ಚದ ವರ್ಗಾವಣೆ ವರ್ಷದ ಕೊನೆಯಲ್ಲಿನ ಆರ್ಥಿಕ ಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ತಿಳಿಸಿತು. ಆದಾಗ್ಯೂ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರ ಕಾಯಿದೆ, 2017ರ ಪ್ರಕಾರ, ರಾಜ್ಯವು ನಿಧಿಗೆ ಪ್ರತೀ ವರ್ಷವೂ ಕೊಡುಗೆ ನೀಡಬೇಕು. ಆದ್ದರಿಂದ, ಸಾರ್ವಜನಿಕ ಲೆಕ್ಕದಲ್ಲಿನ ಹಸಿರು ತೆರಿಗೆ ಮತ್ತು ರಸ್ತೆ ಸುರಕ್ಷತಾ ಉಪಕರಗಳ ನಿಧಿಗೆ ಸ್ವೀಕೃತಿಗಳ ಭಾಗವನ್ನು ವರ್ಗಾಯಿಸದಿರುವುದು ರಾಜಸ್ವ ಸ್ವೀಕೃತಿಗಳನ್ನು ಅಧಿಕವಾಗಿ ತೋರಿಸಲು ಮತ್ತು ರಾಜಸ್ವ ಕೊರತೆಯನ್ನು ಕಡಿಮೆ ತೋರಿಸಲು ಕಾರಣವಾಗಿದೆ.

ಆರ್ಥಿಕ ಇಲಾಖೆಯು, ತನ್ನ ಉತ್ತರದಲ್ಲಿ (ಜನವರಿ 2023) 2020–21 ಮತ್ತು 2021–22ರಲ್ಲಿ ರಸ್ತೆ ಸುರಕ್ಷಾ ಉಪಕರ ಅಡಿಯಲ್ಲಿ ಸಂಗ್ರಹಿಸಿದ ಮೊತ್ತ ಮತ್ತು ವೆಚ್ಚಗಳನ್ನು ರಸ್ತೆ ಸುರಕ್ಷತಾ ನಿಧಿಗೆ ವರ್ಗಾಯಿಸಲು ಅನುಮೋದನೆ ನೀಡಿದೆ ಎಂದು ತಿಳಿಸಿದೆ. ಆದರೆ, ಸರ್ಕಾರಿ ಆದೇಶ ಇನ್ನೂ ಜಾರಿಯಾಗಿಲ್ಲ.

**(ಡಿ) ರಾಜ್ಯ ವಿಪತ್ತು ನಿರ್ವಹಣಾ ನಿಧಿ**

ವಿಪತ್ತು ನಿರ್ವಹಣಾ ಕಾಯಿದೆ 2005ರ ಅಡಿಯಲ್ಲಿ ಸ್ಥಾಪಿಸಲಾದ ರಾಜ್ಯ ವಿಪತ್ತು ನಿರ್ವಹಣಾ ನಿಧಿಯು 2010–11ರಿಂದ ಬಡ್ಡಿ ಸಹಿತದ ಮೀಸಲು ನಿಧಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮಾರ್ಗಸೂಚಿಗಳ ಪ್ರಕಾರ ರಾಜ್ಯ ವಿಪತ್ತು ನಿರ್ವಹಣಾ ನಿಧಿಯ ಸಂಚಯನಗಳು ಮತ್ತು ನಿಧಿಯ ಹೂಡಿಕೆಯ ಮೇಲೆ ಗಳಿಸಿದ ಆದಾಯವನ್ನು ಕೇಂದ್ರ ಸರ್ಕಾರದ ದಿನಾಂಕ ಭದ್ರತೆಗಳು, ಹರಾಜು ಮಾಡಿದ ಖಜಾನೆ ಬಿಲ್‌ಗಳು ಮತ್ತು ಬಡ್ಡಿ ಗಳಿಸುವ ಠೇವಣಿಗಳು ಮತ್ತು ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಠೇವಣಿಗಳ ಪ್ರಮಾಣ ಪತ್ರಗಳು ಇಂತಹ ಒಂದು ಅಥವಾ ಹೆಚ್ಚಿನ ಸಾಧನಗಳಲ್ಲಿ ಹೂಡಿಕೆ ಮಾಡಬೇಕು, ನೈಸರ್ಗಿಕ ವಿಕೋಪಗಳಾದ ಬರ, ಪ್ರವಾಹ, ಚಂಡಮಾರುತ, ಭೂಕಂಪ, ಬೆಂಕಿ ಮುಂತಾದವುಗಳು ಈ ಯೋಜನೆಯಡಿಯಲ್ಲಿ ಪರಿಹಾರಕ್ಕೆ ಅರ್ಹವಾಗಿವೆ.

ಹದಿನಾಲ್ಕನೇ ಹಣಕಾಸು ಆಯೋಗದ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ 75:25 ಹಂಚಿಕೆ ಮಾದರಿಯು ಹದಿನೈದನೆಯ ಹಣಕಾಸು ಆಯೋಗದ ಅವಧಿಯಲ್ಲೂ ಮುಂದುವರಿದಿದೆ. 2021–22ರಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕ್ರಮವಾಗಿ ₹632.40 ಕೋಟಿಗಳು (₹843.20 ಕೋಟಿಯ ಶೇಕಡ

75) ಮತ್ತು ₹210.80 ಕೋಟಿಗಳು (₹843.20 ಕೋಟಿಯ ಶೇಕಡ 25) ಒಟ್ಟು ₹843.20 ಕೋಟಿಗಳ ಮೊತ್ತವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಬೇಕಾಗಿತ್ತು, ಕೇಂದ್ರ ಸರ್ಕಾರವು ತನ್ನ ಪಾಲಿನ ₹632.40 ಕೋಟಿಗಳ ಅಗತ್ಯಕ್ಕೆ ಪ್ರತಿಯಾಗಿ, ₹632.80 ಕೋಟಿಗಳನ್ನು ಅಂದರೆ ಹೆಚ್ಚುವರಿಯಾಗಿ ₹0.40 ಕೋಟಿಗಳನ್ನು ವರ್ಗಾಯಿಸಿದೆ. ಇದರಿಂದಾಗಿ, ರಾಜ್ಯವು ನಿಧಿಗೆ ತನ್ನ ವಂತಿಗೆಯಲ್ಲಿ ₹0.40 ಕೋಟಿಗಳನ್ನು ಕಡಿಮೆ ಮಾಡಿದೆ ಮತ್ತು ₹210.40 ಕೋಟಿಯನ್ನು ವರ್ಗಾಯಿಸಿದೆ.

ಇದರೊಂದಿಗೆ, 2021–22ರಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ಭಾರತ ಸರ್ಕಾರದ ಹೆಚ್ಚುವರಿ ಕೊಡುಗೆಯಾಗಿ ರಾಜ್ಯವು ₹1,623.30 ಕೋಟಿಗಳ ಮೊತ್ತವನ್ನು ಸ್ವೀಕರಿಸಿದೆ.

2245–ನೈಸರ್ಗಿಕ ವಿಕೋಪಗಳಿಗೆ ಪರಿಹಾರ – ಪ್ರಧಾನ ಲೆಕ್ಕ ಶೀರ್ಷಿಕೆಯಡಿ ₹2,466.50 ಕೋಟಿಗಳ ಒಟ್ಟು ಮೊತ್ತವನ್ನು (₹843.20 ಕೋಟಿ ಮತ್ತು ₹1,623.30 ಕೋಟಿ) ಸಂಪೂರ್ಣವಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ನಿಧಿಯಡಿ ಉಳಿದ ಶಿಲ್ಕು ₹2.42 ಕೋಟಿಗಳಷ್ಟಾಗಿತ್ತು. ಈ ಮೊತ್ತವು 2017–18ರಲ್ಲಿ ನಿಧಿ ಲೆಕ್ಕದಲ್ಲಿ ಬಳಕೆಯಾಗದ ₹41.98 ಕೋಟಿಗಳ ಮೊತ್ತಕ್ಕೆ 2020–21ರಲ್ಲಿ ಪಡೆದ ಶೇಕಡ 8ರ ದರದಲ್ಲಿ ಗಳಿಸಿದ ಬಡ್ಡಿಯಾಗಿದೆ.

**(ಇ) ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್‌ಡಿಎಮ್‌ಎಫ್)**

ಪರಿಚ್ಛೇದ 48(ಸಿ) ಅಡಿಯಲ್ಲಿ ವಿಪತ್ತು ಉಪಶಮನ ಕಾಯಿದೆ/ವಿಧೇಯಕ 2005, ನಿಧಿಯನ್ನು ರಾಜ್ಯ ಸರ್ಕಾರವು ನವೆಂಬರ್ 2013ರಲ್ಲಿ ಮೀಸಲು ನಿಧಿಯಡಿ ಸಾರ್ವಜನಿಕ ಲೆಕ್ಕದಡಿ ನಿಧಿಗಳು (ಬಡ್ಡಿ ಸಹಿತ) ವಿಭಾಗದಲ್ಲಿ ಪ್ರಧಾನ ಲೆಕ್ಕ ಶೀರ್ಷಿಕೆ 8121 – ಸಾಮಾನ್ಯ ಮತ್ತು ಇತರ ಮೀಸಲು ನಿಧಿಗಳು ಅಡಿಯಲ್ಲಿ ಈ ನಿಧಿಯನ್ನು ಸ್ಥಾಪಿಸಲಾಗಿದೆ. ರಾಜ್ಯ ವಿಪತ್ತು ಉಪಶಮನ ನಿಧಿಯು ಸ್ವತ್ತುಗಳ ಸಂರಕ್ಷಣೆ, ಪರಿಸರ ವ್ಯವಸ್ಥೆ ಮತ್ತು ಪುನರ್ವಸತಿ, ವಿಪತ್ತುಗಳ ಶಮನಕ್ಕೆ ಸ್ಥಳೀಯ ಮಾರ್ಗಗಳ ಉತ್ತೇಜನ ಇತ್ಯಾದಿಗಳಿಗೆ ಹಣವನ್ನು ಒದಗಿಸುತ್ತದೆ.

ಮೀಸಲು ನಿಧಿಗಳ ವಿಭಾಗದಲ್ಲಿ ಸ್ಥಾಪಿಸಲಾಗಿರುವ ರಾಜ್ಯ ವಿಪತ್ತು ಉಪಶಮನ ನಿಧಿಯು ಬಡ್ಡಿಯನ್ನು ಹೊಂದಿರುವ ಮೀಸಲು ನಿಧಿ ಆಗಿದೆ. ರಾಜ್ಯ ಸರ್ಕಾರವು ಮಾನ್ಯತೆ ಪಡೆದ ಬಡ್ಡಿ ಸಹಿತದ ಸಾಧನಗಳಲ್ಲಿ ತೊಡಗಿಸದ ಈ ನಿಧಿಗಳ ಮೊತ್ತಕ್ಕೆ ರಿಸರ್ವ್ ಬ್ಯಾಂಕಿನ ಓವರ್ ಡ್ರಾಫ್ಟ್ ನಿಯಮದ ಮಾರ್ಗಸೂಚಿಗಳಂತೆ ಅನ್ವಯವಾಗುವ ದರದಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿಗೆ ಬಡ್ಡಿಯನ್ನು ನೀಡಬೇಕಾಗಿರುತ್ತದೆ. 2020–21ರ ಆರ್ಥಿಕ ವರ್ಷದ ಕೊನೆಯಲ್ಲಿ ಈ ಖಾತೆಯಲ್ಲಿ ಖರ್ಚು ಮಾಡದ ಶಿಲ್ಕು 2021–22ರ ಹಣಕಾಸು ವರ್ಷದ ಖಾತೆಯ ಆರಂಭಿಕ ಶಿಲ್ಕು ಮತ್ತು 2025–26ರವರೆಗೆ. ಹಣಕಾಸು ವರ್ಷ 2020–21ರಿಂದ ಪ್ರಾರಂಭವಾಗುವ ಪ್ರತಿ ಹಣಕಾಸು ವರ್ಷದಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿಯ ಒಟ್ಟು ಗಾತ್ರವನ್ನು ಹದಿನೈದನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. ನಿಧಿಗೆ ಕೇಂದ್ರ ಮತ್ತು ರಾಜ್ಯಗಳ ವಂತಿಗೆಯು 75:25ರ ಅನುಪಾತದಲ್ಲಿದೆ.

2021–22ನೇ ಸಾಲಿನಲ್ಲಿ, ರಾಜ್ಯ ವಿಪತ್ತು ಉಪಶಮನ ನಿಧಿಗೆ ಒಟ್ಟು ವಂತಿಗೆಯು ₹210.80 ಕೋಟಿಗಳಾಗಿದ್ದು, ₹158.10 ಕೋಟಿಗಳು ಕೇಂದ್ರದ ಮತ್ತು ₹52.70 ಕೋಟಿಗಳು ರಾಜ್ಯದ ಪಾಲು ಆಗಿದೆ. ಇದರಲ್ಲಿ ರಾಜ್ಯವು ಕೇಂದ್ರದಿಂದ ₹158.20 ಕೋಟಿಗಳನ್ನು ಪಡೆದಿದೆ. ಇದರಿಂದ ರಾಜ್ಯವು ತನ್ನ ವಂತಿಗೆಯಲ್ಲಿ ₹0.10 ಕೋಟಿಯನ್ನು ಕಡಿತಗೊಳಿಸಿದೆ. ಒಟ್ಟು ₹210.80 ಕೋಟಿಗಳ ಸಂಪೂರ್ಣ ಮೊತ್ತವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿದೆ ಮತ್ತು 2245–ನೈಸರ್ಗಿಕ ವಿಕೋಪಗಳ ಮೇಲಿನ ಪರಿಹಾರ' ಪ್ರಧಾನ ಶೀರ್ಷಿಕೆಯ ಅಡಿಯಲ್ಲಿ ಯಾವುದೇ ವೆಚ್ಚವನ್ನು ಭರಿಸಲಾಗಿಲ್ಲ ಎಂದು ತೋರಿಸಲಾಗಿದೆ. ರಾಜ್ಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಉಪಶಮನ ನಿಧಿಗಳಡಿ 2021–22ರಲ್ಲಿನ ವೆಚ್ಚ/ಸ್ವೀಕೃತಿಗಳ ವಿವರಗಳನ್ನು **ಕೋಷ್ಟಕ–2.30**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.30: ರಾಜ್ಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಉಪಶಮನ ನಿಧಿಗಳಡಿಯ ವೆಚ್ಚಗಳು/ಸ್ವೀಕೃತಿಗಳ ವಿವರಗಳು**

(₹ ಕೋಟಿಗಳಲ್ಲಿ)

| | ಕಿರು ಲೆಕ್ಕಶೀರ್ಷಿಕೆ | 2021–22ರಲ್ಲಿ ವೆಚ್ಚ |
|---|---|---|
| **05–ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿ** | **ಪ್ರಾರಂಭಿಕ ಶಿಲ್ಕು** | **2.42** |
| | ಮೀಸಲು ನಿಧಿಗಳಿಗೆ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆಗಳು ರಾಜ್ಯ ವಿಪತ್ತು ನಿರ್ವಹಣಾ ನಿಧಿ | 843.20 |
| | ಮೀಸಲು ನಿಧಿಗಳಿಗೆ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆಗಳು– ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ | 1,623.30 |
| | ಕಳೆಯಿರಿ– ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ ಭರಿಸಿದ ಮೊತ್ತ | (–)843.20 |
| | ಕಳೆಯಿರಿ–ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ಭರಿಸಿದ ಮೊತ್ತ | (–)1,623.30 |
| | 2017–18ರ ಅವಧಿಯಲ್ಲಿ ರಾಜ್ಯ ವಿಪತ್ತು ನಿರ್ವಹಣಾ ನಿಧಿ ಅಡಿಯಲ್ಲಿ ಬಳಕೆ ಮಾಡದ ಮೊತ್ತದ ಸಂಬಂಧವಾಗಿನ ಬಡ್ಡಿಯ ವರ್ಗಾವಣೆಗಳು | – |
| | **ಮುಕ್ತಾಯದ ಶಿಲ್ಕು** | **2.42** |
| **10–ರಾಜ್ಯ ವಿಪತ್ತು ನಿವಾರಣಾ ನಿಧಿ** | **ಪ್ರಾರಂಭಿಕ ಶಿಲ್ಕು** | **26.30** |
| | ಮೀಸಲು ನಿಧಿಗಳಿಗೆ ಮತ್ತು ಠೇವಣಿ ಲೆಕ್ಕಗಳಿಗೆ ವರ್ಗಾವಣೆಗಳು ರಾಜ್ಯ ವಿಪತ್ತು ಉಪಶಮನ ನಿಧಿ | 210.80 |
| | ಕಳೆಯಿರಿ– ರಾಜ್ಯ ವಿಪತ್ತು ಉಪಶಮನ ನಿಧಿಯಿಂದ ಭರಿಸಿದ ಮೊತ್ತ | – |
| | **ಮುಕ್ತಾಯದ ಶಿಲ್ಕು** | **237.10** |

*ಆಕರ: 15ನೇ ಹಣಕಾಸು ಆಯೋಗ ಮತ್ತು ಖಾತೆ/ಖಾತಾ ಪುಸ್ತಕ*

31 ಮಾರ್ಚ್ 2022ರಂತೆ ರಾಜ್ಯ ವಿಪತ್ತು ಪರಿಹಾರ ನಿಧಿ/ರಾಜ್ಯ ವಿಪತ್ತು ಉಪಶಮನ ನಿಧಿಗಳಲ್ಲಿನ ಶಿಲ್ಕು ಕ್ರಮವಾಗಿ ₹2.42 ಕೋಟಿಗಳು ಮತ್ತು ₹237.10 ಕೋಟಿಗಳಷ್ಟಿದ್ದವು.

**(ಎಫ್) ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿ**

ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯಿದೆ 2016ರ ಪ್ರಕಾರ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರವು (ರೆರಾ) ಅಸ್ತಿತ್ವಕ್ಕೆ ಬಂದಿದೆ. ಇದು ವಸತಿ ವಹಿವಾಟುಗಳು ಮತ್ತು ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಕರ್ನಾಟಕದಲ್ಲಿ, ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಮತ್ತು ಅಭಿವೃದ್ಧಿ ನಿಯಮಗಳು, 2017ನ್ನು 10 ಜುಲೈ 2017ರಂದು ಅನುಮೋದಿಸಿ ಅಧಿಸೂಚಿಸಲಾಗಿದೆ.

14 ಜುಲೈ 2017ರ ಸರ್ಕಾರಿ ಆದೇಶದ ಪ್ರಕಾರ, ಬಡ್ಡಿಸಹಿತ ಠೇವಣಿ ಶೀರ್ಷಿಕೆ 8343–00–120–0–02 – ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಅಡಿಯಲ್ಲಿನ ವಹಿವಾಟುಗಳನ್ನು ಲೆಕ್ಕ ಹಾಕಲು ಸ್ಥಿರಾಸ್ತಿ ನಿಯಂತ್ರಣ ನಿಧಿಯನ್ನು ತೆರೆಯಲಾಗಿದೆ. ಪ್ರಾಧಿಕಾರ ಮತ್ತು ಮೇಲ್ಮನವಿ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ವೇತನಗಳು, ಭತ್ಯೆಗಳು, ಆಡಳಿತಾತ್ಮಕ ವೆಚ್ಚಗಳು ಮತ್ತು ಅದರ ಕಾರ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಾಧಿಕಾರದ ಯಾವುದೇ ಇತರ ವೆಚ್ಚಗಳಿಗೆ ಸಂಬಂಧಿಸಿದ ವೆಚ್ಚವನ್ನು ಪೂರೈಸಲು ನಿಧಿಯಲ್ಲಿನ ಸಂಗ್ರಹವನ್ನು ರಾಜ್ಯ ಸರ್ಕಾರವು ಬಳಸಿಕೊಳ್ಳುತ್ತದೆ.

2021–22ರಲ್ಲಿ, ಕರ್ನಾಟಕ ಸರ್ಕಾರವು ಒಂದು ಹೊಸ ಬಡ್ಡಿ–ರಹಿತ ಮೀಸಲು ನಿಧಿಯನ್ನು– ಸ್ಥಿರಾಸ್ತಿ ಪ್ರಾಧಿಕಾರಿ ನಿಯಂತ್ರಣ ಮೀಸಲು ನಿಧಿ ಎಂಬ ಹೆಸರಿನಲ್ಲಿ, ಲೆಕ್ಕ ಶೀರ್ಷಿಕೆ 0216–02–800–0–01 ಅಡಿಯಲ್ಲಿ ರಚಿಸಿತು (ಏಪ್ರಿಲ್ 2021). ತತ್ಪರಿಣಾಮವಾಗಿ, ಹಿಂದಿನ ಠೇವಣಿಯಲ್ಲಿದ್ದ ಬಾಕಿಯನ್ನು ಹೊಸ ಮೀಸಲು ನಿಧಿಗೆ ವರ್ಗಾಯಿಸಲಾಯಿತು.

2021–22ನೇ ಸಾಲಿನಲ್ಲಿ ನಿಧಿಗೆ ₹58.14 ಕೋಟಿಗಳ ಮೊತ್ತವನ್ನು (2020–21ರ ಅವಧಿಯ ₹44 ಕೋಟಿಗಳನ್ನು ಒಳಗೊಂಡು) ನಿಧಿಗೆ ವರ್ಗಾಯಿಸಲಾಯಿತು (ಲೆಕ್ಕ ಶೀರ್ಷಿಕೆ 0216–02–800–0–01–

ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿ ಅಡಿಯಲ್ಲಿ ಸಂಗ್ರಹಿಸಲಾದ ಶುಲ್ಕದಲ್ಲಿ ಸಂಚಿತ ನಿಧಿಯಿಂದ) ಮತ್ತು ₹12.65 ಕೋಟಿ ವೆಚ್ಚವನ್ನು ನಿಧಿಗೆ ಲೆಕ್ಕಮಾಡಲಾಯಿತು.. ಆದರೆ, 2017–18 ಮತ್ತು 2018–19ರ ಅವಧಿಯಲ್ಲಿ ಸಂಗ್ರಹಿಸಿದ ಸ್ವೀಕೃತಿಗಳು ಮತ್ತು ಮಾಡಿದ ವೆಚ್ಚವನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. ರಾಜ್ಯ ಹಣಕಾಸುಗಳ ಮೇಲಿನ ಹಿಂದಿನ ಲೆಕ್ಕಪರಿಶೋಧನೆಯ ವರದಿಯ ಮೂಲಕ ಗಮನ ಸೆಳೆದಿದ್ದರೂ, ಸರ್ಕಾರವು ಸ್ವೀಕೃತಿಗಳನ್ನು ಮತ್ತು ವೆಚ್ಚವನ್ನು ನಿಧಿಗೆ ವರ್ಗಾಯಿಸಲು ಯಾವುದೇ ಕ್ರಮವನ್ನು ಪ್ರಾರಂಭಿಸಲಾಗಿಲ್ಲ. 31 ಮಾರ್ಚ್ 2022ರಂತೆ ನಿಧಿಯಲ್ಲಿ ಜಮೆ ಇದ್ದ ಅಂತಿಮ ಶಿಲ್ಕು ₹58.19 ಕೋಟಿಗಳು ಆಗಿತ್ತು.

ಹಿಂದಿನ ವರ್ಷದಲ್ಲಿ ಆರ್ಥಿಕ ಇಲಾಖೆಯು 2017–18 ಮತ್ತು 2018–19ರ ಸಂದಾಯಗಳು ಮತ್ತು ವೆಚ್ಚವನ್ನು ಸಮನ್ವಯದ ನಂತರ ನಿಧಿಗೆ ವರ್ಗಾಯಿಸುವುದಾಗಿ ಉತ್ತರಿಸಿದ್ದರೂ, ಈ ಸಂಬಂಧದಲ್ಲಿ ಇನ್ನೂ ಯಾವುದೇ ಕ್ರಮವನ್ನು ಪ್ರಾರಂಭಿಸಬೇಕಾಗಿದೆ.

### 2.6.3 ನಿಷ್ಕ್ರಿಯ ಮೀಸಲು ನಿಧಿಗಳು

31 ಮಾರ್ಚ್ 2022ರ ಅಂತ್ಯದ ವೇಳೆಗೆ, 52 ಮೀಸಲು ನಿಧಿಗಳಲ್ಲಿ, 19 ನಿಧಿ ಲೆಕ್ಕಗಳು ನಿಷ್ಕ್ರಿಯವಾಗಿ ಉಳಿದಿವೆ. ಈ 19 ನಿಷ್ಕ್ರಿಯ ಮೀಸಲು ನಿಧಿಗಳಲ್ಲಿ, 31 ಮಾರ್ಚ್ 2022 ರಲ್ಲಿದ್ದಂತೆ 12 ಮೀಸಲು ನಿಧಿಗಳಲ್ಲಿ ₹731.67 ಕೋಟಿಗಳ ಜಮೆ ಶಿಲ್ಕು ಮತ್ತು ಏಳು ಮೀಸಲು ನಿಧಿಗಳಲ್ಲಿ ₹33.07 ಕೋಟಿಗಳ ಖರ್ಚು ಶಿಲ್ಕನ್ನು ಹೊಂದಿದ್ದವು.

ಇಂತಹ ನಿಷ್ಕ್ರಿಯ ಮೀಸಲು ನಿಧಿ ಲೆಕ್ಕಗಳನ್ನು ಸಮನ್ವಯದ ನಂತರ ಮುಕ್ತಾಯ ಮಾಡಲು ಮತ್ತು ಉಳಿದ ಹಣವನ್ನು ಸಂಚಿತ ನಿಧಿಗೆ ಜಮಾ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

### 2.6.4 ಪರಿಹಾರಾರ್ಥ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನೆ ಪ್ರಾಧಿಕಾರ (ಸಿಎಎಮ್‌ಪಿಎ)

ಪರಿಹಾರಾರ್ಥ ಅರಣ್ಯೀಕರಣ ಅಧಿನಿಯಮ, 2016ರ ಜಾರಿಯಾದ ನಂತರ, ಪರಿಹಾರಾರ್ಥ ಅರಣ್ಯೀಕರಣ ನಿಧಿ ಅಧಿನಿಯಮ, 2016ರ ಪರಿಚ್ಛೇದ 4ರಡಿಯಲ್ಲಿ ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿ–ಕರ್ನಾಟಕವನ್ನು ರಚಿಸಲಾಯಿತು (ಫೆಬ್ರವರಿ 2019). ಇದರೊಂದಿಗೆ, ಪ್ರತಿ ವರ್ಷ ರಾಷ್ಟ್ರೀಯ ನಿಧಿ (ಎನ್‌ಸಿಎಎಫ್) ಮತ್ತು ರಾಜ್ಯ ನಿಧಿಗೆ (ಪರಿಹಾರಾರ್ಥ ಅರಣ್ಯೀಕರಣ ನಿಧಿ) ಮೊತ್ತವನ್ನು ಜಮೆ ಮಾಡುವ ರೀತಿಯನ್ನು ನಿಯಂತ್ರಿಸಲು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಪರಿಹಾರಾರ್ಥ ಅರಣ್ಯೀಕರಣ ನಿಧಿ ಅಧಿನಿಯಮ, 2016ರ ಪರಿಚ್ಛೇದ 30ರಡಿಯಲ್ಲಿ ಒದಗಿಸಿದ ಅಧಿಕಾರವನ್ನು ಬಳಸಿ ಪರಿಹಾರಾರ್ಥ ಅರಣ್ಯೀಕರಣ ನಿಧಿ (ಲೆಕ್ಕ ವಿಧಾನ) ನಿಯಮಗಳು, 2018 ರಚಿಸಿತು. ನಿಯಮಗಳಿಗೆ ಮುಂದುವರಿಕೆಯಂತೆ, ಮಂತ್ರಾಲಯವು ವರದಿಗಾರಿಕೆಯಲ್ಲಿ ಪಾರದರ್ಶಕತೆ ಮತ್ತು ಏಕರೂಪತೆಯನ್ನು ಕಾಯ್ದುಕೊಳ್ಳಲು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿ ಮತ್ತು ಎಲ್ಲಾ ರಾಜ್ಯಗಳು ರಾಜ್ಯದ ಪರಿಹಾರಾರ್ಥ ಅರಣ್ಯೀಕರಣ ನಿಧಿಗಳಿಗೆ ಸ್ಟಾಂಡರ್ಡ್ ಲೆಕ್ಕ ಶೀರ್ಷಿಕೆಗಳನ್ನು ಪ್ರಾರಂಭಿಸುವುದನ್ನು ಜಾರಿ ಮಾಡಿತು (28 ಜನವರಿ 2019).

ಪರಿಹಾರಾರ್ಥ ಅರಣ್ಯೀಕರಣ ನಿಧಿ (ಲೆಕ್ಕ ವಿಧಾನ) ನಿಯಮಗಳು, 2018ರ ಪ್ರಕಾರ

i. ಸಂಬಂಧಿತ ರಾಜ್ಯ ಸರ್ಕಾರಗಳಿಂದ ಅಧಿನಿಯಮದ ಪರಚ್ಛೇದ 4ರ ಉಪ–ಪರಿಚ್ಛೇದ (1)ರ ಷರತ್ತಿನಂತೆ ಆಯಾ ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗಳ ಸ್ಥಾಪನೆಗೆ ಅಧಿನಿಯಮ ಜಾರಿ ಆದ ತಕ್ಷಣ ಪ್ರಧಾನ ಲೆಕ್ಕ ಶೀರ್ಷಿಕೆ 8336– ಸಿವಿಲ್ ಠೇವಣಿಗಳ ಅಡಿಯಲ್ಲಿ ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ಠೇವಣಿಗಳಿಗೆ ಜಮೆಯಾದ ರಾಜ್ಯದ ಪಾಲು (ಅಡ್–ಹಾಕ್ ಅಥಾರಿಟಿಯೊಂದಿಗೆ ಮೊತ್ತದ ಶೇಕಡ 90), ಪ್ರತೀ ರಾಜ್ಯದ ಪಾಲಿನಂತೆ ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ (ಎಸ್‌ಸಿಎಎಫ್) ವರ್ಗಾಯಿಸಬೇಕು.

ii. ಬಳಕೆ ಸಂಸ್ಥೆಗಳಿಂದ ರಾಜ್ಯ ಸರ್ಕಾರಗಳು ಸ್ವೀಕರಿಸಿದ ಮೊತ್ತವನ್ನು ರಾಜ್ಯದ ಸಾರ್ವಜನಿಕ ಲೆಕ್ಕದಲ್ಲಿ" ಪ್ರಮುಖ ಲೆಕ್ಕ ಶೀರ್ಷಿಕೆ 8336– ಸಿವಿಲ್ ಠೇವಣಿಗಳು" ಕೆಳಗೆ ಕಿರು ಲೆಕ್ಕ ಶೀರ್ಷಿಕೆ "ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ಠೇವಣಿಗಳು" ಅಡಿಯಲ್ಲಿ ಜಮೆ ಮಾಡಬೇಕು.

iii. 8336–ಸಿವಿಲ್ ಠೇವಣಿಗಳು ಅಡಿಯಲ್ಲಿ ಜಮೆಯಾದ ಮೊತ್ತದ ಶೇಕಡ 90ರಷ್ಟನ್ನು ರಾಜ್ಯದ ಸಾರ್ವಜನಿಕ ಲೆಕ್ಕದ ಪ್ರಮುಖ ಲೆಕ್ಕ ಶೀರ್ಷಿಕೆ 8121ಕ್ಕೆ ವರ್ಗಾಯಿಸಬೇಕು ಮತ್ತು ಶೇಕಡ 10ನ್ನು ಅಧಿನಿಯಮದ ಪರಿಚ್ಛೇದ 3ರ ಉಪ–ಪರಿಚ್ಛೇದ (4) ರ ಪ್ರಕಾರ ರಾಷ್ಟ್ರೀಯ ನಿಧಿಗೆ ವಾರ್ಷಿಕ ಆಧಾರದ ಮೇಲೆ ಜಮೆ ಮಾಡಬೇಕು; ಕೇಂದ್ರದ ಪಾಲಾದ ಶೇಕಡ 10ರ ಜಮೆಯನ್ನು ರಾಷ್ಟ್ರೀಯ ನಿಧಿಗೆ ವರ್ಗಾಯಿಸಲು, ಮಾಸಿಕ ಆಧಾರದ ಮೇಲೆ ದೃಢಪಡಿಸಿಕೊಳ್ಳಬೇಕು.

iv. '8336–ಸಿವಿಲ್ ಠೇವಣಿಗಳು" ಅಡಿಯಲ್ಲಿ "ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ಠೇವಣಿಗಳು' ಮತ್ತು "8121–ಸಾಮಾನ್ಯ ಮತ್ತು ಇತರೆ ಮೀಸಲು ನಿಧಿಗಳು" ಅಡಿಯಲ್ಲಿ 'ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿ' ಇವುಗಳಲ್ಲಿ ಲಭ್ಯವಿರುವ ಶಿಲ್ಕಿನ ಮೇಲೆ ಅನ್ವಯಿಸುವ ಬಡ್ಡಿಯ ದರಗಳು ಕೇಂದ್ರ ಸರ್ಕಾರವು ವರ್ಷದಿಂದ ವರ್ಷದ ಆಧಾರದಲ್ಲಿ ಘೋಷಿಸುವ ದರಗಳ ಪ್ರಕಾರ ಆಗಿರುತ್ತದೆ.

ಪರಿಹಾರಾರ್ಥ ಅರಣ್ಯೀಕರಣ ನಿಧಿ (ಲೆಕ್ಕ ವಿಧಾನ) ನಿಯಮಗಳು, 2018ರ ಪ್ರಕಾರ ಮಂತ್ರಾಲಯವು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯಿಂದ ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿ – ಕರ್ನಾಟಕಕ್ಕೆ ₹13,50,37,43,189 ಗಳನ್ನು ವರ್ಗಾಯಿಸಿತು (29 ಆಗಸ್ಟ್ 2019). 2019–20, 2020–21 ಮತ್ತು 2021–22ರಲ್ಲಿ ಕ್ರಮವಾಗಿ ₹7.08 ಕೋಟಿ, ₹170.16 ಕೋಟಿ ಮತ್ತು ₹299.99 ಕೋಟಿ ವೆಚ್ಚವನ್ನು ನಿಧಿ ಖಾತೆಗೆ ವರ್ಗಾಯಿಸಿದ್ದರೂ, ಯಾವುದೇ ಸ್ವೀಕೃತಿಗಳನ್ನು ವರ್ಗಾಯಿಸಿರಲಿಲ್ಲ. ಇದರೊಂದಿಗೆ, 2019–20 ಮತ್ತು 2020–21ರ ವರ್ಷದ ಬಡ್ಡಿ ಮೊತ್ತವಾದ ಕ್ರಮವಾಗಿ ₹42.86 ಕೋಟಿ ಮತ್ತು ₹43.22 ಕೋಟಿಯನ್ನು 2020–21 ಮತ್ತು 2021–22ರಲ್ಲಿ, ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯಲ್ಲಿ ₹889.23 ಕೋಟಿಯಷ್ಟು ಮುಕ್ತಾಯದ ಶಿಲ್ಕು ಇರುವಂತೆ, ಜಮೆ ಮಾಡಲಾಗಿತ್ತು.

ಅರಣ್ಯ ಇಲಾಖೆಯ ದಾಖಲೆಗಳಿಂದ 2019–20ರಿಂದ 2021–22ರವರೆಗೆ, ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ, ಬಳಕೆ ಸಂಸ್ಥೆಗಳಿಂದ ₹385.70 ಕೋಟಿಗಳನ್ನು ಸ್ವೀಕರಿಸಿದೆ ಎಂಬುದನ್ನು ಗಮನಿಸಲಾಯಿತು.

**ಕೋಷ್ಟಕ–2.31: ವರ್ಗಾವಣೆಯಾದ ಹಣದ ವಿವರಗಳು**

(₹ ಗಳಲ್ಲಿ)

| ವರ್ಷ | ಮೊತ್ತ |
|---|---|
| 2019–20 | 45,66,59,270 |
| 2020–21 | 92,94,92,532 |
| 2021–22 | 247,08,28,968 |
| **ಒಟ್ಟು** | **3,85,69,80,770** |

ಮೇಲೆ ಹೆಸರಿಸಿದ (iii) ಅವಕಾಶಗಳಿಗೆ ವ್ಯತಿರಿಕ್ತವಾಗಿ ರಾಜ್ಯವು ಹಣದ ಶೇಕಡ 90ರಷ್ಟನ್ನು ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯಲ್ಲಿ ಉಳಿಸಿಕೊಂಡು ಶೇಕಡ 10ರಷ್ಟನ್ನು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ವರ್ಗಾಯಿಸುವ ಬದಲು ಸಂಪೂರ್ಣ ಮೊತ್ತವನ್ನು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ವರ್ಗಾಯಸಿರುವುದು ಸರಿಯಾದ ಕ್ರಮವಲ್ಲ. ಈ ತಪ್ಪಾದ ಲೆಕ್ಕ ವಿಧಾನದಿಂದ, ರಾಜ್ಯ ಸರ್ಕಾರವು ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯಲ್ಲಿ ಲೆಕ್ಕಮಾಡಬೇಕಿದ್ದ ₹347.13 ಕೋಟಿ ಮೊತ್ತದ ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿ ಸ್ವೀಕೃತಿಗಳನ್ನು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ವರ್ಗಾಯಿಸಿದೆ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಜನವರಿ 2023) ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ₹385.69 ಕೋಟಿಗಳ ವರ್ಗಾವಣೆಯ ವಿಷಯವು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ರಾಷ್ಟ್ರೀಯ ಪ್ರಾಧಿಕಾರ (ಸಿಎಎಮ್‌ಪಿಎ) ರವರೊಂದಿಗೆ ಪತ್ರ ವ್ಯವಹಾರದಲ್ಲಿದೆ ಎಂದು ತಿಳಿಸಿತು. ಆದಾಗ್ಯೂ, ಉತ್ತರವು ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯ ಲೆಕ್ಕ ಹಾಕುವಿಕೆ ಬಗ್ಗೆ ಮೌನವಾಗಿದೆ.

## 2.7 ಸಾಲ ನಿರ್ವಹಣೆ

ಋಣಭಾರ ನಿರ್ವಹಣೆಯು ಸರ್ಕಾರದ ಸಾಲವನ್ನು ನಿರ್ವಹಿಸುವ ಕಾರ್ಯತಂತ್ರವನ್ನು ಸ್ಥಾಪಿಸುವ ಮತ್ತು ಕಾರ್ಯಗತಗೊಳಿಸುವ ಅಗತ್ಯವಿರುವ ಪ್ರಮಾಣದ ಹಣವನ್ನು ಸಂಗ್ರಹಿಸಲು, ಅದರ ಹಾನಿ ಸಂಭವ ಮತ್ತು ವೆಚ್ಚದ ಉದ್ದೇಶಗಳನ್ನು ಸಾಧಿಸಲು ಮತ್ತು ಸರ್ಕಾರವು ಕಾಯಿದೆಯ ಅಥವಾ ಆಯವ್ಯಯ ಘೋಷಣೆಗಳ ಮೂಲಕ ಜಾರಿಗೆ ತಂದಿರುವ ಯಾವುದೇ ಇತರ ಉನ್ನತ ಮಟ್ಟದ ಸಾಲ ನಿರ್ವಹಣಾ ಗುರಿಗಳನ್ನು ಪೂರೈಸುವ ಪ್ರಕ್ರಿಯೆಯಾಗಿದೆ. 2017–18ರಿಂದ 2021–22ರ ಅವಧಿಯಲ್ಲಿ ಒಟ್ಟು ಬಾಕಿ ಇರುವ ಸಾಲ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಶತಾಂಶವನ್ನು **ನಕ್ಷೆ–2.14**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ–2.14: 2017–18ರಿಂದ 2021–22ರ ಅವಧಿಯಲ್ಲಿ ಒಟ್ಟು ಬಾಕಿ ಇರುವ ಸಾಲ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಶತಾಂಶ**




*ಆಕರ: ಹಣಕಾಸು ಲೆಕ್ಕಗಳು*

*ಸಾಲ–ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವನ್ನು ಲೆಕ್ಕ ಮಾಡಲು ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಿಗೆ ಪಡೆದ ಬ್ಯಾಕ್–ಟು–ಬ್ಯಾಕ್ ಸಾಲವನ್ನು (₹12,407 ಕೋಟಿ 2020–21ರಲ್ಲಿ ಮತ್ತು ₹18,109 ಕೋಟಿ 2021–22ರಲ್ಲಿ) ಪರಿಗಣಿಸಲಾಗಿಲ್ಲ.

ಮೇಲಿನ ನಕ್ಷೆಯಿಂದ ನೋಡಿದಂತೆ, 2017–18 ರಿಂದ 2021–22ರ ಅವಧಿಯಲ್ಲಿ ಬಾಕಿ ಉಳಿದಿರುವ ಸಾಲ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಅದರ ಶತಾಂಶವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದು 2017–18ರಲ್ಲಿದ್ದ ಶೇಕಡ 18.46 ರಿಂದ 2021–22ರ ಅವಧಿಯಲ್ಲಿ ಶೇಕಡ 24.03ಕ್ಕೆ ಹೆಚ್ಚಳವಾಗಿದೆ ಮತ್ತು ಅದು ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯ ಅಡಿಯಲ್ಲಿ ಸೂಚಿಸಲಾದ (ಶೇಕಡ 25) ಗುರಿಯೊಳಗೆ ಇವೆ. ಆದರೆ 2021–22ರ ಅವಧಿಯಲ್ಲಿ ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ/ರಾಜ್ಯದ ಮಧ್ಯಮಾವಧಿ ವಿತ್ತೀಯ ಯೋಜನೆಗಳ ಗುರಿಗಿಂತ ಹೆಚ್ಚಳವಾಗಿ ಅದು ಶೇಕಡ 26.71ರಷ್ಟಿತ್ತು. ಇದು ಪ್ರಮುಖವಾಗಿ ರಾಜ್ಯದ ಆಂತರಿಕ ಸಾಲದಿಂದಾಗಿದೆ.

ರಾಜ್ಯ ಸರ್ಕಾರದ ಸಾಲವನ್ನು ಪರಿಶೀಲಿಸಿದಾಗ, ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆ ಸೂಚಿಸಿದ ಹಣಕಾಸಿನ ಮಾನದಂಡಗಳೊಳಗೆ ಸಾಲದ ಮಟ್ಟವನ್ನು ತಗ್ಗಿಸಲು ಬದ್ಧ ವೆಚ್ಚವನ್ನು ಕಡಿಮೆ ಮಾಡಲು ಮತ್ತು ಏಕಕಾಲದಲ್ಲಿ ರಾಜ್ಯದ ರಾಜಸ್ವವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆರ್ಥಿಕ ಇಲಾಖೆಗೆ ಸೂಚಿಸಿತು.

### 2.7.1 ಸಾಲ ಚಿತ್ರಣದ ಅಂಗಗಳು

ರಾಜ್ಯ ಸರ್ಕಾರದ ಒಟ್ಟು ಸಾಲವು ಸಾಮಾನ್ಯವಾಗಿ ರಾಜ್ಯದ ಆಂತರಿಕ ಋಣ (ಮಾರುಕಟ್ಟೆ ಸಾಲಗಳು, ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗೋಪಾಯಗಳು, ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಗೆ ನೀಡಲಾದ ವಿಶೇಷ ಭದ್ರತೆಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲಗಳು ಇತ್ಯಾದಿ), ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕದ ಹೊಣೆಗಳು ಮತ್ತು ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಿರುತ್ತದೆ.

ಸಾಲದ ಘಟಕವಾರು ವಿವರಗಳು, ಅವುಗಳ ಬೆಳವಣಿಗೆಯ ದರ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಈ ಹೊಣೆಗಾರಿಕೆಗಳ ಅನುಪಾತವನ್ನು **ಕೋಷ್ಟಕ–2.32**ರಲ್ಲಿ ತೋರಿಸಲಾಗಿದೆ ಮತ್ತು ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಹಣಕಾಸಿನ ಹೊಣೆಗಾರಿಕೆಗಳ ಪ್ಲವನತೆಯನ್ನು **ಅನುಬಂಧ–2.2**ರಲ್ಲಿ ವಿವರಿಸಲಾಗಿದೆ. ರಾಜ್ಯದ ಹಣಕಾಸಿನ ಹೊಣೆಗಾರಿಕೆಗಳು 2017–18ರಲ್ಲಿನ ₹2,46,231 ಕೋಟಿಗಳಿಂದ 2021–22ರಲ್ಲಿ ₹4,90,256 ಕೋಟಿಗಳಿಗೆ ಏರಿ ಶೇಕಡ 87ರಷ್ಟು ಏರಿಕೆಯಾಗಿದೆ. 2021–22ರ ಅವಧಿಯಲ್ಲಿ ಒಟ್ಟಾರೆ ಸಾಲದ ಸಂಯೋಜನೆಯನ್ನು **ನಕ್ಷೆ–2.15**ರಲ್ಲಿ ಪ್ರಸ್ತುತಪಡಿಸಲಾಗಿದೆ ಮತ್ತು 2017–18ರಿಂದ 2021–22ರ ಅವಧಿಯಲ್ಲಿ ಮಾಡಿದ ಆಂತರಿಕ ಋಣ ಮತ್ತು ಮರುಪಾವತಿಯ ವಿವರಗಳನ್ನು **ನಕ್ಷೆ–2.16**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.32: ಘಟಕವಾರು ಸಾಲದ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| | | 2017–18 | 2018–19 | 2019–20 | 2020–21 | 2021–22 |
|---|---|---|---|---|---|---|
| ಬಾಕಿ ಇರುವ ಒಟ್ಟಾರೆ ಋಣ | | 2,46,231 | 2,85,238 | 3,37,520 | 4,15,926 | 4,90,256 |
| ಸಾರ್ವಜನಿಕ ಋಣ | ಆಂತರಿಕ ಋಣ | 1,48,581 | 1,79,309 | 2,20,337 | 2,81,140 | 3,29,042 |
| | ಭಾರತ ಸರ್ಕಾರದ ಸಾಲಗಳು | 14,555 | 14,657 | 13,908 | 26,617 | 45,385* |
| ಸಾರ್ವಜನಿಕ ಲೆಕ್ಕದ ಹೊಣೆಗಾರಿಕೆಗಳು | | 69,922 | 76,410 | 85,172 | 89,748 | 99,147 |
| ಆಯವ್ಯಯೇತರ ಸಾಲಗಳು | | 13,173 | 14,862 | 18,103 | 18,421 | 16,682 |
| ಬಾಕಿ ಇರುವ ಋಣದ ವೃದ್ಧಿಯ ದರ (ಶೇಕಡ) | | 11.26 | 15.84 | 18.33 | 23.23 | 10.53 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | | 13,33,240 | 14,76,496 | 16,15,457 | 17,30,991 | 17,21,336 |
| ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡ) | | 18.46 | 19.32 | 20.89 | 24.03 | 26.71* |
| ಒಟ್ಟು ಋಣ ಸ್ವೀಕೃತಿಗಳು | | 25,122 | 41,914 | 50,459 | 84,528 | 80,641 |
| ಒಟ್ಟು ಋಣ ಮರುಪಾವತಿಗಳು | | 8,269 | 11,083 | 10,180 | 11,016 | 13,972 |
| ಲಭ್ಯವಿರುವ ಒಟ್ಟು ಋಣ | | 16,853 | 30,831 | 40,279 | 73,512 | 66,669 |
| ಋಣ ವಿಮೋಚನೆಯ ಅನುಪಾತ | | 79.97 | 57.54 | 51.17 | 35.63 | 53.84 |

*ಆಕರ: ಹಣಕಾಸು ಲೆಕ್ಕಗಳು*

* ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ 2020–21 ಮತ್ತು 2021–22ರ ಅವಧಿಯಲ್ಲಿ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಮತ್ತು ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಬಾಕಿ ಇರುವ ಭಾರತ ಸರ್ಕಾರದ ಸಾಲಗಳು ₹14,869 ಕೋಟಿಗಳಾಗಿದೆ.

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ 2020–21 ಮತ್ತು 2021–22ರ ಅವಧಿಯಲ್ಲಿ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಮತ್ತು 18,109ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ ಪರಿಣಾಮಕಾರಿ ಬಾಕಿ ಇರುವ ಸಾರ್ವಜನಿಕ ಋಣವು ₹4,59,740 ಕೋಟಿಗಳಾಗಿದೆ. **ಕೋಷ್ಟಕ–2.32**ರಿಂದ ನಾವು ಈ ಕೆಳಗಿನವುಗಳನ್ನು ಗಮನಿಸಲಾಗಿದೆ.

- ಸಾಲ ವಿಮೋಚನೆಯ ಅನುಪಾತವು 2018-19ರಿಂದಲೂ ಕಡಿಮೆ ಆಗುತ್ತಿರುವ ಪ್ರವೃತ್ತಿಯಲ್ಲಿತ್ತು ಮತ್ತು 2021-22ರ ಅವಧಿಯಲ್ಲಿ ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯನ್ನು (ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ) ಮೀರಿತ್ತು.
- 2021-22ರಲ್ಲಿ ರಾಜ್ಯಕ್ಕೆ ಲಭ್ಯವಿರುವ ಒಟ್ಟು ಸಾಲವು, ಹಿಂದಿನ ವರ್ಷಕ್ಕೆ ಹೋಲಿಸಿದರೆ, ₹6,843 ಕೋಟಿಗಳಷ್ಟು ಇಳಿಕೆಯಾಯಿತು. ಇದು ಆಂತರಿಕ ಸಾರ್ವಜನಿಕ ಸಾಲ ಸ್ವೀಕೃತಿಗಳ ಇಳಿಕೆ ಹಾಗೂ ಸಾಲಗಳ ಮರುಪಾವತಿಯಲ್ಲಿ ಹೆಚ್ಚಳದ ಕಾರಣದಿಂದ ಆಗಿದೆ.

**ನಕ್ಷೆ-2.15: 2021-22ರ ಆರ್ಥಿಕ ವರ್ಷದ ಕೊನೆಯಲ್ಲಿ ಒಟ್ಟಾರೆ ಸಾಲದ ವಿಭಜನೆ**

(₹ ಕೋಟಿಗಳಲ್ಲಿ)




ಆಕರ: ಹಣಕಾಸು ಲೆಕ್ಕಗಳು

*ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ 2020-21 ಮತ್ತು 2021-22ರ ಅವಧಿಯಲ್ಲಿ ಬ್ಯಾಕ್-ಟು-ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಮತ್ತು ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ, ಪರಿಣಾಮಕಾರಿ ಸಾಲಗಳು ಮತ್ತು ಮುಂಗಡಗಳು ₹14,869 ಕೋಟಿಗಳಾಗುವುದರಿಂದ ಒಟ್ಟು ಋಣಗಳು ₹4,59,740 ಕೋಟಿಗಳಾಗುವಲ್ಲಿ ಪರಿಣಮಿಸುತ್ತದೆ.*

**ನಕ್ಷೆ-2.16 ಆಂತರಿಕ ಋಣ ಮತ್ತು ಮರುಪಾವತಿ**




*ಆಕರ: ಹಣಕಾಸು ಲೆಕ್ಕಗಳು*

ಒಟ್ಟು ಬಾಕಿಯಿರುವ ಸಾಲದಲ್ಲಿ, ಮಾರುಕಟ್ಟೆ ಸಾಲಗಳು, ನಬಾರ್ಡ್, ಭಾರತೀಯ ಜೀವ ವಿಮಾ ನಿಗಮ, ಜಿಐಸಿ ಮತ್ತು ಕೇಂದ್ರ ಸರ್ಕಾರದ ಎನ್‌ಎಸ್‌ಎಸ್‌ಎಫ್‌ಗೆ ನೀಡಲಾದ ವಿಶೇಷ ಭದ್ರತೆಗಳ ಸಾಲಗಳನ್ನು ಒಳಗೊಂಡಿರುವ ಆಂತರಿಕ ಋಣವು ಶೇಕಡ 67.12ರಷ್ಟಿದೆ (₹3,29,042ಕೋಟಿ). ಸಾರ್ವಜನಿಕ ಲೆಕ್ಕದ

ಹೊಣೆಗಾರಿಕೆಗಳು ಶೇಕಡ 20.22ರಷ್ಟಿದೆ. ಭಾರತ ಸರ್ಕಾರದಿಂದ ಪಡೆದ ಸಾಲಗಳು ಶೇಕಡ 9.26 ಮತ್ತು ಆಯವ್ಯಯದ ಹೊರಗೆ ಪಡೆದ ಸಾಲಗಳು ಶೇಕಡ 3.40 ರಷ್ಟಿದೆ.

ರಾಜ್ಯ ಸಂಚಿತ ನಿಧಿಯ ಭಾಧ್ಯತೆಗಳ ಭಾಗವಾಗಿರುವ ಆಂತರಿಕ ಋಣವು 2017–18ರಲ್ಲಿದ್ದ ₹1,48,581 ಕೋಟಿಗಳಿಂದ 2021–22ರಲ್ಲಿ ₹3,29,042 ಕೋಟಿಗಳಿಗೆ ಏರಿಕೆಯಾಗಿದೆ. ಏರಿಕೆಯು ಶೇಕಡ 121 ರಷ್ಟಾಗಿದೆ. ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು 2017–18ರಲ್ಲಿ ₹14,555 ಕೋಟಿಗಳಿದ್ದು 2021–22ರಲ್ಲಿ ₹14,869 ಕೋಟಿಗಳಿಗೆ (ಸರಕು ಮತ್ತು ಸೇವಾ ತೆರಿಗೆಯ ಪರಿಹಾರಕ್ಕೆ ಪ್ರತಿಯಾಗಿ ಭಾರತ ಸರ್ಕಾರದಿಂದ ಸ್ವೀಕರಿಸಿದ ₹30,516 ಕೋಟಿ ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ಬಿಟ್ಟು) ಅಂತರ–ವರ್ಷದ ವ್ಯತ್ಯಾಸಗಳೊಂದಿಗೆ ಶೇಕಡ ಎರಡರ ಹೆಚ್ಚಳವನ್ನು ತೋರಿಸಿದೆ.

#### 2.7.1.1 ಆಯವ್ಯಯದ ಹೊರಗಿನ ಸಾಲಗಳು

ರಾಜ್ಯ ಸರ್ಕಾರದ ಸಾಲಗಳನ್ನು ಭಾರತ ಸಂವಿಧಾನದ 293(1)ನೇ ವಿಧಿಯ ಮೂಲಕ ನಿಯಂತ್ರಿಸಲಾಗುತ್ತದೆ. ಸರ್ಕಾರಿ ಕಂಪನಿಗಳು/ನಿಗಮಗಳು/ಮಂಡಳಿಗಳು ಪಡೆದ ಸಾಲಗಳಿಗೆ ರಾಜ್ಯ ಸರ್ಕಾರವು ಖಾತರಿಯನ್ನು ನೀಡುತ್ತದೆ. ಈ ಕಂಪನಿಗಳು/ನಿಗಮಗಳು/ಮಂಡಳಿಗಳು ರಾಜ್ಯ ಆಯವ್ಯಯದ ಹೊರಗೆ ಯೋಜಿಸಲಾದ ವಿವಿಧ ರಾಜ್ಯ ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮಾರುಕಟ್ಟೆ/ಹಣಕಾಸು ಸಂಸ್ಥೆಗಳಿಂದ ಹಣವನ್ನು ಎರವಲು ಪಡೆದಿವೆ. ಈ ಸಂಸ್ಥೆಗಳು ಪಡೆದ ಸಾಲಗಳು 'ಆಯವ್ಯಯದ ಹೊರಗಿನ ಸಾಲಗಳು' ಎಂದಾಗಿ ಅಂತಿಮವಾಗಿ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಾಗಿ ಬದಲಾಗುತ್ತವೆ. ರಾಜ್ಯದಲ್ಲಿ ಇವುಗಳನ್ನು ಆಯವ್ಯಯ ಅವಲೋಕನ ಮತ್ತು ಮಧ್ಯಮಾವಧಿ ವಿತ್ತೀಯ ಯೋಜನೆಗಳಲ್ಲಿ (ಎಮ್‌ಟಿಎಫ್‌ಪಿ) ತೋರಿಸಲಾಗುವುದು.

2017–18 ರಿಂದ 2021–22ರವರೆಗಿನ ಅವಧಿಯ ಆಯವ್ಯಯದ ಹೊರಗಿನ ಸಾಲಗಳ ಪ್ರವೃತ್ತಿಯನ್ನು **ಕೋಷ್ಟಕ–2.33**(ಎ)ನಲ್ಲಿ ವಿವರಿಸಲಾಗಿದೆ. 2017–18ರಿಂದ 2019–20ರವರೆಗೂ ಏರಿಕೆ ಪ್ರವೃತ್ತಿಯಲ್ಲಿದ್ದ ರಾಜ್ಯದ ಆಯವ್ಯಯದ ಹೊರಗಿನ ಸಾಲಗಳು 2020–21ರಿಂದ ಇಳಿಕೆ ಪ್ರವೃತ್ತಿ ತೋರಿದೆ. 2021–22ರಲ್ಲಿ, ಆಯವ್ಯಯದ ಹೊರಗಿನ ಸಾಲಗಳು, ಹಿಂದಿನ ವರ್ಷಕ್ಕೆ ಹೋಲಿಸಿದರೆ ₹695 ಕೋಟಿಯಷ್ಟು ಇಳಿಕೆಯಾಯಿತು.

ಸರ್ಕಾರವು ಈ ಕಂಪನಿಗಳು/ನಿಗಮಗಳು/ಸೊಸೈಟಿಗಳು ಪಡೆದ ಸಾಲಗಳನ್ನು ಬಂಡವಾಳ ಲೆಕ್ಕದ ಅಡಿಯಲ್ಲಿ ನಿಯಮಿತ ಆಯವ್ಯಯ ಅವಕಾಶಗಳೊಂದಿಗೆ ಬಡ್ಡಿಯನ್ನೂ ಒಳಗೊಂಡಂತೆ ಮರುಪಾವತಿ ಮಾಡುತ್ತಿದೆ. 2021–22ರ ಅವಧಿಯಲ್ಲಿನ, ₹52,083 ಕೋಟಿಗಳ ಬಂಡವಾಳ ವೆಚ್ಚದಲ್ಲಿ ಆಯವ್ಯಯ ಹೊರಗಿನ ಸಾಲಗಳ ಅಸಲು ಮರುಪಾವತಿಯ ₹4,089.27 ಕೋಟಿಗಳು ಸೇರಿವೆ. ಪ್ರಸ್ತುತ ವರ್ಷದ ಬಡ್ಡಿ ಪಾವತಿಯು ₹1.292.26 ಕೋಟಿಗಳಷ್ಟಾಗಿತ್ತು. **ಕೋಷ್ಟಕ–2.33** 2021–22ರ ಅಂತ್ಯದ ವೇಳೆಗೆ ಸಾಲಗಳ ಘಟಕವಾರು ಸ್ಥಿತಿಯನ್ನು ನೀಡುತ್ತದೆ.

**ಕೋಷ್ಟಕ–2.33: ಆಯವ್ಯಯ ಹೊರಗಿನ ಸಾಲಗಳ ಘಟಕವಾರು ಸ್ಥಿತಿ**

(₹ ಕೋಟಿಗಳಲ್ಲಿ)

| ಕಂಪನಿ/ನಿಗಮ/ಮಂಡಳಿ | ಬಾಕಿ ಇರುವ ಆಯವ್ಯಯೇತರ ಸಾಲಗಳು | 2021–22ರ ಅವಧಿಯಲ್ಲಿ ಸಾಲಗಳು | 2021–22ರಲ್ಲಿ ಮರುಪಾವತಿಗಳು | | ಅಂತಿಮ ಶಿಲ್ಕು |
|---|---|---|---|---|---|
| | | | ಅಸಲು | ಬಡ್ಡಿ | |
| ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 7,601.86 | 500.00 | 1,849.72 | 535.01 | 6,252.14 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 3,723.55 | 1,150.00 | 1,200.74 | 259.02 | 3,672.81 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 211.74 | 200.00 | 18.50 | 13.60 | 393.24 |
| ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 1,490.79 | 0.00 | 263.07 | 113.78 | 1,227.72 |
| ಕಾವೇರಿ ನೀರಾವರಿ ನಿಗಮ ನಿಯಮಿತ | 2,785.00 | 250.00 | 267.50 | 196.66 | 2,767.50 |
| ವಿಶ್ವೇಶ್ವರಾಯ ಜಲ ನಿಗಮ ನಿಯಮಿತ | 1,951.43 | 250.00 | 394.28 | 131.30 | 1,807.15 |
| ಕೌಶಲಾಭಿವೃದ್ಧಿ | 657.00 | 0.00 | 95.46 | 42.89 | 561.54 |
| **ಒಟ್ಟು** | **18,421.37** | **2,350.00** | **4,089.27** | **1,292.26** | **16,682.10** |

*ಆಕರ: ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ಹೆಸರಿಸಿದ ಎಲ್ಲಾ ಏಳು ಘಟಕಗಳೂ ತಮ್ಮದೇ ಆದ ಸ್ವಂತ ಆದಾಯ ಸಂಪನ್ಮೂಲಗಳನ್ನು ಹೊಂದಿಲ್ಲ ಮತ್ತು ನಷ್ಟಗಳನ್ನು ಅನುಭವಿಸುತ್ತಿವೆ. ಈ ಕಂಪನಿಗಳ ಸಂಚಿತ ನಷ್ಟವು ₹10,332.89 ಕೋಟಿಗಳಷ್ಟಾಗುತ್ತದೆ.

ರಾಜ್ಯದ ಆಯವ್ಯಯದ ಹೊರಗಿನ ಸಾಲಗಳನ್ನು ಗಣನೆಗೆ ತೆಗೆದುಕೊಂಡರೆ, ಮಾರ್ಚ್ 2022ರ ಅಂತ್ಯದ ವೇಳೆಗೆ ಒಟ್ಟು ಹೊಣೆಗಾರಿಕೆಗಳು ₹4,90,256 ಕೋಟಿಗಳಾಗುತ್ತವೆ. ವರ್ಷದ ಕೊನೆಯಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಾಕಿ ಉಳಿದಿರುವ ಹೊಣೆಗಾರಿಕೆಗಳ (ಆಯವ್ಯಯದ ಹೊರಗಿನ ಸಾಲಗಳನ್ನು ಒಳಗೊಂಡಂತೆ) ದರವು ಶೇಕಡ 26.71 ರಷ್ಟಾಗುತ್ತದೆ ಮತ್ತು ಇದು ಭಾರತ ಸರ್ಕಾರದಿಂದ ಪಡೆದ ಸರಕು ಮತ್ತು ಸೇವಾ ತೆರಿಗೆಯ ಬದಲಾಗಿ ಬ್ಯಾಕ್–ಟು–ಬ್ಯಾಕ್ ಸಾಲವಾದ ₹30,516 ಕೋಟಿಗಳನ್ನು ಹೊರತುಪಡಿಸಿ ಆಗಿದೆ. ಯಾವಾಗಲೂ ರಾಜ್ಯ ಸರ್ಕಾರವು ಈ ಸರ್ಕಾರದ ಸ್ವಂತ ಯೋಜನೆಗಳನ್ನು ಅನುಷ್ಠಾನಗೊಳಿಸಲೂ ಸಾಲ ಪಡೆಯುವಂತೆ ಪ್ರೋತ್ಸಾಹಿಸುತ್ತದೆ, ಏಕೆಂದರೆ, ಅವು ವಿತ್ತೀಯ ಕೊರತೆ ಅಥವಾ ಬಾಕಿ ಸಾಲದ ಮೇಲೆ ಹೇರಿದ ಮಿತಿಯನ್ನು ಮೀರಿದ್ದಕ್ಕಾಗಿ ಯಾವುದೇ ವ್ಯತಿರಿಕ್ತ ಪರಿಶೀಲನೆಯನ್ನು ಆಕರ್ಷಿಸುವುದಿಲ್ಲ. 2017–18ರಿಂದ 2021–22ರ ವರೆಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿತ್ತೀಯ ಕೊರತೆ ಮತ್ತು ಬಾಕಿ ಸಾಲದ ಸ್ಥಿತಿಯನ್ನು ಈ ಕೆಳಗೆ ಸೂಚಿಸಲಾಗಿದೆ.

**ಕೋಷ್ಟಕ–2.33(ಎ): ವಿತ್ತೀಯ ಸೂಚಕಗಳ ಮೇಲೆ ಆಯವ್ಯಯದ ಹೊರಗಿನ ಸಾಲಗಳ ಪ್ರಭಾವ**

| ವರ್ಷ | ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | ಆಯವ್ಯಯದ ಹೊರಗಿನ ಸಾಲಗಳು | ವಿತ್ತೀಯ ಕೊರತೆ | ವಿತ್ತೀಯ ಕೊರತೆ + ಆಯವ್ಯಯ ಹೊರಗಿನ ಸಾಲಗಳು | ವಿತ್ತೀಯ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | (ವಿತ್ತೀಯ ಕೊರತೆ+ಆಯವ್ಯಯ ಹೊರಗಿನ ಸಾಲಗಳು)/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | ಬಾಕಿಸಾಲ/ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ |
|---|---|---|---|---|---|---|---|
| **2017–18** | 13,33,240 | 3,500.23 | 31,101 | 34,601 | 2.33 | 2.59 | 18.46 |
| **2018–19** | 14,76,496 | 3,523.65 | 38,442 | 41,966 | 2.60 | 2.84 | 19.32 |
| **2019–20** | 16,15,457 | 4,435.49 | 38,166 | 42,601 | 2.36 | 2.64 | 20.89 |
| **2020–21** | 17,30,991 | 3,045.10 | 67,098 | 70,143 | 3.38 | 4.05 | 24.03 |
| **2021–22** | 17,21,336 | 2,350.00 | 66,036 | 68,386 | 3.84 | 3.97 | 26.71 |

ಆದಾಗ್ಯೂ, ರಾಜ್ಯದಲ್ಲಿ ಎಲ್ಲಾ ವರ್ಷಗಳಲ್ಲಿ ವಿತ್ತೀಯ ಸೂಚಕಗಳು ನಿಗದಿಪಡಿಸಿದ ಮಿತಿಯೊಳಗೆ ಇದೆ ಮತ್ತು ಆಯವ್ಯಯದ ಹೊರಗಿನ ಸಾಲವು ಆಯವ್ಯಯ ದಾಖಲೆ ಒಂದು ಭಾಗವಾಗಿದೆ. ಇಂತಹ ಸನ್ನಿವೇಶದಲ್ಲಿ, ರಾಜ್ಯವು ಈ ಎಲ್ಲಾ ಆಯವ್ಯಯದ ಹೊರಗಿನ ಸಾಲಗಳನ್ನು ರಾಜ್ಯದ ಸಾಲಗಳ ಭಾಗವಾಗಿಯೇ ಪಡೆದು ಅಧಿಕ ಆಯವ್ಯಯ ಸಾಲಗಳನ್ನು ನಿವಾರಿಸಬಹುದು.

ಹದಿನೈದನೆಯ ಹಣಕಾಸು ಆಯೋಗವು ಇವು ಖಾತರಿಗಳ ಪ್ರಮಾಣಿತ ಚೌಕಟ್ಟಿನ ಆಚೆಯ ಪರೋಕ್ಷ ಸಾಂದರ್ಭಿಕ ಹೊಣೆಗಾರಿಕೆಗಳಾಗಿದ್ದು ಅಂತಿಮವಾಗಿ ರಾಜ್ಯ ಸರ್ಕಾರದ ಮೇಲೆ ಹೆಚ್ಚುವರಿ ಅನಿಶ್ಚಿತ ಹೊರೆಗಳಾಗುತ್ತವೆ ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಆಯವ್ಯಯದ ಹೊರಗಿನ ಸಾಲಗಳು ವಿತ್ತೀಯ ಪಾರದರ್ಶಕತೆಯ ಸೂತ್ರಗಳಿಗೆ ಪ್ರತಿಕೂಲವಾಗಿದ್ದು, ವಿತ್ತೀಯ ಸುಸ್ಥಿರತೆಗೆ ಹಾನಿಕಾರಕವಾಗಿರುವುದರಿಂದ ಆಯವ್ಯಯದ ಹೊಣೆಗಳಿಗೆ ಮತ್ತಷ್ಟು ಹೊರೆಯನ್ನು ತಪ್ಪಿಸಲು ಕಟ್ಟುನಿಟ್ಟಾದ ಶಿಸ್ತನ್ನು ಪಾಲಿಸಲು ಶಿಫಾರಸು ಮಾಡಿದೆ. ಅಲ್ಲದೆ, ಈ ಜವಾಬ್ದಾರಿಗಳನ್ನು ಸಮಯಬದ್ಧತೆ ರೀತಿಯಲ್ಲಿ ನಿವಾರಿಸಬೇಕು ಎಂದು ಹೇಳಿದೆ. ಆದರೆ, ಇದನ್ನು ಚುಕ್ತಾ ಮಾಡಲು ಸಂಪನ್ಮೂಲಗಳು ಸಾಮಾನ್ಯ ತೆರಿಗೆ ಮತ್ತು ತೆರಿಗೆಯೇತರ ಆದಾಯಗಳಲ್ಲದೆ ಸರ್ಕಾರದಿಂದ ಸಜ್ಜುಗೊಳಿಸಿದ ಹೆಚ್ಚುವರಿ ಸಂಪನ್ಮೂಲಗಳಾಗಿರಬೇಕು ಎಂದು ಶಿಫಾರಸು ಮಾಡಿದೆ. ಇದು ಆಸ್ತಿಗಳ ನಗದೀಕರಣವನ್ನೂ ಒಳಗೊಳ್ಳಬಹುದಾದ ಸಾಧ್ಯತೆ ಇದೆ.

### *2.7.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದನ್ನು ಭರಿಸಲು ವ್ಯವಸ್ಥೆ*

ವಿತ್ತೀಯ ಕೊರತೆಯನ್ನು ಭರಿಸಲು ಹಣಕಾಸು ವ್ಯವಸ್ಥೆಯ ಮಾದರಿಯು **ಕೋಷ್ಟಕ–2.34**ರಲ್ಲಿ ತೋರಿಸಿದಂತೆ ಸಂಯೋಜಿತ ಬದಲಾವಣೆಗೆ ಒಳಗಾಗಿದೆ. ವಿತ್ತೀಯ ಕೊರತೆಯ ವಿಘಟನೆಯು ಆದಾಯ ಮತ್ತು ಸಾಲವಲ್ಲದ ಸ್ವೀಕೃತಿಗಳನ್ನು ಮೀರಿ ಹೆಚ್ಚಿನ ನಿಧಿಯ ಅಗತ್ಯವನ್ನು ಪೂರೈಸಲು ರಾಜ್ಯವು ಆಶ್ರಯಿಸಿದ

ವಿವಿಧ ಸಾಲಗಳ ಪ್ರಮಾಣವನ್ನು ತೋರಿಸುತ್ತದೆ. ಸಾಲದ ಘಟಕವಾರು ಪ್ರವೃತ್ತಿಗಳನ್ನು **ನಕ್ಷೆ–2.17**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–2.34: ವಿತ್ತೀಯ ಕೊರತೆಯ ಅಂಶಗಳು ಮತ್ತು ಅದರ ಹಣಕಾಸು ವ್ಯವಸ್ಥೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|---|
| | **ಆರ್ಥಿಕ ಕೊರತೆಯ ಸಂಯೋಜನೆ** | **(–)31,101** | **(–)38,442** | **(–)38,166** | **(–)67,098** | **(–)66,036** |
| 1 | ರಾಜಸ್ವ ಅಧಿಕ/ಕೊರತೆ | 4,518 | 679 | 1,185 | (–)19,338 | (–)13,666 |
| 2 | ನಿವ್ವಳ ಬಂಡವಾಳ ವೆಚ್ಚ | 30,663 | 34,665 | 35,485 | 45,361 | 47,868 |
| 3 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 4,956 | 4,456 | 3,866 | 2,399 | 4,082 |
| 4 | ಸಾದಿಲ್ವಾರು ನಿಧಿಗೆ ಧನವಿನಿಯೋಗ | – | – | – | – | 420 |
| **ಆರ್ಥಿಕ ಕೊರತೆಯನ್ನು ನೀಗಿಸಲು ಹಣಕಾಸು*** | | | | | | |
| 1 | ಮಾರುಕಟ್ಟೆ ಸಾಲಗಳು | 17,348 | 32,183 | 42,499 | 61,900 | 49,000 |
| 2 | ಭಾರತ ಸರ್ಕಾರದ ಸಾಲಗಳು | 761 | 103 | (–)749 | 12,709 | 18,767 |
| 3 | ಎನ್ಎಸ್ಎಸ್ಎಫ್‌ಗೆ ಜಾರಿ ಮಾಡಿದ ವಿಶೇಷ ಭದ್ರತೆಗಳು | (–)1,573 | (–)1,595 | (–)1,628 | (–)1,628 | (–)1,628 |
| 4 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 316 | 141 | 156 | 531 | 529 |
| 5 | ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವು | 2,812 | 3,292 | 4,156 | 3,632 | 3,522 |
| 6 | ಠೇವಣಿಗಳು ಮತ್ತು ಮುಂಗಡಗಳು | 1,833 | 3,068 | 3,174 | (–)685 | 2,808 |
| 7 | ಅಮಾನತ್ತು ಮತ್ತು ಸಂಕೀರ್ಣ | (–)1,509 | (–)6,087 | (–)1,364 | (–)2,921 | (–)153 |
| 8 | ಇರಸಾಲುಗಳು | (–)76 | (–)40 | (–)347 | (–)35 | (–)133 |
| 9 | ಮೀಸಲು ನಿಧಿಗಳು | 3,019 | 3,197 | 4,728 | 6,275 | 9,173 |
| 10 | **ಒಟ್ಟಾರೆ ಕೊರತೆ** | **22,931** | **34,262** | **50,625** | **79,778** | **81,885** |
| 11 | **ಸಾದಿಲ್ವಾರು ನಿಧಿಗೆ** ಧನವಿನಿಯೋಗ | – | – | – | – | **420** |
| 12 | ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | 8,170 | 4,180 | (–)12,459 | (–)12,680 | (–)16,269 |
| 13 | **ಒಟ್ಟು ಆರ್ಥಿಕ ಕೊರತೆ** | **31,101** | **38,442** | **38,166** | **67,098** | **66,036** |

*ಆಕರ : ಹಣಕಾಸು ಲೆಕ್ಕಗಳು*

* *ಈ ಅಂಕೆಗಳು ವರ್ಷದ ನಿವ್ವಳ ವಿತರಣೆಗಳು/ಹೊರಹರಿವು (ವೆಚ್ಚಗಳು)*

ರಾಜ್ಯವು 2004–05ರಿಂದ ರಾಜಸ್ವ ಹೆಚ್ಚುವರಿಯನ್ನು ಸಾಧಿಸಿತ್ತು ಮತ್ತು ಮಾರುಕಟ್ಟೆ ಸಾಲಗಳು, ಭಾರತ ಸರ್ಕಾರದ ಸಾಲಗಳು ಇತ್ಯಾದಿಗಳೊಂದಿಗೆ ರಾಜಸ್ವ ಖಾತೆಯ ಹೆಚ್ಚುವರಿವನ್ನು ಬಂಡವಾಳ ವೆಚ್ಚಗಳಿಗೆ ಹಣಕಾಸು ಒದಗಿಸಲು ಬಳಸಿಕೊಳ್ಳಲಾಯಿತು. ಆದರೆ, 2020–21ರಿಂದ, ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ರಾಜ್ಯವು ರಾಜಸ್ವ ಕೊರತೆಯನ್ನು ಹೊಂದಿತ್ತು ಮತ್ತು ಇದು ರಾಜಸ್ವ ವೆಚ್ಚಕ್ಕೆ ಸಾಲವನ್ನು ಬಳಸಿಕೊಳ್ಳುವಲ್ಲಿ ಕಾರಣವಾಗಿತ್ತು. ಭಾರತ ಸರ್ಕಾರದ ಮಾರುಕಟ್ಟೆ ಸಾಲಗಳು, ಠೇವಣಿಗಳು ಮತ್ತು ಮುಂಗಡಗಳು ಹಾಗೂ ಮೀಸಲು ನಿಧಿಗಳಲ್ಲಿ ಹೆಚ್ಚಳ ಕಂಡುಬಂದಿತ್ತು ಮತ್ತು ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಇತ್ಯಾದಿಗಳಲ್ಲಿ ಇಳಿಕೆ ಕಂಡುಬಂದಿತ್ತು, ಅಮಾನತ್ತು ಮತ್ತು ಇತರ ಶಿಲ್ಕುಗಳು ಹಿಂದಿನ ವರ್ಷದಲ್ಲಿ ಮುಖ್ಯವಾಗಿ ಚೆಕ್‌ಗಳು ಮತ್ತು ಬಿಲ್‌ಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು ಒಳಗೊಂಡಿದ್ದವು 2021–22ರ ಅವಧಿಯ ವಿತ್ತೀಯ ಕೊರತೆಯ ಹಣಕಾಸು ಮಾದರಿಯನ್ನು **ಕೋಷ್ಟಕ–2.35**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.35: 2021–22ರಲ್ಲಿ ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವ ಘಟಕಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವಿತರಣೆಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ಸ್ವೀಕೃತಿ | ವಿತರಣೆ | ನಿವ್ವಳ |
|---|---|---|---|---|
| 1 | ಮಾರುಕಟ್ಟೆ ಸಾಲಗಳು | 58,999.96 | 10,000.00 | 48,999.96 |
| 2 | ಭಾರತ ಸರ್ಕಾರದ ಸಾಲಗಳು | 20,179.38 | 1,411.75 | 18,767.63 |
| 3 | ಎನ್‌ಎಸ್‌ಎಸ್‌ಎಫ್‌ಗೆ ಒದಗಿಸಿದ ವಿಶೇಷ ಭದ್ರತೆಗಳು | – | 1,627.92 | (–)1,627.92 |
| 4 | ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಮಾರ್ಗೋಪಾಯ ಮುಂಗಡಗಳು | – | – | – |
| 5 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 1,461.46 | 931.88 | 529.58 |
| 6 | ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವುಗಳು | 8,881.95 | 5,360.16 | 3,521.79 |
| 7 | ಠೇವಣಿಗಳು ಮತ್ತು ಮುಂಗಡಗಳು | 73,546.49 | 70,738.26 | 2,808.23 |
| 8 | ಅಮಾನತ್ತು ಮತ್ತು ಸಂಕೀರ್ಣ | 2,33,480.36 | 2,33,633.44 | (–)153.08 |
| 9 | ಇರಸಾಲುಗಳು | (–)1.09 | 131.82 | (–)132.91 |
| 10 | ಮೀಸಲು ನಿಧಿ | 12,405.51 | 3,232.74 | 9,172.77 |
| 11 | ಒಟ್ಟಾರೆ ಕೊರತೆ | **4,08,954.02** | **3,27,067.97** | **81,886.05** |
| 12 | ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | 47,143.18 | 63,412.36 | (–)16,269.18 |
| 13 | ಸಾದಿಲ್ವಾರು ನಿಧಿಗೆ ಧನವಿನಿಯೋಗ | 420 | – | 420 |
| 14 | ಒಟ್ಟು ಆರ್ಥಿಕ ಕೊರತೆ | **4,56,517.20** | **3,90,480.33** | **66,036.87** |

*ಆಕರ : ಹಣಕಾಸು ಲೆಕ್ಕಗಳು*

2021–22ರಲ್ಲಿ ವಿತ್ತೀಯ ಕೊರತೆಗೆ ಹಣಕಾಸು ಒದಗಿಸುವ ಪ್ರಮುಖ ಘಟಕಗಳೆಂದರೆ, ಮಾರುಕಟ್ಟೆ ಸಾಲಗಳು ಮತ್ತು ಭಾರತ ಸರ್ಕಾರದ ಸಾಲಗಳು.

### *2.7.3 ಋಣ ಚಿತ್ರಣ: ಸಾಲಗಳ ಅವಧಿ ಮುಕ್ತಾಯ ಮತ್ತು ಮರುಪಾವತಿ*

ಸಾಲದ ಗಡುವು ಮುಕ್ತಾಯ ಮತ್ತು ಮರುಪಾವತಿ ವಿವರವು ಸಾಲ ಮರುಪಾವತಿ ಅಥವಾ ಋಣ ಸೇವೆಗಾಗಿ ಸರ್ಕಾರದ ಕಡೆಯಿಂದ ಬದ್ಧತೆಯನ್ನು ಸೂಚಿಸುತ್ತದೆ. ಬಾಕಿ ಇರುವ ಸಾರ್ವಜನಿಕ ಋಣದ ಅಸಲು ಮತ್ತು ಬಡ್ಡಿಯ (ವ್ಯತ್ಯಾಸ) ಮರುಪಾವತಿಯನ್ನು **ಕೋಷ್ಟಕ–2.36** ಮತ್ತು **ನಕ್ಷೆ–2.17**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.36: ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ಚಿತ್ರಣ**

(₹ ಕೋಟಿಗಳಲ್ಲಿ)

| ಅವಧಿ ಮುಕ್ತಾಯ ವರ್ಷ | ಮೊತ್ತ | | |
|---|---|---|---|
| | ಸಾರ್ವಜನಿಕ ಋಣ | ಬಡ್ಡಿ | ಮೊತ್ತ |
| 2022–23 | 13,080.69 | 24,887.71 | 37,968.40 |
| 2023–24 | 21,437.73 | 23,625.71 | 45,063.44 |
| 2024–25 | 21,596.14 | 21,683.72 | 43,279.86 |
| 2025–26 | 23,902.75 | 20,134.01 | 44,036.76 |
| 2026–27 | 31,163.37 | 18,211.47 | 49,374.84 |
| 2027–28 | 31,465.76 | 15,819.11 | 47,284.87 |
| 2028–29 | 30,943.56 | 13,562.48 | 44,506.04 |
| 2029–30 | 31,559.78 | 11,102.86 | 42,662.64 |
| 2030–31 | 30,681.59 | 8,518.17 | 39,199.76 |
| 2031–32 | 25,924.67 | 6,693.61 | 32,618.28 |
| 2032–33 | 11,263.28 | 4,978.61 | 16,241.89 |
| 2033–34 | 12,726.10 | 4,201.93 | 16,928.03 |
| 2034–35 | 11,217.45 | 3,301.85 | 14,519.30 |

| ಅವಧಿ ಮುಕ್ತಾಯ ವರ್ಷ | ಮೊತ್ತ | | |
|---|---|---|---|
| | ಸಾರ್ವಜನಿಕ ಋಣ | ಬಡ್ಡಿ | ಮೊತ್ತ |
| 2035–36 | 8,181.43 | 2,502.41 | 10,683.84 |
| 2036–37 | 8,057.51 | 1,955.04 | 10,012.55 |
| 2037–38 ನಂತರ | 61,225.02 | 2,367.87 | 63,592.89 |
| ಒಟ್ಟು | 3,74,426.83 | 1,83,546.56 | 5,57,973.39 |

*ಆಕರ : ಹಣಕಾಸು ಲೆಕ್ಕಗಳು*

**ನಕ್ಷೆ 2.17: ಸಾರ್ವಜನಿಕ ಋಣದ ಅವಧಿಪೂರ್ಣತೆ ವಿವರ**




31 ಮಾರ್ಚ್ 2022ರಲ್ಲಿದ್ದಂತೆ ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ವಿವರವು ₹3,74,426.81 ಕೋಟಿಗಳ ಸಾರ್ವಜನಿಕ ಸಾಲದ ಪೈಕಿ, 29.70 ಪ್ರತಿಶತವು (₹1,11,180.67 ಕೋಟಿ) 1–6 ವರ್ಷಗಳ ಮತ್ತು 40.21 ಪ್ರತಿಶತವು (₹1,50,575.36 ಕೋಟಿ) 6–10 ವರ್ಷಗಳು ಮತ್ತು 30.09 ಪ್ರತಿಶತವು (₹1,12,670.78 ಕೋಟಿ) ಹತ್ತು ವರ್ಷಗಳಿಗೂ ಹೆಚ್ಚಿನ ತೀರಿಕೆಯ ಅವಧಿಯನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ. ರಾಜ್ಯವು ತನ್ನ ವೆಚ್ಚದ ಹೊಣೆಯನ್ನು ಪೂರೈಸಲು ಹೆಚ್ಚುವರಿ ಸಾಲವನ್ನು ಪಡೆಯುವುದು ಅಗತ್ಯವಾಗಿದ್ದರೂ, ಇದು ಮುಂದಿನ ದಿನಗಳಲ್ಲಿ ಸಾಲ ಮರುಪಾವತಿಯು ರಾಜ್ಯಕ್ಕೆ ಹೊರೆಯಾಗುತ್ತದೆ ಎಂದು ಸರ್ಕಾರವು ಒಪ್ಪಿಕೊಂಡಿದೆ. ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯು ಬದ್ಧ ವೆಚ್ಚವನ್ನು ಕಡಿಮೆ ಮಾಡಲು ಸಲಹೆ ನೀಡಿದ್ದರೂ, ವೆಚ್ಚದ ಪಾಲಿನಲ್ಲಿ ಬದ್ಧ ವೆಚ್ಚಗಳು ಒಂದು ಪ್ರಮುಖ ಪಾಲು ಆಗಿರುವುದರಿಂದ, ಹೆಚ್ಚುತ್ತಿರುವ ಸಾಲದ ಮಟ್ಟವು ಬದ್ಧವೆಚ್ಚದ ಭಾಗವಾದ ಬಡ್ಡಿ ಪಾವತಿಗಳು ಹೆಚ್ಚಾಗಲು ಕಾರಣವಾಗುತ್ತದೆ. **ಕೋಷ್ಟಕ–2.36**ರಿಂದ ನೋಡಿದಂತೆ, 2025–26ರವರೆಗೂ, ಬಡ್ಡಿಯ ಮರುಪಾವತಿಯು ಅಸಲಿಗಿಂತ ಹೆಚ್ಚಾಗಿದೆ. ನಂತರದ ಎರಡು ವರ್ಷಗಳಲ್ಲಿ ಕಡಿಮೆಯಾಗುತ್ತಿದ್ದರೂ, ಅದು ಅಸಲಿಗಿಂತ ಶೇಕಡ 50ರಷ್ಟು ಹೆಚ್ಚಾಗಿದೆ.

## 2.8 ಋಣ ಸಹಿಷ್ಣುತೆ ವಿಶ್ಲೇಷಣೆ

ಸರ್ಕಾರದ ಸಾರ್ವಜನಿಕ ಋಣವು ರಾಜ್ಯದ ಎಲ್ಲಾ ಹಣಕಾಸು ಜವಾಬ್ದಾರಿಗಳನ್ನು, ಅದು ಯಾರೇ ಹೊಂದಿದ್ದರೂ, ಸೂಚಿಸುತ್ತದೆ. ರಾಜ್ಯವು ತನ್ನ ಸಾಲವನ್ನು ಈಗ ಮತ್ತು ಭವಿಷ್ಯದಲ್ಲಿ ಪೂರೈಸುವ ಸ್ಥಿತಿಯಲ್ಲಿದ್ದರೆ ಸಾಲವನ್ನು ಸಹಿಷ್ಣುವೆಂದು ಪರಿಗಣಿಸಲಾಗುತ್ತದೆ. ರಾಜ್ಯ ಸರ್ಕಾರದ ಸಾಲದ ಪ್ರಮಾಣವನ್ನು ಹೊರತುಪಡಿಸಿ, ರಾಜ್ಯದ ಸಾಲದ ಸಹಿಷ್ಣುತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸುವುದು

ಮುಖ್ಯವಾಗಿದೆ. ಋಣ ಸಹಿಷ್ಣುತೆಯ ಸೂಚಕಗಳು, ಪ್ರಸ್ತುತ ಮತ್ತು ನಿಯತ ಆದಾಯದ ಮೂಲಗಳಿಂದ ಸಕಾಲಿಕ ಬಡ್ಡಿ ಪಾವತಿಗಳ ಮತ್ತು ಸಾಲವನ್ನು ಮರುಪಾವತಿ ಮಾಡುವ ಸಾಮರ್ಥ್ಯವನ್ನು ಪರಿಶೀಲಿಸುವ ಮೂಲಕ ರಾಜ್ಯದ ಸಾಲಾರ್ಹತೆ ಮತ್ತು ಹಣ ಲಭ್ಯತೆಯ ಸ್ಥಿತಿಯನ್ನು ನಿರ್ಣಯಿಸಲು ಪ್ರಯತ್ನಿಸುತ್ತವೆ.

ಪ್ರಸ್ತುತ ವಿಭಾಗವು ಸಾಲ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತ, ವಿತ್ತೀಯ ಕೊರತೆ ಮತ್ತು ಬಡ್ಡಿಪಾವತಿಗಳ ಹೊರೆ (ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳ ಅನುಪಾತದಿಂದ ಅಳೆಯಲಾಗುತ್ತದೆ) ಆಧಾರದಲ್ಲಿ ರಾಜ್ಯ ಸರ್ಕಾರದ ಸಾಲದ ಮೆಚ್ಯೂರಿಟಿ ವಿವರದಲ್ಲಿ ಸಾಲದ ಸಹಿಷ್ಣುತೆಯನ್ನು ನಿರ್ಣಯಿಸುತ್ತದೆ.

2017-18ರಿಂದ ಪ್ರಾರಂಭವಾಗುವ ಐದು ವರ್ಷಗಳ ಅವಧಿಗೆ ಈ ಸೂಚಕಗಳ ಪ್ರಕಾರ ರಾಜ್ಯದ ಸಾಲದ ಸಹಿಷ್ಣುತೆಯನ್ನು **ಕೋಷ್ಟಕ-2.37** ತೋರಿಸುತ್ತದೆ.

**ಕೋಷ್ಟಕ-2.37 : ಸಾಲದ ಸಹಿಷ್ಣುತೆಯ ಸೂಚಕಗಳಲ್ಲಿನ ಪ್ರವೃತ್ತಿಗಳು**

| ಋಣ ಸಹಿಷ್ಣುತೆ ಸೂಚಕಗಳು | 2017-18 | 2018-19 | 2019-20 | 2020-21 | 2021-22 |
|---|---|---|---|---|---|
| ಬಾಕಿ ಇರುವ ಸಾರ್ವಜನಿಕ ಋಣ* (₹ ಕೋಟಿಗಳಲ್ಲಿ) | 1,63,136 | 1,93,966 | 2,34,245 | 3,07,758 | 3,74,427** |
| ಬಾಕಿ ಇರುವ ಸಾರ್ವಜನಿಕ ಋಣದ ವೃದ್ಧಿಯ ದರ (ಶೇಕಡ) | 11.52 | 18.90 | 20.77 | 31.38 | 11.75 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (₹ ಕೋಟಿಗಳಲ್ಲಿ) | 13,33,240 | 14,76,496 | 16,15,457 | 17,30,991 | 17,21,336 |
| ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಯ ದರ (ಶೇಕಡ) | 10.40 | 10.74 | 9.41 | 7.15 | (-)0.56 |
| ಋಣ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡ) | 10.40 | 10.74 | 9.41 | 7.15 | 19.98 |
| ವಿತ್ತೀಯ ಕೊರತೆ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಶೇಕಡ) | 2.33 | 2.60 | 2.36 | 3.88 | 3.84 |
| ಬಡ್ಡಿ ಪಾವತಿ (₹ ಕೋಟಿಗಳಲ್ಲಿ) | 14,973 | 16,614 | 19,903 | 23,433 | 26,276 |
| ಬಾಕಿ ಇರುವ ಸಾರ್ವಜನಿಕ ಋಣದ ಮೇಲೆ ಸರಾಸರಿ ಬಡ್ಡಿ (ಶೇಕಡ) | 7.64 | 7.30 | 7.30 | 7.05 | 6.74 |
| ಬಡ್ಡಿ ಪಾವತಿ/ ರಾಜಸ್ವ ಸ್ವೀಕೃತಿಯ ಶತಾಂಶ | 10.18 | 10.07 | 11.34 | 14.95 | 13.42 |
| ಋಣ ಸ್ವೀಕೃತಿಗೆ ಋಣ ಮರುಪಾವತಿ ಶತಾಂಶ | 32.92 | 26.44 | 20.17 | 13.03 | 22.34 |
| ರಾಜ್ಯಕ್ಕೆ ನಿವ್ವಳ ಸಾಲ ಲಭ್ಯತೆ (₹ ಕೋಟಿಗಳಲ್ಲಿ) | 16,853 | 30,831 | 40,279 | 41,946 | 26,593# |
| ಸಾಲ ಸ್ವೀಕೃತಿಗಳಿಗೆ ಶೇಕಡಾವಾರಾಗಿ ನಿವ್ವಳ ಸಾಲ ಲಭ್ಯತೆ (ಶೇಕಡ) | 67.08 | 73.56 | 79.82 | 58.16 | 42.53 |
| ಋಣ ಸ್ಥಿರೀಕರಣ (ಪ್ರಮಾಣ ಹರವು[19] + ಪ್ರಾಥಮಿಕ ಕೊರತೆ) | (-)11,121.33 | (-)13,680.96 | (-)13,635.33 | (-)32,368.09 | (-)64,865.50 |

*ಆಕರ: ಹಣಕಾಸು ಲೆಕ್ಕಗಳು*

* *ಬಾಕಿಯಿರುವ ಸಾರ್ವಜನಿಕ ಋಣವು 6003-ಆಂತರಿಕ ಋಣ ಮತ್ತು 6004-ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಉಳಿದಿರುವ ಮೊತ್ತವಾಗಿದೆ.*

\# *ರಾಜ್ಯ ಸರ್ಕಾರಕ್ಕೆ ಲಭ್ಯವಿರುವ ನಿವ್ವಳ ಸಾಲವನ್ನು, ಸಾರ್ವಜನಿಕ ಸಾಲ ಮರುಪಾವತಿ ಮತ್ತು ಸಾರ್ವಜನಿಕ ಸಾಲದ ಮೇಲಿನ ಬಡ್ಡಿ ಪಾವತಿಗಳ ಮೇಲಿನ ಸಾರ್ವಜನಿಕ ಸಾಲ ಸ್ವೀಕೃತಿಗಳ ಹೆಚ್ಚುವರಿ ಎಂದು ಲೆಕ್ಕಹಾಕಲಾಗುತ್ತದೆ ಮತ್ತು ಸರಕು ಮತ್ತು ಸೇವಾ ತೆರಿಗೆ ಪರಿಹಾರವಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್-ಟು-ಬ್ಯಾಕ್ ಸಾಲಗಳನ್ನು ಒಳಗೊಂಡಿರುವುದಿಲ್ಲ.*

^ *ಸರಕು ಮತ್ತು ಸೇವಾ ತೆರಿಗೆ ಪರಿಹಾರದ ಬದಲಾಗಿ ಭಾರತ ಸರ್ಕಾರದಿಂದ ಪಡೆದ ಬ್ಯಾಕ್-ಟು-ಬ್ಯಾಕ್ ಸಾಲವನ್ನು (₹30,516 ಕೋಟಿ) ಸೂಚಕವನ್ನು ಲೆಕ್ಕ ಹಾಕಲು ಪರಿಗಣಿಸಲಾಗಿಲ್ಲ.*

** *2020-21 ಮತ್ತು 2021-22ರ ಅವಧಿಯಲ್ಲಿ ಸರಕು ಸೇವಾ ತೆರಿಗೆ ಪರಿಹಾರದ ಬದಲಾಗಿ ಸ್ವೀಕರಿಸಿದ ₹30,516 ಕೋಟಿ ಬ್ಯಾಕ್-ಟು-ಬ್ಯಾಕ್ ಸಾಲವನ್ನು ಒಳಗೊಂಡಿದೆ.*

[19] ಪ್ರಮಾಣ ಹರವು ಎಂಬುದು ಸಾಲದ ಶೇಕಡಾವಾರು ಬಡ್ಡಿ ಹರಡುವಿಕೆಯಾಗಿದೆ. ಬಡ್ಡಿ ಹರಡುವಿಕೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ದರ ಮತ್ತು ಬಾಕಿ ಉಳಿದಿರುವ ಸಾರ್ವಜನಿಕ ಸಾಲದ ಮೇಲಿನ ಸರಾಸರಿ ಬಡ್ಡಿ ದರದ ವ್ಯತ್ಯಾಸವಾಗಿದೆ. ಪ್ರಾಥಮಿಕ ಕೊರತೆಯೊಂದಿಗೆ ಪ್ರಮಾಣ ಹರವು ಶೂನ್ಯವಾಗಿದ್ದರೆ, ಸಾಲ-ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಸ್ಥಿರವಾಗಿರುತ್ತದೆ ಅಥವಾ ಸಾಲವು ಅಂತಿಮವಾಗಿ ಸ್ಥಿರವಾಗಿರುತ್ತದೆ. ಇದು ಋಣಾತ್ಮಕವಾಗಿದ್ದರೆ, ಸಾಲ-ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಏರುತ್ತದೆ ಮತ್ತು ಅದು ಧನಾತ್ಮಕವಾಗಿದ್ದರೆ, ಸಾಲ-ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಅಂತಿಮವಾಗಿ ತಾಳೆಯಾಗುತ್ತದೆ.

ಋಣ ಸ್ವೀಕೃತಿಗಳಡಿಯಲ್ಲಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ 2020–21ರಲ್ಲಿ ₹12,407 ಕೋಟಿ ಮತ್ತು 2021–22ರಲ್ಲಿ ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸ ಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚದ ಇಲಾಖೆಯು ನಿರ್ಧರಿಸಿರುವುದರಿಂದ 2020–21 ಮತ್ತು 2021–22ಕ್ಕೆ ಪರಿಣಾಮಕಾರಿ ಬಾಕಿ ಇರುವ ಸಾರ್ವಜನಿಕ ಋಣವು ಕ್ರಮವಾಗಿ ₹2,95,351 ಕೋಟಿ ಮತ್ತು ₹3,43,911 ಕೋಟಿಗಳಾಗಿವೆ. ರಾಜ್ಯದ ಬಾಕಿ ಇರುವ ಸಾರ್ವಜನಿಕ ಋಣವು ₹1,63,136 ಕೋಟಿಯಿಂದ ₹3,74,427 ಕೋಟಿಗೆ ಏರಿಕೆಯಾಗಿದೆ.

2017–18ರಿಂದ 2021–22ರವರೆಗೆ ಋಣ ಸಹಿಷ್ಣುತೆಗೆ ಸಂಬಂಧಿಸಿದಂತೆ ಹದಿನಾಲ್ಕು ಮತ್ತು ಹದಿನೈದನೆಯ ಹಣಕಾಸು ಆಯೋಗಗಳು ಶಿಫಾರಸು ಮಾಡಿದ ಹಣಕಾಸಿನ ಬಲವರ್ಧನೆಯ ಮಾರ್ಗಸೂಚಿಯು ಈ ಕೆಳಗಿನ ಗುರಿಗಳನ್ನು ನಿಗದಿಪಡಿಸಿದೆ:

- ಸಾಲ/ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅನುಪಾತವು ಕ್ರಮವಾಗಿ 26.22 ಮತ್ತು 32.60 ಶತಾಂಶಕ್ಕಿಂತ ಕಡಿಮೆಯಿರಬೇಕು
- ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿತ್ತೀಯ ಕೊರತೆಯು ಕ್ರಮವಾಗಿ ಶೇಕಡ 3.25 (2019–20ರ ವರೆಗೆ) ಮತ್ತು ಶೇಕಡ ನಾಲ್ಕು (2024–25ರವರೆಗೆ) ಇರಬೇಕು.

**ಕೋಷ್ಟಕ–2.37**ರಲ್ಲಿನ 2017–18ರಿಂದ 2021–22ರವರೆಗಿನ ಐದು ವರ್ಷಗಳ ಅವಧಿಯ ವಿಶ್ಲೇಷಣೆಯು 2021–22ರ ವರ್ಷದಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಋಣಾತ್ಮಕ ಬೆಳವಣಿಗೆಯಿಂದಾಗಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ವಿತ್ತೀಯ ಕೊರತೆ ಮತ್ತು ಒಟ್ಟು ಜವಾಬ್ದಾರಿಗಳು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾವಾರಿನಂತೆ ಹೆಚ್ಚಳವಾಗಿದೆ. ಇದಲ್ಲದೆ, ಈ ಕೆಳಗಿನವುಗಳನ್ನೂ ಗಮನಿಸಲಾಯಿತು:

- ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಸಾಲದ ಅನುಪಾತವು ಸ್ಥಿರವಾಗಿದೆ ಮತ್ತು ಹದಿನಾಲ್ಕು ಮತ್ತು ಹದಿನೈದನೆ ಹಣಕಾಸು ಆಯೋಗಗಳು ಶಿಫಾರಸು ಮಾಡಿದ ಶೇಕಡ 26.22 ಮತ್ತು 32.60 ಕ್ಕಿಂತಲೂ ಕಡಿಮೆಯಾಗಿದೆ. ಆದಾಗ್ಯೂ, ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯು ನಿಗದಿಸಿದ ಶೇಕಡ 25.00ರ ಮಿತಿಯ ಗುರಿಯನ್ನು ಮೀರಿದೆ;
- ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿತ್ತೀಯ ಕೊರತೆಯ ಅನುಪಾತವು ಸ್ಥಿರವಾಗಿದೆ ಮತ್ತು 2017–18ರಿಂದ 2021–22ರ ಅವಧಿಯಲ್ಲಿ ಹದಿನಾಲ್ಕು ಮತ್ತು ಹದಿನೈದನೆ ಹಣಕಾಸು ಆಯೋಗಗಳ ಶಿಫಾರಸುಗಳಿಗಿಂತ ಕಡಿಮೆಯಾಗಿದೆ;
- 2017–18ರಿಂದ 2021–22ರವರೆಗಿನ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಅನುಪಾತವು ಶೇಕಡ 10.07 ಮತ್ತು 14.95ರ ನಡುವೆ ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದ್ದು. ಅನುಪಾತದಲ್ಲಿನ ಹೆಚ್ಚಳವು ರಾಜಸ್ವ ಸ್ವೀಕೃತಿಗಳ ಮೇಲಿನ ಬಡ್ಡಿಯ ಹೊರೆಯನ್ನು ಸೂಚಿಸುತ್ತದೆ.
- ಬಾಕಿ ಉಳಿದಿರುವ ಸಾರ್ವಜನಿಕ ಋಣದ ವೃದ್ಧಿಯ ದರವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವೃದ್ಧಿಗಿಂತಲೂ ಹೆಚ್ಚಾಗಿದ್ದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಋಣದ ಅನುಪಾತವು ಹೆಚ್ಚಾಗಿರುವುದನ್ನು ಸೂಚಿಸುತ್ತದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಋಣಾತ್ಮಕ ಬೆಳವಣಿಗೆಯಿಂದಾಗಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ, ಸಾರ್ವಜನಿಕ ಋಣವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡವಾರಿನಂತೆ 2021–22ರಲ್ಲಿ ಹೆಚ್ಚಳವಾಗಿದೆ;
- 2017–18ರಿಂದ 2021–22ರ ಅವಧಿಯಲ್ಲಿ ಸಾರ್ವಜನಿಕ ಋಣದ ಸ್ವೀಕೃತಿಗಳಿಗೆ ಸಾರ್ವಜನಿಕ ಋಣ ಮರುಪಾವತಿಯ ಶತಾಂಶವು 13.03 ಮತ್ತು 32.92ರ ನಡುವೆ ಇದೆ. 2020–21ರಲ್ಲಿ ಅತೀ ಕಡಿಮೆ ಇದ್ದ ಈ ಅನುಪಾತವು ಮುಖ್ಯವಾಗಿ ಸಾರ್ವಜನಿಕ ಋಣ ಸ್ವೀಕೃತಿಗಳಲ್ಲಿನ ಹೆಚ್ಚಳದಿಂದಾಗಿ ಏರಿಕೆ ಕಂಡಿದೆ ಮತ್ತು 2021–22ರಲ್ಲಿ ಇದು ಶೇಕಡ 27.69ರಷ್ಟಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಇದು ಪ್ರಮುಖವಾಗಿ ಮರುಪಾವತಿಯ ಹೆಚ್ಚಳ ಹಾಗೂ ಸಾಲ ಪಡೆಯುವಲ್ಲಿ ಇಳಿಕೆಯ

ಕಾರಣದಿಂದಾಗಿದೆ. ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲದ ಇಳಿಕೆಯು ಮುಖ್ಯವಾಗಿ ಆಂತರಿಕ ಋಣದ ಅಡಿಯಲ್ಲಿ ಸ್ವೀಕೃತಿಗಳ ಇಳಿಕೆಯ ಕಾರಣದಿಂದಾಗಿದೆ. ಆಂತರಿಕ ಋಣವು 2018–19ರಲ್ಲಿದ್ದ ₹40,470 ಕೋಟಿಗಳಿಂದ 2019–20ರಲ್ಲಿ ₹49,784 ಕೋಟಿಗಳಿಗೆ ಮತ್ತು 2020–21ರಲ್ಲಿ ₹70,414 ಕೋಟಿಗಳಿಗೆ (₹12,407 ಕೋಟಿಗಳ ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ಹೊರತುಪಡಿಸಿ) ಏರಿಕೆಯಾಗಿದೆ ಮತ್ತು 2021–22ರಲ್ಲಿ ₹60,462 ಕೋಟಿಗಳಿಗೆ (18,109 ಕೋಟಿಗಳ ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ಹೊರತುಪಡಿಸಿ) ಇಳಿಕೆಯಾಗಿದೆ.

- ಪ್ರಮಾಣ ಹರವು ಮತ್ತು ಪ್ರಾಥಮಿಕ ಕೊರತೆಯ ಋಣಾತ್ಮಕ ಮೊತ್ತವು ಅಸ್ಥಿರ ಸಾಲದ ಕಡೆಗೆ ಪ್ರವೃತ್ತಿಯನ್ನು ಸೂಚಿಸುತ್ತದೆ.

### *2.8.1 ಸಾಲ ಪಡೆದ ನಿಧಿಯ ಬಳಕೆ*

ಸಾಲದ ರೂಪದಲ್ಲಿ ಪಡೆದ ಹಣವನ್ನು ಬಂಡವಾಳ ಸೃಷ್ಟಿ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸಬೇಕು. ಪ್ರಸಕ್ತ ವೆಚ್ಚಗಳಿಗೆ ಮತ್ತು ಬಾಕಿ ಇರುವ ಸಾಲಗಳ ಮೇಲಿನ ಬಡ್ಡಿಯ ಮರು ಪಾವತಿಗೆ ಸಾಲದ ಹಣವನ್ನು ಬಳಸುವುದು ಸಮರ್ಥನೀಯವಲ್ಲ. ಆದರೆ, 2021–22ರಲ್ಲಿ ರಾಜಸ್ವ ಸ್ವೀಕೃತಿಯನ್ನು ಭಾರೀ ಬೆಳವಣಿಗೆ ಕಂಡುಬಂದರೂ, ಅದು ರಾಜಸ್ವ ವೆಚ್ಚವನ್ನು ಭರಿಸಲು ಸಾಕಷ್ಟು ಇರಲಿಲ್ಲ. ಇದರಿಂದಾಗಿ ಎರವಲು ಪಡೆದ ಹಣವನ್ನು ರಾಜಸ್ವ ವೆಚ್ಚಕ್ಕೆ ಬಳಸಲಾಯಿತು. 2017–18ರಿಂದ 2021–22ರ ಅವಧಿಯಲ್ಲಿ ಸಾಲ ಪಡೆದ ನಿಧಿಯ ಬಳಕೆಯ ವಿವರಗಳನ್ನು **ಕೋಷ್ಟಕ–2.38**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.38: ಸಾಲ ಪಡೆದ ನಿಧಿಯ ಬಳಕೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ/ವಿವರ | 2017–18 | 2018–19 | 2019–20 | 2020–21 | 2021–22 |
|---|---|---|---|---|---|---|
| 1 | ಒಟ್ಟು ಸಾಲ | 25,122 | 41,914 | 50,459 | 84,528 | 80,641 |
| 2 | ಹಿಂದಿನ ಸಾಲಗಳ ಮರು ಪಾವತಿ (ಅಸಲು) | 8,269 | 11,083 | 10,180 | 11,016 | 13,972 |
| 3 | ನಿವ್ವಳ ಬಂಡವಾಳ ವೆಚ್ಚ | 30,663 | 34,665 | 35,485 | 45,361 | 47,868 |
| 4 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 4,956 | 4,456 | 3,866 | 2,399 | 4,082 |
| 5 | ಸಾಲ ಪಡೆದ ಮೊತ್ತಗಳಲ್ಲಿ ನಿವ್ವಳ ಲಭ್ಯತೆ (5=1–2–3–4) | (–)18,766 | (–)8,290 | 928 | 25,752 | 14,719 |

*ಆಕರ: ಹಣಕಾಸು ಲೆಕ್ಕಗಳು*

** 2020–21 ಮತ್ತು 2021–22ರ ಅವಧಿಯಲ್ಲಿ ಒಟ್ಟು ಸಾಲಗಳು ಬ್ಯಾಕ್–ಟು–ಬ್ಯಾಕ್ ಸಾಲಗಳನ್ನು ಒಳಗೊಂಡಿದ್ದವು. ಋಣ ಸ್ವೀಕೃತಿಗಳಡಿಯಲ್ಲಿ 2020–21 ಮತ್ತು 2021–22ರ ಅವಧಿಯಲ್ಲಿ ಅನುಕ್ರಮವಾಗಿ ರಾಜ್ಯಕ್ಕೆ ಬ್ಯಾಕ್–ಟು–ಬ್ಯಾಕ್ ಸಾಲವಾಗಿ ನೀಡಲಾದ ₹12,407 ಕೋಟಿ ಮತ್ತು ₹18,109 ಕೋಟಿ ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು, ಹಣಕಾಸು ಆಯೋಗವು ಸೂಚಿಸಬಹುದಾದ ಯಾವುದೇ ಮಾನದಂಡಗಳಿಗೆ ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ ಎಂದು ಭಾರತ ಸರ್ಕಾರದ ವೆಚ್ಚ ಇಲಾಖೆಯು ನಿರ್ಧರಿಸಿತು.*

ಮೇಲಿನ ಕೋಷ್ಟಕದಿಂದ, 2017–18ರಿಂದ 2018–19ರ ಅವಧಿಗೆ ಸಾಲ ಪಡೆದ ನಿಧಿಗಳು ಬಂಡವಾಳ ವೆಚ್ಚವನ್ನು (ಸಾಲಗಳು ಮತ್ತು ಮುಂಗಡಗಳನ್ನು ಒಳಗೊಂಡಂತೆ) ಪೂರೈಸಲು ಸಾಕಾಗುವಷ್ಟಿರಲಿಲ್ಲ ಎಂದು ಗಮನಿಸಲಾಗಿದೆ. 2019–20ರ ಅವಧಿಯಲ್ಲಿ, ಸಾಲ ಪಡೆದ ಹಣವು ಬಂಡವಾಳ ವೆಚ್ಚಕ್ಕೆ ಸಾಕಾಗಿತ್ತು. 2020–21 ಮತ್ತು 2021–22ರಲ್ಲಿ, ಕ್ರಮವಾಗಿ ₹12,407 ಕೋಟಿ ಮತ್ತು ₹18,109 ಕೋಟಿಗಳಷ್ಟು ಸರಕು ಮತ್ತು ಸೇವಾ ತೆರಿಗೆ ಪರಿಹಾರವನ್ನು ಬ್ಯಾಕ್–ಟು–ಬ್ಯಾಕ್ ಸಾಲವಾಗಿ ಬಿಡುಗಡೆ ಮಾಡಿರುವುದರಿಂದ, ಅಲ್ಲಿ ಸಾಲ ಪಡೆದ ನಿಧಿಗಳ ನಿವ್ವಳ ಲಭ್ಯತೆಯ ಹೆಚ್ಚಳವಿತ್ತು. ಮುಂದುವರೆದಂತೆ, ರಾಜ್ಯವು ರಾಜಸ್ವ ಕೊರತೆಯನ್ನು ಅನುಭವಿಸಿದ್ದುದರಿಂದ 2020–21 ಮತ್ತು 2021–22ರಲ್ಲಿ ಎರವಲು ಪಡೆದ ನಿಧಿಯ ಭಾಗವನ್ನು ರಾಜಸ್ವ ವೆಚ್ಚಕ್ಕಾಗಿ ಬಳಸಲಾಯಿತು.

ಆರ್ಥಿಕ ಇಲಾಖೆಯ ತನ್ನ ಉತ್ತರದಲ್ಲಿ (ಜನವರಿ 2023) ಸಾಲಗಳು ವಾಸ್ತವಿಕ ಅಗತ್ಯತೆಯ ಆಧಾರದ ಮೇಲೆ ಮಾಡಲಾಗಿದೆ ಎಂದು ತಿಳಿಸಿತು.

### 2.8.2 ಖಾತರಿಗಳ ಸ್ಥಿತಿ – ಸಾಂದರ್ಭಿಕ ಹೊಣೆಗಾರಿಕೆಗಳು

ಸರ್ಕಾರವು ಖಾತರಿ ನೀಡಿದ ಸಾಲಗಾರರಯ ಸುಸ್ತಿದಾರರು ಆದಲ್ಲಿ ಖಾತರಿಗಳು ರಾಜ್ಯ ಸಂಚಿತ ನಿಧಿಯ ಮೇಲಿನ ಸಾಂದರ್ಭಿಕ ಜವಾಬ್ದಾರಿಗಳಾಗುತ್ತವೆ. ಕರ್ನಾಟಕ ಖಾತರಿಗಳ ಮೇಲಿನ ಮಿತಿ ಕಾಯಿದೆ 1999ರ ಅನ್ವಯ ಸರ್ಕಾರವು ನೀಡಿದ ಖಾತರಿಗಳ ಬಾಕಿಯ ಮೊತ್ತವು ಯಾವುದೇ ವರ್ಷದ ಏಪ್ರಿಲ್ ತಿಂಗಳ ಒಂದರಂದು ಹಿಂದಿನ ಎರಡನೇ ವರ್ಷದ ರಾಜ್ಯ ರಾಜಸ್ವ ಸ್ವೀಕೃತಿಗಳ ಶೇಕಡ 80ರಷ್ಟನ್ನು ಮೀರಬಾರದು. ಕಳೆದ ಐದು ವರ್ಷಗಳ ವಿವರಗಳನ್ನು **ಕೋಷ್ಟಕ–2.39**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.39: ರಾಜ್ಯ ಸರ್ಕಾರವು ನೀಡಿದ ಖಾತರಿಗಳು**

**(₹ ಕೋಟಿಗಳಲ್ಲಿ)**

| ಖಾತರಿಗಳು | 2017–18 | 2018–19 | 2019–20 | 2020–21 | 2021–22 |
|---|---|---|---|---|---|
| ವರ್ಷದ 31 ಮಾರ್ಚ್ ರಂದು ಇದ್ದಂತೆ ಖಾತರಿ ನೀಡಿದ ಗರಿಷ್ಠ ಮೊತ್ತ | 24,025 | 30,719 | 35,694 | 45,104 | 49,467 |
| ವರ್ಷದ ಕೊನೆಯಲ್ಲಿ ಬಡ್ಡಿಯೂ ಸೇರಿದಂತೆ ಬಾಕಿ ಇರುವ ಖಾತರಿ ಮೊತ್ತ | 18,416 | 24,091 | 26,830 | 32,733 | 33,192 |

*ಆಕರ : ಹಣಕಾಸು ಲೆಕ್ಕಗಳು*

ಪ್ರತಿ ವರ್ಷ ಏಪ್ರಿಲ್ 1ರಂದು ಬಾಕಿ ಇರುವ ಖಾತರಿಗಳು ನಿಗದಿತ ಮಿತಿಯೊಳಗಿದ್ದವು. 2021–22ರ ಅಂತ್ಯದ ವೇಳೆಗೆ ₹33,192 ಕೋಟಿ ಮೊತ್ತದ ಬಾಕಿ ಇರುವ ಖಾತರಿಗಳು (ಅಸಲು+ಬಡ್ಡಿ) ವಿವಿಧ ವಲಯಗಳ[20] ಅಡಿಯಲ್ಲಿ 152 ಸಂಸ್ಥೆಗಳು/ಕಂಪನಿಗಳಿಗೆ ವಿಸ್ತರಿಸಲಾದ ಖಾತರಿಗಳನ್ನು ಒಳಗೊಂಡಿದ್ದವು.

ರಾಜ್ಯ ಸರ್ಕಾರವು ವರದಿ ಮಾಡಿದಂತೆ 2021–22ರಲ್ಲಿ ಒಟ್ಟು ₹565.39 ಕೋಟಿಗಳ ಖಾತರಿ ಶುಲ್ಕ ಸ್ವೀಕೃತಿಯ ಅಂದಾಜು ಮಾಡಿದ್ದು, ಕೇವಲ ₹329.41 ಕೋಟಿಗಳು ಮಾತ್ರ ಸ್ವೀಕೃತವಾಗಿದೆ. ವಿವಿಧ ಘಟಕಗಳಿಂದ ಪಾವತಿಸಬೇಕಾಗಿದ್ದ ಖಾತರಿ ಶುಲ್ಕದ ಈ ಮೊತ್ತವು ಸಹಾಯಧನ/ಸಹಾಯಾನುದಾನ/ಆರ್ಥಿಕ ಸಹಾಯದ ರೂಪದಲ್ಲಿ ಸರ್ಕಾರವು ಮಾಡಿದ ಪುಸ್ತಕ ಹೊಂದಾಣಿಕೆಯನ್ನು ಒಳಗೊಂಡಿರುತ್ತದೆ.

ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸಿನ ಮೇಲೆ ರಾಜ್ಯ ಸರ್ಕಾರವು 1999–2000ದಲ್ಲಿ ಒಂದು ಕೋಟಿಗಳ ಮೂಲಧನದೊಂದಿಗೆ ಒಂದು ಖಾತರಿ ವಿಮೋಚನಾ ನಿಧಿಯನ್ನು ಸ್ಥಾಪಿಸಿತು. ಆದಾಗ್ಯೂ, ಅಲ್ಲಿ ಯಾವುದೇ ವ್ಯವಹಾರಗಳಿಲ್ಲದ ಕಾರಣ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಖಾತರಿ ಮೀಸಲು ನಿಧಿ ಕಾರ್ಯಾಚರಣೆ ಮಾಡಲು ಮತ್ತು ಮುಂದುವರೆಸಲು ಸೂಕ್ತ ಪ್ರಯತ್ನ ನಡೆಸಬೇಕು ಎಂದು ಶಿಫಾರಸು ಮಾಡಿತು(ಜುಲೈ 2015). ರಾಜ್ಯ ಸರ್ಕಾರವು ಖಾತರಿ ಮೀಸಲು ನಿಧಿ ಕಾರ್ಯಾಚರಣೆ ಮಾಡಲು 2020–21 ಮತ್ತು 2021–22ರಲ್ಲಿ ₹50 ಕೋಟಿಗಳನ್ನು ಒದಗಿಸಿದ್ದರೂ, ಯಾವುದೇ ವೆಚ್ಚವನ್ನು ಭರಿಸಿಲಾಗಿಲ್ಲ. ಆದ್ದರಿಂದ, ನಿಧಿಯು ನಿಷ್ಕ್ರಿಯವಾಗಿಯೇ ಉಳಿದಿದೆ.

### 2.8.3 ನಗದು ಶಿಲ್ಕುಗಳ ನಿರ್ವಹಣೆ

ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗಿನ ಒಪ್ಪಂದದ ಪ್ರಕಾರ, ರಾಜ್ಯ ಸರ್ಕಾರವು ಬ್ಯಾಂಕ್‌ನೊಂದಿಗೆ ಕನಿಷ್ಟ ದೈನಂದಿನ ನಗದು ಶಿಲ್ಕು ₹2.63 ಕೋಟಿಯನ್ನು ನಿರ್ವಹಿಸಬೇಕು. ಯಾವುದೇ ದಿನದಲ್ಲಿ ಶಿಲ್ಕು ಒಪ್ಪಿದ ಕನಿಷ್ಟಕ್ಕಿಂತ ಕಡಿಮೆಯಾದರೆ, ಸಾಮಾನ್ಯ ಮಾರ್ಗೋಪಾಯ ಮುಂಗಡಗಳು/ವಿಶೇಷ ಮಾರ್ಗೋಪಾಯ ಮುಂಗಡಗಳು/ಓವರ್‌ಡ್ರಾಫ್ಟ್‌ಗಳನ್ನು ತೆಗೆದುಕೊಳ್ಳುವ ಮೂಲಕ ಕೊರತೆಯನ್ನು ತುಂಬಲಾಗುತ್ತದೆ. ರಾಜ್ಯ

[20] ನೀರಾವರಿ (₹14,495 ಕೋಟಿ), ಸಹಕಾರ (₹1,208 ಕೋಟಿ), ಆರ್ಥಿಕ (₹1,026 ಕೋಟಿ), ವಿದ್ಯುತ್ (₹12,970 ಕೋಟಿ), ವಸತಿ (₹2,003 ಕೋಟಿ), ಸಾರಿಗೆ (₹608 ಕೋಟಿ) ಮತ್ತು ಇತರೆ ವಲಯಗಳು (₹785 ಕೋಟಿ).

ಸರ್ಕಾರಕ್ಕೆ ಸಾಮಾನ್ಯ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕು ಪರಿಷ್ಕರಿಸುತ್ತದೆ.

- ಭಾರತೀಯ ರಿಸರ್ವ್ ಬ್ಯಾಂಕು ಸಾಮಾನ್ಯ ಮತ್ತು ವಿಶೇಷ ಮಾರ್ಗೋಪಾಯ ಮುಂಗಡಗಳನ್ನು ನೀಡುತ್ತದೆ. ರಾಜ್ಯಕ್ಕೆ ಸಾಮಾನ್ಯ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು 01 ಫೆಬ್ರವರಿ 2016ರಿಂದ ಜಾರಿಯಲ್ಲಿದ್ದ ₹1,985 ಕೋಟಿಗಳನ್ನು ಏಪ್ರಿಲ್ 2020ರಲ್ಲಿ ₹3,176 ಕೋಟಿಗಳಿಗೆ ಹೆಚ್ಚಿಸಲಾಯಿತು. ಮಾರ್ಚ್ 1999ರಿಂದ, ರಾಜ್ಯ ಸರ್ಕಾರದ ವಿಶೇಷ ಮಾರ್ಗೋಪಾಯ ಮುಂಗಡಗಳ ಮಿತಿಯನ್ನು ಭಾರತ ಸರ್ಕಾರದ ಭದ್ರತೆಗಳಲ್ಲಿ ಸರ್ಕಾರ ತೊಡಗಿಸಿರುವ ಮೊತ್ತಕ್ಕೆ ಕೊಂಡಿ ಹಾಕಲಾಗಿದೆ. ಈ ಮುಂಗಡಗಳು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕು ನಿಗದಿ ಪಡಿಸಬಹುದಾದಂತಹ ದರಗಳಲ್ಲಿ ಬಡ್ಡಿಯನ್ನು ಹೊಂದಿರುತ್ತವೆ.
- ಇಡೀ ವರ್ಷ ಅಗತ್ಯವಿರುವ ದೈನಂದಿನ ಕನಿಷ್ಟ ಶಿಲ್ಕನ್ನು ಉಳಿಸಿಕೊಂಡಿದ್ದ ಕಾರಣದಿಂದಾಗಿ, 2021–22ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಯಾವುದೇ ಮಾರ್ಗೋಪಾಯ ಮುಂಗಡಗಳನ್ನು ಪಡೆದಿರಲಿಲ್ಲ[21].
- ರಾಜ್ಯ ಸರ್ಕಾರವು ದೊಡ್ಡ ಪ್ರಮಾಣದ ನಗದು ಶಿಲ್ಕುಗಳನ್ನು ಹೊಂದಿದ್ದರೂ ಅದನ್ನು ಉತ್ಪಾದಕ ಬಳಕೆಗೆ ಒಳಪಡಿಸದೆ ನಗದು ಶಿಲ್ಕಿಗೆ ಮತ್ತಷ್ಟು ಸಂಚಯನಕ್ಕೆ ಕಾರಣವಾಗುವಂತೆ ಮಾರುಕಟ್ಟೆ ಸಾಲಗಳಿಗೆ ಆಶ್ರಯಿಸುವುದು ಅಪೇಕ್ಷಣೀಯವಲ್ಲ. 2021–22ರಲ್ಲಿ ರಾಜ್ಯ ಸರ್ಕಾರ ಹೊಂದಿದ್ದ ನಗದು ಶಿಲ್ಕುಗಳು ಮತ್ತು ಹೂಡಿಕೆಗಳನ್ನು **ಕೋಷ್ಟಕ–2.40**ರಲ್ಲಿ ನೀಡಿದೆ.

**ಕೋಷ್ಟಕ–2.40: ನಗದು ಶಿಲ್ಕುಗಳು ಮತ್ತು ಅವುಗಳ ಹೂಡಿಕೆ**

(₹ ಕೋಟಿಗಳಲ್ಲಿ)

| | 1 ಏಪ್ರಿಲ್ 2021ರಲ್ಲಿ ಪ್ರಾರಂಭಿಕ ಶಿಲ್ಕು | 31 ಮಾರ್ಚ್ 2022ರಲ್ಲಿ ಅಂತಿಮ ಶಿಲ್ಕು |
|---|---|---|
| ಎ. ಸಾಮಾನ್ಯ ನಗದು ಶಿಲ್ಕು | | |
| ಖಜಾನೆಗಳಲ್ಲಿ ನಗದು | – | – |
| ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಠೇವಣಿಗಳು | 1,583.33 | 1,518.39 |
| ಇತರೆ ಬ್ಯಾಂಕ್‌ಗಳಲ್ಲಿ ಠೇವಣಿಗಳು | – | – |
| ರವಾನೆಯಲ್ಲಿರುವ ಇರಸಾಲುಗಳು – ಸ್ಥಳೀಯ | 0.01 | 0.01 |
| ಉಪಮೊತ್ತ | **1,583.34** | **1,518.40** |
| ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿರುವ ಹೂಡಿಕೆಗಳು | 21,744.33 | 31,973.89 |
| ಒಟ್ಟು (ಎ) | **23,327.67** | **33,492.29** |
| ಬಿ. ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು | | |
| ಇಲಾಖಾ ಅಧಿಕಾರಿಗಳು ಅಂದರೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖಾ ಅಧಿಕಾರಿಗಳು, ಅರಣ್ಯ ಇಲಾಖೆ, ಜಿಲ್ಲಾಧಿಕಾರಿಗಳು ಮುಂತಾದವರೊಡನೆ ನಗದು | 2.09 | 2.09 |
| ಇಲಾಖಾ ಅಧಿಕಾರಿಗಳ ಬಳಿಯಿರುವ ಸಾದಿಲ್ವಾರು ವೆಚ್ಚಕ್ಕಾಗಿನ ಶಾಶ್ವತ ಮುಂಗಡಗಳು | 3.18 | 3.55 |
| ಮೀಸಲು ನಿಧಿಗಳಲ್ಲಿ ಹೂಡಿಕೆಗಳು | 23,810.24 | 29,914.43 |
| ಒಟ್ಟು (ಬಿ) | **23,815.51** | **29,920.07** |
| ಒಟ್ಟು (ಎ+ಬಿ) | **47,143.18** | **63,412.36** |
| ಗಳಿಸಿದ ಬಡ್ಡಿ | **627.42** | **899.44** |

*ಆಕರ : ಹಣಕಾಸು ಲೆಕ್ಕಗಳು*

ಖಜಾನೆಗಳು/ಇಲಾಖೆಗಳ ನಗದು, ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಠೇವಣಿಗಳು ಮತ್ತು ರವಾನೆ ರೂಪದಲ್ಲಿ ನಗದು ಇವು ನಗದು ಮತ್ತು ನಗದು ಸಮಾನಗಳು ರಾಜ್ಯದ ನಗದು ಶಿಲ್ಕು ಆಗುತ್ತವೆ. ಖಜಾನೆ

[21] ಹಣಕಾಸು ಲೆಕ್ಕಗಳು ಸಂಪುಟ 1ರ ತ:ಖ್ತೆ ಸಂಖ್ಯೆ–2ರ ಅನುಬಂಧದ ಪ್ರಕಾರ

ಬಿಲ್‌ಗಳ ಜೊತೆಗೆ, ನಗದು ಶಿಲ್ಕನ್ನು ಸಂಚಿತ ಋಣ ಪರಿಹಾರ ನಿಧಿ, ಅಭಿವೃದ್ಧಿ ಮತ್ತು ಕಲ್ಯಾಣ ನಿಧಿ ಮುಂತಾದ ಮೀಸಲು ನಿಧಿಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಒಟ್ಟು ₹29,914.43 ಕೋಟಿಗಳ ಮೀಸಲಿಟ್ಟ ನಿಧಿಯಲ್ಲಿ, ₹8,600 ಕೋಟಿಗಳನ್ನು ಸಂಚಿತ ಋಣ ಪರಿಹಾರ ನಿಧಿಯಲ್ಲಿ, ₹21,289 ಕೋಟಿಗಳನ್ನು ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಯಲ್ಲಿ ಮತ್ತು ಉಳಿದವನ್ನು ಸಾಮಾನ್ಯ ಮತ್ತು ಇತರ ಮೀಸಲು ನಿಧಿಗಳಲ್ಲಿ ಹೂಡಿಕೆ ಮಾಡಲಾಗಿದೆ (₹25 ಕೋಟಿ) .

ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗದು ಶಿಲ್ಕಿನಲ್ಲಿ ಶೇಕಡ 44ರಷ್ಟು ಹೆಚ್ಚಳವಾಗಿದೆ. ಪ್ರಸಕ್ತ ವರ್ಷದ ಅಂತ್ಯದಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು 2020–21ರಲ್ಲಿನ ₹23,327.67 ಕೋಟಿಗಳಿಂದ 2021–22ರಲ್ಲಿ ₹33,492.29 ಕೋಟಿಗಳಿಗೆ ಏರಿ ₹10,164.62 ಕೋಟಿಗಳಷ್ಟು ಗಣನಾರ್ಹ ಹೆಚ್ಚಳವನ್ನು ಕಂಡಿದೆ.

ರಾಜ್ಯ ಸರ್ಕಾರವು ತನ್ನ ಹೆಚ್ಚುವರಿ ನಗದು ಶಿಲ್ಕನ್ನು ಅಲ್ಪ ಮತ್ತು ದೀರ್ಘಾವಧಿಯ ಭಾರತ ಸರ್ಕಾರದ ಭದ್ರತೆಗಳಲ್ಲಿ ಮತ್ತು ಖಜಾನೆ ಬಿಲ್‌ಗಳಲ್ಲಿ ಹೂಡಿಕೆ ಮಾಡುತ್ತದೆ. ಅಂತಹ ಹೂಡಿಕೆಗಳಿಂದ ಪಡೆದ ಲಾಭವನ್ನು '0049–ಬಡ್ಡಿ ಸ್ವೀಕೃತಿಗಳು' ಶೀರ್ಷಿಕೆಯಡಿಯಲ್ಲಿ ಆದಾಯವಾಗಿ ಜಮಾ ಮಾಡಲಾಗುತ್ತದೆ. ರಾಜ್ಯ ಸರ್ಕಾರವು 2021–22ರಲ್ಲಿ 14 ದಿನಗಳ ಖಜಾನೆ ಬಿಲ್‌ಗಳಿಗೆ ಶೇಕಡ 1.17ರ ಸರಾಸರಿ ಬಡ್ಡಿ ದರದೊಂದಿಗೆ ಮತ್ತು 91 ದಿನಗಳ ಖಜಾನೆ ಬಿಲ್‌ಗಳಿಗೆ ಶೇಕಡ 3.46ರ ಬಡ್ಡಿ ದರದೊಂದಿಗೆ ₹899 ಕೋಟಿಗಳ ಬಡ್ಡಿಯನ್ನು ಗಳಿಸಿದೆ ಮತ್ತು ವಾರ್ಷಿಕ ಸರಾಸರಿ ದರ ಶೇಕಡ 6.38 ದರದಲ್ಲಿ ಸಾಲಗಳನ್ನು ಮಾಡಲಾಗಿದೆ.

2017–18 ರಿಂದ 2021–22ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ನಗದು ಶಿಲ್ಕಿನ ಹೂಡಿಕೆಗಳನ್ನು **ಕೋಷ್ಟಕ–2.41**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.41 : ನಗದು ಶಿಲ್ಕಿನ ಹೂಡಿಕೆ ಲೆಕ್ಕ (ಪ್ರಧಾನ ಲೆಕ್ಕ ಶೀರ್ಷಿಕೆ–8673)**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | ಅಂತಿಮ ಶಿಲ್ಕು | ಹೆಚ್ಚಳ (+)/ ಇಳಿಕೆ(–) | ಗಳಿಸಿದ ಬಡ್ಡಿ |
|---|---|---|---|---|
| **2017–18** | 23,977.48 | 12,655.49 | (–)11,321.99 | 1,078.30 |
| **2018–19** | 12,655.49 | 5,139.28 | (–)7,516.21 | 936.47 |
| **2019–20** | 5,139.28 | 13,634.21 | 8,494.93 | 535.10 |
| **2020–21** | 13,634.21 | 21,744.33 | 8,110.12 | 627.42 |
| **2021–22** | 21,744.33 | 31,973.89 | 10,229.56 | 899.44 |

*ಆಕರ: ಹಣಕಾಸು ಲೆಕ್ಕಗಳು*

2017–18ರಿಂದ 2021–22ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕಿನ ಹೂಡಿಕೆಯ ಪ್ರವೃತ್ತಿಯ ವಿಶ್ಲೇಷಣೆಯು 2019–20 ರಿಂದ 2021–22ರ ಅವಧಿಯಲ್ಲಿ ಹೂಡಿಕೆಯು ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ಸೂಚಿಸಿದೆ.

**ನಕ್ಷೆ–2.18**ರಲ್ಲಿ 2017–18ರಿಂದ 2021–22ರ ಅವಧಿಯಲ್ಲಿ ನಗದು ಶಿಲ್ಕಿನ ಹೂಡಿಕೆ ಲೆಕ್ಕದಲ್ಲಿ ಲಭ್ಯವಿರುವ ಶಿಲ್ಕು ಮತ್ತು ರಾಜ್ಯವು ತೆಗೆದುಕೊಂಡ ಮಾರುಕಟ್ಟೆ ಸಾಲಗಳ ಮುಕ್ತಾಯದ ಬಾಕಿಯನ್ನು ಹೋಲಿಸಲಾಗಿದೆ. ಮಾರುಕಟ್ಟೆ ಸಾಲಗಳನ್ನು ಹೆಚ್ಚಿನ ಬಡ್ಡಿ ದರದಲ್ಲಿ ತೆಗೆದುಕೊಳ್ಳಲಾಗಿದೆ, ಆದರೆ ಖಜಾನೆ ಬಿಲ್‌ಗಳಲ್ಲಿನ ಹೂಡಿಕೆಯು ಕಡಿಮೆ ದರಗಳಲ್ಲಿ ಬಡ್ಡಿಯನ್ನು ನೀಡುತ್ತಿದೆ.

**ನಕ್ಷೆ–2.18: ಮಾರುಕಟ್ಟೆ ಸಾಲಗಳಿಗೆ ಅಭಿಮುಖವಾಗಿ ನಗದು ಶಿಲ್ಕು ಹೂಡಿಕೆ ಲೆಕ್ಕ**




*ಆಕರ: ಹಣಕಾಸು ಲೆಕ್ಕಗಳು*

**ನಕ್ಷೆ 2.18**ರಿಂದ ಕಳೆದ ಮೂರು ವರ್ಷಗಳಲ್ಲಿ, ಅಂದರೆ, 2019–20ರಿಂದ 2021–22 ನಗದು ಹೂಡಿಕೆ ಶಿಲ್ಕು ಲೆಕ್ಕದಲ್ಲಿ ಹೆಚ್ಚಳವಾಗಿದೆ ಎಂಬುದು ಸ್ಪಷ್ಟವಾಗಿದೆ, ಮತ್ತು ಇದನ್ನು ಸಾಲಗಳಲ್ಲಿ ಉಳಿದ ಶಿಲ್ಕುಗಳಿಗೆ ಅರೋಪಿಸಬಹುದಾಗಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ನಗದು ಶಿಲ್ಕುಗಳ ದೃಷ್ಟಿಯಿಂದ, ರಾಜ್ಯ ಸರ್ಕಾರವು ಹೆಚ್ಚಿನ ದರದಲ್ಲಿ ಮಾರುಕಟ್ಟೆ ಸಾಲಗಳನ್ನು ಆಶ್ರಯಿಸುವ ಬದಲು ತನ್ನ ವೆಚ್ಚದ ಹೊಣೆಗಾರಿಕೆಗಳನ್ನು ಭರಿಸಲು ಲಭ್ಯವಿರುವ ನಗದು ಶಿಲ್ಕನ್ನು ಅತ್ಯುತ್ತಮವಾಗಿ ಬಳಸಿಕೊಳ್ಳಬಹುದು. ಅಂತಹ ವಿವೇಚನಾಯುಕ್ತ ನಗದು ನಿರ್ವಹಣೆಯು ಭವಿಷ್ಯದಲ್ಲಿ ಸಾಲದ ಹೊರೆಯನ್ನು ಕಡಿಮೆ ಮಾಡಬಹುದು.

**ನಕ್ಷೆ–2.19**ರಲ್ಲಿ ನಗದು ಶಿಲ್ಕು ಹೂಡಿಕೆ ಲೆಕ್ಕದೊಂದಿಗೆ ರಾಜ್ಯವು ಪಡೆದ ಮಾರುಕಟ್ಟೆ ಸಾಲಗಳನ್ನು ಹೋಲಿಸುತ್ತದೆ. **ನಕ್ಷೆ–2.20**ರಲ್ಲಿ ವರ್ಷದಲ್ಲಿ ಮಾಸಿಕ ನಿವ್ವಳ ನಗದು ಶಿಲ್ಕಿನ ಹೂಡಿಕೆ ಮತ್ತು ನಗದು ಶಿಲ್ಕಿನ ಹರಿವನ್ನು ಹೋಲಿಸುತ್ತದೆ.

**ನಕ್ಷೆ–2.19: 2021–22ರಲ್ಲಿ ಪ್ರತಿ ತಿಂಗಳು ರಾಜ್ಯವು ಪಡೆದ ಮಾರುಕಟ್ಟೆ ಸಾಲಗಳೊಂದಿಗೆ ನಗದು ಶಿಲ್ಕಿನ ಹೂಡಿಕೆಯ ಹೋಲಿಕೆ**




ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ

**ನಕ್ಷೆ–2.20: ವರ್ಷದಲ್ಲಿ ಮಾಸಿಕ ನಿವ್ವಳ ನಗದು ಶಿಲ್ಕಿನ ಹೂಡಿಕೆ ಮತ್ತು ನಗದು ಶಿಲ್ಕಿನ ಹರಿವು**

**(₹ ಕೋಟಿಗಳಲ್ಲಿ)**




*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ*

ರಾಜ್ಯ ಸರ್ಕಾರವು ತನ್ನ ಮಧ್ಯಮಾವಧಿ ವಿತ್ತೀಯ ಯೋಜನೆ 2022–26 ರಲ್ಲಿ ಅದು ಮುಕ್ತ ಮಾರುಕಟ್ಟೆ ಸಾಲಗಳನ್ನು ವೆಚ್ಚದ ಅಗತ್ಯತೆ, ನಗದು ಶಿಲ್ಕಿನ ಲಭ್ಯತೆ ಮತ್ತು ಸಾಲದ ಮರುಪಾವತಿ ಪ್ರೊಫೈಲ್ ಆಧಾರದ ಮೇಲೆ ಆಯ್ಕೆ ಮಾಡಿಕೊಂಡಿತು ಎಂದು ತಿಳಿಸಿತು. ಆದ್ದರಿಂದ 2021–22ರಲ್ಲಿ ರಾಜ್ಯವು ತನ್ನ ನಿಯಮಿತವಾದ ವೆಚ್ಚಗಳ ಬಾಧ್ಯತೆಯನ್ನು ಪೂರೈಸಲು ಮೂರನೆಯ ತ್ರೈಮಾಸಿಕದಿಂದ ಸಾಲಗಳನ್ನು ಪಡೆಯುತ್ತಿರುವುದಾಗಿಯೂ ತಿಳಿಸಿತು.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಜನವರಿ 2023) ಅದು 2021–22ರ ಆರ್ಥಿಕ ವರ್ಷದಲ್ಲಿ ₹12,169 ಕೋಟಿ ನಗದು ಶಿಲ್ಕು ಹೊಂದಿತ್ತು ಮತ್ತು ₹20,000 ಕೋಟಿಗಳನ್ನು 91 ದಿನಗಳ ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡಿತ್ತು ಎಂದು ಒಪ್ಪಿಕೊಳ್ಳುತ್ತಾ, ಕೋವಿಡ್ ಪಿಡುಗಿನ ಎರಡನೆಯ ಅಲೆಯ ಪ್ರಭಾವವು 2021–22ರ ಮೊದಲನೆಯ ತ್ರೈಮಾಸಿಕದಲ್ಲಿ ರಾಜ್ಯದ ಸ್ವಂತ ಆದಾಯ ಸಂಗ್ರಹಣೆಯನ್ನು ಕಡಿಮೆಗೊಳಿಸಿತು ಮತ್ತು ರಾಜ್ಯದ ಬದ್ಧ ಜವಾಬ್ದಾರಿಗಳನ್ನು ನಿರ್ವಹಿಸಲು ತಿಂಗಳ ಜವಾಬ್ದಾರಿಯನ್ನು ತೀರಿಸಲು ಸಾಕಷ್ಟು ನಗದು ಶಿಲ್ಕನ್ನು ಹೊಂದಿರುವುದು ಅವಶ್ಯಕ ಎಂದು ತಿಳಿಸಿತು. ಆದ್ದರಿಂದ, ₹20,000 ಕೋಟಿಯನ್ನು ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡಲಾಯಿತು.

₹20,000 ಕೋಟಿಗಳ ತುರ್ತುಸಂಗ್ರಹದ ಅಗತ್ಯತೆಯನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, ಏಪ್ರಿಲ್ ಮತ್ತು ಮೇ 2021ರ ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚಗಳನ್ನು ನೋಡಿದಾಗ ₹3,500 ಕೋಟಿಗೂ ಹೆಚ್ಚಿನ ವೆಚ್ಚವಿತ್ತು ಮತ್ತು ಇದನ್ನು ಹಿಂದಿನ ವರ್ಷದ ನಗದು ಶಿಲ್ಕಿನ ಮೂಲಕವೇ ಪೂರೈಸಬಹುದಿತ್ತು.

## 2.9 ತೀರ್ಮಾನ ಮತ್ತು ಶಿಫಾರಸುಗಳು

**ರಾಜ್ಯದ ಸ್ವಂತ ಸಂಪನ್ಮೂಲಗಳು**

ರಾಜ್ಯ ಸರ್ಕಾರವು 2021–22ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ, ತನ್ನ ರಾಜಸ್ವ ಸ್ವೀಕೃತಿಗಳಲ್ಲಿ ಶೇಕಡ 24.92ರಷ್ಟು ಏರಿಕೆ ದಾಖಲಿಸಿದೆ ಮತ್ತು 2019–20ಕ್ಕೆ ಹೋಲಿಸಿದರೆ ಶೇಕಡ 11.58ರ ಬೆಳವಣಿಗೆ ತೋರಿಸಿತು. ರಾಜಸ್ವ ಸ್ವೀಕೃತಿಗಳ ವೃದ್ಧಿಯ ದರವು, 2019–20 ಮತ್ತು 2020–21ರಲ್ಲಿ ಕೋವಿಡ್ 19 ಪಿಡುಗಿನ ಲಾಕ್‌ಡೌನ್ ಕಾರಣಕ್ಕಾಗಿ ಹೊರತುಪಡಿಸಿದರೆ, ಏರಿಕೆ ಪ್ರವೃತ್ತಿಯಲ್ಲೇ ಇತ್ತು. ಸ್ವಂತ ತೆರಿಗೆ

ಆದಾಯವು ರಾಜ್ಯದ ರಾಜಸ್ವ ಸ್ವೀಕೃತಿಯ ಪ್ರಮುಖ ಭಾಗದ (ಶೇಕಡ 62) ಕೊಡುಗೆ ನೀಡಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ರಾಜಸ್ವ ಸ್ವೀಕೃತಿಯ ಅನುಪಾತವು 2020–21ಕ್ಕೆ ಹೋಲಿಸಿದರೆ ಹೆಚ್ಚಳವಾಗಿತ್ತು. 2021–22ರಲ್ಲಿ ರಾಜ್ಯವು ತೆರಿಗೆಯೇತರ ಆದಾಯದ ಬೆಳವಣಿಗೆ ದರದಲ್ಲೂ ಏರಿಕೆ ಕಂಡಿತು (ಶೇಕಡ 49.19). ಪ್ರಸ್ತುತ ವರ್ಷದಲ್ಲಿ ಸ್ವಂತ ತೆರಿಗೆ ಮತ್ತು ತೆರಿಗೆಯೇತರ ಆದಾಯದಲ್ಲಿ ಗಣನೀಯ ಹೆಚ್ಚಳವನ್ನು ಹೊಂದಿದ್ದರೂ ರಾಜ್ಯವು ₹13,666 ಕೋಟಿ ಆದಾಯ ಕೊರತೆಯನ್ನು ಕಂಡಿತು.

**ಶಿಫಾರಸು: ಸಂಪೂರ್ಣ ಬಾಕಿ ಆಗುತ್ತಿರುವ ಅಥವಾ ಕಡಿಮೆ ವಸೂಲಿಯಾಗುತ್ತಿರುವ ಆದಾಯಗಳನ್ನು ನಿರಂತರ ಮತ್ತು ನಿಯತಕಾಲಿಕ ಮೇಲ್ವಿಚಾರಣೆ ಮೂಲಕ ಗಮನಾರ್ಹ ಒತ್ತುಕೊಟ್ಟು ರಾಜ್ಯ ಸರ್ಕಾರವು ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆಯ ಗುರಿಯಾದ ರಾಜಸ್ವ ಹೆಚ್ಚಳವನ್ನು ಸಾಧಿಸುವುದನ್ನು ದೃಢಪಡಿಸಿಕೊಳ್ಳಬೇಕು.**

**ರಾಜಸ್ವ ವೆಚ್ಚ**

2021–22ರಲ್ಲಿ, ಹಿಂದಿನ ವರ್ಷಕ್ಕಿಂತ (ಶೇಕಡ 29) ಸಾಮಾಜಿಕ ಸೇವೆಗಳ ವಿಭಾಗದ ವೃದ್ಧಿಯಲ್ಲಿ ಏರಿಕೆ ಕಂಡು ಬಂದಿದೆ ಮತ್ತು ಒಟ್ಟು ರಾಜಸ್ವ ವೆಚ್ಚಕ್ಕೆ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದ ಪಾಲು ಕೂಡ 2020–21ರಲ್ಲಿದ್ದ ಶೇಕಡ 35 ರಿಂದ 2021–22ರಲ್ಲಿ ಶೇಕಡ 38ಕ್ಕೆ ಏರಿಕೆಯಾಗಿದೆ. 2021–22ರಲ್ಲಿ ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ಬೆಳವಣಿಗೆಯು 16 ಪ್ರತಿಶತದಷ್ಟು ಹೆಚ್ಚಾಗಿದೆ.

ಶೇಕಡ 80ರಷ್ಟು ರಾಜಸ್ವ ವೆಚ್ಚವು ಸಂಬಳ, ಬಡ್ಡಿಪಾವತಿಗಳು, ಪಿಂಚಣಿಗಳು, ಸಹಾಯಧನ, ಸಹಾಯಾನುದಾನ ಮತ್ತು ಹಣಕಾಸಿನ ನೆರವು, ಆಡಳಿತಾತ್ಮಕ ವೆಚ್ಚಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮುಂತಾದವುಗಳ ಮೇಲಿನ ಬದ್ಧವೆಚ್ಚವನ್ನು ಒಳಗೊಂಡಿದೆ.

**ಶಿಫಾರಸುಗಳು: ವೇತನ, ಪಿಂಚಣಿ ಮತ್ತು ಬಡ್ಡಿಯ ವೆಚ್ಚಗಳು ಅನಮ್ಯವಾಗಿರುವುದರಿಂದ, ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ ಸ್ಥಿರವಾಗಿ ಹೆಚ್ಚುತ್ತಿರುವ ಸಹಾಯಧನ, ಸಹಾಯನುದಾನದ ಮೇಲಿನ ವೆಚ್ಚಗಳು ಮುಂತಾದವುಗಳ ಮೇಲೆ ರಾಜ್ಯ ಸರ್ಕಾರವು ಹೆಚ್ಚಿನ ಗಮನಹರಿಸಬೇಕಾಗಿದೆ. ಅದು ಕರ್ನಾಟಕ ಆಡಳಿತಾತ್ಮಕ ಸುಧಾರಣೆ ಆಯೋಗ–2 ಶಿಫಾರಸನ್ನು ಅನುಷ್ಠಾನಗೊಳಿಸಿ ವೆಚ್ಚವನ್ನು ತರ್ಕಬದ್ಧಗೊಳಿಸಲು ಗಮನ ಹರಿಸಬೇಕಾಗಿದೆ.**

**ವೆಚ್ಚದ ಗುಣಮಟ್ಟ**

ಪ್ರಸಕ್ತ ವರ್ಷದಲ್ಲಿ ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚದ ಪಾಲು (ಸಾಲಗಳು ಮತ್ತು ಮುಂಗಡಗಳನು ಒಳಗೊಂಡಂತೆ) ಶೇಕಡ 20ರಷ್ಟಿತ್ತು. 2021–22ರ ಅಂತ್ಯದ ವೇಳೆಗೆ ಒಟ್ಟು ₹4,087 ಕೋಟಿಗಳ ಮೊತ್ತವನ್ನು ಅಪೂರ್ಣ ಯೋಜನೆಗಳಲ್ಲಿ ತೊಡಗಿಸಲಾಗಿದೆ.

31 ಮಾರ್ಚ್ 2022ರಂತೆ ಕಂಪನಿಗಳು/ನಿಗಮಗಳಲ್ಲಿ ಹೂಡಿರುವ ₹70,657 ಕೋಟಿಗಳಿಂದ ಬಂದ ಪ್ರತಿಫಲವು ಅತ್ಯಲ್ಪವಾಗಿದೆ (₹349.77 ಕೋಟಿ). ನಿರಂತರವಾಗಿ ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿ ಸರ್ಕಾರವು ₹42,194 ಕೋಟಿಗಳನ್ನು (ಶೇಕಡ 60) ಹೂಡಿಕೆ ಮಾಡಿದೆ.

**ಶಿಫಾರಸುಗಳು: ರಾಜ್ಯ ಸರ್ಕಾರವು ಅಪೂರ್ಣ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಸಮಯ ಮತ್ತು ವೆಚ್ಚಗಳು ಮಿತಿ ಮೀರಲು ಕಾರಣಗಳನ್ನು ಕಟ್ಟುನಿಟ್ಟಾಗದ ಮೇಲ್ವಿಚಾರಣೆ ಮಾಡಬೇಕು. ಜತೆಗೆ ಮುಕ್ತಾಯದ ಹಂತದಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಬೇಕು.**

**ರಾಜ್ಯ ಸರ್ಕಾರವು ಭಾರಿ ನಷ್ಟವನ್ನು ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯಾಚರಣೆಯನ್ನು ಪರಿಶೀಲಿಸಬೇಕು ಮತ್ತು ಹೂಡಿಕೆ ಹಿಂತೆಗೆತ/ಪುನಶ್ಚೇತನ/ಮುಚ್ಚುವಿಕೆಗೆ ಸೂಕ್ತಕ್ರಮ ಕೈಗೊಳ್ಳಬೇಕು.**

**ನಿಧಿಗಳು ಮತ್ತು ಇತರ ಹೊಣೆಗಾರಿಕೆಗಳು**

ಪ್ರಸಕ್ತ ವರ್ಷದಲ್ಲಿ, ಹಸಿರು ತೆರಿಗೆ ಮತ್ತು ರಸ್ತೆ ಸುರಕ್ಷತೆ ತೆರಿಗೆಗಳಡಿ ಸಂಗ್ರಹವಾದ ಕ್ರಮವಾಗಿ ₹13.84 ಕೋಟಿಗಳು ಮತ್ತು ₹91.31 ಕೋಟಿಗಳ ಮೊತ್ತವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಲಾಗಿಲ್ಲ. ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ವರ್ಗಾಯಿಸಬೇಕಾಗಿದ್ದ ಸ್ವೀಕೃತಿಗಳ ಶೇಕಡ 10ಕ್ಕೆ ಬದಲಾಗಿ ಸಂಪೂರ್ಣ ಸ್ವೀಕೃತಿಯನ್ನು ಲೆಕ್ಕಮಾಡಲಾಗಿತ್ತು ಮತ್ತು ರಾಷ್ಟ್ರೀಯ ನಿಧಿಗೆ ವರ್ಗಾಯಿಸಲಾಗಿತ್ತು. ಈ ತಪ್ಪಾದ ಲೆಕ್ಕ ವಿಧಾನದಿಂದಾಗಿ, ರಾಜ್ಯ ಸರ್ಕಾರವು ರಾಜ್ಯ ಪರಿಹಾರಾರ್ಥ ಅರಣ್ಯೀಕರಣ ನಿಧಿಯಲ್ಲಿ ಲೆಕ್ಕ ಮಾಡಬೇಕಿದ್ದ ₹347.13 ಕೋಟಿಗಳನ್ನು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ವರ್ಗಾಯಿಸಿತ್ತು.

**ಶಿಫಾರಸುಗಳು: ವಿವಿಧ ಮೀಸಲು ನಿಧಿಗಳ ನಿರ್ವಹಣೆ ಮತ್ತು ಹೂಡಿಕೆಗಳ ಮಾದರಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವ ಅಗತ್ಯವಿದೆ. ಇದಲ್ಲದೆ, ರಾಜ್ಯದ ಬಾಕಿಗಳನ್ನು ರಾಜ್ಯದ ಲೆಕ್ಕದಲ್ಲೇ ಉಳಿಸಿಕೊಳ್ಳಲು ಪರಿಹಾರಾರ್ಥ ಅರಣ್ಯೀಕರಣ ನಿಧಿಯ ಸೂಕ್ತ ಲೆಕ್ಕಾಚಾರ ನಿರ್ವಹಣೆಗಾಗಿ ಖಜಾನೆ-2 ಅಪ್ಲಿಕೇಷನ್‌ನಲ್ಲಿ ಅಳವಡಿಸಿಕೊಳ್ಳು ಕ್ರಮ ಪ್ರಾರಂಭಿಸಬೇಕಾಗಿದೆ.**

**ಋಣ ಸಹಿಷ್ಣುತೆ**

ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು (ಶೇಕಡ 68) ಹೊಂದಿದ್ದವು. ಬಡ್ಡಿ ಪಾವತಿಯ ಹೊರೆಯನ್ನು ಅಳೆಯುವ ರಾಜಸ್ವ ಸ್ವೀಕೃತಿ ಮತ್ತು ಬಡ್ಡಿ ಪಾವತಿಗಳ ಅನುಪಾತವು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿದೆ ಮತ್ತು 2021-22ರಲ್ಲಿ ಇದು ಶೇಕಡ 13.42ರಷ್ಟಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2021-22ರಲ್ಲಿ ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲವು (₹26,593 ಕೋಟಿಗಳು) ಶೇಕಡ 36.6ರಷ್ಟು ಕಡಿಮೆಯಾಗಿದೆ.

**ಶಿಫಾರಸುಗಳು: ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿಯ ಸಮೀಕ್ಷೆಯಂತೆ ರಾಜ್ಯ ಸರ್ಕಾರವು ಬದ್ಧ ವೆಚ್ಚಗಳನ್ನು ಮಿತಗೊಳಿಸಲು ಬದ್ಧ ವೆಚ್ಚಗಳನ್ನು ಮಧ್ಯಮಗೊಳಿಸುವುದರ ಜೊತೆಗೆ ಸಾಲದ ಹಂತವನ್ನು ಕಡಿಮೆ ಮಾಡಲು ರಾಜ್ಯದ ಆದಾಯವನ್ನು ಸಜ್ಜುಗೊಳಿಸಲು ವೆಚ್ಚಕ್ಕೆ ಸಂಬಂಧಿಸಿದಂತೆ ಮಧ್ಯಂತರ ತಿದ್ದುಪಡಿಗಳನ್ನು ಮಾಡಬೇಕಾಗಿದೆ.**

**ನಗದು ಶಿಲ್ಕಿನ ಸ್ಥಿತಿ**

ಹೆಚ್ಚುವರಿ ಮಾರುಕಟ್ಟೆಯ ಎರವಲುಗಳ ಕಾರಣದಿಂದಾಗಿ ವರ್ಷದ ಅಂತ್ಯದಲ್ಲಿ ರಾಜ್ಯದ ನಗದು ಶಿಲ್ಕು (ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಮೀಸಲಿಟ್ಟ ನಿಧಿಗಳು ಮತ್ತು ರೇವಣಿಗಳ ಹೂಡಿಕೆ ಸೇರಿದಂತೆ) ಹಿಂದಿನ ವರ್ಷಕ್ಕಿಂತ ಶೇಕಡ 35ರಷ್ಟು ಹೆಚ್ಚಾಗಿದೆ.

**ಶಿಫಾರಸುಗಳು: ನಿಷ್ಫಲ ನಗದು ಶಿಲ್ಕನ್ನು ಹೊಂದಿರುವುದು ವಿವೇಕಯುಕ್ತ ನಗದು ನಿರ್ವಹಣೆಯಲ್ಲ. ಆದ್ದರಿಂದ ಸರ್ಕಾರವು ಮಾರುಕಟ್ಟೆ ಸಾಲಗಳನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಸೀಮಿತಗೊಳಿಸಿಕೊಳ್ಳಬೇಕಾಗಿದೆ.**

# ಅಧ್ಯಾಯ – 3

# ಆಯವ್ಯಯ ನಿರ್ವಹಣೆ

# ಅಧ್ಯಾಯ 3 – ಆಯವ್ಯಯ ನಿರ್ವಹಣೆ

## 3.1 ಪೀಠಿಕೆ

ಪರಿಣಾಮಕಾರಿ ಆರ್ಥಿಕ ನಿರ್ವಹಣೆಯು ಕಾರ್ಯನೀತಿ ಹಂತದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಆಡಳಿತಾತ್ಮಕ ಹಂತದಲ್ಲಿ ಯಾವುದೇ ವ್ಯರ್ಥತೆ ಅಥವಾ ನಿಧಿಗಳ ಮಾರ್ಗಪಲ್ಲಟವಿಲ್ಲದೆ ಸಫಲವಾಗಿ ಅನುಷ್ಠಾನಗೊಳಿಸುವುದನ್ನು ದೃಢಪಡಿಸುತ್ತದೆ. ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದೆ. ಇದು ಸರ್ಕಾರದ ಸಂಪನ್ಮೂಲಗಳ ಹಂಚಿಕೆಗಳ ಆದ್ಯತೆಯನ್ನು ಪರಿಶೀಲಿಸುವುದರ ಜೊತೆಗೆ ಸಂವಿಧಾನದ ವಿಧಿಗಳ ಉಲ್ಲಂಘನೆಯ ಮತ್ತು ಪಾರದರ್ಶಕತೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಎತ್ತಿ ತೋರಿಸುತ್ತದೆ.

## 3.2 ಆಯವ್ಯಯ ಪ್ರಕ್ರಿಯೆ

ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಅನುಸರಿಸಬೇಕಾದ ಕಾರ್ಯವಿಧಾನವನ್ನು ಮತ್ತು ವೆಚ್ಚದ ಅಧಿಕರಿಸುವಿಕೆಗೆ ಸಂಬಂಧಿಸಿದ ನಂತರದ ಕ್ರಮವನ್ನು ಸೂಚಿಸುತ್ತದೆ. ಇಲಾಖೆಗಳ ಮುಖ್ಯಸ್ಥರಿಂದ ಸ್ವೀಕರಿಸಿದ ಪ್ರಸ್ತಾವನೆಗಳ ಆಧಾರದ ಮೇಲೆ ಆರ್ಥಿಕ ಇಲಾಖೆಯು ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ನಿರ್ಧಾರವನ್ನು ಸಾಕಾರಗೊಳಿಸುವ ಅಂದಾಜುಗಳನ್ನು ಕ್ರೋಢೀಕರಿಸಿ ಕೆಳಗಿನವುಗಳನ್ನು ಸಿದ್ಧಪಡಿಸುತ್ತದೆ;

(i) ಆಯವ್ಯಯ ವರ್ಷದ ಹಣಕಾಸು ಸ್ಥಿತಿಯ ಸಾರಾಂಶದ ವಿವರಣಾ ಪಟ್ಟಿ;

(ii) ಸ್ವೀಕೃತಿಗಳ ವಿವರವಾದ ಅಂದಾಜುಗಳು; ಮತ್ತು

(iii) ಅನುದಾನಗಳ ಕೋರಿಕೆಯ ಪಟ್ಟಿ ಮತ್ತು ಅದಕ್ಕನುಗುಣವಾಗಿ ಸವಿಸ್ತಾರ ವೆಚ್ಚಗಳ ಅಂದಾಜುಗಳು.

ಈ ಅಂದಾಜುಗಳು ರಾಜ್ಯದ ಸಂಚಿತ ನಿಧಿಯಿಂದ ಭರಿಸಬೇಕಾದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳನ್ನು ಒಳಗೊಂಡಿರುತ್ತದೆ. ಪ್ರತಿ ವರ್ಷವೂ ವಾರ್ಷಿಕ ಆಯವ್ಯಯವು ಹಣಕಾಸು ಮಂತ್ರಿಗಳಿಂದ ಉಭಯ ಸದನಗಳಲ್ಲಿ ಮಂಡಿಸಲ್ಪಡುತ್ತದೆ.

2021–22ರ ಅವಧಿಯಲ್ಲಿ ಮೂಲ ಮತ್ತು ಪೂರಕ ಅವಕಾಶಗಳು, ವೆಚ್ಚಗಳು ಮತ್ತು ಉಳಿತಾಯಗಳನ್ನು ಒಳಗೊಂಡಂತೆ ರಾಜ್ಯ ಶಾಸಕಾಂಗವು ಅನುಮೋದಿಸಿದ ಒಟ್ಟು ಮೊತ್ತವನ್ನು **ನಕ್ಷೆ–3.1**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ–3.1: 2021–22ರ ಕರ್ನಾಟಕದ ಆಯವ್ಯಯ ಮತ್ತು ವೆಚ್ಚದ ಸಾರಾಂಶ**

**(₹ ಕೋಟಿಗಳಲ್ಲಿ)**



## 3.3 ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ

ಮಹಿಳಾ ಉದ್ದೇಶಿತ ಅಯವ್ಯಯವನ್ನು ಜಗತ್ತಿನಾದ್ಯಂತ ಲಿಂಗಾಧಾರಿತ ಅಭಿವೃದ್ಧಿಗಾಗಿ ಸಂಬಂಧಿತ ಕಾರ್ಯಕ್ರಮಗಳು ಮತ್ತು ಯೋಜನೆಗಳಿಗೆ ಆಯವ್ಯಯ ಸಂಪನ್ಮೂಲಗಳ ಹಂಚಿಕೆಯ ಮೂಲಕ ವಿವಿಧ ಸೂಚಕಗಳು ಮತ್ತು ಸೂಚ್ಯಾಂಕಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೋತ್ಸಾಹಿಸಲು ಒಂದು ಪ್ರಮುಖ ಕಾರ್ಯನೀತಿ ಸಾಧನವೆಂದು ಪರಿಗಣಿಸಲಾಗಿದೆ. ಲಿಂಗಾಧಾರಿತ ಸೂಚಕಗಳು ವಿಶೇಷವಾಗಿ ಆರೋಗ್ಯ, ಶಿಕ್ಷಣ, ಸಬಲೀಕರಣ, ರಕ್ಷಣೆ, ಭಾಗವಹಿಸುವಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಲಿಂಗ ಅಂತರ ಮತ್ತು ಲಿಂಗ ಅಸಮಾನತೆಗಳನ್ನು ತೊಡೆದುಹಾಕಲು ಅಥವಾ ಕಡಿಮೆ ಮಾಡಲು ಉದ್ದೇಶಿತ ಅಥವಾ ಅಪೇಕ್ಷಿತ ಸಾಧನೆಯ ಹಂತಗಳ ಅಗತ್ಯತೆಯನ್ನು ಸೂಚಿಸುತ್ತವೆ.

2005–06ರಲ್ಲಿ ಕೇಂದ್ರ ಸರ್ಕಾರದ ವೆಚ್ಚ ಆಯವ್ಯಯದ ಭಾಗವಾಗಿ ಮೊದಲ ಬಾರಿಗೆ ಮಹಿಳಾ ಉದ್ದೇಶಿತ ಆಯವ್ಯಯವನ್ನು ಪರಿಚಯಿಸಲಾಯಿತು. ಕರ್ನಾಟಕ ಸರ್ಕಾರವು 2007–08ರಿಂದ ವಿಧಾನಮಂಡಲದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಮಂಡಿಸುತ್ತಿದೆ. ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿನ ಮಹಿಳಾ ಉದ್ದೇಶಿತ ಆಯವ್ಯಯ ಕೋಶವು ವಿವಿಧ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ತಜ್ಞರ ಸಮನ್ವಯದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಸಿದ್ಧಪಡಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಯೋಜನಾ ಇಲಾಖೆಯ ಸಹಯೋಗದೊಂದಿಗೆ ಈ ಆಯವ್ಯಯದ ಮೇಲ್ವಿಚಾರಣೆ ಮತ್ತು ಮೌಲ್ಯ ಮಾಪನಕ್ಕಾಗಿ ನೋಡಲ್ ಏಜೆನ್ಸಿಯಾಗಿದೆ.

ಮಾರ್ಚ್ 2020ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯಲ್ಲಿ (**ಕಂಡಿಕೆ–3.3**), ಕರ್ನಾಟಕದ ಮಹಿಳಾ ಉದ್ದೇಶಿತ ಆಯವ್ಯಯದ ಸಮೀಕ್ಷೆಯನ್ನು ಕೈಗೊಳ್ಳಲಾಯಿತು ಮತ್ತು ಯೋಜನೆ ಮತ್ತು ನೀತಿಯ ಸೂತ್ರೀಕರಣ, ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳ ವಿಶ್ಲೇಷಣೆ, ಮಹಿಳಾ ಉದ್ದೇಶಿತ ಆಯವ್ಯಯ ಪ್ರಕ್ರಿಯೆಗಳನ್ನು ಮೇಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳನ್ನು ವಿವರವಾಗಿ ಹೊರತರಲಾಗಿತ್ತು. ವರದಿಯಲ್ಲಿ ತಂದಿರುವ ಅಂಶಗಳನ್ನು ಪರಿಶೀಲಿಸಲಾಗುವುದು ಮತ್ತು ಅದರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿತು.

2017–18ರಿಂದ 2021–22ರ ಅವಧಿಗೆ ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗಾಗಿ ಮೀಸಲಿಟ್ಟ ಒಟ್ಟು ಹಂಚಿಕೆಯು ವರ್ಗ ಎ (ಮಹಿಳೆಯರಿಗೆ ಶೇಕಡ 100ರಷ್ಟು ವಿನಿಯೋಗದೊಂದಿಗೆ ಮಹಿಳಾ ನಿರ್ದಿಷ್ಟ ಯೋಜನೆಗಳು) ಮತ್ತು ವರ್ಗ ಬಿ (ಶೇಕಡ 30ಕ್ಕಿಂತ ಹೆಚ್ಚಿನ ಮತ್ತು ಶೇಕಡಾ 100ಕ್ಕಿಂತ ಕಡಿಮೆ ಹಂಚಿಕೆಯ ಮಹಿಳಾ ಪರ ಯೋಜನೆಗಳು) ಜೊತೆಗೆ ಒಟ್ಟು ಹಂಚಿಕೆಯ ಶೇಕಡಾವಾರಿನ ಪಾಲನ್ನು **ಕೋಷ್ಟಕ –3.1**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–3.1: 2017–18ರಿಂದ 2021–22ರ ಅವಧಿಯಲ್ಲಿ ವರ್ಗವಾರು ಹಂಚಿಕೆ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ ಅವಕಾಶ (ಮೂಲ) | ವರ್ಗ 'ಎ' ಒಟ್ಟು ಹಂಚಿಕೆ | ವರ್ಗ 'ಬಿ' ಒಟ್ಟು ಹಂಚಿಕೆ | ವರ್ಗ 'ಬಿ' ಹಂಚಿಕೆಯ ಶೇಕಡ 30 | ಒಟ್ಟು ಹಂಚಿಕೆಗೆ ವರ್ಗ 'ಎ' ಶೇಕಡಾವಾರು | ಒಟ್ಟು ಹಂಚಿಕೆಗೆ ವರ್ಗ 'ಬಿ' ಶೇಕಡಾವಾರು |
|---|---|---|---|---|---|---|
| **2017–18** | 1,94,917.19 | 5,901.83 | 82,156.54 | 24,646.96 | 3.03 | 12.64 |
| **2018–19** | 2,24,110.77 | 6,049.41 | 95,975.37 | 28,792.61 | 2.70 | 12.85 |
| **2019–20** | 2,40,745.86 | 5,100.95 | 1,20,868.97 | 36,260.69 | 2.12 | 15.06 |
| **2020–21** | 2,44,733.57 | 4,732.34 | 1,10,170.20 | 33,051.06 | 1.93 | 13.50 |
| **2021–22** | 2,52,391.98 | 5,415.17 | 1,30,178.14 | 39,053.44 | 2.15 | 15.47 |

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ*

ಒಟ್ಟು ಹಂಚಿಕೆಗೆ 'ಎ' ವರ್ಗದ ಶೇಕಡಾವಾರು 2020–21ರವರೆಗೂ ಇಳಿಕೆಯ ಪ್ರವೃತ್ತಿಯನ್ನು ತೋರಿಸಿದರೆ 2021–22ರಲ್ಲಿ ಹೆಚ್ಚಳ ಇರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಹಂಚಿಕೆಯಲ್ಲಿ ಹೆಚ್ಚಳ ಕಂಡುಬಂದರೂ, ಹಂಚಿಕೆಯು ಹೆಚ್ಚು ಕಡಿಮೆ 2019–20ರ ಹಂಚಿಕೆಯಷ್ಟೇ ಇದ್ದಿತು.

## 3.4 ಮಕ್ಕಳ ಆಯವ್ಯಯ

ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯು ಕರ್ನಾಟಕ ಸರ್ಕಾರದ ವಾರ್ಷಿಕ ಆಯವ್ಯಯದಲ್ಲಿ ಮಕ್ಕಳ ಮೇಲಿನ (0–18 ವರ್ಷಗಳು) ಹಂಚಿಕೆಗಳು ಮತ್ತು ವೆಚ್ಚಗಳನ್ನು ಗುರುತಿಸಲು ಮತ್ತು ವರ್ಗೀಕರಿಸಲು ನೀತಿ ಸಾಧನವಾಗಿದೆ. ಈ ಪಟ್ಟಿಯು ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು ಆಯವ್ಯಯ ಸಂಪನ್ಮೂಲವನ್ನು ನಿಗದಿಪಡಿಸಲಾಗಿದೆ ಮತ್ತು ವೆಚ್ಚ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡುತ್ತದೆ. ಕರ್ನಾಟಕ ಸರ್ಕಾರವು 2020–21ರ ಹಣಕಾಸು ವರ್ಷದಿಂದ ಮಕ್ಕಳ ಆಯವ್ಯಯ ವಿವರಣಾ ಪಟ್ಟಿಯನ್ನು ತಯಾರಿಸಲು ನಿರ್ಧರಿಸಿತು(ಆಗಸ್ಟ್ 2019).

2020–21 ಮತ್ತು 2021–22ರಲ್ಲಿ ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮ/ಯೋಜನೆಗಳ ವಿವಿಧ ವರ್ಗಗಳಲ್ಲಿ ಹಂಚಿಕೆಗಳು ಮತ್ತು ವೆಚ್ಚಗಳನ್ನು **ಕೋಷ್ಟಕ –3.2**ರಲ್ಲಿ ನೀಡಲಾಗಿದೆ. ಅದಲ್ಲದೆ, ಈ ಕೋಷ್ಟಕವು 2020–21ರ ಅವಧಿಯ ₹2,44,733.57 ಕೋಟಿ ಮತ್ತು 2021–22ರ ಅವಧಿಯ ₹2,52,391.98 ಕೋಟಿಯ ಒಟ್ಟು ಹಂಚಿಕೆಗೆ (ಮೂಲ) ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮ/ಯೋಜನೆಗಳ ಹಂಚಿಕೆಯ ಶೇಕಡಾವಾರು ಪಾಲನ್ನು ಸೂಚಿಸುತ್ತದೆ.

**ಕೋಷ್ಟಕ–3.2: ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮ/ಯೋಜನೆಯಗಳಡಿಯಲ್ಲಿ ಹಂಚಿಕೆಗಳ ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವರ್ಗ | ಹಂಚಿಕೆ | | ವೆಚ್ಚ | | ಒಟ್ಟು ಆಯವ್ಯಯ ಹಂಚಿಕೆಗೆ ಹಂಚಿಕೆಯ ಶೇಕಡಾವಾರು | |
|---|---|---|---|---|---|---|---|
| | | 2020–21 | 2021–22 | 2020–21 | 2021–22 | 2020–21 | 2021–22 |
| 1 | ಶೇಕಡ 100ರಷ್ಟು ಮಕ್ಕಳ ಕೇಂದ್ರಿತ ಕಾರ್ಯಕ್ರಮ | 11,881.94 | 12,402.13 | 10,321.61 | 12,071.41 | 4.86 | 4.91 |
| 2 | ಶೇಕಡ 100ಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮ | 18,892.79 | 18,433.01 | 16,950.08 | 17,065.39 | 7.72 | 7.30 |
| 3 | ಶೇಕಡ 100ರಷ್ಟು ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ | 15,421.42 | 18,917.05 | 13,869.29 | 18,757.53 | 6.30 | 7.50 |
| 4 | ಶೇಕಡ 100ಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತವಲ್ಲದ ಕಾರ್ಯಕ್ರಮ | 4,888.13 | 9,711.88 | 4,418.79 | 9,590.56 | 2.00 | 3.85 |
| ಒಟ್ಟು | | **51,084.28** | **59,464.07** | **45,559.77** | **57,483.89** | **20.87** | **23.56** |

*ಆಕರ: ಅನುದಾನ ವಹಿ*

ಮೇಲಿನ ಕೋಷ್ಟಕದಿಂದ ನೋಡಿದಂತೆ, ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇಕಡ 100ರಷ್ಟು ಮಕ್ಕಳ ಕೇಂದ್ರೀಕೃತ ಕಾರ್ಯಕ್ರಮವನ್ನು ಬಿಟ್ಟು ಎಲ್ಲಾ ವರ್ಗಗಳ ಅಡಿಯ ಹಂಚಿಕೆಯಲ್ಲಿ ಹೆಚ್ಚಳ ಕಂಡುಬಂದಿದೆ. ಮಕ್ಕಳ ಆಯವ್ಯಯದ ಮೇಲೆ ಕೇಂದ್ರೀಕೃತವಾಗಿದ್ದರೂ, 2020–21 ಮತ್ತು 2021–22ರಲ್ಲಿ ಮಕ್ಕಳ ಕೇಂದ್ರೀಕೃತ ಹಂಚಿಕೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶತಾಂಶದಂತೆ ಕ್ರಮವಾಗಿ ಕೇವಲ 2.83 ಮತ್ತು 3.45ರಷ್ಟು ಇದ್ದಿತು.

2021–22ರ ಅವಧಿಯ ವರ್ಗವಾರು/ಇಲಾಖಾವಾರು ಆಯವ್ಯಯ ಹಂಚಿಕೆ ಮತ್ತು ವೆಚ್ಚವನ್ನು **ಅನುಬಂಧ–3.1**ರಲ್ಲಿ ನೀಡಲಾಗಿದೆ.

ಮಕ್ಕಳ ದಿನದ ಆರೈಕೆ ಕೇಂದ್ರ ಸೌಲಭ್ಯಗಳೊಂದಿಗೆ ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿಫಲತೆಯನ್ನು ಕರ್ನಾಟಕ ಸರ್ಕಾರದ ಮಾರ್ಚ್ 2021ಕ್ಕೆ ಅಂತ್ಯವಾಗುವ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳಲ್ಲಿ ಹಲವಾರು ನ್ಯೂನತೆಗಳನ್ನು ಗಮನಿಸಲಾಗಿತ್ತು ಎಂದು ಉಲ್ಲೇಖಿಸುವುದು ಸೂಕ್ತವಾಗಿದೆ. ಕಾರ್ಯಯೋಜನೆಯ ಅನುಪಸ್ಥಿತಿ, ವಸತಿ ನಿಲಯಗಳ ಹಂಚಿಕೆ ಮಾಡದಿರುವುದು, ವಸತಿ ನಿಲಯಗಳ ನಿರ್ಮಾಣ ಮಾಡದಿರುವುದು, ಮೂಲಸೌಕರ್ಯಗಳಲ್ಲಿನ ಕೊರತೆಗಳು, ಪ್ರವೇಶ ಸಮಸ್ಯೆಗಳು ಇತ್ಯಾದಿಗಳನ್ನು ಲೆಕ್ಕಪರಿಶೋಧನಾ ಅವಲೋಕನದಲ್ಲಿ ಸೇರಿಸಲಾಗಿತ್ತು. ಮೇಲೆ ತಿಳಿಸಲಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿರುವ ಕಾರ್ಯಕ್ರಮವು ಒಂದು ಪ್ರಕರಣವಾಗಿದ್ದು, ಮೂಲ ಪ್ರಯೋಜನಗಳನ್ನು ಉದ್ದೇಶಿತ ಮಹಿಳೆಯರು ಮತ್ತು ಮಕ್ಕಳ ಫಲಾನುಭವಿಗಳಿಗೆ ವಿಸ್ತರಿಸಲು ಸಾಧ್ಯವಾಗದ ಇತರ ಅಂತಹ ಯೋಜನೆಗಳನ್ನು ಸರ್ಕಾರವು ಪೂರ್ವಭಾವಿಯಾಗಿ ಪರಿಶೀಲಿಸಬೇಕು. ಲಿಂಗ ಮತ್ತು ಮಕ್ಕಳ ಆಯವ್ಯಯಕ್ಕಾಗಿ ನಿಬಂಧನೆಗಳು ಮತ್ತು ಹಂಚಿಕೆಗಳನ್ನು ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿ ದೃಢವಾದ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಅನುಸರಿಸದ ಹೊರತು ಲಿಂಗನಿರ್ವಹಣೆಯ ಆಯವ್ಯಯದ ಸಂಪೂರ್ಣ ಉದ್ದೇಶವನ್ನು ಸಾಧಿಸಲಾಗುವುದಿಲ್ಲ.

## 3.5 ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಭಾರತದ ಸಂವಿಧಾನದ ಅನುಚ್ಛೇದ 204 ಮತ್ತು 205ರ ಅಡಿಯಲ್ಲಿ ಅಂಗೀಕರಿಸಲಾದ ಧನವಿನಿಯೋಗ ಕಾಯಿದೆಯ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಪುರಸ್ಕೃತ ಅನುದಾನ ಪ್ರಭೃತ ವಿನಿಯೋಗಗಳಡಿ ವಿವಿಧ ಉದ್ದೇಶಗಳಿಗೆ ಅವಕಾಶ ಕಲ್ಪಿಸದ ಮೊತ್ತಕ್ಕೆ ಹೋಲಿಸಿದಂತೆ ಪ್ರತೀ ಹಣಕಾಸು ವರ್ಷಕ್ಕೆ ಸರ್ಕಾರದ ವೆಚ್ಚದ ಲೆಕ್ಕಗಳಾಗಿವೆ. ಧನವಿನಿಯೋಗ ಲೆಕ್ಕಗಳು ಒಟ್ಟಾರೆ ವೆಚ್ಚದ ಆಧಾರದಲ್ಲಿದೆ. ಈ ಲೆಕ್ಕಗಳು ಮೂಲ ಆಯವ್ಯಯ ಅವಕಾಶಗಳು, ಪೂರಕ ಅಂದಾಜುಗಳು, ಅಧ್ಯರ್ಪಣೆಗಳು ಮತ್ತು ಪುನರ್ ವಿನಿಯೋಗಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ ಮತ್ತು ಆಯವ್ಯಯದ ಪುರಸ್ಕೃತ ಮತ್ತು ಪ್ರಭೃತಗಳಡಿಯ ಎರಡೂ ಅಂಶಗಳಿಗೆ ಸಂಬಂಧಿಸಿದಂತೆ ವಿನಿಯೋಗ ಕಾಯಿದೆಯಿಂದ ಅಧಿಕೃತಗೊಳಿಸಲಾದ ವಿವಿಧ ನಿರ್ದಿಷ್ಟ ಪಡಿಸಿದ ಸೇವೆಗಳ ಮೇಲಿನ ನಿಜವಾದ ಬಂಡವಾಳ ಮತ್ತು ರಾಜಸ್ವದ ವೆಚ್ಚವನ್ನು ಸೂಚಿಸುತ್ತದೆ. ಧನವಿನಿಯೋಗ ಲೆಕ್ಕಗಳು ಹೀಗೆ ನಿಧಿಯ ಬಳಕೆ, ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ಅವಕಾಶಗಳ ಮೇಲ್ವಿಚಾರಣೆಯನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಮತ್ತು ಆದ್ದರಿಂದ ಹಣಕಾಸು ಲೆಕ್ಕಗಳಿಗೆ[22] ಪೂರಕವಾಗಿವೆ.

### *3.5.1 2021–22ರಲ್ಲಿ ಒಟ್ಟು ಅವಕಾಶಗಳು, ವಾಸ್ತವಿಕ ವಿತರಣೆಗಳು ಮತ್ತು ಉಳಿತಾಯಗಳ ಸಾರಾಂಶ*

2021–22ರಲ್ಲಿ ಪೂರಕ ಅಂದಾಜುಗಳೂ ಸೇರಿದಂತೆ ಆಯವ್ಯಯ ಅವಕಾಶದ ಒಟ್ಟು 29 ಅನುದಾನಗಳು/ ವಿನಿಯೋಗಗಳನ್ನು ರಾಜಸ್ವ/ಬಂಡವಾಳ ಮತ್ತು ಪುರಸ್ಕೃತ/ಪ್ರಭೃತಗಳಡಿಯ ವಾಸ್ತವಿಕ ವೆಚ್ಚ ಮತ್ತು ಉಳಿತಾಯ/ ಹೆಚ್ಚಳಗಳು ಎಂದು ಮತ್ತಷ್ಟು ವಿಭಜಿಸಿ ಸಾರಾಂಶವನ್ನು **ಕೋಷ್ಟಕ–3.3**ರಲ್ಲಿ ನೀಡಲಾಗಿದೆ.

[22] ಹಣಕಾಸು ಲೆಕ್ಕಗಳು ಕರ್ನಾಟಕ ಸರ್ಕಾರದ ಪ್ರಸಕ್ತ ವರ್ಷದ ಹಣಕಾಸು ವ್ಯವಹಾರಗಳ ಸ್ಥೂಲ ನೋಟವನ್ನು ಒದಗಿಸುತ್ತದೆ. ಇದನ್ನು ಈ ವರದಿಯ ಅಧ್ಯಾಯ 1 ಮತ್ತು 2ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ–3.3: 2021–22ರಲ್ಲಿ ಮೂಲ/ಪೂರಕ ಅವಕಾಶಗಳಿಗೆ ಪ್ರತಿಯಾಗಿ ವಾಸ್ತವಿಕ ವೆಚ್ಚದ ಸಾರಾಂಶ**

**(₹ ಕೋಟಿಗಳಲ್ಲಿ)**

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವಿಕ ವೆಚ್ಚ | ಬಳಕೆ ಮಾಡದ ಅವಕಾಶ (–) / ಅವಕಾಶಕ್ಕಿಂತ ಅಧಿಕ (+) | ಅಧ್ಯರ್ಪಿಸಿದ ಮೊತ್ತ | 31 ಮಾರ್ಚ್ ರಂದು ಅಧ್ಯರ್ಪಿಸಿದ ಮೊತ್ತ | *ಮಾರ್ಚ್ 31ರಂದು ಅಧ್ಯರ್ಪಿಸಿದ ಉಳಿತಾಯದ ಶೇಕಡಾವಾರು* |
|---|---|---|---|---|---|---|---|---|---|
| ಪುರಸ್ಕೃತ | I ರಾಜಸ್ವ | 1,59,578.56 | 30,672.79 | 1,90,251.35 | 1,82,498.21 | (–)7,753.14 | 4,478.14 | 4,478.14 | 100 |
| | II ಬಂಡವಾಳ | 40,260.49 | 8,258.14 | 48,518.63 | 46,717.27 | (–)1,801.36 | 360.89 | 360.89 | 100 |
| | III ಸಾಲಗಳು ಮತ್ತು ಮುಂಗಡಗಳು | 3,279.26 | 1,768.13 | 5,047.39 | 5,029.46 | (–)17.93 | 13.13 | 13.13 | 100 |
| ಒಟ್ಟು ಪುರಸ್ಕೃತ | | **2,03,118.31** | **40,699.06** | **2,43,817.37** | **2,34,244.94** | **(–)9,572.43** | **4,852.16** | **4,852.16** | **100** |
| *ಪ್ರಭೃತ* | *IV ರಾಜಸ್ವ* | *31,121.20* | *5.37* | *31,126.57* | *30,516.87* | *(–)609.70* | *479.17* | *479.17* | *100* |
| | *V ಸಾರ್ವಜನಿಕ ಋಣ ಪಾವತಿ* | *14,564.78* | *0.00* | *14,564.78* | *13,971.54* | *(–)589.24* | *593.10* | *593.10* | *100* |
| | *VI ಬಂಡವಾಳ* | *3,587.69* | *88.90* | *3,676.59* | *3,602.35* | *(–)74.24* | *74.24* | *74.24* | *100* |
| *ಒಟ್ಟು ಪ್ರಭೃತ* | | ***49,273.67*** | ***94.27*** | ***49,367.94*** | ***48,090.76*** | ***(–)1,277.18*** | ***1,146.51*** | ***1,146.51*** | ***100*** |
| ಒಟ್ಟು ಮೊತ್ತ | | **2,52,391.98** | **40,793.33** | **2,93,185.31** | **2,82,335.70** | **(–)10,849.61** | **5,998.67** | **5,998.67** | **100** |

*ಆಕರ: ಧನವಿನಿಯೋಗ ಲೆಕ್ಕಗಳು*

2021–22ರ ಸಾಲಿನಲ್ಲಿ ₹2,93,185.31 ಕೋಟಿಗಳ ಅವಕಾಶದ ಪ್ರತಿ ₹2,82,335.70 ಕೋಟಿ ವೆಚ್ಚಗಳನ್ನು ಮಾಡಲಾಗಿದ್ದು 29 ಅನುದಾನ/ವಿನಿಯೋಗದ ಅಡಿಯಲ್ಲಿ ₹10,849.61 ಕೋಟಿ ಬಳಕೆ ಮಾಡದ ಅವಕಾಶಕ್ಕೆ (ಸುಮಾರು ಶೇಕಡ ನಾಲ್ಕು) ಕಾರಣವಾಯಿತು.

### *3.5.2 ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು*

2017–18ರಿಂದ 2021–22ರವರೆಗಿನ ಅನುದಾನ ಮತ್ತು ವಿನಿಯೋಗಗಳ ವಿತರಣೆಯ ಸ್ಥಿತಿಯ ಸಾರಾಂಶವನ್ನು **ಕೋಷ್ಟಕ –3.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.4: 2017–18ರಿಂದ 2021–22ರ ಅವಧಿಯಲ್ಲಿ ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು**

**(₹ ಕೋಟಿಗಳಲ್ಲಿ)**

| ವರ್ಷ | ವಿತರಣೆಗಳು | | ಉಳಿತಾಯಗಳು (ಉಳಿತಾಯದ ಶೇಕಡಾವಾರು) | |
|---|---|---|---|---|
| | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| **2017–18** | 1,67,845.36 | *24,474.88* | 16,547.66(10) | *611.60(2)* |
| **2018–19** | 1,89,840.99 | *30,693.11* | 23,265.27(12) | *1,873.70(6)* |
| **2019–20** | 2,01,922.89 | *32,055.34* | 27,819.96(14) | *2,006.48(6)* |
| **2020–21** | 2,03,425.05 | *39,269.44* | 21,330.51(11) | *1,195.73(3)* |
| **2021–22** | 2,34,244.94 | *48,090.76* | 9,572.43(4) | *1,277.18(3)* |

*ಆಕರ: ಧನವಿನಿಯೋಗ ಲೆಕ್ಕಗಳು*

2017–18ರಿಂದ 2020–21ರ ಅವಧಿಯಲ್ಲಿ ಪುರಸ್ಕೃತ ವಿಭಾಗದಲ್ಲಿ ಬಳಸದ ಅವಕಾಶಗಳು ಶೇಕಡ 10ಕ್ಕಿಂತ ಹೆಚ್ಚಾಗಿತ್ತು. ಆದಾಗ್ಯೂ, ಇದು 2021–22ರಲ್ಲಿ ಶೇಕಡ ನಾಲ್ಕಕ್ಕೆ ಇಳಿಯಿತು. ಪ್ರಭೃತ ವಿಭಾಗದಲ್ಲಿ ಇದು 2017–18ರಿಂದ 2021–22ರ ಅವಧಿಯಲ್ಲಿ ಶೇಕಡ ಎರಡರಿಂದ ಆರರ ನಡುವೆ ಇತ್ತು.

## 3.6 ಧನವಿನಿಯೋಗ ಲೆಕ್ಕಪರಿಶೋಧನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಧನವಿನಿಯೋಗದ ಲೆಕ್ಕಪರಿಶೋಧನೆಯು ವಿವಿಧ ಅನುದಾನಗಳ ಅಡಿಯಲ್ಲಿ ವಾಸ್ತವವಾಗಿ ಮಾಡಿದ ವೆಚ್ಚವು ಧನವಿನಿಯೋಗ ಕಾಯಿದೆಯ ಅಡಿಯಲ್ಲಿ ನೀಡಲಾದ ಅಧಿಕಾರಕ್ಕೆ ಅನುಗುಣವಾಗಿದೆಯೇ ಮತ್ತು ಸಂವಿಧಾನದ ನಿಬಂಧನೆಗಳ ಅಡಿಯಲ್ಲಿ ಪ್ರಭೃತಗೊಳಿಸಬೇಕಾದ ವೆಚ್ಚವನ್ನು (ಅನುಚ್ಛೇದ 202) ಪ್ರಭೃತಗೊಳಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳುತ್ತದೆ. ಮಾಡಿದ ವೆಚ್ಚವು ಕಾನೂನುಗಳು, ಸಂಬಂಧಿತ ನಿಯಮಗಳು, ನಿಬಂಧನೆಗಳು ಮತ್ತು ಸೂಚನೆಗಳಿಗೆ ಅನುಗುಣವಾಗಿದೆಯೇ ಎಂಬುದನ್ನೂ ಸಹ ಇದು ಖಚಿತಪಡಿಸುತ್ತದೆ.

### *3.6.1 ಹಣಕಾಸು ಹೊಣೆಗಾರಿಕೆ ಮತ್ತು ಆಯವ್ಯಯ ಸಮೀಕ್ಷೆ*

#### 3.6.1.1 ಆಯವ್ಯಯದಲ್ಲಿನ ದೋಷಗಳು

**(ಎ) ಆಯವ್ಯಯ ಅವಕಾಶಗಳನ್ನು ಚಿತ್ರಿಸುವಾಗ ವ್ಯತ್ಯಯ ಮತ್ತು ತಪ್ಪು ವರ್ಗೀಕರಣ**

ರಾಜ್ಯ ಸರ್ಕಾರದ 2021–22ನೇ ಸಾಲಿನ ಆಯವ್ಯಯ ದಾಖಲೆಗಳು ವಿವಿಧ ದೇವಾಲಯಗಳ ನಿರ್ಮಾಣದ ಯೋಜನೆಗೆ ಅನುದಾನ ಸಂಖ್ಯೆ 12ರಲ್ಲಿ ಮಾಡಿದ ₹8.66 ಕೋಟಿ ಅವಕಾಶವನ್ನು ಆಯವ್ಯಯದ ಅವಕಾಶ ಮತ್ತು ವೆಚ್ಚದ ಸರಿಯಾದ ವರ್ಗೀಕರಣವನ್ನೂ ಚಿತ್ರಿಸಿಲ್ಲ. ಒಂದೇ ವರ್ಗೀಕರಣವನ್ನು (2250–00–103–5–12–103) ಎರಡು ವಿವಿಧ ಅನುದಾನಗಳಿಗೆ (ಅಂದರೆ, ಅನುದಾನ ಸಂಖ್ಯೆ 12 ಮತ್ತು 14) ಪ್ರಧಾನ ಲೆಕ್ಕ ಶೀರ್ಷಿಕೆ 2250 ಅಡಿಯಲ್ಲಿ ಒಂದೇ ಯೋಜನೆ/ಉಪಯೋಜನೆಯಲ್ಲಿ ಹಂಚಿಕೆ ಮಾಡಲಾಗಿದೆ. ಆದಾಗ್ಯೂ, ಅನುದಾನ ಸಂಖ್ಯೆ 12ರ ಅಡಿಯಲ್ಲಿನ ಸಂಪೂರ್ಣ ಅವಕಾಶವನ್ನು ನಂತರದಲ್ಲಿ ಅಧ್ಯರ್ಪಿಸಲಾಯಿತು.

### *3.6.2 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಸಮಗ್ರತೆ ಕುರಿತು ವ್ಯಾಖ್ಯಾನಗಳು*

#### 3.6.2.1 ಕಾರ್ಯಕಾರಿ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಿರುವುದು

ಸಂವಿಧಾನದ ಅನುಚ್ಛೇದ 204 ಮತ್ತು 205ರ ಅಡಿಯಲ್ಲಿ ಧನವಿನಿಯೋಗ ಕಾಯಿದೆಗಳನ್ನು ಶಾಸಕಾಂಗವು ಅಂಗೀಕರಿಸದ ಹೊರತು ಭಾರತದ ಸಂವಿಧಾನದ ಅನುಚ್ಛೇದ 266(3)ನೇ ವಿಧಿಯು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವುದನ್ನು ನಿಷೇಧಿಸುತ್ತದೆ.

2021–22ರ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಬಂಡವಾಳ/ರಾಜಸ್ವ ವಿಭಾಗದಡಿ (ಇದು ಕೇವಲ ಉದಾಹರಣೆಗಳು) (**ಅನುಬಂಧ 3.2**) 21 ಅನುದಾನಗಳಲ್ಲಿ ₹8,489.40 ಕೋಟಿಗಳನ್ನು 68 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಲಾಗಿದೆ. ನಂತರ ಅವುಗಳನ್ನು ಪೂರಕ ಅಂದಾಜುಗಳ ಮೂಲಕ ಕ್ರಮಬದ್ಧಗೊಳಿಸಲಾಯಿತು. ಈ ಹೆಚ್ಚುವರಿ ವೆಚ್ಚವು ಮುಖ್ಯವಾಗಿ ಸಾಮಾನ್ಯ ವೆಚ್ಚಗಳಾದ ಸಹಾಯಧನ, ಭಾರೀ ಕಾಮಗಾರಿಗಳು, ಇತರೆ ವೆಚ್ಚಗಳು, ಸಾಮಾನ್ಯ ವೆಚ್ಚಗಳು, ಸುಧಾರಣೆಗಳು, ಗುತ್ತಿಗೆ/ಹೊರಗುತ್ತಿಗೆ ಇತ್ಯಾದಿಗಳ ಮೇಲಿನ ವೆಚ್ಚಗಳು ಒಳಗೊಂಡಿರುವುದನ್ನು ಗಮನಿಸಲಾಗಿದ್ದು, ಇವು ತುರ್ತು/ಅನಿರೀಕ್ಷಿತ ವೆಚ್ಚಗಳಾಗಿರುವುದಿಲ್ಲ ಮತ್ತು ಪೂರಕ ಅಂದಾಜುಗಳ ಮಂಡನೆಯವರೆಗೆ ಕಾಯಬಹುದಾಗಿತ್ತು. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ವಿಧಾನಸಭೆ) ಕಾರ್ಯನಿರ್ವಾಹಕ ಸೂಚನೆಗಳ ಮೂಲಕ ಹೆಚ್ಚುವರಿ ಮಂಜೂರಾತಿಯನ್ನು ನೀಡುವ ಪ್ರಕರಣಗಳನ್ನು ಸೀಮಿತಗೊಳಿಸಬೇಕೆಂದು ಶಿಫಾರಸು ಮಾಡಿದೆ (ಜುಲೈ 2015). ಆದಾಗ್ಯೂ, ಶಾಸಕಾಂಗದ ಅನುಮೋದನೆಯಿಲ್ಲದೆ ಮೊದಲು ವೆಚ್ಚ ಮಾಡುವುದನ್ನು ಮತ್ತು ನಂತರ ಪೂರಕ ಅಂದಾಜುಗಳಲ್ಲಿ ಅನುಮೋದನೆ ಪಡೆಯುವುದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಶಿಫಾರಸುಗಳ ಹೊರತಾಗಿಯೂ ಮುಂದುವರೆದಿದೆ ಎಂಬುದನ್ನು ಗಮನಿಸಲಾಗಿದೆ.

2019–20ರಿಂದ 2021–22ರ ಅವಧಿಯಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತಗಳ ವಿವಿರಗಳನ್ನು **ಕೋಷ್ಟಕ–3.5**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.5: 2019–20ರಿಂದ 2021–22ರ ಅವಧಿಯಲ್ಲಿ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತಗಳು**

**(₹ ಕೋಟಿಗಳಲ್ಲಿ)**

| ವರ್ಷ | ವ್ಯಾಪ್ತಿಗೊಳಪಟ್ಟ ಅನುದಾನಗಳು | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| **2019–20** | 19 | 78 | 3,518.84 |
| **2020–21** | 10 | 36 | 5,281.70 |
| **2021–22** | 21 | 68 | 8,489.40 |

*ಆಕರ: ಧನವಿನಿಯೋಗ ಲೆಕ್ಕಗಳು*

2021–22ರಲ್ಲಿ, ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಾಗಿದೆ. ಕಾರ್ಯಕಾರಿ ಆದೇಶದ ಮೂಲಕ ಮೊತ್ತವನ್ನು ಸೆಳೆದು ನಂತರ ಶಾಸಕಾಂಗದ ಅನುಮೋದನೆಯನ್ನು ಪಡೆಯುವುದು ಒಳ್ಳೆಯ ಅಭ್ಯಾಸವಲ್ಲ.

31 ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಉತ್ತರಿಸುತ್ತಾ ಆರ್ಥಿಕ ಇಲಾಖೆಯು ಕೃಷಿ ಪದಾರ್ಥಗಳಿಗೆ ಸಹಾಯಧನ, ಪರೀಕ್ಷಾ ಶುಲ್ಕದ ಪಾವತಿ, ಗುತ್ತಿಗೆ/ಹೊರಗುತ್ತಿಗೆ ನೌಕರರಿಗೆ ಸಂಬಳ ಇವುಗಳನ್ನು ಪೂರಕ ಅಂದಾಜಿಗೆ ಅನುಮೋದನೆ ಪಡೆಯುವವರೆಗೆ ಮುಂದೂಡಲಾಗುವುದಿಲ್ಲವಾದ್ದರಿಂದ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಅನಿವಾರ್ಯ ಎಂದು ಹೇಳಿದೆ. ಆದರೆ, ನೇಮಕಗೊಂಡ ಗುತ್ತಿಗೆ ನೌಕರರ ಸಂಖ್ಯೆಯ ವಿವರಗಳು ಲಭ್ಯವಿರುವುದರಿಂದ ಆಯವ್ಯಯ ಪ್ರಕ್ರಿಯೆಯನ್ನು ಇನ್ನಷ್ಟು ಬಲಗೊಳಿಸ ಬೇಕಾಗಿದೆ.

### 3.6.2.2 ಬಂಡವಾಳ ವೆಚ್ಚ ಮತ್ತು ರಾಜಸ್ವ ವೆಚ್ಚಗಳ ವಿಪರ್ಯಾಯ ವರ್ಗೀಕರಣ

ವಹಿವಾಟುಗಳನ್ನು ರಾಜಸ್ವ/ಬಂಡವಾಳಗಳ ನಡುವೆ ತಪ್ಪಾಗಿ ವರ್ಗೀಕರಿಸುವುದು ಸಂಬಂಧಿತ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕರಣ ನಿಯಮಗಳ ಅನ್ವಯದ ಕೊರತೆಯಿಂದ ಉಂಟಾಗುತ್ತದೆ. ರಾಜಸ್ವ ಮತ್ತು ಬಂಡವಾಳ ವೆಚ್ಚಗಳ ನಡುವಿನ ತಪ್ಪು ವರ್ಗೀಕರಣವು ರಾಜಸ್ವ ಲೆಕ್ಕ ಮತ್ತು ಹಣಕಾಸಿನ ಸೂಚಕವಾದ ರಾಜಸ್ವ ಹೆಚ್ಚಳ/ ಕೊರತೆಯ ಮೇಲೆ ಪ್ರಭಾವ ಬೀರುತ್ತದೆ.

- 2021–22ರ ಅವಧಿಯಲ್ಲಿ ₹87.98 ಕೋಟಿಗಳ ರಾಜಸ್ವ ವೆಚ್ಚವನ್ನು ಈ ಕೆಳಗೆ ವಿವರಿಸಿದಂತೆ ವೆಚ್ಚವು ರಾಜಸ್ವ ಸ್ವಭಾವದಲ್ಲೇ ಇದ್ದರೂ ಬಂಡವಾಳ ವೆಚ್ಚ ಎಂದು ತೋರಿಸಲಾಗಿದೆ.

| ಲೆಕ್ಕ ಶೀರ್ಷಿಕೆ | ವೆಚ್ಚದ ಸ್ವರೂಪ | ಮೊತ್ತ (₹ ಕೋಟಿಗಳಲ್ಲಿ) |
|---|---|---|
| **4202–01–201–1–07–200** ನಿರ್ವಹಣಾ ವೆಚ್ಚಗಳು | ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳ ಶೌಚಾಲಯಗಳ ನಿರ್ವಹಣೆ ಮತ್ತು ದುರಸ್ತಿ | 50.00 |
| **4070–00–800–0–07–132** ಬಂಡವಾಳ ವೆಚ್ಚಗಳು | ಸರ್ಕಾರಿ ಪ್ರವಾಸಿ ಮಂದಿರಗಳಲ್ಲಿ ಪೈಪ್ ಲೈನ್‌ಗಳ ದುರಸ್ತಿ, ಹೊದಿಕೆ/ಹಾಸುಗಳ ಖರೀದಿ, ಕಟ್ಟಡ ತ್ಯಾಜ್ಯ ಮುಂತಾದವುಗಳು. | 0.50 |
| **4202–01–203–2–01–180** ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು | ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿನ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳ ವಿತರಣೆ | 23.78 |
| **5051–02–201–0–12–180** ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು | ಕಾರವಾರ ಬಂದರಿನಲ್ಲಿ ಟಗ್ ಸೇವೆಯ ಬಾಡಿಗೆ ಬಿಲ್ಲು ಪಾವತಿ. | 2.00 |
| **4210–04–107–2–01–180** ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು | ವಿಟಿಎಮ್ ಕಿಟ್‌ಗಳ ಖರೀದಿ | 11.70 |

- ಅದರಂತೆಯೇ, ₹47.57 ಕೋಟಿ ಮೊತ್ತದ ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚವೆಂದು ವರ್ಗೀಕರಿಸಲಾಯಿತು.

| ಲೆಕ್ಕ ಶೀರ್ಷಿಕೆ | ವೆಚ್ಚದ ಸ್ವರೂಪ | ಮೊತ್ತ (₹ ಕೋಟಿಗಳಲ್ಲಿ) |
|---|---|---|
| **2055–00–116–0–01–180** ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು | ಬಳ್ಳಾರಿ ಮತ್ತು ಹುಬ್ಬಳ್ಳಿಯ ಪ್ರಾದೇಶಿಕ ಫೊರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿಗೆ (ಆರ್‌ಎಫ್‌ಎಸ್‌ಎಲ್) ಉಪಕರಣಗಳ ಖರೀದಿ. | 7.50 |
| **2055–00–116–03–051** ಸಾಮಾನ್ಯ ವೆಚ್ಚಗಳು | ನಿರ್ಭಯ ನಿಧಿಯ ಅಡಿಯಲ್ಲಿ ಸಿಸಿಪಿಡಬ್ಲ್ಯುಸಿ ಮತ್ತು ಇತರ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಸೈಬರ್ ಫೊರೆನ್ಸಿಕ್ ಲ್ಯಾಬ್ ಕಮ್ ಟ್ರೈನಿಂಗ್ ಸೆಂಟರ್‌ಅನ್ನು ಸ್ಥಾಪಿಸುವುದು. | 35.07 |
| **2204–00–104–0–32–059** ಇತರೆ ವೆಚ್ಚಗಳು | ಜಿಮ್‌ನ ನಿರ್ಮಾಣ ಮತ್ತು ಜಿಮ್ ಉಪಕರಣದ ಖರೀದಿ. | 5.00 |

- ಐಜಿಎಎಸ್–2 ಪ್ರಕಾರ, ಅನುದಾನ ನೀಡುವವರು ಅನುದಾನಿತರಿಗೆ ವಿತರಿಸಿದ ಅನುದಾನವನ್ನು ಯಾವುದೇ ಉದ್ದೇಶಕ್ಕಾಗಿ ವಿತರಿಸಿದ್ದರೂ ಅನುದಾನ ನೀಡಿದವರ ಹಣಕಾಸು ವಿವರಣದಲ್ಲಿ ರಾಜಸ್ವ ವೆಚ್ಚ ಎಂದು ಲೆಕ್ಕ ಹಾಕಬೇಕಾಗುತ್ತದೆ. ಆದಾಗ್ಯೂ, 2021–22ರಲ್ಲಿ ಅನುದಾನ ರೂಪದಲ್ಲಿದ್ದ ₹181.00 ಕೋಟಿಗಗಳನ್ನು ಬಂಡವಾಳ ವೆಚ್ಚ ಎಂದು ಪರಿಗಣಿಸಲಾಯಿತು, ಇದು ಐಜಿಎಎಸ್–2ಗೆ ವ್ಯತಿರಿಕ್ತವಾಗಿತ್ತು.

| ಲೆಕ್ಕ ಶೀರ್ಷಿಕೆ | ಸಂಸ್ಥೆ | ವೆಚ್ಚದ ಸ್ವರೂಪ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| **4235-02-101-1-01-200** ನಿರ್ವಹಣಾ ವೆಚ್ಚಗಳು | ಸಮರ್ಥನಂ ಟ್ರಸ್ಟ್ | ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ವಿಕಲಚೇತನ ಸ್ನೇಹಿ ಕಟ್ಟಡ ನಿರ್ಮಾಣ | 1.00 |
| **4202–01–203–1–01–422** ಪರಿಶಿಷ್ಟ ಜಾತಿ ಉಪಯೋಜನೆ | ಡಾ: ಬಿಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ . | ಡಾ: ಬಿಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಸಿವಿಲ್ ಕಾಮಗಾರಿಗಳು. | 80.00 |
| **5055-00-102-3-01-100** ಹಣಕಾಸು ಸಹಾಯ/ಪರಿಹಾರ | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ | ಬಸ್‌ಗಳ ಖರೀದಿ | 100.00 |

ಸಾರಿಗೆ ನಿಗಮಗಳು ಸರ್ಕಾರದ ಪರವಾಗಿ ಸಾರ್ವಜನಿಕರಿಗೆ ಸೇವೆಯನ್ನು ನೀಡುತ್ತವೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಜನವರಿ 2023). ಆದ್ದರಿಂದ, ಸರ್ಕಾರದಿಂದ ಧನಸಹಾಯ ಪಡೆದ ನಿಗಮಗಳ ಒಡೆತನದ ಆಸ್ತಿಗಳು ವಾಸ್ತವವಾಗಿ ಸರ್ಕಾರಕ್ಕೆ ಸೇರಿರುತ್ತವೆ. ಹೀಗಾಗಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಾಗಿ ಬಸ್‌ಗಳ ಖರೀದಿಗೆ ತಗಲುವ ವೆಚ್ಚಗಳು ಸಹ ಸರ್ಕಾರದ ಬಂಡವಾಳ ಆಸ್ತಿಗಳಾಗಿವೆ. ಹಣವನ್ನು ಬಂಡವಾಳದ ಅಡಿಯಲ್ಲಿ ಹಣಕಾಸಿನ ಸಹಾಯವಾಗಿ ಬಿಡುಗಡೆ ಮಾಡಲಾಗಿತ್ತು ಆದರೆ ಬಂಡವಾಳ ವೆಚ್ಚವಾಗಲ್ಲದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯು ಸರ್ಕಾರಿ ಅನುದಾನಿತ ಸಾರ್ವಜನಿಕ ಸಂಸ್ಥೆಯಾಗಿರುವುದರಿಂದ ಅಂತಹ ಸಂಸ್ಥೆಗೆ ಉತ್ಪತ್ತಿಯಾಗುವ ಆಸ್ತಿಗಳು ಸರ್ಕಾರದ ಬಂಡವಾಳ ಆಸ್ತಿಗಳಾಗಿರುತ್ತವೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಜನವರಿ 2023). ಇತರ ಸರ್ಕಾರಿ ಅನುದಾನಿತ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಬಂಡವಾಳ ಆಸ್ತಿಯ ರಚನೆಗೆ ಅನುದಾನವನ್ನು ರಾಜಸ್ವದ ಅಡಿಯಲ್ಲಿ ಬಿಡುಗಡೆ ಮಾಡಲಾಗುತ್ತದೆ ಮತ್ತು ಅದೇ ಸಾದೃಶ್ಯವು ಮೇಲೆ ಹೇಳಿದ ಸಂಸ್ಥೆಗೂ ಅನ್ವಯವಾಗುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### 3.6.2.3 ಅನವಶ್ಯಕ/ಅಧಿಕ/ಅಪರ್ಯಾಪ್ತ ಪೂರಕ ಅನುದಾನಗಳು

ಪರೀಕ್ಷಾ–ತನಿಖೆ ನಡೆಸಿದ ಪೂರಕ ಅವಕಾಶಗಳ ಪ್ರಕರಣಗಳು **ನಕ್ಷೆ–3.2**ರಲ್ಲಿ ವಿವರಿಸಿದಂತೆ ಅನಗತ್ಯ/ ಅತಿಯಾದ/ಅಸಮರ್ಪಕ ಅವಕಾಶಗಳ ನಿದರ್ಶನಗಳನ್ನು ತೋರಿಸಿತು (**ಅನುಬಂಧ–3.3, ಅನುಬಂಧ–3.4 ಮತ್ತು ಅನುಬಂಧ–3.5**).

**ನಕ್ಷೆ–3.2: ಅನವಶ್ಯಕ/ಅಧಿಕ/ಅಪರ್ಯಾಪ್ತ ಪೂರಕ ಅನುದಾನಗಳು***

**(₹ ಕೋಟಿಗಳಲ್ಲಿ)**




** ಅನಗತ್ಯ/ಅಧಿಕ/ಅಪರ್ಯಾಪ್ತ ಪೂರಕ ಅವಕಾಶಗಳನ್ನು ಲೆಕ್ಕ ಹಾಕಲು ಪುನರ್ವಿನಿಯೋಗ ಆದೇಶಗಳನ್ನು ಪರಿಗಣಿಸಿಲ್ಲ*

ಮೇಲಿನವುಗಳಿಂದ, ವೆಚ್ಚವನ್ನು ಭರಿಸಲು ಮೂಲ ಅವಕಾಶಗಳು ಸಾಕಾಗಿದ್ದುದರಿಂದ ಪೂರಕ ಅವಕಾಶಗಳು ಅನಗತ್ಯ/ಅತಿಯಾದ ನಿದರ್ಶನಗಳಾಗಿವೆ ಎಂದು ಗಮನಿಸಲಾಗಿದೆ. ಇದಲ್ಲದೆ ಕೆಲವು ಲೆಕ್ಕಗಳ ಶೀರ್ಷಿಕೆಗಳಡಿಯಲ್ಲಿ, ಪೂರಕ ಅವಕಾಶಗಳನ್ನು ಒಳಗೊಂಡತೆ ಒಟ್ಟು ಅವಕಾಶಗಳು ಸಾಕಷ್ಟಿಲ್ಲದ ಕಾರಣ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು.

31ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಉತ್ತರವಾಗಿ ಆರ್ಥಿಕ ಇಲಾಖೆಯು ಇಲಾಖೆಗಳ ನಿಯಂತ್ರಣಕ್ಕೆ ಮೀರಿದ ವಿವಿಧ ಬದಲಾವಣೆಗಳು ಅಂದರೆ, ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಮುಂತಾದವುಗಳು ಪೂರಕ ಅಂದಾಜುಗಳನ್ನು ಮಂಡಿಸಿದ ನಂತರ ಸಂಭವಿಸುತ್ತವೆ. ಆದ್ದರಿಂದ, ಈ ಬದಲಾವಣೆಗಳು ಪೂರಕ ಅಂದಾಜುಗಳು ಅನಗತ್ಯ, ಅತಿಯಾದ ಮತ್ತು ಅಸಮರ್ಪಕವಾಗಲು ಕಾರಣವಾಯಿತು.

ರಾಜ್ಯ ಸರ್ಕಾರವು ಅಗತ್ಯತೆಗಳ ಆಧಾರದ ಮೇಲೆ ಪೂರಕ ಅಂದಾಜುಗಳನ್ನು ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು, ಇದು ಹೆಚ್ಚು ವಾಸ್ತವಿಕವಾಗಿದೆ ಮತ್ತು ಪ್ರತಿ ವರ್ಷವೂ ಶಾಸಕಾಂಗದಲ್ಲಿ ಮಂಡಿಸಬೇಕು ಹಾಗೂ ಆ ಮೂಲಕ ಅಂತಹ ಅನಗತ್ಯ/ಅತಿಯಾದ/ಅಸಮರ್ಪಕ ಪೂರಕ ಅವಕಾಶಗಳು ಮರುಕಳಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

### 3.6.2.4 ನಿಧಿಗಳ ಪುನರ್ವಿನಿಯೋಗ

ಅನುದಾನ ಅಥವಾ ವಿನಿಯೋಗವನ್ನು ಕಾರ್ಯಕಾರಿ/ಪ್ರಧಾನ/ಉಪ–ಪ್ರಧಾನ/ವಿವರವಾದ ಶೀರ್ಷಿಕೆ/ಉದ್ದೇಶ ಶೀರ್ಷಿಕೆ ಮೂಲಕ ವಿತರಿಸಲಾಗುತ್ತದೆ. ಸಕ್ಷಮ ಕಾರ್ಯನಿರ್ವಾಹಕ ಪ್ರಾಧಿಕಾರವು ಅಂತಹ ಅನುದಾನ ಅಥವಾ ವಿನಿಯೋಗವು ಸಂಬಂಧಿಸಿದ ಆರ್ಥಿಕ ವರ್ಷದ ಮುಕ್ತಾಯದ ಮೊದಲು ಅನುದಾನ ಅಥವಾ

ವಿನಿಯೋಗದೊಳಗೆ ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ನಿಧಿಯ ಪುನರ್ವಿನಿಯೋಗ ಅನುಮೋದಿಸಬಹುದು. ಪುನರ್ವಿನಿಯೋಗ ಎಂದರೆ, ಒಂದು ಸಕ್ಷಮ ಅಧಿಕಾರಿಯು ಅನುದಾನ/ವಿನಿಯೋಗದ ಒಂದು ಘಟಕದಲ್ಲಿನ ಉಳಿತಾಯದ ಹೆಚ್ಚುವರಿ ವೆಚ್ಚವನ್ನು ಮತ್ತೊಂದು ಘಟಕದ ಅಡಿಯಲ್ಲಿ ಅದೇ ಅನುದಾನದ ಪುರಸ್ಕೃತ ಅಥವಾ ಪ್ರಭೃತ ಮಾಡಿದ ವಿನಿಯೋಗದೊಳಗೆ ಬಳಸುವುದು. ಹಣದ ಅವಕಾಶವನ್ನು ವರ್ಗಾಯಿಸುವ ಘಟಕದಲ್ಲಿ ವಿನಿಯೋಗವನ್ನು ಪೂರ್ಣವಾಗಿ ಬಳಸಲಾಗುವುದಿಲ್ಲ ಅಥವಾ ವಿನಿಯೋಗದ ಘಟಕದಲ್ಲಿ ಅದು ಮುಂದೆ ಬಳಕೆಯಾಗದೆ ಉಳಿಯುತ್ತದೆ ಎಂದು ತಿಳಿದಾಗ ಅಥವಾ ನಿರೀಕ್ಷಿಸಿದಾಗ ಮಾತ್ರ ನಿಧಿಯ ಪುನರ್ವಿನಿಯೋಗವನ್ನು ಮಾಡಬೇಕು.

2020–21ರ ಅವಧಿಯಲ್ಲಿ ನೀಡಲಾದ ₹5,531.05 ಕೋಟಿಗಳ 464 ಪುನರ್ವಿನಿಯೋಗ ಆದೇಶಗಳಿಗೆ ಪ್ರತಿಯಾಗಿ 2021–22ರ ಅವಧಿಯಲ್ಲಿ ₹16,695.58 ಕೋಟಗಳ 708 ಪುನರ್ವಿನಿಯೋಗ ಆದೇಶಗಳನ್ನು ನೀಡಲಾಗಿದೆ. ಆದೇಶಗಳ/ಪ್ರಕರಣಗಳ ಪರಿಶೀಲನೆಯು ಈ ಕೆಳಗಿನವುಗಳನ್ನು ಪ್ರಕಟಪಡಿಸಿದೆ.

**(ಎ) ನಿಧಿಗಳ ಅನಗತ್ಯ/ಹೆಚ್ಚಾದ/ಅಪರ್ಯಾಪ್ತ ಪುನರ್ವಿನಿಯೋಗ**

2021–22ರ ಅವಧಿಯಲ್ಲಿ ನಿಧಿಯ ಪುನರ್ವಿನಿಯೋಗದ ಪರೀಕ್ಷಿತ ಪ್ರಕರಣಗಳಲ್ಲಿ, ಕೆಳಗೆ ವಿವರಿಸಿದಂತೆ ಹಣದ ಅನಗತ್ಯ/ಹೆಚ್ಚಾದ/ಅಪರ್ಯಾಪ್ತ ಪುರ್ನವಿನಿಯೋಗದ ಪ್ರಕರಣಗಳಿರುವುದನ್ನು **(ಅನುಬಂಧ–3.6)** ಗಮನಿಸಲಾಗಿದೆ.

- ಎಂಟು ಅನುದಾನಗಳಡಿಯ 11 ಪ್ರಕರಣಗಳಲ್ಲಿ ಪುರ್ನವಿನಿಯೋಗದ ಮೂಲಕ (₹ಮೂರು ಕೋಟಿಗಿಂತ ಹೆಚ್ಚಿನ ಮೊತ್ತದ ಪ್ರಕರಣಗಳು) ಒದಗಿಸಿದ ₹90.45 ಕೋಟಿಗಳು ಅಂತಿಮವಾಗಿ ₹137.44 ಕೋಟಿಗಳ ಬಳಕೆ ಮಾಡದ ಅವಕಾಶವಾಗಿ ಉಳಿದು (₹ಮೂರು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪುನರ್ವಿನಿಯೋಗವು ಅನಗತ್ಯವಾಗಿತ್ತು ಎಂಬುದನ್ನು ಸಾಬೀತುಗೊಳಿಸಿದೆ.
- ಒಂಬತ್ತು ಅನುದಾನಗಳ 20 ಪ್ರಕರಣಗಳಲ್ಲಿ ₹1,258.69 ಕೋಟಿ ಹೆಚ್ಚುವರಿ ನಿಧಿಗಳು (₹ಮೂರು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಅಗತ್ಯಕ್ಕಿಂತ ಹೆಚ್ಚಾದ ಪರಿಣಾಮವಾಗಿ ₹365.18 ಕೋಟಿಗಳ ವೆಚ್ಚವಾಗದ ಅವಕಾಶದಲ್ಲಿ (₹ಮೂರು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪರ್ಯಾವಸಾನವಾಯಿತು.
- ಎರಡು ಅನುದಾನಗಳ ಎರಡು ಪ್ರಕರಣಗಳಲ್ಲಿ, ಪುನರ್ವಿನಿಯೋಗದ ಮೂಲಕ ಒದಗಿಸಿಲಾದ ₹32.90 ಕೋಟಿ ಹೆಚ್ಚುವರಿ ನಿಧಿಗಳು (₹ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಸಾಕಷ್ಟಿಲ್ಲವಾಗಿದ್ದು ₹10.83 ಕೋಟಿಗಳ ಹೆಚ್ಚುವರಿ ವೆಚ್ಚದಲ್ಲಿ (₹ಒಂದು ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಫಲಿತವಾಯಿತು.
- ಒಂದು ಅನುದಾನದ 18 ಪ್ರಕರಣಗಳಲ್ಲಿ, ಪುನರ್ವಿನಿಯೋಗದ ಮೂಲಕ ಮಾಡಿದ್ದ ₹23.81 ಕೊಟಿಯನ್ನು ವಿನಾಕಾರಣ ಹಿಂತೆಗದುಕೊಳ್ಳಲಾಗಿದ್ದು, ಮೂಲ ಅವಕಾಶವೇ ಸಾಕಷ್ಟಿಲ್ಲವಾಗಿದ್ದು ₹23.79 ಕೋಟಿ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು.

ನಿಧಿಗಳ ಅನಗತ್ಯ/ಹೆಚ್ಚುವರಿ ಪುನರ್ವಿನಿಯೋಗವನ್ನು ತಪ್ಪಿಸಲು ಎಲ್ಲಾ ಇಲಾಖೆಗಳ ಮುಖ್ಯಸ್ಥರು ಆರ್ಥಿಕ ಇಲಾಖೆಯು ನೀಡಿದ ಸೂಚನೆಗಳನ್ನು ಅನುಸರಿಸುತ್ತಿದಾರೆಯೇ ಎಂಬುದನ್ನು ಆರ್ಥಿಕ ಇಲಾಖೆಯು ಮೇಲ್ವಿಚಾರಣೆ ಮಾಡಬೇಕು.

ವಿವಿಧ ಇಲಾಖೆಗಳ ಅನುದಾನಗಳ ಬೇಡಿಕೆಯನ್ನು ವಿಮರ್ಶಿಸಿ ಪುನರ್ವಿನಿಯೋಗಗಳನ್ನು ಮಾಡಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿತು (ಜನವರಿ 2023).

**(ಬಿ) ದೋಷಪೂರಿತ ಪುನರ್ವಿನಿಯೋಗ**

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 309, 312 ಮತ್ತು 315(ಎ) ಅನ್ವಯ ಶಾಸಕಾಂಗವು ಅನುಮೋದನೆ ಮಾಡಿದ ಒಂದು ಅನುದಾನದಿಂದ ಮತ್ತೊಂದು ಅನುದಾನಕ್ಕೆ, ಪುರಸ್ಕೃತ ಬಾಬ್ತುಗಳಿಂದ ಪ್ರಭೃತ ಬಾಬ್ತುಗಳಿಗೆ ಬಂಡವಾಳ ಶೀರ್ಷಿಕೆಯಿಂದ ರಾಜಸ್ವ ಶೀರ್ಷಿಕೆ ಹಾಗೂ ವಿಪರ್ಯಾಯವಾಗಿ, ಪುನರ್ವಿನಿಯೋಗ ಪಟ್ಟಿಯು ಸ್ವಯಂ ಸಮತೋಲಿತವಾಗಿಲ್ಲದಿದ್ದರೆ ಮತ್ತು ನಿಗದಿತ ನಮೂನೆಯಲ್ಲಿಲ್ಲದಿದ್ದರೆ (ನಮೂನೆ 22ಎ) ಪುನರ್ವಿನಿಯೋಗಕ್ಕೆ ಅವಕಾಶವಿರುವುದಿಲ್ಲ. 2021–22ರಲ್ಲಿ ಆಯವ್ಯಯ ಅವಕಾಶಗಳಲ್ಲಿನ ವ್ಯತ್ಯಾಸ, ನಮೂನೆ 22ಎ ಸ್ವಯಂ ಸಮತೊಲಿತವಾಗಿಲ್ಲದುದು ಮತ್ತು ಆಯವ್ಯಯದ ಕೊರತೆಯ ಕಾರಣದಿಂದ ₹8.00 ಕೋಟಿಗಳನ್ನು ಒಳಗೊಂಡ 49 ಪುನರ್ವಿನಿಯೋಗ ಆದೇಶಗಳನ್ನು ಮಹಾಲೇಖಾಪಾಲರು (ಲೆ ಮತ್ತು ಹ) ಒಪ್ಪಿಕೊಂಡಿಲ್ಲ (**ಅನುಬಂಧ–3.7**).

### 3.6.2.5 ಹಂಚಿಕೆಯ ಅವಕಾಶಗಳಿಗೆ ಪ್ರತಿಯಾಗಿ ಬಳಕೆ ಮಾಡದ ಉಳಿಕೆಗಳು/ಭಾರಿ ಉಳಿತಾಯಗಳು/ ಅಧ್ಯರ್ಪಣೆಗಳು

**(ಎ) 2021–22ರಲ್ಲಿ ಭಾರಿ ಉಳಿತಾಯ (₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಉಳಿಕೆ) ಹೊಂದಿರುವ ಅನುದಾನಗಳು**

20 ಅನುದಾನಗಳು/ವಿನಿಯೋಗಗಳಡಿಯಲ್ಲಿ 25 ಪ್ರಕರಣಗಳಲ್ಲಿ ಪ್ರತಿಯೊಂದು ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಒಟ್ಟು ₹10,070.32 ಕೋಟಿಗಳ ಮೊತ್ತದ ಅವಕಾಶವು ಬಳಕೆಯಾಗದೆ ಉಳಿದಿದೆ. **ಅನುಬಂಧ–3.8**ರಲ್ಲಿ ಸೂಚಿಸಿದಂತೆ ರಾಜಸ್ವ ಪುರಸ್ಕೃತದ ಅಡಿಯಲ್ಲಿ ಒಳಾಡಳಿತ ಮತ್ತು ಸಾರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ರಾಜಸ್ವ ಪ್ರಭೃತದ ಅಡಿಯಲ್ಲಿ ಋಣ ಉಸ್ತುವಾರಿ ಕ್ಷೇತ್ರಗಳಲ್ಲಿ ₹500 ಕೋಟಿಗೂ ಹೆಚ್ಚು ಮೊತ್ತದ ಅವಕಾಶ ಬಳಕೆಯಾಗದೆ ಉಳಿದಿದೆ.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 264ರ ಪ್ರಕಾರ, ನಿಯಂತ್ರಣಾಧಿಕಾರಿಗಳು ನಿರೀಕ್ಷಿಸಿದ ಎಲ್ಲಾ ಉಳಿಕೆಗಳನ್ನು ಸಂಪೂರ್ಣ ವಿವರ ಮತ್ತು ಕಾರಣಗಳೊಂದಿಗೆ ಉಳಿತಾಯ ನಿರೀಕ್ಷಿಸಿದ ತಕ್ಷಣವೇ ಆರ್ಥಿಕ ಇಲಾಖೆಗೆ ವರದಿ ಮಾಡಬೇಕು. ಆದಾಗ್ಯೂ ಇಲಾಖೆಗಳು ಕಾರಣಗಳನ್ನು ಸೂಕ್ತವಾಗಿ ವಿವರಿಸಿಲ್ಲ ಅಥವಾ ಒದಗಿಸಿಲ್ಲ ಎಂಬುದನ್ನು ಗಮನಿಸಲಾಗಿದೆ.

**(ಬಿ) ಉಳಿಕೆಗಳ ಅಧ್ಯರ್ಪಣೆ**

ಸಾಮಾನ್ಯ ಹಣಕಾಸು ನಿಯಮಗಳು 2017, ನಿಯಮ 66(1)ರ ಅನ್ವಯ ಇಲಾಖೆಗಳು ತಮ್ಮ ನಿಯಂತ್ರಣದಲ್ಲಿರುವ ಅನುದಾನ/ವಿನಿಯೋಗಗಳಲ್ಲಿ ಗಮನಿಸಲಾದ ಎಲ್ಲಾ ನಿರೀಕ್ಷಿತ ವೆಚ್ಚ ಮಾಡಲಾಗದ ಅವಕಾಶಗಳನ್ನು ನಿಗದಿತ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಒಪ್ಪಿಸಬೇಕಾಗುತ್ತದೆ.

2021–22ರಲ್ಲಿ ಒಟ್ಟು ಅವಕಾಶದ ಶೇಕಡ 3.70ರಷ್ಟಿದ್ದ ₹10,849.61 ಕೋಟಿ ವೆಚ್ಚ ಮಾಡಲಾಗಿಲ್ಲ. ಒಟ್ಟು ಉಳಿತಾಯದಲ್ಲಿ ಅಧ್ಯರ್ಪಿಸಿದ ಮೊತ್ತವು ₹5,998.67 ಕೋಟಿಗಳಾಗಿವೆ (ಶೇಕಡ 55).

ಅನುದಾನವಾರು ವೆಚ್ಚ ಮಾಡಲಾಗದ ಅವಕಾಶಗಳ ವಿಶ್ಲೇಷಣೆಯನ್ನು ಕೆಳಗೆ ವಿವರಿಸಲಾಗಿದೆ:

- ಆರು ಅನುದಾನಗಳು/ವಿನಿಯೋಗಗಳ ಸಂದರ್ಭದಲ್ಲಿ, ವೆಚ್ಚವೇ ಮಾಡದಿರುವ ಇಡೀ ಅವಕಾಶದ ಒಟ್ಟು ₹1,539.29 ಕೋಟಿಗಳು ಅಧ್ಯರ್ಪಣೆ ಆಗಿಲ್ಲ (**ಅನುಬಂಧ–3.9**). ಈ ಉಳಿತಾಯ/ವೆಚ್ಚ ಮಾಡದ ಅವಕಾಶಗಳು ಆಯವ್ಯಯ ಅಂದಾಜುಗಳಿಗೆ ಪ್ರತಿಯಾಗಿದ್ದವು ಮತ್ತು ವಾಸ್ತವಿಕ ಬಿಡುಗಡೆಗಳಿಗೆ

ಪ್ರತಿಯಾಗಿರಲಿಲ್ಲವಾದ್ದರಿಂದ, ಉಳಿತಾಯ/ವೆಚ್ಚ ಮಾಡದಿರುವ ಅವಕಾಶಗಳು ₹1,539.29 ಕೋಟಿಯಾಗಿತ್ತು. ಅಧ್ಯರ್ಪಣೆಯು ಕೇವಲ ಸೈದ್ಧಾಂತಿಕವಾಗಿದೆ ಏಕೆಂದರೆ ಇದು ಆಯವ್ಯಯ ಅಂದಾಜಿಗೆ ವಿರುದ್ಧವಾಗಿತ್ತು ಮತ್ತು ರಾಜ್ಯದ ವಾಸ್ತವಿಕ ಸ್ವೀಕೃತಿಗಳ ಮೇಲಿರಲಿಲ್ಲ.

- 15 ಅನುದಾನಗಳು/ವಿನಿಯೋಗಗಳ ಸಂದರ್ಭದಲ್ಲಿ ಇಡೀ ಅವಕಾಶದ ವೆಚ್ಚ ಮಾಡದ ಒಟ್ಟು ₹330.50 ಕೋಟಿಗಳನ್ನು ಅಧ್ಯರ್ಪಿಸಲಾಯಿತು (**ಅನುಬಂಧ–3.10**).
- ಮುಂದುವರೆದಂತೆ, 28 ಅನುದಾನಗಳು/ವಿನಿಯೋಗಗಳಲ್ಲಿ, ಕೇವಲ ಭಾಗಶಃ ಅಧ್ಯರ್ಪಣೆ ಆಗಿದ್ದು ಈ ಅನುದಾನಗಳಲ್ಲಿ ₹8,979.80 ಕೋಟಿಗಳ ವೆಚ್ಚ ಮಾಡದ ಅವಕಾಶಗಳಿಗೆ ಪ್ರತಿಯಾಗಿ ₹3,311.62 ಕೋಟಿಗಳನ್ನು ಅಧ್ಯರ್ಪಣೆ ಮಾಡದೆ ₹5,568.18 ಕೋಟಿಗಳನ್ನು ಅಧ್ಯರ್ಪಣೆ ಮಾಡಲಾಯಿತು (**ಅನುಬಂಧ–3.11**).
- ಅಧ್ಯರ್ಪಣೆ ಮಾಡಿದ ಅನುದಾನಗಳು/ವಿನಿಯೋಗಗಳ ವಿವರವಾದ ವಿಶ್ಲೇಷಣೆಯಲ್ಲಿ 79 ಪ್ರಕರಣಗಳಲ್ಲಿ ಗಣನೀಯ ಅಧ್ಯರ್ಪಣಗಳು ಇದ್ದವು ಎಂದು ತಿಳಿಸುತ್ತದೆ (ಶೇಕಡ 100 ಒಳಗೊಂಡಂತೆ ಶೇಕಡ 50ಕ್ಕೂ ಹೆಚ್ಚಿನ ಅಧ್ಯರ್ಪಣೆಗಳು) (₹2,620.45 ಕೋಟಿ) (**ಅನುಬಂಧ–3.12**).
- ಇದಲ್ಲದೆ, 24 ಅನುದಾನಗಳಲ್ಲಿ ₹ ಐದು ಕೋಟಿಗಿಂತ ಹೆಚ್ಚಿನ ಅಧ್ಯರ್ಪಣೆಯಲ್ಲಿ ಆರ್ಥಿಕ ವರ್ಷದ ಕೊನೆಯ ಎರಡು ಕೆಲಸದ ದಿನಗಳಲ್ಲಿ ₹4,537.48 ಕೋಟಿಗಳನ್ನು (ಒಟ್ಟು ಅಧ್ಯರ್ಪಣೆಯ ಶೇಕಡ 76) ಅಧ್ಯರ್ಪಣೆ ಮಾಡಲಾಗಿದೆ. (**ಅನುಬಂಧ–3.13**). ಇದು ಅಸಮರ್ಪಕ ಹಣಕಾಸಿನ ನಿಯಂತ್ರಣವನ್ನು ಸೂಚಿಸುತ್ತದೆ.

31 ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಗೆ ಎಲ್ಲಾ ಇಲಾಖೆಗಳಿಗೆ ಅವಕಾಶಗಳ ಬಳಕೆಯ ಮೇಲ್ವಿಚಾರಣೆ ಮಾಡಲು ಮತ್ತು ನಿರೀಕ್ಷಿತ ಉಳಿಕೆಗಳನ್ನು ಅಧ್ಯರ್ಪಿಸುವಂತೆ ಸೂಚನೆ ನೀಡಲಾಗಿದೆ ಎಂದು ಆರ್ಥಿಕ ಇಲಾಖೆಯು ತಿಳಿಸಿತು.

### 3.6.2.6 ಹೆಚ್ಚುವರಿ ವೆಚ್ಚ ಮತ್ತು ಅದರ ಸಕ್ರಮೀಕರಣ

ಭಾರತದ ಸಂವಿಧಾನದ 204ನೇ ವಿಧಿಯ ಪ್ರಕಾರ, ರಾಜ್ಯ ಶಾಸಕಾಂಗವು ಕಾನೂನಿನ ಮೂಲಕ ಮಾಡಿದ ವಿನಿಯೋಗದ ಅಡಿಯಲ್ಲಿ ಹೊರತು ಪಡಿಸಿ ಯಾವುದೇ ಹಣವನ್ನು ಸಂಚಿತ ನಿಧಿಯಿಂದ ಪಡೆಯಲಾಗುವುದಿಲ್ಲ. ಸಂವಿಧಾನದ 205ನೇ ಅನುಚ್ಛೇದವು ರಾಜ್ಯ ಶಾಸಕಾಂಗದಿಂದ ಕ್ರಮಬದ್ಧಗೊಳಿಸಿದ ಅನುದಾನ/ವಿನಿಯೋಗದ ಅವಕಾಶವನ್ನು ಮೀರಿದ ವೆಚ್ಚವನ್ನು ಸರ್ಕಾರವು ರಾಜ್ಯ ಶಾಸಕಾಂಗದಿಂದ ಸಕ್ರಮೀಕರಣಗೊಳಿಸಿಕೊಳ್ಳಬೇಕು ಎಂದು ವಿಧಿಸುತ್ತದೆ. ಈ ಅನುಚ್ಛೇದದ ಅಡಿಯಲ್ಲಿ ಹೆಚ್ಚುವರಿ ವೆಚ್ಚವನ್ನು ಕ್ರಮಬದ್ಧಗೊಳಿಸಲು ಯಾವುದೇ ಕಾಲಮಿತಿಯನ್ನು ಸೂಚಿಸಲಾಗಿಲ್ಲವಾದರೂ ಹೆಚ್ಚುವರಿ ವೆಚ್ಚದ ಕ್ರಮಬದ್ಧಗೊಳಿಸುವಿಕೆಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಧನವಿನಿಯೋಗ ಲೆಕ್ಕಗಳ ಮೇಲಿನ ಚರ್ಚೆಯನ್ನು ಪೂರ್ಣಗೊಳಿಸಿದ ನಂತರ ಮಾಡಲಾಗುತ್ತದೆ.

2021–22ರಲ್ಲಿ ಅವಕಾಶಕ್ಕಿಂತ ಯಾವುದೇ ಹೆಚ್ಚುವರಿ ವೆಚ್ಚವಿರುವುದಿಲ್ಲ. 2012–13ರಿಂದ 2017–18 ಮತ್ತು 2020–21ರ ವರ್ಷಗಳಲ್ಲಿ **ಅನುಬಂಧ–3.14**ರಲ್ಲಿ ವಿವರಿಸಿದಂತೆ, ಇನ್ನೂ ಕ್ರಮಬದ್ಧಗೊಳಿಸಬೇಕಾದ ಅಧಿಕ ವೆಚ್ಚವು ಒಟ್ಟು ₹2,825.43 ಕೋಟಿಗಳಷ್ಟಿದೆ. 2018–19 ಮತ್ತು 2019–20ರ ವರ್ಷಗಳಲ್ಲಿ ಅನುದಾನ/ ವಿನಿಯೋಗಗಳಲ್ಲಿ ಯಾವುದೇ ಅಧಿಕ ವೆಚ್ಚವಿರುವುದಿಲ್ಲ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಜುಲೈ 2022ರಲ್ಲಿ ನಡೆಸಿದ ಸಭೆಯಲ್ಲಿ 2012–13ರಿಂದ 2017–18ರ ವರೆಗಿನ ಅವಧಿಯ ಅಧಿಕ ವೆಚ್ಚವಾದ ₹2,409.53 ಕೋಟಿಗಳನ್ನು ಕ್ರಮಬದ್ಧಗೊಳಿಸಲು ಚಿಂತನೆ ನಡೆಸಿತು ಮತ್ತು ಅದರ ಶಿಫಾರಸುಗಳನ್ನು ರಾಜ್ಯ ಶಾಸಕಾಂಗದ ಮುಂದೆ ಇನ್ನೂ ಮಂಡಿಸಬೇಕಾಗಿದೆ.

### *3.6.3 ಆಯವ್ಯಯ ಮತ್ತು ಲೆಕ್ಕಪತ್ರ ಪ್ರಕ್ರಿಯೆಯ ಪರಿಣಾಮಕಾರಿತ್ವದ ಕುರಿತು ವ್ಯಾಖ್ಯಾನಗಳು*

#### 3.6.3.1 ಆಯವ್ಯಯ ವ್ಯತ್ಯಾಸಗಳಿಗೆ ವಿವರಣೆ ನೀಡದಿರುವುದು/ಅಪೂರ್ಣ ವಿವರಣೆ ನೀಡಿರುವುದು

ಅನುಮೋದಿತ ಆಯವ್ಯಯಕ್ಕೆ ಪ್ರತಿಯಾಗಿ ವೆಚ್ಚವನ್ನು ತೋರಿಸುವುದರೊಂದಿಗೆ, ಧನವಿನಿಯೋಗ ಲೆಕ್ಕಗಳು ಆಯವ್ಯಯದಲ್ಲಿ ಒದಗಿಸಿದ ಅವಕಾಶದಿಂದ, ಪೂರಕ ಅವಕಾಶಗಳನ್ನೂ ಒಳಗೊಂಡಂತೆ, ವೆಚ್ಚವು ಗಮನಾರ್ಹವಾಗಿ ವ್ಯತ್ಯಾಸಗೊಳ್ಳುವ ಸಂದರ್ಭಗಳಿಗೆ ವಿವರಣೆಯನ್ನೂ ಸಹ ನೀಡುತ್ತವೆ.

ಧನವಿನಿಯೋಗ ಲೆಕ್ಕಗಳಲ್ಲಿ ವಿವರವಾದ ವ್ಯಾಖ್ಯಾನಗಳನ್ನು ಸೇರಿಸಲು ಅನುಸರಿಸಿದ ಮಿತಿಗಳು, ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಅನುಮೋದಿಸಿದ ಮಿತಿಗಳ ಪ್ರಕಾರವಾಗಿರುತ್ತದೆ. ಈ ನಿಯಮಗಳು 1983–84ರ ಆರ್ಥಿಕ ವರ್ಷದಿಂದ ಜಾರಿಗೆ ಬಂದಿದೆ.

ವ್ಯಾಖ್ಯಾನಗಳಿಗಾಗಿ ಉಪ–ಶೀರ್ಷಿಕೆಗಳ ಆಯ್ಕೆ ಮತ್ತು ಧನವಿನಿಯೋಗ ಲೆಕ್ಕಗಳಲ್ಲಿನ ವಿವರವಾದ ವ್ಯಾಖ್ಯಾನಗಳಿಗಾಗಿ ಇರುವ ಸೂತ್ರಗಳನ್ನು ಕೆಳಗೆ ನೀಡಲಾಗಿದೆ.

| | |
|---|---|
| **ಉಳಿತಾಯಗಳು** | ಒಟ್ಟಾರೆ ಉಳಿಕೆ ಅನುದಾನ/ವಿನಿಯೋಗದ ಶೇಕಡ ಎರಡಕ್ಕಿಂತ ಹೆಚ್ಚಾಗಿದ್ದರೆ ಮತ್ತು ಯಾವುದೇ ಉಪ ಶೀರ್ಷಿಕೆಯಡಿ ಉಳಿಕೆಯು ಶೇಕಡ 10ಕ್ಕಿಂತ ಹೆಚ್ಚಾಗಿದ್ದರೆ ವ್ಯಾಖ್ಯಾನಿಸಬೇಕಾಗುತ್ತದೆ. |
| **ಹೆಚ್ಚಳ** | ಒಟ್ಟಾರೆ ಹೆಚ್ಚಾದ ವೆಚ್ಚವು ಅನುದಾನ/ವಿನಿಯೋಗದ ಶೇಕಡ 10ಕ್ಕಿಂತ ಹೆಚ್ಚಾಗಿದ್ದರೆ ಮತ್ತು ಯಾವುದೇ ಉಪಶೀರ್ಷಿಕೆಯಡಿ ವೆಚ್ಚವು ₹ಎರಡು ಲಕ್ಷಕ್ಕಿಂತ ಹೆಚ್ಚಿದ್ದರೆ ವ್ಯಾಖ್ಯಾನಿಸಬೇಕಾಗುತ್ತದೆ. |

*ಆಕರ: ಧನವಿನಿಯೋಗ ಲೆಕ್ಕಗಳು*

2021–22ರ ಧನವಿನಿಯೋಗ ಲೆಕ್ಕಗಳ ಲೆಕ್ಕಪರಿಶೋಧನೆಯಲ್ಲಿ, ಆಯವ್ಯಯ ಹಂಚಿಕೆಯನ್ನು ಹೋಲಿಸಿದರೆ ವೆಚ್ಚದಲ್ಲಿನ ವ್ಯತ್ಯಾಸಗಳಿಗೆ ಶೇಕಡ 49ರಷ್ಟು ಉಳಿತಾಯಗಳಿಗೆ ನಿಯಂತ್ರಣ ಅಧಿಕಾರಿಗಳು ವಿವರಣೆ/ನಿರ್ದಿಷ್ಟ ಕಾರಣಗಳನ್ನು ಒದಗಿಸದಿರುವುದು ಗಮನಕ್ಕೆ ಬಂದಿದೆ. 29 ಅನುದಾನಗಳು/ವಿನಿಯೋಗಗಳ 24 ಅನುದಾನಗಳು/ವಿನಿಯೋಗಗಳಲ್ಲಿ ₹5,326.22 ಕೋಟಿ ಮೊತ್ತದ ವ್ಯತ್ಯಾಸಕ್ಕೆ ನಿರ್ದಿಷ್ಟ ಕಾರಣಗಳನ್ನು ಸರ್ಕಾರಿ ಇಲಾಖೆಗಳ ನಿಯಂತ್ರಣ ಅಧಿಕಾರಿಗಳು ಒದಗಿಸಿಲ್ಲ. ಅನುದಾನವಾರು ವಿವರಗಳನ್ನು **ಅನುಬಂಧ–3.15**ರಲ್ಲಿ ತೋರಿಸಲಾಗಿದೆ.

### 3.6.3.2 2021–22ರಲ್ಲಿ ವೆಚ್ಚದ ಒತ್ತಡ

2021–22ರಲ್ಲಿ ರಾಜ್ಯ ಬೊಕ್ಕಸಕ್ಕೆ ಮಾಸಿಕ ಸ್ವೀಕೃತಿ ಮತ್ತು ವಿತರಣೆಗಳನ್ನು **ನಕ್ಷೆ–3.3**.ರಲ್ಲಿ ನೀಡಲಾಗಿದೆ.

**ನಕ್ಷೆ 3.3: 2021–22ರಲ್ಲಿ ಮಾಸಿಕ ಸ್ವೀಕೃತಿಗಳು ಮತ್ತು ವಿತರಣೆಗಳು**

**(₹ ಕೋಟಿಗಳಲ್ಲಿ)**




*ಆಕರ: ಮಾಸಿಕ ಸಿವಿಲ್ ಲೆಕ್ಕಗಳು*

ಮಾರ್ಚ್ 2022ರಲ್ಲಿ ರಾಜ್ಯ ಸರ್ಕಾರವು ₹2,68,496.98 ಕೋಟಿ (ಸಾರ್ವಜನಿಕ ಸಾಲದ ವೆಚ್ಚ ಸೇರಿದಂತೆ) ಒಟ್ಟು ವೆಚ್ಚದ ಶೇಕಡ 26ರಷ್ಟನ್ನು ಒಳಗೊಂಡಿರುವ ₹69,350.11 ಕೋಟಿ ವೆಚ್ಚವನ್ನು ಮಾಡಿದೆ ಎಂದು ಗಮನಿಸಲಾಗಿದೆ.

ಮಾರ್ಚ್ 2022ರಲ್ಲಿ ಮಾತ್ರ ಒಟ್ಟು ವೆಚ್ಚದ ಶೇಕಡ 50ಕ್ಕಿಂತ ಹೆಚ್ಚು ಖರ್ಚು ಮಾಡಿದ ಪ್ರಮುಖ ಪ್ರಕರಣಗಳನ್ನು **ಕೋಷ್ಟಕ–3.6**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–3.6: 2022ರ ಮಾರ್ಚ್‌ನಲ್ಲಿ ವೆಚ್ಚದ ಪ್ರಮಾಣ**

(₹ ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ /ವಿವರಣೆ | ಮೊದಲನೇ ತ್ರೈಮಾಸಿಕ | ಎರಡನೇ ತ್ರೈಮಾಸಿಕ | ಮೂರನೇ ತ್ರೈಮಾಸಿಕ | ನಾಲ್ಕನೇ ತ್ರೈಮಾಸಿಕ | ಒಟ್ಟು ವೆಚ್ಚ | ಮಾರ್ಚ್‌ನಲ್ಲಿ ವೆಚ್ಚ | ಒಟ್ಟು ವೆಚ್ಚಕ್ಕೆ ಮಾರ್ಚ್ ವೆಚ್ಚದ ಶೇಕಡಾವಾರು |
|---|---|---|---|---|---|---|---|
| **4210–ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ಮೇಲೆ ಬಂಡವಾಳ ವೆಚ್ಚ** | 222.45 | 199.90 | 409.91 | 1,742.57 | 2574.84 | 1,467.02 | 56.98 |
| **4401–ಬೆಳೆ ಸಂಗೋಪನೆ ಮೇಲೆ ಬಂಡವಾಳ ವೆಚ್ಚ** | 2.10 | 2.71 | 2.02 | 59.10 | 65.92 | 56.20 | 85.26 |
| **4515–ಇತರೆ ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಬಂಡವಾಳ ವೆಚ್ಚ** | 14.00 | 22.50 | 44.11 | 225.53 | 306.13 | 161.51 | 52.76 |
| **5465–ಸಾಮಾನ್ಯ ಹಣಕಾಸು ಮತ್ತು ಮಾರಾಟ ಸಂಸ್ಥೆಗಳಲ್ಲಿ ಹೂಡಿಕೆ** | 88.25 | 78.27 | 96.85 | 1,205.75 | 1,469.12 | 1,020.43 | 69.46 |
| **6217–ನಗರಾಭಿವೃದ್ಧಿಗೆ ಸಾಲಗಳು** | 329.51 | 443.13 | 69.08 | 1,146.55 | 1,988.27 | 1,014.75 | 51.04 |

*ಆಕರ: ಮಾಸಿಕ ಸಿವಿಲ್ ಲೆಕ್ಕಗಳು*

ಮೇಲಿನ ಕೋಷ್ಟಕದಿಂದ ನೋಡಿದಂತೆ, ಸರ್ಕಾರವು ವರ್ಷಾಂತ್ಯದಲ್ಲಿ ಗಣನೀಯ ಪ್ರಮಾಣದ ವೆಚ್ಚವನ್ನು ಮಾಡಿದ್ದು, ಇದು ವೆಚ್ಚದ ಮೇಲಿನ ಅಸಮರ್ಪಕ ನಿಯಂತ್ರಣವನ್ನು ಸೂಚಿಸುತ್ತದೆ. ಮಧ್ಯಮಾವಧಿ ವಿತ್ತೀಯ ಯೋಜನೆ 2022–26ರಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಮಾಸಿಕ ಸಭೆಗಳಲ್ಲಿ ವೆಚ್ಚ ಸತತ ಸಮೀಕ್ಷೆಯಿಂದಾಗಿ ಪ್ರತಿ ವರ್ಷದ ಅಂತಿಮ ತ್ರೈ ಮಾಸಿಕದಲ್ಲಿ ಗಮನಿಸಿದ ಮರುಕಳಿಸುವ ವೆಚ್ಚಗಳನ್ನು ಸ್ವಲ್ಪ ಮಟ್ಟಿಗೆ ತಪ್ಪಿಸಲಾಯಿತು ಎಂದು ಹೇಳಲಾಗಿತ್ತು. ಆದಾಗ್ಯೂ, ಅಂತಿಮ ತ್ರೈಮಾಸಿಕದ ವೆಚ್ಚಗಳು ಕಳೆದ ಮೂರು ವರ್ಷಗಳಿಂದ ಏರಿಕೆ ಪ್ರವೃತ್ತಿಯಲ್ಲೇ ಇತ್ತು ಎಂಬುದನ್ನು ಗಮನಿಸಲಾಯಿತು. 2019–20ರ ಅಂತಿಮ ತ್ರೈಮಾಸಿಕದಲ್ಲಿ ಶೇಕಡ 31ರಷ್ಟಿದ್ದ ವೆಚ್ಚವು 2020–21 ಮತ್ತು 2021–22ರಲ್ಲಿ ಕ್ರಮವಾಗಿ ಶೇಕಡ 39 ಮತ್ತು ಶೇಕಡ 41ಕ್ಕೆ ಹೆಚ್ಚಳವಾಯಿತು.

## 3.7 ಆಯ್ದ ಅನುದಾನಗಳ ಪರಿಶೀಲನೆಯ ಫಲಿತಾಂಶ

ಕೆಳಗಿನ ಎರಡು ಅನುದಾನಗಳಲ್ಲಿ ಅನುಸರಿಸಿದ ಆಯವ್ಯಯ ಕಾರ್ಯವಿಧಾನಗಳು ಮತ್ತು ವೆಚ್ಚದ ಮೇಲಿನ ನಿಯಂತ್ರಣಕ್ಕಾಗಿ ಬಳಸಲಾದ ವಿಧಾನವನ್ನು ಪರಿಶೀಲಿಸಲಾಯಿತು.

1. ಅನುದಾನ ಸಂಖ್ಯೆ 07 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
2. ಅನುದಾನ ಸಂಖ್ಯೆ 20 – ಲೋಕೋಪಯೋಗಿ ಇಲಾಖೆ

ಹಿಂದಿನ ಐದು ವರ್ಷಗಳಲ್ಲಿ ಪರಿಶೀಲಿಸದ, 2019–20ರಿಂದ 2021–22ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ರಾಜಸ್ವ ಮತ್ತು ಬಂಡವಾಳ ಶೀರ್ಷಿಕೆಗಳೆರಡರಲ್ಲೂ ಹೆಚ್ಚಿನ ಶೇಕಡಾವಾರು ಉಳಿತಾಯದ ಆಧಾರದ ಮೇಲೆ ಎರಡು ಅನುದಾನಗಳನ್ನು ಆಯ್ಕೆ ಮಾಡಲಾಯಿತು. ಲೆಕ್ಕಪರಿಶೋಧನಾ ಅವಿಷ್ಕಾರಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

### *3.7.1 ಅನುದಾನ ಸಂಖ್ಯೆ 07ರ ಸಮೀಕ್ಷೆ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ*

#### 3.7.1.1 ಪೀಠಿಕೆ

ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣವನ್ನು ಒಳಗೊಂಡಂತೆ ಸಂರಕ್ಷಿತ ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿಯ ಬೆಳವಣಿಗೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜವಾಬ್ದಾರಿಯಾಗಿದೆ.

#### 3.7.1.2 ಆಯವ್ಯಯ ಮತ್ತು ವೆಚ್ಚ

ಹಿಂದಿನ ಮೂರು ವರ್ಷಗಳಲ್ಲಿ (2019–20ರಿಂದ 2021–22) ಆಯವ್ಯಯ ಅವಕಾಶಗಳು, ವಾಸ್ತವ ವಿತರಣೆಗಳು ಮತ್ತು ಅನುದಾನದ ಅಡಿಯಲ್ಲಿ ಉಳಿತಾಯದ ಒಟ್ಟಾರೆ ಸ್ಥಿತಿಯನ್ನು **ಕೋಷ್ಟಕ–3.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.7: ಆಯವ್ಯಯ ಮತ್ತು ವೆಚ್ಚ**

(₹ಕೋಟಿಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | | ಒಟ್ಟು | ವೆಚ್ಚ | ಬಳಕೆ ಮಾಡದ ಅವಕಾಶ ಮತ್ತು ಶೇಕಡಾವಾರು |
|---|---|---|---|---|---|---|
| | | ಮೂಲ | ಪೂರಕ | | | |
| **2019–20** | ರಾಜಸ್ವ (ಪುರಸ್ಕೃತ) | 10,990.11 | 225.18 | 11,215.29 | 9,743.27 | 1,472.02(13) |
| | ಬಂಡವಾಳ (ಪುರಸ್ಕೃತ) | 3,909.09 | 1,800.00 | 5,709.09 | 4,485.69 | 1,223.40(21) |
| **2020–21** | ರಾಜಸ್ವ (ಪುರಸ್ಕೃತ) | 12,115.66 | 55.40 | 12,171.06 | 11,155.33 | 1,015.73(8) |
| | ಬಂಡವಾಳ (ಪುರಸ್ಕೃತ) | 3,479.55 | 1,293.90 | 4,773.45 | 4,275.20 | 498.24(10) |
| **2021–22** | ರಾಜಸ್ವ (ಪುರಸ್ಕೃತ) | 12,162.69 | 2,734.96 | 14,897.65 | 13,323.74 | 1,573.91(11) |
| | ಬಂಡವಾಳ (ಪುರಸ್ಕೃತ) | 3,873.21 | 1,067.86 | 4,941.07 | 3,732.15 | 1,208.92(24) |

*ಆಕರ: ಧನವಿನಿಯೋಗ ಲೆಕ್ಕಗಳು*

ರಾಜಸ್ವ ವಿಭಾಗದಡಿಯಲ್ಲಿ ಬಳಕೆಯಾಗದ ಅವಕಾಶವು ಶೇಕಡ ಎಂಟು ಮತ್ತು 13ರ ನಡುವಿನ ವ್ಯಾಪ್ತಿಯಲ್ಲಿ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ ಶೇಕಡ 10 ಮತ್ತು 24ರ ನಡುವಿನ ವ್ಯಾಪ್ತಿಯಲ್ಲಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು

### 3.7.1.3 ನಿರೀಕ್ಷಿತ ಉಳಿತಾಯಗಳನ್ನು ಅಧ್ಯರ್ಪಣೆ ಮಾಡದಿರುವುದು/ಭಾಗಶ: ಅಧ್ಯರ್ಪಣೆ ಮಾಡಿರುವುದು

ಕರ್ನಾಟಕ ಆಯವ್ಯಯ ಕೈಪಿಡಿ 1975ರ ಕಂಡಿಕೆ 264ರ ಅನ್ವಯ ಉಳಿತಾಯವನ್ನು ನಿರೀಕ್ಷಿಸಿದಾಗ ವೆಚ್ಚ ಮಾಡುವ ಇಲಾಖೆಗಳು ಅನುದಾನ/ವಿನಿಯೋಗ ಅಥವಾ ಅದರ ಭಾಗವನ್ನು ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕಾಗುತ್ತದೆ. ಇದಲ್ಲದೆ, ಆರ್ಥಿಕ ಇಲಾಖೆಯು ಇತರ ಅಗತ್ಯವಿರುವ ಯೋಜನೆಗಳಲ್ಲಿ ನಿರೀಕ್ಷಿತ ಉಳಿತಾಯದ ಮೊತ್ತವನ್ನು ಸಮರ್ಥವಾಗಿ ಮರುಹಂಚಿಕೆ ಮಾಡಲು ಅನವು ಮಾಡಿಕೊಡಲು, ಹಣಕಾಸಿನ ವರ್ಷದ ಅಂತ್ಯಕ್ಕೆ ಕಾಯದೆ ಉಳಿಕೆಯನ್ನು ನಿರೀಕ್ಷಿಸಿದ ತಕ್ಷಣ ಆಧ್ಯರ್ಪಣೆ ಮಾಡಬೇಕು. ಸಮೀಕ್ಷೆ ನಡೆಸಿದ ಅವಧಿಯಲ್ಲಿ, ಒಟ್ಟು ₹6,992.21 ಕೋಟಿಗಳ ಉಳಿಕೆಯಲ್ಲಿ (₹4,061.65 ಕೋಟಿ ರಾಜಸ್ವ ಮತ್ತು ₹2,930.56 ಕೋಟಿ ಬಂಡವಾಳ ವಿಭಾಗದ ಅಡಿಯಲ್ಲಿ) ₹1,063.50 ಕೋಟಿ ರಾಜಸ್ವ ಮತ್ತು ₹80 ಕೋಟಿ ಬಂಡವಾಳ ವಿಭಾಗದ ಅಡಿಯಲ್ಲಿ ಅಧ್ಯರ್ಪಣೆ ಆಗಿದೆ. ಉಳಿದ ಉಳಿತಾಯ ₹5,848.71 ಕೋಟಿಗಳು (₹2,998.15 ಕೋಟಿ ರಾಜಸ್ವ ಮತ್ತು ₹2,850.56 ಕೋಟಿ ಬಂಡವಾಳದ ಅಡಿಯಲ್ಲಿ (ಶೇಕಡ 84) ಅಧ್ಯರ್ಪಣೆ ಆಗಿಲ್ಲ. ವಿವರಗಳನ್ನು **ಕೋಷ್ಟಕ–3.8**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–3.8: ನಿರೀಕ್ಷಿತ ಉಳಿತಾಯಗಳನ್ನು ಅಧ್ಯರ್ಪಣೆ ಮಾಡದಿರುವುದು/ಭಾಗಶ: ಮಾಡಿರುವುದು**

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ | | | ಬಂಡವಾಳ | | |
|---|---|---|---|---|---|---|
| | ಉಳಿತಾಯಗಳು | ಅಧ್ಯರ್ಪಣೆ ಮಾಡಿದ ಮೊತ್ತ | ಅಧ್ಯರ್ಪಣೆ ಮಾಡದ ಮೊತ್ತ | ಉಳಿತಾಯಗಳು | ಅಧ್ಯರ್ಪಣೆ ಮಾಡಿದ ಮೊತ್ತ | ಅಧ್ಯರ್ಪಣೆ ಮಾಡದ ಮೊತ್ತ |
| **2019–20** | 1,472.01 | 306.76 | 1,165.25 | 1,223.40 | 80.00 | 1,143.40 |
| **2020–21** | 1,015.73 | 9.93 | 1,005.80 | 498.24 | 0.00 | 498.24 |
| **2021–22** | 1,573.91 | 746.81 | 827.10 | 1,208.92 | 0.00 | 1,208.92 |
| **ಒಟ್ಟು** | 4,061.65 | 1,063.50 | 2,998.15 | 2,930.56 | 80.00 | 2,850.56 |

*ಆಕರ: ಧನವಿನಿಯೋಗ ಲೆಕ್ಕಗಳು*

ಆದಾಗ್ಯೂ, ಉಳಿತಾಯಕ್ಕೆ ಮತ್ತು ಅಧ್ಯರ್ಪಣೆ ಮಾಡದಿರುವುದಕ್ಕೆ ಕಾರಣಗಳು ದಾಖಲೆಯಲ್ಲಿಲ್ಲ.

### 3.7.1.4 ಸತತ ಉಳಿತಾಯಗಳು

ಕರ್ನಾಟಕ ಆಯವ್ಯಯ ಕೈಪಿಡಿ ಕಂಡಿಕೆ 110ರ ಪ್ರಕಾರ ಹಿಂದಿನ ಕಾರ್ಯನಿರ್ವಹಣೆ, ವಿವಿಧ ಯೋಜನೆಗಳ ರಚನೆ/ಅನುಷ್ಠಾನದ ಹಂತ, ಯೋಜನೆಯನ್ನು ನಿಗದಿಪಡಿಸಿದಂತೆ ಅನುಷ್ಠಾನಗೊಳಿಸುವ ಅನುಷ್ಠಾನ ಸಂಸ್ಥೆಗಳ ಸಾಂಸ್ಥಿಕ ಸಾಮರ್ಥ್ಯ, ವೆಚ್ಚ ಮಾಡುವ ಸಂಸ್ಥೆಗಳು ವೆಚ್ಚ ಮಾಡಲು ಇರುವ ಕೊರತೆಗಳು ಮತ್ತು ಬಹುಮುಖ್ಯವಾಗಿ ನಂತರದ ಹಂತಗಳಲ್ಲಿ ಲಭ್ಯವಿರುವ ನಿಧಿಯ ಅಧ್ಯರ್ಪಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಸರ್ಕಾರದ ಸಹಾಯದ ಪ್ರಮಾಣವು ಸ್ವೀಕರಿಸುವವರ ಬಳಿಯಲ್ಲಿ ಬಳಕೆಯಾಗದೆ/ಲೆಕ್ಕಕ್ಕೆ ಸಿಗದೆ ಇರುವ ಇತ್ಯಾದಿ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. **ಕೋಷ್ಟಕ–3.9**ರಲ್ಲಿ ವಿವರಿಸಿದಂತೆ, ಸತತ ಉಳಿತಾಯಗಳನ್ನು ಗಮನಿಸಲಾಯಿತು ಮತ್ತು ಕೈಪಿಡಿಯ ಕಂಡಿಕೆ 110ರ ನಿಬಂಧನೆಗಳನ್ನು ಗಮನಿಸಲಾಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ–3.9: ಸತತ ಉಳಿತಾಯಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ/ಹೆಸರು | 2019–20 | 2020–21 | 2021–22 |
|---|---|---|---|---|
| 1 | 2215–01–198–2–02<br>ಗ್ರಾಮ ಪಂಚಾಯತಿಗಳು (ಕೊಳವೆಬಾವಿಗಳು) | 10.16 | 9.64 | 5.86 |
| 2 | 2215–01–198–6<br>ತಾಲೂಕು ಪಂಚಾಯತಿಗಳಿಗೆ ನೆರವು | 520.20 | 254.18 | 416.01 |
| 3 | 2515–00–196–6<br>ಜಿಲ್ಲಾ ಪಂಚಾಯತಿಗಳು | 19.52 | 0.00 | 39.49 |
| 4 | 2515–00–197–1<br>ತಾಲೂಕು ಪಂಚಾಯತಿಗಳು | 201.80 | 378.24 | 358.24 |
| 5 | 2515–00–800–0–19–014<br>ಇತರೆ ಭತ್ಯೆಗಳು | 8.78 | 23.92 | 30.00 |
| 6 | 4702–00–101–1<br>ನೀರಿನ ಟ್ಯಾಂಕ್‌ಗಳು, ಹೊಸ ಟ್ಯಾಂಕ್‌ಗಳ ನಿರ್ಮಾಣ, ಪಿಕ್‌ಅಪ್‌ಗಳು ಮುಂತಾದವುಗಳು. | 91.35 | 47.13 | 7.17 |
| 7 | 5054–03–337–0–74<br>ಗ್ರಾಮೀಣ ಪ್ರದೇಶದಲ್ಲಿ ರಸ್ತೆ ಕಾಮಗಾರಿಗಳು ನಬಾರ್ಡ್ | 9.99 | 4.79 | 195.07 |

*ಆಕರ: ಅನುದಾನ ವಹಿ*

### 3.7.1.5 ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ನಿಧಿಗಳನ್ನು ಸಂಚಿತ ನಿಧಿಯ ಹೊರಗೆ ನಿರ್ಬಂಧಿಸಿರುವುದು.

ಪ್ರಸ್ತುತ ಹಣಕಾಸಿನ ವರ್ಷದಲ್ಲಿ ವಾಸ್ತವವಾಗಿ ಬಳಸದೇ ವೆಚ್ಚವನ್ನು ವಿಧಿಸುವುದು ಸಂಬಂಧಿತ ಹಣಕಾಸು ವರ್ಷಗಳಲ್ಲಿ ಹಣಕಾಸಿನ ಸೂಚಕಗಳ ಅಸ್ಪಷ್ಟತೆಗೆ ಕಾರಣವಾಗುತ್ತದೆ.

2021–22ರಲ್ಲಿ ಲೆಕ್ಕ ಶೀರ್ಷಿಕೆ 4215–01–102–2–01ರಲ್ಲಿನ ಆಯವ್ಯಯ ಮತ್ತು ಪರಿಷ್ಕೃತ ಅಂದಾಜುಗಳು **ಕೋಷ್ಟಕ–3.10**ರಲ್ಲಿ ಸೂಚಿಸಿದಂತೆ ಇದೆ.

**ಕೋಷ್ಟಕ–3.10: ಅನುದಾನಗಳು, ವೆಚ್ಚ ಮತ್ತು ಬ್ಯಾಂಕ್ ಖಾತೆಗೆ ವರ್ಗಾವಣೆಗಳ ವಿವರಗಳು**

(₹ ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ/ಹೆಸರು | ಆಯವ್ಯಯ ಅಂದಾಜು | ಪರಿಷ್ಕೃತ ಅಂದಾಜು | ವೆಚ್ಚ | ಉಳಿತಾಯ* | ಖಾತೆಯಲ್ಲಿ ಜಮೆ ಮಾಡಿದ್ದು (ವೆಚ್ಚವೆಂದು ತೋರಿಸಲಾಗಿದೆ) |
|---|---|---|---|---|---|
| 4215–01–102–2–01–132 ಬಂಡವಾಳ ವೆಚ್ಚಗಳು | 514.85 | 514.85 | 513.14 | 1.71 | 63.82 |
| 4215–01–102–2–01–133 ವಿಶೇಷ ಅಭಿವೃದ್ಧಿ ಯೋಜನೆ | 371.61 | 371.61 | 368.68 | 2.93 | 32.76 |
| 4215–01–102–2–01–422 ಪರಿಶಿಷ್ಟ ಜಾತಿ ಉಪಯೋಜನೆ | 302.95 | 75.74 | 75.43 | 0.31 | 2.77 |
| 4215–01–102–2–01–423 ಗಿರಿಜನ ಉಪಯೋಜನೆ | 60.59 | 15.14 | 15.45 | –0.31 | 0.41 |
| ಒಟ್ಟು | 1,250.00 | 977.34 | 972.70 | 4.64 | 99.76 |

* ಉಳಿತಾಯಗಳನ್ನು ಪರಿಷ್ಕೃತ ಅಂದಾಜಿನ ಮೇಲೆ ಲೆಕ್ಕ ಹಾಕಲಾಗಿದೆ.

ಅಂದಾಜಿಗೆ ಪ್ರತಿಯಾಗಿ ಮಾರ್ಚ್ 2022ರ ಅಂತ್ಯಕ್ಕೆ ವೆಚ್ಚವು ₹972.70 ಕೋಟಿಗಳಷ್ಟಿತ್ತು. ಆದಾಗ್ಯೂ, ದಾಖಲೆಗಳಿಂದ (ಸರ್ಕಾರಿ ಆದೇಶ ದಿನಾಂಕ 30–03–2022) ₹99.76 ಕೋಟಿಗಳಷ್ಟು ಅನುದಾನವು ಲೋಪವಾಗುವುದನ್ನು ತಪ್ಪಿಸಲು ಖಜಾನೆಯಿಂದ ಸೆಳೆಯಲಾಯಿತು ಮತ್ತು ಜಲಜೀವನ್ ಮಿಷನ್ ಕರ್ನಾಟಕ ಎಸ್ಕ್ರೋ ಖಾತೆಯಲ್ಲಿ ಜಮೆ ಮಾಡಲಾಗಿತ್ತು. ಹೀಗೆ, ವಾಸ್ತವಿಕ ಬಂಡವಾಳ ವೆಚ್ಚವನ್ನು ₹99.76 ಕೋಟಿಗಳಷ್ಟು ಹೆಚ್ಚಿಗೆ ತೋರಿಸಲಾಗಿತ್ತು.

### 3.7.1.6 ಆಯವ್ಯಯ ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ಹಣದ ವರ್ಗಾವಣೆ

ಕೋಲಾರ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ (ಪಿಆರ್ಇಡಿ) ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಮೂಲಕ ಕಾರ್ಯಗತಗೊಳಿಸಲು ಕೋಲಾರ ಜಿಲ್ಲಾ ಪಂಚಾಯಿತಿಯು ವಿವಿಧ ಇಲಾಖಾ ಸಿವಿಲ್ ಕಾಮಗಾರಿಗಳನ್ನು ಅನುಮೋದಿಸಿತು (ಸೆಪ್ಟಂಬರ್ 2020). ಕಾಮಗಾರಿಗಳ ಅಂದಾಜು ವೆಚ್ಚ ₹1.21 ಕೋಟಿಗಳಷ್ಟಾಗಿತ್ತು.

ಕೋಲಾರ ಪಿಆರ್ಇಡಿಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಕೋಲಾರ ಜಿಲ್ಲಾಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ (ಸಿಇಒ) ಪತ್ರ ಬರೆದು (ಜನವರಿ 2020) ₹1.21 ಕೋಟಿಗಳನ್ನು ಖಜಾನೆಯಿಂದ ಸೆಳೆದು ಟೆಂಡರ್ ಆಹ್ವಾನಿಸುವವರೆಗೂ ಅದನ್ನು ಠೇವಣಿ ಕೊಡುಗೆ ಖಾತೆ ಅಥವಾ ಕೆಆರ್ಐಡಿಎಲ್‌ನಲ್ಲಿ ಜಮೆ ಮಾಡುವಂತೆ ವಿನಂತಿಸಿದರು. ಇದಕ್ಕೆ ಕೋಲಾರ ಜಿಲ್ಲಾ ಪಂಚಾಯಿತಿಯ ಸಿಇಒರವರು ಅನುಮೋದನೆ ನೀಡಿದರು ಮತ್ತು ಕೋಲಾರ ಪಿಆರ್ಇಡಿಯ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ 10 ಕಾಮಗಾರಿಗಳನ್ನು ಒಳಗೊಂಡ ₹1.07 ಕೋಟಿಯನ್ನು ಕೆಆರ್ಐಡಿಎಲ್, ಕೋಲಾರಕ್ಕೆ ವರ್ಗಾಯಿಸಲು ಸೂಚನೆ ನೀಡಿದರು (ಮಾರ್ಚ್ 2020).

ನಂತರ, ಕೋಲಾರ ಕೆಆರ್ಐಡಿಎಲ್‌ನ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಕೋಲಾರ ಜಿಲ್ಲಾಪಂಚಾಯತಿಯ ಸಿಇಒರವರಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅಂದಾಜುಪಟ್ಟಿಗಳನ್ನು ಅನುಮೋದಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದರು (ಆಗಸ್ಟ್ 2020). ಆದರೆ, ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆಯ ಪ್ರಕಾರ ಈ ಕಾಮಗಾರಿಗಳನ್ನು ಕೋಲಾರ ಪಿಆರ್ಇಡಿಯ ಇಇರವರು ನಿರ್ವಹಿಸಬೇಕು ಮತ್ತು ಅವರಿಗೆ ₹1.07 ಕೋಟಿ ಅನುದಾನವನ್ನು ಹಿಂತಿರುಗಿಸಲು ಕೋಲಾರದ ಕೆಆರ್ಐಡಿಎಲ್‌ನ ಕಾರ್ಯನಿರ್ವಾಹಕ

ಇಂಜಿನಿಯರ್ ರವರಿಗೆ ಕೋಲಾರ ಜಿಲ್ಲಾಪಂಚಾಯಿತಿಯ ಸಿಇಒರವರು ಕಛೇರಿ ಅಧಿಸೂಚನೆ (ಅಕ್ಟೋಬರ್ 2020) ಮೂಲಕ (ನವೆಂಬರ್ 2020) ತಿಳಿಸಿದರು.

ಅದರಂತೆ, ಕೆಆರ್‌ಐಡಿಎಲ್ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಕೇವಲ ಅಸಲು ಮೊತ್ತವಾದ ₹1.07 ಕೋಟಿಗಳನ್ನು ಡಿಸೆಂಬರ್ 2020ರಲ್ಲಿ ಹಿಂತಿರುಗಿಸಿದರು.

ಇದರಿಂದ ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ಕೆಆರ್‌ಐಡಿಎಲ್‌ಗೆ ವರ್ಗಾಯಿಸಲಾಯಿತು ಎಂಬುದು ಸ್ಪಷ್ಟವಾಗಿದೆ.

ಆರ್ಥಿಕ ಇಲಾಖೆಯು ಸರ್ಕಾರಿ ಆದೇಶದ (ಜುಲೈ 2003) ಮೂಲಕ ಎಲ್ಲಾ ನಿಗಮಗಳು/ಕಂಪನಿಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳಿಗೆ ಸರ್ಕಾರಿ ಹಣದ ಮೇಲಿನ ಬಡ್ಡಿಯನ್ನು ಲೆಕ್ಕ ಶೀರ್ಷಿಕೆ "0049 ಬಡ್ಡಿ ಸ್ವೀಕೃತಿ" ಗೆ ಜಮೆ ಮಾಡಲು ನಿರ್ದೇಶಿಸಿತ್ತು. ಹಾಗೆ ಗಳಿಸಿದ ಬಡ್ಡಿಯನ್ನು ಸಂಸ್ಥೆಗಳ ಯಾವುದೇ ವೆಚ್ಚಗಳಿಗೆ ಬಳಸಬಾರದೆಂದೂ ತಿಳಿಸಲಾಗಿತ್ತು. ಇದನ್ನು ಸರ್ಕಾರವು ತನ್ನ ಸುತ್ತೋಲೆಯ ಮೂಲಕವೂ (ಆಗಸ್ಟ್ 2019) ಪುನರುಚ್ಛರಿಸಿತ್ತು. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಕೋಲಾರ ಕೆಆರ್‌ಐಡಿಎಲ್‌ನ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಹಣವನ್ನು ಒಂಬತ್ತು ತಿಂಗಳುಗಳ ಕಾಲ ಉಳಿಸಿಕೊಂಡು ಕೋಲಾರ ಪಿಆರ್‌ಇಡಿಯ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಬಡ್ಡಿಯನ್ನು ಹಿಂತಿರುಗಿಸದೇ ಕೇವಲ ₹1.07 ಕೋಟಿ ಅಸಲನ್ನು ಮಾತ್ರ ಹಿಂತಿರುಗಿಸಿದ್ದರು.

#### 3.7.1.7 ವೆಚ್ಚದ ಒತ್ತಡ

ಹಣಕಾಸು ಇಲಾಖೆಯು ದಿನಾಂಕ 09 ಸೆಪ್ಟೆಂಬರ್ 2004 ರಂದು ಹೊರಡಿಸಿದ ಸೂಚನೆಯ ಕಂಡಿಕೆ–6ರ ಪ್ರಕಾರ, ಹಣ ಬಿಡುಗಡೆಗಳು, ಹಣ ತೆಗೆತ ಮತ್ತು ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದಂತೆ, ಆಡಳಿತ ಇಲಾಖೆಗಳು ಮತ್ತು ಇಲಾಖೆಗಳ ಮುಖ್ಯಸ್ಥರು ಆರ್ಥಿಕ ವರ್ಷದ ವೆಚ್ಚವನ್ನು ಸೂಕ್ತ ಶ್ರದ್ಧೆಯಿಂದ ಮತ್ತು ಲಭ್ಯವಿರುವ ಅನುದಾನದಲ್ಲಿ ಯೋಜಿಸಬೇಕು. ಮಾರ್ಚ್‌ನಲ್ಲಿ ಬಿಲ್‌ಗಳ ಒಗ್ಗೂಡಿಸುವುದು ಮತ್ತು ವೆಚ್ಚದ ಒತ್ತಡವನ್ನು ತಪ್ಪಿಸಬೇಕು. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಆಗಬಹುದಾದ ವೆಚ್ಚಗಳಿಗೆ ಅಗತ್ಯವಿರುವ ಮಟ್ಟದಲ್ಲಿ ಅಗತ್ಯ ಅನುಮೋದನೆಗಳನ್ನು ಪಡೆದ ನಂತರ ಆಡಳಿತಾತ್ಮಕ ಆದೇಶಗಳನ್ನು ಸಾಕಷ್ಟು ಮುಂಚಿತವಾಗಿ ನೀಡಬೇಕಿತ್ತು. ಕೊನೆಯ ತ್ರೈಮಾಸಿಕದಲ್ಲಿ ವಿಶೇಷವಾಗಿ ಮಾರ್ಚ್ ತಿಂಗಳಲ್ಲಿ ವೆಚ್ಚದ ವಿಪರೀತ ಒತ್ತಡವನ್ನು ಗಮನಿಸಲಾಯಿತು. ಒಟ್ಟು ವೆಚ್ಚಕ್ಕೆ ಹೋಲಿಸಿದರೆ ಕೊನೆಯ ತ್ರೈಮಾಸಿಕ ಮತ್ತು ಮಾರ್ಚ್‌ನಲ್ಲಿನ ವೆಚ್ಚದ ಶೇಕಡಾವಾರು ಪ್ರಮಾಣವು ಅಧಿಕವಾಗಿರುವ ಉದ್ದೇಶ–ಶೀರ್ಷಿಕೆವಾರು ವಿವರಗಳನ್ನು **ಅನುಬಂಧ–3.16**ರಲ್ಲಿ ನೀಡಲಾಗಿದೆ. ಕೊನೆಯ ತ್ರೈಮಾಸಿಕದಲ್ಲಿ ವೆಚ್ಚದ ಶೇಕಡಾವಾರು 50ರಿಂದ 100ರಷ್ಟಿತ್ತು ಮತ್ತು ಮಾರ್ಚ್‌ನಲ್ಲಿ 48ರಿಂದ 100ರ ನಡುವೆ ಇರುವುದನ್ನು ಅನುಬಂಧದಿಂದ ಗಮನಿಸಬಹುದು, ಇದು ಹಣಕಾಸಿನ ಔಚಿತ್ಯದ ಉಲ್ಲಂಘನೆಯನ್ನು ಸೂಚಿಸುತ್ತದೆ.

### *3.7.2 ಅನುದಾನ ಸಂಖ್ಯೆ–20ರ ಸಮೀಕ್ಷೆ – ಲೋಕೋಪಯೋಗಿ ಇಲಾಖೆ*

#### 3.7.2.1 ಪೀಠಿಕೆ

ಲೋಕೋಪಯೋಗಿ, ಬಂದರು ಮತ್ತು ಒಳಾಡಳಿತ ಜಲಸಾರಿಗೆ ಇಲಾಖೆಯು ಆಡಳಿತಾತ್ಮಕ ಇಲಾಖೆಯಾಗಿದೆ ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಜವಾಬ್ದಾರಿಯನ್ನು ಹೊಂದಿದೆ. ರಾಜ್ಯದ ಸಾಮಾಜಿಕ, ಆರ್ಥಿಕ ಬೆಳವಣಿಗೆಗಾಗಿ ಸುರಕ್ಷಿತ, ತಾಂತ್ರಿಕವಾಗಿ ಸದೃಢ ಮತ್ತು ಮಿತವ್ಯಯಕಾರಿ ರಸ್ತೆ ಜಾಲದ ಯೋಜನೆ, ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆ; ದಕ್ಷ ಮತ್ತು ಹೆಚ್ಚು ಗುಣಮಟ್ಟದ ಸಾರ್ವಜನಿಕ ಕಟ್ಟಡಗಳು ಮತ್ತು ಸಣ್ಣ ಬಂದರುಗಳು ಮತ್ತು ಅಗತ್ಯವಿದ್ದಂತೆ ಒಳಾಡಳಿತ ಜಲ ಸಾರಿಗೆಯ ಉದ್ದೇಶವನ್ನು ವಹಿಸಿಕೊಡಲಾಗಿದೆ.

ಅನುದಾನ ಸಂಖ್ಯೆ 20–ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಯವ್ಯಯ ಕಾರ್ಯವಿಧಾನ ಮತ್ತು ವೆಚ್ಚದ ಮೇಲಿನ ನಿಯಂತ್ರಣದ ಸಮೀಕ್ಷೆಯು ಈ ಕೆಳಗಿನವುಗಳನ್ನು ತೋರಿಸಿವೆ:

### 3.7.2.2 ಆಯವ್ಯಯ ಮತ್ತು ವೆಚ್ಚ

ಆಯವ್ಯಯ ಅವಕಾಶ, ವಾಸ್ತವ ವಿತರಣೆ ಮತ್ತು ಉಳಿತಾಯದ ಒಟ್ಟಾರೆ ಸ್ಥಿತಿಯನ್ನು **ಕೋಷ್ಟಕ–3.11**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.11: ಆಯವ್ಯಯ ಮತ್ತು ವೆಚ್ಚ**

**(₹ ಕೋಟಿಗಳಲ್ಲಿ)**

| ವರ್ಷ | ವಿಭಾಗ | ಆಯವ್ಯಯ ಅವಕಾಶ | | ಒಟ್ಟು | ವೆಚ್ಚ | ಬಳಕೆ ಮಾಡದ ವೆಚ್ಚ ಮತ್ತು ಶೇಕಡಾವಾರು |
|---|---|---|---|---|---|---|
| | | ಮೂಲ | ಪೂರಕ | | | |
| **2019–20** | ರಾಜಸ್ವ (ಪುರಸ್ಕೃತ) | 3,218.82 | 17.18 | 3,236.00 | 2,639.32 | 596.68(18) |
| | ರಾಜಸ್ವ (ಪ್ರಭೃತ) | *39.81* | *0.00* | *39.81* | *12.00* | *27.81(70)* |
| | ಬಂಡವಾಳ (ಪುರಸ್ಕೃತ) | 7,757.60 | 550.00 | 8,307.60 | 6,919.12 | 1,388.48(17) |
| | ಬಂಡವಾಳ (ಪ್ರಭೃತ) | *14.50* | *0.00* | *14.50* | *14.50* | *0.00(0)* |
| **2020–21** | ರಾಜಸ್ವ (ಪುರಸ್ಕೃತ) | 2,857.32 | 0.06 | 2,857.38 | 2,646.37 | 211.01(7) |
| | ರಾಜಸ್ವ (ಪ್ರಭೃತ) | *53.49* | *0.00* | *53.49* | *11.83* | *41.66(78)* |
| | ಬಂಡವಾಳ (ಪುರಸ್ಕೃತ) | 8,170.51 | 1,732.00 | 9,902.51 | 9,043.17 | 859.34(9) |
| | ಬಂಡವಾಳ (ಪ್ರಭೃತ) | *16.50* | *0.00* | *16.50* | *16.50* | *0.00(0)* |
| **2021–22** | ರಾಜಸ್ವ (ಪುರಸ್ಕೃತ) | 2,786.89 | 1.33 | 2,788.22 | 2,673.69 | 114.53(4) |
| | ರಾಜಸ್ವ (ಪ್ರಭೃತ) | *51.73* | *0.00* | *51.73* | *23.10* | *28.63(55)* |
| | ಬಂಡವಾಳ (ಪುರಸ್ಕೃತ) | 7,048.69 | 870.01 | 7,918.70 | 7,917.20 | 1.50(0) |
| | ಬಂಡವಾಳ (ಪ್ರಭೃತ) | *18.50* | *0.00* | *18.50* | *18.50* | *0.00(0)* |

*ಆಕರ: ಧನವಿನಿಯೋಗ ಲೆಕ್ಕಗಳು*

ಮೇಲಿನ ಕೋಷ್ಟಕದಿಂದ ನೋಡಿದಂತೆ, ರಾಜಸ್ವ ವಿಭಾಗದ ಅಡಿಯಲ್ಲಿ ಬಳಕೆಯಾಗದ ಅವಕಾಶವು ಶೇಕಡ ನಾಲ್ಕು ಮತ್ತು 70ರ ನಡುವೆ ಮತ್ತು ಬಂಡವಾಳ ವಿಭಾಗದ ಅಡಿಯಲ್ಲಿ ಶೇಕಡ 17ರ ವ್ಯಾಪ್ತಿಯವರೆಗೂ ಇದ್ದಿತು.

### 3.7.2.3 ನಿರೀಕ್ಷಿತ ಉಳಿತಾಯಗಳನ್ನು ಅಧ್ಯರ್ಪಣೆ ಮಾಡದಿರುವುದು/ಭಾಗಶ: ಅಧ್ಯರ್ಪಣೆ ಆಗಿರುವುದು.

ಕರ್ನಾಟಕ ಆಯವ್ಯಯ ಕೈಪಿಡಿ 1975ರ ಕಂಡಿಕೆ 264ರ ಅನ್ವಯ, ಉಳಿತಾಯವನ್ನು ನಿರೀಕ್ಷಿಸಿದಾಗ ವೆಚ್ಚ ಮಾಡುವ ಇಲಾಖೆಗಳು ಅನುದಾನ/ವಿನಿಯೋಗ ಅಥವಾ ಅದರ ಭಾಗವನ್ನು ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕಾಗುತ್ತದೆ. ಇದಲ್ಲದೆ, ಆರ್ಥಿಕ ಇಲಾಖೆಯು ಇತರ ಅಗತ್ಯವಿರುವ ಯೋಜನೆಗಳಲ್ಲಿ ನಿರೀಕ್ಷಿತ ಉಳಿತಾಯದ ಮೊತ್ತವನ್ನು ಸಮರ್ಥವಾಗಿ ಮರುಹಂಚಿಕೆ ಮಾಡಲು ಅನವು ಮಾಡಿಕೊಡಲು ಹಣಕಾಸಿನ ವರ್ಷದ ಅಂತ್ಯಕ್ಕೆ ಕಾಯದೆ ಉಳಿಕೆಯನ್ನು ನಿರೀಕ್ಷಿಸಿದ ತಕ್ಷಣ ಆಧ್ಯರ್ಪಣೆ ಮಾಡಬೇಕು. 2019–20ರಿಂದ 2021–22ರ ಅವಧಿಯಲ್ಲಿ ಒಟ್ಟು ₹3,269.64 ಕೋಟಿ ಉಳಿಕೆಯಲ್ಲಿ (₹1,020.32 ಕೋಟಿ ರಾಜಸ್ವ ಮತ್ತು ₹2,249.32 ಕೋಟಿ ಬಂಡವಾಳದ ಅಡಿಯಲ್ಲಿ), ₹595.66 ಕೋಟಿ ರಾಜಸ್ವ ಮತ್ತು ₹1,496.13 ಕೋಟಿ ಬಂಡವಾಳ ವಿಭಾಗದ ಅಡಿಯಲ್ಲಿ ಅಧ್ಯರ್ಪಣೆ ಆಗಿದೆ. ಬಾಕಿ ಉಳಿತಾಯವಾದ ₹1,177.85 ಕೋಟಿ (₹424.66 ಕೋಟಿ ರಾಜಸ್ವ ಮತ್ತು ₹753.19 ಕೋಟಿ ಬಂಡವಾಳದ ಅಡಿಯಲ್ಲಿ) (ಶೇಕಡ 36) ಅಧ್ಯರ್ಪಣೆ ಆಗಿಲ್ಲ. ವಿವರಗಳನ್ನು **ಕೋಷ್ಟಕ –3.12**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3.12: ನಿರೀಕ್ಷಿತ ಉಳಿತಾಯಗಳು ಅಧ್ಯರ್ಪಣೆ ಆಗದಿರುವುದು/ಭಾಗಶಃ ಆಗಿರುವುದು**

**(₹ ಕೋಟಿಗಳಲ್ಲಿ)**

| ವರ್ಷ | ರಾಜಸ್ವ | | | ಬಂಡವಾಳ | | |
|---|---|---|---|---|---|---|
| | ಉಳಿತಾಯಗಳು | ಅಧ್ಯರ್ಪಣೆ ಮಾಡಿದ ಮೊತ್ತ | ಅಧ್ಯರ್ಪಣೆ ಮಾಡದ ಮೊತ್ತ | ಉಳಿತಾಯಗಳು | ಅಧ್ಯರ್ಪಣೆ ಮಾಡಿದ ಮೊತ್ತ | ಅಧ್ಯರ್ಪಣೆ ಮಾಡದ ಮೊತ್ತ |
| **2019–20** | 624.49 | 499.14 | 125.35 | 1,388.48 | 1,307.59 | 80.89 |
| **2020–21** | 252.67 | 27.61 | 225.06 | 859.34 | 187.33 | 672.01 |
| **2021–22** | 143.16 | 68.91 | 74.25 | 1.50 | 1.21 | 0.29 |
| **ಒಟ್ಟು** | **1,020.32** | **595.66** | **424.66** | **2,249.32** | **1,496.13** | **753.19** |

*ಆಕರ: ಧನವಿನಿಯೋಗ ಲೆಕ್ಕಗಳು*

### 3.7.2.4 ಸತತ ಉಳಿತಾಯಗಳು

ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 110ರ ಪ್ರಕಾರ ಹಿಂದಿನ ಕಾರ್ಯನಿರ್ವಹಣೆ, ವಿವಿಧ ಯೋಜನೆಗಳ ರಚನೆ/ಅನುಷ್ಠಾನದ ಹಂತ, ಯೋಜನೆಯನ್ನು ನಿಗದಿಪಡಿಸಿದಂತೆ ಅನುಷ್ಠಾನಗೊಳಿಸುವ ಅನುಷ್ಠಾನ ಸಂಸ್ಥೆಗಳ ಸಾಂಸ್ಥಿಕ ಸಾಮರ್ಥ್ಯ, ವೆಚ್ಚ ಮಾಡುವ ಸಂಸ್ಥೆಗಳು ವೆಚ್ಚ ಮಾಡಲು ಇರುವ ಕೊರತೆಗಳು ಮತ್ತು ಬಹುಮುಖ್ಯವಾಗಿ ನಂತರದ ಹಂತಗಳಲ್ಲಿ ಲಭ್ಯವಿರುವ ನಿಧಿಯ ಅಧ್ಯರ್ಪಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಸರ್ಕಾರದ ಸಹಾಯದ ಪ್ರಮಾಣವು ಸ್ವೀಕರಿಸುವವರ ಬಳಿಯಲ್ಲಿ ಬಳಕೆಯಾಗದೆ/ಲೆಕ್ಕಕ್ಕೆ ಸಿಗದೆ ಇರುವ ಇತ್ಯಾದಿ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. 2019–20ರಿಂದ 2021–22ರಲ್ಲಿನ **ಕೋಷ್ಟಕ –3.13**ರಲ್ಲಿ ವಿವರಿಸಿದಂತೆ ಸತತ ಉಳಿತಾಯಗಳು ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 110ರ ನಿಬಂಧನೆಗಳನ್ನು ಗಮನಿಸಲಾಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ 3.13: ಸತತ ಉಳಿತಾಯಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ/ಹೆಸರು | 2019–20 | 2020–21 | 2021–22 |
|---|---|---|---|---|
| 1 | 2059-80-001-0-09<br>ಕಾರ್ಯಾಚರಣೆ (ಸಿ&ಬಿ ಉತ್ತರ) | 17.37 | 15.34 | 1.67 |
| 2 | 2059-80-053-1<br>ಕಟ್ಟಡಗಳು (ವಿಶೇಷ ದುರಸ್ತಿಗಳು) | 23.20 | 20.14 | 2.90 |
| 3 | 2059–80–800–0–07–014<br>ಇತರೆ ಭತ್ಯೆಗಳು | 23.31 | 8.60 | 18.60 |
| 4 | 3054–80–190–0–01–240<br>ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಪ್ರಭೃತ) ಋಣ ಸೇವೆಗಳು | *27.81* | *41.66* | *28.63* |
| 5 | 3054–80–797–0–02<br>ಸಿಆರ್‌ಎಫ್‌ನಿಂದ ಠೇವಣಿ ಹೆಡ್ ಸಬ್‌ವೆನ್ಷನ್‌ಗಳಿಗೆ ಅನುದಾನ ವರ್ಗಾವಣೆ | 125.43 | 73.01 | 57.10 |

*ಆಕರ: ಅನುದಾನ ವಹಿ*

### 3.7.2.5 ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಲ್ಲಿ ರಿಯಾಯಿತಿದಾರರಿಂದ ಮರುಪಾವತಿಸಲಾದ ಸ್ವತಂತ್ರ ಇಂಜಿನೀಯರಿಂಗ್ ಸಲಹಾ ಶುಲ್ಕದ ತಪ್ಪಾದ ಜಮೆ

ರಿಯಾಯಿತಿದಾರರ ಒಪ್ಪಂದದ ವಿಧಿ 21ರ ಪ್ರಕಾರ ಪ್ರಾಧಿಕಾರವು ಒಪ್ಪಂದದ ದಿನಾಂಕದಿಂದ 90 ದಿನಗಳೊಳಗೆ ಒಂದು ಸಲಹಾ ಇಂಜಿನೀಯರಿಂಗ್ ಸಂಸ್ಥೆಯನ್ನು ನೇಮಿಸಬೇಕು. ಸಂಭಾವನೆ ಮತ್ತು ಸ್ವತಂತ್ರ ಇಂಜಿನೀಯರ್‌ನ ಸಮಾಲೋಚನಾ ವೆಚ್ಚಗಳನ್ನು ಮೊದಲು ಪ್ರಾಧಿಕಾರದಿಂದ ಪಾವತಿಸಬೇಕು ಮತ್ತು ಅಂತಹ ಸಂಭಾವನೆ ಮತ್ತು ವೆಚ್ಚಗಳ ಅರ್ಧದಷ್ಟನ್ನು ಪ್ರಾಧಿಕಾರದಿಂದ ವೆಚ್ಚದ ವಿವರಣಾಪಟ್ಟಿ ಸ್ವೀಕರಿಸಿದ 15 ದಿನಗಳ ಒಳಗೆ ರಿಯಾಯಿತಿದಾರರು ಪ್ರಾಧಿಕಾರಕ್ಕೆ ಮರುಪಾವತಿಸಬೇಕು. ಸ್ವತಂತ್ರ ಇಂಜಿನೀಯರಿಂಗ್ ಸಲಹೆಗಾರರ ಶುಲ್ಕಗಳ (ಒಟ್ಟು ಇನ್ವಾಯ್ಸ್ ಮೊತ್ತದ ಶೇಕಡ 50) ರಿಯಾಯಿತಿದಾರರ ಪಾಲಿಗೆ ಸಂಬಂಧಿಸಿದ ಸ್ವೀಕೃತಿಗಳ ಸಮೀಕ್ಷೆಯಲ್ಲಿ 2021–22ರ ವರ್ಷದಲ್ಲಿ ₹11 ಕೋಟಿಗಳ ಮೊತ್ತವನ್ನು ಸ್ವೀಕರಿಸಲಾಗಿತ್ತು ಎಂಬುದನ್ನು ಗಮನಿಸಲಾಯಿತು. ಈ ಮೊತ್ತವನ್ನು "ರಸ್ತೆ ಅಗೆಯುವುದು ಮತ್ತು ಇತರೆ ಸ್ವೀಕೃತಿಗಳಿಗೆ" ಸಂಬಂಧಿಸಿದ ರಾಜಸ್ವ ಸ್ವೀಕೃತಿ ಲೆಕ್ಕ ಶೀರ್ಷಿಕೆಗೆ ತಪ್ಪಾಗಿ ಜಮೆ ಮಾಡಲಾಗಿತ್ತು. ಸ್ವತಂತ್ರ ಇಂಜಿನೀಯರ್‌ನ ಸಮಾಲೋಚನಾ ಶುಲ್ಕಗಳಿಗೆ ಸಂಬಂಧಿಸಿದ ಈ ಸ್ವೀಕೃತಿಯು ರಾಜಸ್ವವಲ್ಲದ್ದರಿಂದ ಅದನ್ನು ಬಂಡವಾಳ ಶೀರ್ಷಿಕೆಯಲ್ಲಿ ಹೆಚ್ಚಿನ ಪಾವತಿಯ ವಸೂಲಾತಿ ಎಂದು ಜಮೆ ಮಾಡಬೇಕಿತ್ತು. ಹೀಗೆ ಸ್ವತಂತ್ರ ಇಂಜಿನೀಯರ್‌ನ ಸಮಾಲೋಚನಾ ಶುಲ್ಕದ ತಪ್ಪಾದ ಜಮೆಯು ವೆಚ್ಚ ಮತ್ತು ರಾಜಸ್ವವನ್ನು ₹11.28 ಕೋಟಿಗಳಷ್ಟು ಹೆಚ್ಚುಮಾಡಲು ಕಾರಣವಾಯಿತು.

### 3.7.2.6 ವೆಚ್ಚದ ಒತ್ತಡ

ಹಣದ ಬಿಡುಗಡೆಗಳು, ಹಣ ತೆಗೆತ, ಮತ್ತು ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಇಲಾಖೆಗಳು ಮತ್ತು ಇಲಾಖಾ ಮುಖ್ಯಸ್ಥರು, ಆರ್ಥಿಕ ವರ್ಷದ ವೆಚ್ಚವನ್ನು ಸರಿಯಾದ ರೀತಿಯಿಂದ 9 ಸೆಪ್ಟೆಂಬರ್ 2004ರಂದು ಆರ್ಥಿಕ ಇಲಾಖೆಯು ನೀಡಿದ ಸೂಚನೆಯಂತೆ ಕಂಡಿಕೆ–6ರ ಪ್ರಕಾರ ಮತ್ತು ಲಭ್ಯವಿರುವ ಅನುದಾನದಲ್ಲಿ ಯೋಜಿಸಬೇಕಾಗಿದೆ. ಮಾರ್ಚ್ ತಿಂಗಳಿನ ಬಿಲ್‌ಗಳ ಒಗ್ಗೂಡಿಸುವಿಕೆ ಮತ್ತು ವೆಚ್ಚದ ಒತ್ತಡವನ್ನು ತಪ್ಪಿಸಬೇಕಾಗಿದೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಆಗಬಹುದಾದ ವೆಚ್ಚಗಳಿಗೆ ಅಗತ್ಯವಿರುವ ಮಟ್ಟದಲ್ಲಿ ಅಗತ್ಯ ಅನುಮೋದನೆಗಳನ್ನು ಪಡೆದ ನಂತರ ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿ ಹೊರಡಿಸ ಬೇಕಾಗಿದೆ. ಕೊನೆಯ ತ್ರೈಮಾಸಿಕದಲ್ಲಿ ವಿಶೇಷವಾಗಿ ಮಾರ್ಚ್ ತಿಂಗಳಲ್ಲಿ ವೆಚ್ಚದ ಒತ್ತಡದ ಹೆಚ್ಚಳವನ್ನು ಗಮನಿಸಲಾಗಿದೆ ಮತ್ತು ಉದ್ದೇಶ ಶೀರ್ಷಿಕೆವಾರು 2021–22ರ ಅವಧಿಯಲ್ಲಿ ಮಾಡಿದ ಒಟ್ಟು ವೆಚ್ಚಕ್ಕೆ ಹೋಲಿಸಿದರೆ ಕೊನೆಯ ತ್ರೈಮಾಸಿಕದಲ್ಲಿ ವಿಶೇಷವಾಗಿ ಮಾರ್ಚ್ ತಿಂಗಳಲ್ಲಿ ವೆಚ್ಚವು ಹೆಚ್ಚಳವಾಗಿರುವ, ಶೇಕಡಾವಾರು ವೆಚ್ಚದ ಪ್ರಮಾಣದ ವಿವರಗಳನ್ನು **ಅನುಬಂಧ–3.17**ರಲ್ಲಿ ವಿವರಿಸಲಾಗಿದೆ.

ಅನುಬಂಧದಿಂದ ನೋಡಿದಂತೆ, ಕೊನೆಯ ತ್ರೈಮಾಸಿಕದಲ್ಲಿನ ವೆಚ್ಚವು ಶೇಕಡ 51ರಿಂದ 97ರ ವ್ಯಾಪ್ತಿಯಲ್ಲಿತ್ತು ಮತ್ತು ಮಾರ್ಚ್‌ನಲ್ಲಿ ಶೇಕಡ 57 ಮತ್ತು 100ರ ನಡುವಿನ ವ್ಯಾಪ್ತಿಯಲ್ಲಿದ್ದು ಹಣಕಾಸಿನ ಔಚಿತ್ಯತೆಯ ಉಲ್ಲಂಘನೆಯನ್ನು ಸೂಚಿಸುತ್ತದೆ.

ಎರಡೂ ಅನುದಾನಗಳಲ್ಲಿ ನಿರಂತರ ಉಳಿತಾಯ, ನಿರೀಕ್ಷಿತ ಉಳಿತಾಯವನ್ನು ಅಧ್ಯರ್ಪಿಸದಿರುವುದು, ವೆಚ್ಚದ ಒತ್ತಡ ಇತ್ಯಾದಿಗಳನ್ನು ಗಮನಿಸಲಾಯಿತು. ಈ ಎರಡು ಅನುದಾನಗಳಿಗೆ ಆಯವ್ಯಯ ತಯಾರಿಕೆಯ ಬಗ್ಗೆ ಸೂಕ್ತವಾದ ಕಾಳಜಿಯನ್ನು ಕಾರ್ಯಕ್ರಮಗಳು/ಯೋಜನೆಗಳಿಗೆ ಆದ್ಯತೆ ನೀಡುವ ಮೂಲಕ ಸರ್ಕಾರವು ತೆಗೆದುಕೊಳ್ಳುತ್ತಿಲ್ಲ ಎಂಬ ಅಂಶವನ್ನು ಇದು ಸೂಚಿಸುತ್ತದೆ. ಇದು ವರ್ಷಗಳಲ್ಲಿ ನಿರಂತರ ಉಳಿತಾಯಕ್ಕೆ ಕಾರಣವಾಗುತ್ತದೆ. ಮೇಲಿನ ಅನುದಾನಗಳ ವಿಮರ್ಶೆಯಲ್ಲಿ ಸೂಚಿಸಿದಂತೆ ಇವು ದೃಷ್ಟಾಂತ ಪ್ರಕರಣಗಳಾಗಿವೆ. ಸರ್ಕಾರವು ಇತರ ಅನುದಾನಗಳಲ್ಲಿಯೂ ಇದೇ ರೀತಿಯ ನಿದರ್ಶನಗಳನ್ನು ಪೂರ್ವಭಾವಿಯಾಗಿ

ಪರಿಶೀಲಿಸಬೇಕು ಮತ್ತು ರಾಜ್ಯದ ಹಣಕಾಸಿನ ವಿವೇಕದ ದೃಷ್ಟಿಯಿಂದ ತಕ್ಷಣ ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಬೇಕು.

## 3.8 ತೀರ್ಮಾನ

- ಒಟ್ಟು ಅವಕಾಶದ ಕೇವಲ ಶೇಕಡ ನಾಲ್ಕರಷ್ಟು ಬಳಕೆಯಾಗದೆ ಉಳಿದಿರುವುದರಿಂದ ರಾಜ್ಯ ಸರ್ಕಾರವು ಕೈಗೊಂಡಿರುವ ಆಯವ್ಯಯ ಕಸರತ್ತು ವಾಸ್ತವಿಕತೆಗೆ ಹತ್ತಿರವಾಗಿದೆ. ಪೂರಕ ಅವಕಾಶಗಳು ಮೂಲ ಆಯವ್ಯಯದ ಶೇಕಡ 16.16ರಷ್ಟಿತ್ತು. ಅನಗತ್ಯ, ಅತಿಯಾದ ಮತ್ತು ಅಸಮರ್ಪಕ ಪೂರಕ ಅವಕಾಶ ಪ್ರಕರಣಗಳು ಉಳಿತಾಯ/ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು. ಇದಲ್ಲದೆ, ವೆಚ್ಚ ಮಾಡದ ಅವಕಾಶದ ಶೇಕಡ 45ರಷ್ಟನ್ನು ಅಧ್ಯರ್ಪಣೆ ಮಾಡಿಲ್ಲ;
- ಹಿಂದಿನ ವರ್ಷದಲ್ಲಿ ಉಂಟಾದ ಹೆಚ್ಚುವರಿ ವೆಚ್ಚವನ್ನು ಸಂವಿಧಾನದ 205ನೇ ವಿಧಿಯ ಅಡಿಯಲ್ಲಿ ಸಕ್ರಮೀಕರಣಗೊಳಿಸಬೇಕಾಗಿದೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಸಭೆಯಲ್ಲಿ 2012–13ರಿಂದ 2017–18ರ ವರೆಗಿನ ಹೆಚ್ಚುವರಿ ವೆಚ್ಚವನ್ನು ಸಕ್ರಮೀಕರಣಗೊಳಿಸಲು ಚಿಂತನೆ ನಡೆಸಿದ್ದರೂ, ಅದು ಇನ್ನೂ ತನ್ನ ಶಿಫಾರಸನ್ನು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕಾಗಿದೆ;
- ಪುನರ್ವಿನಿಯೋಗಗಳನ್ನು ಸಾಕಷ್ಟು ಸಮರ್ಥನೆಯಿಲ್ಲದೆ ಮಾಡಲಾಗಿದೆ. ಇದರಿಂದಾಗಿ ವಾಸ್ತವ ವೆಚ್ಚದಲ್ಲಿ ಉಳಿತಾಯ/ಹೆಚ್ಚುವರಿಯಾಗಿದೆ. 49 ಪ್ರಕರಣಗಳಲ್ಲಿ ಪುನರ್ವಿನಿಯೋಗ ಮಂಜೂರಾತಿ ಆದೇಶಗಳು ದೋಷಪೂರಿತವಾಗಿದ್ದು ತಿರಸ್ಕರಿಸಲ್ಪಟ್ಟಿವೆ; ಮತ್ತು
- ₹268.98 ಕೋಟಿ ರಾಜಸ್ವ ವೆಚ್ಚವನ್ನು ಬಂಡವಾಳ ವೆಚ್ಚ ಮತ್ತು ₹47.57 ಕೋಟಿ ಬಂಡವಾಳ ವೆಚ್ಚವನ್ನು ರಾಜಸ್ವ ವೆಚ್ಚ ಎಂದು ವರ್ಗೀಕರಿಸಿದ ಪರಿಣಾಮವಾಗಿ ರಾಜಸ್ವ ವೆಚ್ಚವನ್ನು ₹221.41 ಕೋಟಿಗಳಷ್ಟು ಕಡಿಮೆ ಹೇಳಲಾಗಿತ್ತು ಮತ್ತು ಆ ಮಟ್ಟಿಗೆ ರಾಜಸ್ವ ಕೊರತೆಯನ್ನು ಕಡಿಮೆ ಹೇಳಲಾಗಿತ್ತು.

## 3.9 ಶಿಫಾರಸುಗಳು

- **ನಿರೀಕ್ಷಿತ ಉಳಿತಾಯವನ್ನು ಗುರುತಿಸಲು ಮತ್ತು ನಿಗದಿತ ಕಾಲಮಿತಿಯೊಳಗೆ ಅದನ್ನು ಅಧ್ಯರ್ಪಿಸಲು ಸರ್ಕಾರವು ಸೂಕ್ತವಾದ ನಿಯಂತ್ರಣ ಕಾರ್ಯವಿಧಾನವನ್ನು ಸ್ಥಾಪಿಸಬೇಕಾಗಿದೆ. ಇದರಿಂದ ಹಣವನ್ನು ಇತರ ಅಭಿವೃದ್ಧಿ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು.**
- **ಕರ್ನಾಟಕ ಹಣಕಾಸು ಸಂಹಿತೆಯ ನಿಬಂಧನೆಗಳಿಗೆ ಅನುಗುಣವಾಗಿ ಪುನರ್ವಿನಿಯೋಗ ಆದೇಶಗಳನ್ನು ಜಾರಿಗೊಳಿಸಲಾಗಿದೆಯೇ ಎಂದು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.**
- **ಹಣವು ಲೋಪವಾಗುವುದನ್ನು ತಪ್ಪಿಸಲು ವರ್ಷದ ಕೊನೆಯಲ್ಲಿ ವೆಚ್ಚ ಮಾಡುವುದನ್ನು ತಪ್ಪಿಸಬೇಕು.**

# ಅಧ್ಯಾಯ–4

# ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

# ಅಧ್ಯಾಯ–4: ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

ಹಣಕಾಸಿನ ನಿಯಮಗಳು ಮತ್ತು ನಿಖರವಾದ ಲೆಕ್ಕಗಳ ಅನುಸರಣೆಯ ಆಧಾರದ ಮೇಲೆ ಉತ್ತಮ ಆಂತರಿಕ ಹಣಕಾಸು ವರದಿ ವ್ಯವಸ್ಥೆಯು ಉತ್ತಮ ಆಡಳಿತದ ಗುಣಲಕ್ಷಣಗಳಲ್ಲೊಂದಾಗಿದೆ. ಈ ಅಧ್ಯಾಯವು ಪ್ರಸಕ್ತ ವರ್ಷದಲ್ಲಿ ವಿವಿಧ ಹಣಕಾಸು ನಿಯಮಗಳು, ಕಾರ್ಯ ವಿಧಾನಗಳು ಮತ್ತು ನಿರ್ದೇಶನಗಳ ಅನುಸರಣೆಯ ಅವಲೋಕನ ಮತ್ತು ಸ್ಥಿತಿಯನ್ನು ಒದಗಿಸುತ್ತದೆ.

## ಎ. ಲೆಕ್ಕಪತ್ರಗಳ ಸಂಪೂರ್ಣತೆಗೆ ಸಂಬಂಧಿಸಿದ ಅವಲೋಕನಗಳು

### 4.1 ಸರ್ಕಾರದ ಅನುದಾನದಿಂದ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು

ಸರ್ಕಾರವು ಕಂಪನಿಗಳು, ನಿಗಮಗಳು, ಸ್ವಾಯತ್ತ ಸಂಸ್ಥೆಗಳು ಸೇರಿದಂತೆ ಶಾಸನಬದ್ಧ ಮಂಡಳಿಗಳು ಮತ್ತು ಪ್ರಾದೇಶಿಕ ಸೊಸೈಟಿಗಳಿಗೆ ಸಂಬಂಧಿಸಿದ ಸಂಸ್ಥೆಯ ಸಂದಾಯಿತ ಷೇರು ಬಂಡವಾಳ ರೂಪದಲ್ಲಿ, ಅನುದಾನಗಳು, ಸಹಾಯಧನಗಳು, ವೆಚ್ಚಗಳ ಮರುಪಾವತಿ, ಸಾಲಗಳು ಮತ್ತು ಯೋಜನೆಗಳಿಗೆ ಬಿಡುಗಡೆಯಾದ ಹಣ ಇತ್ಯಾದಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತದೆ.

ಆರ್ಥಿಕ ಇಲಾಖೆಯು ಎಲ್ಲಾ ನಿಗಮ/ಕಂಪನಿಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿಗಳಿಗೆ ಅವುಗಳು ಪಡೆದ ಸರ್ಕಾರಿ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು "0049 ಬಡ್ಡಿ ಸ್ವೀಕೃತಿಗಳು "ಲೆಕ್ಕ ಶೀರ್ಷಿಕಗೆ ಜಮೆ ಮಾಡುವ ಮೂಲಕ ಸರ್ಕಾರಿ ಖಾತೆಗೆ ಪಾವತಿಸಲು ನಿರ್ದೇಶಿಸಿದೆ (ಜುಲೈ 2003). ಹಾಗೆ ಗಳಿಸಿದ ಬಡ್ಡಿಯನ್ನು ಸಂಸ್ಥೆಗಳು ಯಾವುದೇ ಇತರ ವೆಚ್ಚಕ್ಕೆ ಬಳಸಲು ಅವಕಾಶವಿರುವುದಿಲ್ಲ ಎಂದೂ ಅದು ಒತ್ತಿ ಹೇಳಿದೆ. ಇದನ್ನು ಆಗಸ್ಟ್ 2019ರ ಸುತ್ತೋಲೆಯಲ್ಲಿ ಪುನರುಚ್ಚರಿಸಲಾಗಿದೆ.

ಕಂಪನಿಗಳು/ನಿಗಮಗಳು ಈ ಮೇಲಿನ ಸೂಚನೆಗಳಿಗೆ ವ್ಯತಿರಿಕ್ತವಾಗಿ ಗಳಿಸಿದ ಬಡ್ಡಿಯ ಮೊತ್ತವಾದ ₹12.82 ಕೋಟಿಗಳನ್ನು ಸರ್ಕಾರಕ್ಕೆ ಜಮೆ ಮಾಡಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. 2019–20ರಿಂದ 2021–22ರವರೆಗಿನ ಅವಧಿಯಲ್ಲಿ ಗಳಿಸಿದ ಬಡ್ಡಿ ಮತ್ತು ಅದರ ವ್ಯವಹಾರದ ವಿವರಗಳನ್ನು **ಕೋಷ್ಟಕ–4.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.1: ಗಳಿಸಿದ ಬಡ್ಡಿ ಮತ್ತು ಅದರ ವ್ಯವಹಾರದ ವಿವರಗಳು.**

(₹ ಲಕ್ಷಗಳಲ್ಲಿ)

| ಸಂಸ್ಥೆಯ ಹೆಸರು | ಗಳಿಸಿದ ಬಡ್ಡಿ | | | | ಬಡ್ಡಿ ಹಣದ ವ್ಯವಹಾರ |
|---|---|---|---|---|---|
| | 2019–20 | 2020–21 | 2021–22 | ಒಟ್ಟು | |
| ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ | 412.16 | 310.58 | 161.20 | **883.94** | 2019–20 ರಿಂದ 2021–22ರ ಅವಧಿಯಲ್ಲಿ ಗಳಿಸಿದ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿಲ್ಲ ಮತ್ತು ಅದನ್ನು ಭವಿಷ್ಯದಲ್ಲಿ ಬಳಸಲು ಒಂದು ಅನುಮೋದನೆಯನ್ನು ಸ್ವೀಕರಿಸಲಾಗಿದೆ. |
| ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 59.52 | 137.01 | 167.46 | **363.99** | 2019–20ರಿಂದ 2021–22ರವರೆಗೆ ಗಳಿಸಿದ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿಲ್ಲ ಮತ್ತು ಅದನ್ನು ಭವಿಷ್ಯದಲ್ಲಿ ಬಳಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. |
| ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್ | 15.75 | 7.73 | 10.24 | **33.72** | ಅವಧಿಯಲ್ಲಿ ಗಳಿಸಿದ ಬಡ್ಡಿಯನ್ನು ಮೂಲ ಅನುದಾನ ಬಿಡುಗಡೆ ಮಾಡಿದ ಉದ್ದೇಶಕ್ಕಾಗಿಯೇ ಭಾಗಶ: ಬಳಸಲಾಗಿದೆ ಮತ್ತು ಉಳಿದ ಹಣ ಖಾತೆಯಲ್ಲಿದೆ. |
| ಒಟ್ಟು | **487.43** | **455.32** | **338.90** | **1,281.65** | |

ರಾಜ್ಯದ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಸಹಾಯವಾಗುವುದರಿಂದ ಸರ್ಕಾರವು ಅನುದಾನಗಳ ಮೇಲೆ ಗಳಿಸಿದ ಬಡ್ಡಿಯನ್ನು ಜಮೆ ಮಾಡಿಸಿಕೊಳ್ಳಲು ಇಲಾಖೆಗಳ ಮೇಲೆ ಕ್ರಮ ಕೈಗೊಳ್ಳಬೇಕು.

## ಬಿ. ಪಾರದರ್ಶಕತೆಗೆ ಸಂಬಂಧಿಸಿದ ಅವಲೋಕನ

### 4.2 ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಲ್ಲಿ ವಿಳಂಬ

ಕರ್ನಾಟಕದ ಆರ್ಥಿಕ ಸಂಹಿತೆ 1958ರ ನಿಯಮ 161(5)ರ ಅನ್ವಯ ನಿರ್ದಿಷ್ಟ ಉದ್ದೇಶಗಳಿಗಾಗಿ ಒದಗಿಸಿದ ಅನುದಾನಗಳಿಗೆ ಸಂಬಂಧಿಸಿದಂತೆ ಅನುದಾನಿತರಿಂದ, ಮಂಜೂರಾತಿ ದಿನಾಂಕದಿಂದ 18 ತಿಂಗಳೊಳಗೆ ನಿರ್ದಿಷ್ಟಪಡಿಸದ ಹೊರತು, ಇಲಾಖಾ ಅಧಿಕಾರಿಗಳು ಬಳಕೆ ಪ್ರಮಾಣ ಪತ್ರಗಳನ್ನು ಪಡೆಯಬೇಕು ಮತ್ತು ಪರಿಶೀಲನೆಯ ನಂತರ ಅವುಗಳನ್ನು ಮಹಾಲೇಖಾಪಾಲರಿಗೆ (ಲೆ ಮತ್ತು ಹ) ರವಾನಿಸಬೇಕು. **ಕೋಷ್ಟಕ–4.2**ರಲ್ಲಿ ವಿವರಿಸಿದಂತೆ 2021–22ರ ವರ್ಷಕ್ಕೆ ₹325.50 ಕೋಟಿ ಮೊತ್ತದ 132 ಬಳಕೆ ಪ್ರಮಾಣಪತ್ರಗಳು ಬಾಕಿ ಉಳಿದಿವೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ. ಬಾಕಿ ಉಳಿದಿರುವ ಬಳಕೆ ಪ್ರಮಾಣಪತ್ರಗಳ ವರ್ಷಾವಾರು ಸ್ಥಿತಿಯನ್ನು **ಕೋಷ್ಟಕ–4.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.2: 2021–22ಕ್ಕೆ ಬಾಕಿ ಇರುವ ಬಳಕೆ ಪ್ರಮಾಣಪತ್ರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಸಲ್ಲಿಕೆಗೆ ಬಾಕಿ | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| **2019–20** | 110 | 764.81 | 79 | 737.13 | 138 | 1,319.45 | 51 | 182.49 |
| **2020–21** | 51 | 182.49 | 396 | 1,239.80 | 410 | 1,383.66 | 37 | 38.63 |
| **2021–22** | 37 | 38.63 | 356 | 1,335.69 | 261 | 1,048.82 | 132 | 325.50 |

*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ.*

**ಕೋಷ್ಟಕ–4.3: ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ವರ್ಷಾವಾರು ವಿವರ**

**(₹ ಕೋಟಿಗಳಲ್ಲಿ)**

| ಬಾಕಿ ಇರುವ ವರ್ಷ | ಬಳಕೆ ಪ್ರಮಾಣಪತ್ರಗಳ ಸಂಖ್ಯೆ | ಮೊತ್ತ |
|---|---|---|
| **2012–13** | 01 | 0.11 |
| **2017–18** | 01 | 0.76 |
| **2019–20** | 02 | 1.75 |
| **2020–21** | 22 | 31.54 |
| **2021–22** | 106 | 291.34 |
| **ಒಟ್ಟು** | **132** | **325.50** |

*ಆಕರ: ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿ.*

ಇದಲ್ಲದೆ, ನಿಯಮ 161(5)ರ ಅನ್ವಯ ನಿಗದಿತ ಬಳಕೆ ಪ್ರಮಾಣಪತ್ರದ ನಮೂನೆಯು ವರ್ಷದಲ್ಲಿ ಬಳಕೆಯಾಗದ ಅನುದಾನವನ್ನು ಅಧ್ಯರ್ಪಣೆ ಮಾಡಬೇಕು ಅಥವಾ ನಂತರದ ವರ್ಷದಲ್ಲಿ ಪಡೆಯಬೇಕಾದ ಅನುದಾನಕ್ಕೆ ಸರಿಹೊಂದಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. 2020–21ನೇ ಸಾಲಿನಲ್ಲಿ ₹38.63 ಕೋಟಿಗಳ ಮೊತ್ತದ 37 ಬಳಕೆ ಪ್ರಮಾಣಪತ್ರಗಳು ಬಾಕಿ ಇದ್ದು 2021–22ಕ್ಕೆ ಹೋಲಿಸಿದರೆ ₹325.50 ಕೋಟಗಳ 132 ಬಳಕೆ ಪ್ರಮಾಣಪತ್ರಗಳಿಗೆ ಹೆಚ್ಚಳವಾಗಿದೆ ಮತ್ತು ಅದರಿಂದ ಬಾಕಿ ಇರುವ ಬಳಕೆ ಪ್ರಮಾಣಪತ್ರಗಳು 2020–21ಕ್ಕೆ ಹೋಲಿಸಿದರೆ ಬಾಕಿ ಇರುವ ಪ್ರಮಾಣಪತ್ರದ ಮೊತ್ತವು 2021–22ರಲ್ಲಿ ಶೇಕಡಾ 742ರಷ್ಟು ಹೆಚ್ಚಳ ತೋರಿಸಿದೆ. ಮೇಲಿನ 132 ಪ್ರಕರಣಗಳಲ್ಲಿ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದ ಕಾರಣ ಬಿಡುಗಡೆಯಾದ ಅನುದಾನದ ಸಂಪೂರ್ಣ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯ ಬಾಕಿ ಉಳಿದಿರುವ ಹೊರತಾಗಿಯೂ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು ಇದು ಅನುದಾನ ಮಂಜೂರಾತಿಯಲ್ಲಿರುವ ನಿಯಂತ್ರಣದ ಕೊರತೆಯನ್ನು

ಸೂಚಿಸುತ್ತದೆ. ಆದ್ದರಿಂದ ಮುಂದಿನ ಅನುದಾನವನ್ನು ಬಿಡುಗಡೆ ಮಾಡುವ ಮೊದಲು ಸರ್ಕಾರವು ಒಂದು ವರ್ಷಕ್ಕೂ ಹೆಚ್ಚುಕಾಲ ಬಾಕಿ ಇರುವ ಎಲ್ಲಾ ಪ್ರಮಾಣಪತ್ರದ ಬಾಬ್ತುಗಳನ್ನು ಪರಿಶೀಲಿಸುವ ಅಗತ್ಯವಿದೆ.

**(₹ ಕೋಟಿಗಳಲ್ಲಿ)**




*ಆಕರ: ಮಹಾಲೇಖಾಪಾಲರು (ಲೆ ಮತ್ತು ಹ) ಅವರ ಕಛೇರಿ*

**ನಕ್ಷೆ–4.1**ರಲ್ಲಿ ನೋಡಿದಂತೆ, ಹಿಂದಿನ ವರ್ಷದಂತೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವ ಹೆಚ್ಚಿನ ಪ್ರಕರಣಗಳು ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ (ಶೇಕಡ 90.06) ಮತ್ತು ಕ್ರೀಡೆ ಮತ್ತು ಯುವಜನ ಸೇವೆಗಳು (ಶೇಕಡ 9.91) ಇಲಾಖೆಗೆ ಸಂಬಂಧಿಸಿದೆ. ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವಲ್ಲಿ ಬಾಕಿ ಉಳಿದಿರುವುದು ಸಂಕಲ್ಪಿಸಿದ ಉದ್ದೇಶಗಳಿಗಾಗಿ ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಭರವಸೆ ಇಲ್ಲದಿರುವುದರ ಜೊತೆಗೆ ಇಲಾಖೆಗಳಿಂದ ಅನುದಾನಿತರಿಗೆ ಬಿಡುಗಡೆಯಾದ ಅನುದಾನದ ಬಳಕೆಯ ಮೇಲ್ವಿಚಾರಣೆಯ ಕೊರತೆಯನ್ನು ಸೂಚಿಸುತ್ತದೆ. ಬಾಕಿ ಉಳಿದಿರುವ ಬಳಕೆ ಪ್ರಮಾಣಪತ್ರಗಳ ಪ್ರಧಾನ ಲೆಕ್ಕ ಶೀರ್ಷಿಕೆವಾರು ಮತ್ತು ಇಲಾಖಾವಾರು ವಿವರಗಳನ್ನು ಪ್ರತಿವರ್ಷಕ್ಕೆ ಪ್ರತ್ಯೇಕವಾಗಿ **ಅನುಬಂಧ–4.1**ರಲ್ಲಿ ನೀಡಲಾಗಿದೆ.

## 4.3 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಸಾದಿಲ್ವಾರು ವೆಚ್ಚಗಳು ಕೈಪಿಡಿ, 1958ರ ನಿಯಮ 37(ಬಿ) (3)ರ ಅಡಿಯಲ್ಲಿ, ನಿಯಂತ್ರಣ ಮತ್ತು ವಿತರಣಾ ಅಧಿಕಾರಿಗಳು ಸೇವಾ ಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಪಡೆಯಲು ಅಧಿಕಾರ ಹೊಂದಿದ್ದಾರೆ ಮತ್ತು ಈ ಬಿಲ್ಲುಗಳಿಗೆ ಪಾವತಿಗಲ್ಲದ ಸವಿವರ ಸಾದಿಲ್ವಾರು (ಎನ್‌ಡಿಸಿ) ಬಿಲ್ಲುಗಳನ್ನು (ಅಂತಿಮ ವೆಚ್ಚವನ್ನು ಬೆಂಬಲಿಸುವ ವೋಚರುಗಳು) ಬಿಲ್‌ಗೆ ಸಂಬಂಧಿಸಿದ ತಿಂಗಳ ನಂತರದ ತಿಂಗಳ 15ರ ಒಳಗೆ ಖಜಾನೆಗಳ ಮೂಲಕ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಪ್ರಸ್ತುತ ಪಡಿಸುವ ಅಗತ್ಯವಿದೆ. ನಿಯಂತ್ರಣ ಅಧಿಕಾರಿಗಳು ತಕ್ಷಣದ ವಿತರಣೆಗೆ ಅಗತ್ಯವಿಲ್ಲದ ಹೊರತು ಬಿಲ್‌ಗಳ ಮೂಲಕ ಖಜಾನೆಯಿಂದ ಯಾವುದೇ ಮೊತ್ತವನ್ನು ಪಡೆದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

ಮಾರ್ಚ್ 2022ರ ಅಂತ್ಯಕ್ಕೆ 1,376 ಸಂಕ್ಷಿಪ್ತ ಸಾದಿಲ್ವಾರು ಬಿಲ್‌ಗಳ ಮೇಲೆ ಪಡೆದ ₹63.89 ಕೋಟಿಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳು ಸಲ್ಲಿಕೆಯಾಗದೆ **ಕೋಷ್ಟಕ–4.4**ರಲ್ಲಿ ವಿವರಿಸಿದಂತೆ ಬಾಕಿ ಉಳಿದಿವೆ.

**ಕೋಷ್ಟಕ–4.4: ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸವಿವರ ಬಿಲ್ಲುಗಳ ಸಲ್ಲಿಕೆಯ ವರ್ಷಾವಾರು ಪ್ರಗತಿ**

**(₹ ಕೋಟಿಗಳಲ್ಲಿ)**

| ವರ್ಷ | ಪ್ರಾರಂಭಿಕ ಶಿಲ್ಕು | | ಸೇರ್ಪಡೆ | | ತೀರುವಳಿ | | ಅಂತಿಮ ಶಿಲ್ಕು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 2017–18 ರವರೆಗೆ | 3,272 | 84.81 | 3,094 | 90.03 | 3,090 | 90.84 | 3,276 | 84.00 |
| 2018–19 | 3,276 | 84.00 | 2,286 | 188.64 | 3,467 | 179.37 | 2,095 | 93.27 |
| 2019–20 | 2,095 | 93.27 | 2,109 | 182.90 | 2,245 | 179.49 | 1,959 | 96.68 |
| 2020–21 | 1,959 | 96.68 | 2,247 | 153.46 | 1,985 | 123.80 | 2,221 | 126.34 |
| 2021–22 | 2,221 | 126.34 | 2,577 | 154.00 | 3,422 | 216.45 | 1,376 | 63.89 |

*ಆಕರ: ಹಣಕಾಸು ಲೆಕ್ಕಗಳು* ** ಮಾರ್ಚ್ 2022ರ ಬಿಲ್ಲುಗಳನ್ನು ಹೊರತುಪಡಿಸಿ*

**(₹ ಕೋಟಿಗಳಲ್ಲಿ)**

ನಕ್ಷೆ–4.2: ಸವಿವರ ಸಾದಿಲ್ವಾರು ಬಿಲ್ಲುಗಳು ಸಲ್ಲಿಕೆಯಾಗದೇ ಉಳಿದಿರುವ ಪ್ರಮುಖ ಇಲಾಖೆಗಳು




*ಆಕರ: ಮಹಾಲೇಖಾಪಾಲರು (ಲೆ ಮತ್ತು ಹ) ಕಛೇರಿ*

ಬಾಕಿ ಉಳಿದಿರುವ ಸವಿವರ ಸಾದಿಲ್ವಾರು ಬಿಲ್‌ಗಳಲ್ಲಿ ಶೇಕಡ 44ರಷ್ಟು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಚುನಾವಣೆಗಳು)–ಪ್ರಧಾನ ಶೀರ್ಷಿಕೆ 2015 (₹27.93 ಕೋಟಿ–200 ಬಿಲ್ಲುಗಳು), ಶೇಕಡ 34 ಗೃಹ ಇಲಾಖೆ (ಪೊಲೀಸ್) ಪ್ರಧಾನ ಶೀರ್ಷಿಕೆ 2055 (₹21.79 ಕೋಟಿ–282 ಬಿಲ್ಲುಗಳು) ಗಳಿಗೆ ಸಂಬಂಧಿಸಿದೆ ಎಂಬುದನ್ನು **ನಕ್ಷೆ–4.2** ತೋರಿಸುತ್ತದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆದ ಹಣವನ್ನು ಸಂಚಿತ ನಿಧಿಯ ಸೇವಾ ಪ್ರಧಾನ ಶೀರ್ಷಿಕೆಯಡಿ ಲೆಕ್ಕ ಹಾಕಲಾಗುತ್ತದೆ. ನಿಗದಿಪಡಿಸಿದ ಸಮಯದೊಳಗೆ ಲೆಕ್ಕಗಳನ್ನು ಇತ್ಯರ್ಥ ಪಡಿಸದಿದ್ದರೆ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುತ್ತದೆ. ಮಾರ್ಚ್ 2021ಕ್ಕೆ ಕೊನೆಗೊಳ್ಳುವ ರಾಜ್ಯ ಹಣಕಾಸು ವ್ಯವಹಾರಗಳ ವರದಿಯ **ಕಂಡಿಕೆ–4.3**ರಲ್ಲಿನ ಲೆಕ್ಕಪರಿಶೋಧನಾ ಟೀಕೆಗೆ ಉತ್ತರವಾಗಿ ಆರ್ಥಿಕ ಇಲಾಖೆಯು ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೂ ಸೂಚನೆಗಳನ್ನು ಪಾಲಿಸುವಂತೆ ಸೂಚಿಸಲಾಗುವುದು ಎಂದು ಹೇಳಿದೆ (ಡಿಸೆಂಬರ್ 2021) . ಇದಕ್ಕೆ ಅನುಪಾಲನೆಯೆಂಬಂತೆ, 2021–22ರಲ್ಲಿ ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ (ಶೇಕಡ 50).

2017–18 ರಿಂದ 2021–22ರ ಅವಧಿಯ ಗೃಹ ಇಲಾಖೆಯ (ಪೊಲೀಸ್–ಪ್ರಧಾನ ಶೀರ್ಷಿಕೆ 2055) 61 ಬಟವಾಡೆ ಅಧಿಕಾರಿಗಳಿಂದ (ಡಿಡಿಓಗಳು) ಮತ್ತು ಕಾರಾಗೃಹಗಳು (ಪ್ರಧಾನ ಶೀರ್ಷಿಕೆ 2056) ಇವರ 18 ಬಟವಾಡೆ ಅಧಿಕಾರಿಗಳಿಂದ ಹಣಪಡೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಮೀಕ್ಷೆಯನ್ನು ಜುಲೈ 2022–ಆಗಸ್ಟ್ 2022ರ ನಡುವೆ ನಡೆಸಲಾಯಿತು ಮತ್ತು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವಿವರಗಳನ್ನು **ಕೋಷ್ಟಕ–4.5**ರಲ್ಲಿ ನೀಡಲಾಗಿದೆ.

**ಕೋಷ್ಟಕ-4.5: 2055 (ಪೊಲೀಸ್) ಮತ್ತು 2056 (ಕಾರಾಗೃಹಗಳು) ಅಡಿಯಲ್ಲಿ ಹಣಪಡೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ವಿವರಗಳು**

**(₹ ಕೋಟಿಗಳಲ್ಲಿ)**

| ಇಲಾಖೆ | ಹಣ ಪಡೆದ ಸಂಕ್ಷಿಪ್ತ ಸಾಧಿಲ್ವಾರು ಬಿಲ್ಲುಗಳ ಸಂಖ್ಯೆ | ವಿಳಂಬ ಮಾಡಿದ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಂಖ್ಯೆ | ವಿಳಂಬ ಮಾಡಿದ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಮೊತ್ತ |
|---|---|---|---|
| **2055-ಪೊಲೀಸ್** | 4,085 | 1,043 | 141.09 |
| **2056-ಕಾರಾಗೃಹಗಳು** | 408 | 157 | 1.17 |

ಸಮೀಕ್ಷೆಯ ಸಮಯದಲ್ಲಿ ಕಂಡು ಬಂದ ಪ್ರಮುಖ ಅಂಶಗಳನ್ನು ಈ ಮುಂದಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

### *4.3.1 ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಲ್ಲಿ ವಿಳಂಬ*

ಸಾದಿಲ್ವಾರು ವೆಚ್ಚ ಕೈಪಿಡಿಯ ನಿಯಮ 37(3)ರ ಪ್ರಕಾರ, ಬಟವಾಡೆ ಅಧಿಕಾರಿಗಳು ತಾವು ಹಣ ಪಡೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸಂಬಂಧಿಸಿದಂತೆ ಪಾವತಿಗಲ್ಲದ ಸಾದಿಲ್ವಾರು ಸವಿವರ ಬಿಲ್ಲುಗಳನ್ನು ತಮ್ಮ ನಿಯಂತ್ರಣಾಧಿಕಾರಿಗಳಿಗೆ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಲ್ಲಿ ಹಣಪಡೆದ ನಂತರದ ತಿಂಗಳಿನ ಮೊದಲನೆಯ ವಾರದ ಮುಕ್ತಾಯದ ಒಳಗೆ ಮಹಾಲೇಖಾಪಾಲರು (ಲೆ ಮತ್ತು ಹ) ಇವರಿಗೆ ಅದೇ ತಿಂಗಳ 15ರ ಒಳಗಾಗಿ ಪ್ರಸ್ತುತ ಪಡಿಸುವ ಸಲುವಾಗಿ ಕಳುಹಿಸಿಕೊಡಬೇಕಾಗಿದೆ. ಗೃಹ ಇಲಾಖೆಯ 70 ಬಟವಾಡೆ ಅಧಿಕಾರಿಗಳ ಪರೀಕ್ಷಾ ತನಿಖೆಯಲ್ಲಿ 61 ಬಟವಾಡೆ ಅಧಿಕಾರಿಗಳ ವಿಷಯದಲ್ಲಿ 2017-22ರ ಅವಧಿಯ 4,091 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ₹140.83 ಕೋಟಿ ಮೌಲ್ಯದ 1047 ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಕಾಲದಲ್ಲಿ ಸಲ್ಲಿಸಿರಲಿಲ್ಲ. ವಿಳಂಬವು ಎರಡು ತಿಂಗಳುಗಳಿಂದ ಒಂದು ವರ್ಷದ ವ್ಯಾಪ್ತಿಯವರೆಗೂ ಇತ್ತು.

ಕಾರಾಗೃಹ ಇಲಾಖೆಯ 20 ಬಟವಾಡೆ ಅಧಿಕಾರಿಗಳ ಪರೀಕ್ಷಾ ತನಿಖೆಯಲ್ಲಿ 18 ಬಟವಾಡೆ ಅಧಿಕಾರಿಗಳ ವಿಷಯದಲ್ಲಿ 2017-22ರ ಅವಧಿಯಲ್ಲಿ 408 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪೈಕಿ ₹1.17 ಕೋಟಿ ಮೌಲ್ಯದ 157 ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಲ್ಲಿ ವಿಳಂಬವಿತ್ತು. ವಿಳಂಬದ ವ್ಯಾಪ್ತಿಯು ಎರಡು ತಿಂಗಳುಗಳಿಂದ ಒಂದು ವರ್ಷದವರೆಗೂ ಇತ್ತು.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆದ ಹಣವನ್ನು ಲೆಕ್ಕಪತ್ರಗಳಲ್ಲಿ ವೆಚ್ಚವೆಂದು ಲೆಕ್ಕಹಾಕಲಾಗುವುದು. ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಿಂದ ವಾಸ್ತವಿಕ ವೆಚ್ಚವನ್ನು ದೃಢಪಡಿಸಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಹೊಂದಾಣಿಕೆ ಮಾಡದಿದ್ದರೆ, ಲೆಕ್ಕಗಳಲ್ಲಿ ವೆಚ್ಚವು ಹೆಚ್ಚಾಗಿ ತೋರಿಸಲ್ಪಡುತ್ತದೆ ಅಥವಾ ಲೆಕ್ಕಹಾಕಲ್ಪಡುವುದಿಲ್ಲ. ಹಣಕಾಸು ಲೆಕ್ಕಗಳಲ್ಲಿ ತೋರಿಸಿದ ವೆಚ್ಚವನ್ನು ಸರಿಯಾಗಿದೆ ಅಥವಾ ಅಂತಿಮ ಎಂದು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲ. ಇದು ಸರ್ಕಾರಿ ನಿಧಿಗಳ ಕಳಪೆ ಲೆಕ್ಕಾಚಾರಕ್ಕೆ ಕಾರಣವಾಗುತ್ತದೆ.

ಸಾಕಷ್ಟು ಮೊತ್ತವನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆದು ಬಹಳ ಕಾಲದವರೆಗೆ ಹೊಂದಾಣಿಕೆ ಮಾಡದಿದ್ದರೆ, ಹಣ ದುರ್ಬಳಕೆ ಮತ್ತು ಇತರೆ ಹಣಕಾಸು ಅವ್ಯವಹಾರಗಳ ಅಪಾಯವನ್ನು ಹೆಚ್ಚು ಮಾಡುವ ಸಾಧ್ಯತೆ ಇದೆ.

ಮಾನವ ಸಂಪನ್ಮೂಲ ಕೊರತೆ/ಖಾಲಿ ಹುದ್ದೆಗಳು, ಬಿಲ್ಲುಗಳಲ್ಲಿ ತಾಂತ್ರಿಕ ದೋಷಗಳು, ಖಜಾನೆಯಿಂದ ಬಿಲ್ಲುಗಳ ತಿರಸ್ಕರಿಸುವಿಕೆ, ಅಂತರ್ಜಾಲದ ಅಲಭ್ಯತೆ ಮುಂತಾದ ಕಾರಣಗಳು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯನ್ನು ವಿಳಂಬಗೊಳಿಸಿದವು ಎಂದು ಕಾರಾಗೃಹ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ನವೆಂಬರ್ 2022).

### 4.3.2 ಬಳಸದೇ ಉಳಿದ ಮೊತ್ತವನ್ನು ಜಮೆ ಮಾಡುವಲ್ಲಿ ವಿಳಂಬ

ಇಲಾಖೆಯು ಸಿಬ್ಬಂದಿಯ ನೇಮಕಾತಿ, ಇಂಧನ ಖರೀದಿ, ಸಾಮಗ್ರಿಗಳ ಖರೀದಿ, ಆಯುಧಗಳ ಖರೀದಿ ಮತ್ತು ರಿಪೇರಿ, ಎಲ್‌ಪಿಜಿ ಸಿಲಿಂಡರುಗಳ ಖರೀದಿ, ಖೈದಿಗಳಿಗೆ ಕೂಲಿ ಪಾವತಿ ಮುಂತಾದವುಗಳಿಗಾಗಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಸೆಳೆಯುತ್ತದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಪರೀಕ್ಷಾ ತನಿಖೆಯಿಂದ ₹0.24 ಕೋಟಿ ಮೊತ್ತ ಪೊಲೀಸ್ ಇಲಾಖೆಯಲ್ಲಿ ಮತ್ತು ₹0.09 ಕೋಟಿ ಕಾರಾಗೃಹ ಇಲಾಖೆಯಲ್ಲಿ ಬಳಸದೇ ಉಳಿದ ಮೊತ್ತವನ್ನು 160ರಿಂದ 705 ದಿನಗಳ ವಿಳಂಬದ ನಂತರ ಸರ್ಕಾರಕ್ಕೆ ಜಮೆ ಮಾಡಲಾಯಿತು ಎಂದು ಗಮನಿಸಲಾಯಿತು.

ಖಜಾನೆಯಿಂದ ಯಾವುದೇ ಹಣವನ್ನು ಅದು ತಕ್ಷಣದ ವಿತರಣೆಗೆ ಅಗತ್ಯವಿದ್ದ ಹೊರತು ಸೆಳೆಯಬಾರದು. ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಬಳಸದೇ ಉಳಿದ ಮೊತ್ತವನ್ನು ಜಮೆ ಮಾಡುವಲ್ಲಿನ ವಿಳಂಬವು ಸರ್ಕಾರಿ ನಿಧಿಗಳ ಹಿಡಿದಿಡುವಿಕೆಗೆ ಕಾರಣವಾಯಿತು.

ಕಾರಾಗೃಹ ಇಲಾಖೆಯು ತನ್ನ ಉತ್ತರದಲ್ಲಿ (ನವೆಂಬರ್ 2022) ಬಳಸದೇ ಉಳಿದ ಮೊತ್ತಗಳನ್ನು ಮರುಪಾವತಿಸಲಾಗಿದೆ ಎಂದು ಪುನರುಚ್ಚರಿಸಿತು. ಆದರೆ ಜಮೆ ಮಾಡುವಲ್ಲಿನ ವಿಳಂಬಕ್ಕಾಗಿ ಯಾವುದೇ ಕಾರಣಗಳನ್ನು ಒದಗಿಸಿಲ್ಲ.

### 4.3.3 ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ನಿಧಿಗಳನ್ನು ಸೆಳೆಯುವುದು

ಗೃಹ ಇಲಾಖೆಯು ಹೊರಡಿಸಿದ ಸರ್ಕಾರಿ ಆದೇಶವು (ಆಗಸ್ಟ್ 2020) ಇಂಧನ ಖರೀದಿಗೆ (ಪೆಟ್ರೋ ಕಾರ್ಡ್) ಮಿತಿಗಳನ್ನು ನಿಗದಿಪಡಿಸಿದೆ ಮತ್ತು ಈ ಮಿತಿಯು ವಾಹನಗಳ ಸಂಖ್ಯೆಯ ಮೇಲೆ ಅವಲಂಬಿಸಿದೆ. ಮಿತಿಯ ಪ್ರಕಾರ, ಪೊಲೀಸ್ ಅಧೀಕ್ಷಕರು, ಮಂಡ್ಯ ಅವರ ಕಛೇರಿಯು ಪ್ರತಿ ಬಾರಿಗೆ 15 ದಿನಗಳ ಮಧ್ಯಂತರದ ನಂತರ ₹15 ಲಕ್ಷಗಳ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಸೆಳೆಯಬಹುದು. ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ ಕಛೇರಿಯು ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ಮಾರ್ಚ್ 2022ರ ತಿಂಗಳಲ್ಲಿ ಎರಡು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು, ಪ್ರತಿ ಬಿಲ್ಲಿಗೆ ₹15 ಲಕ್ಷಗಳಂತೆ, ಏಪ್ರಿಲ್ 2022ರ ತಿಂಗಳಿಗೆ ಮುಂಚಿತವಾಗಿ ಸೆಳೆದಿತ್ತು ಎಂಬುದನ್ನು ಗಮನಿಸಲಾಯಿತು.

ಇದೇ ರೀತಿ, ಕಾರಾಗೃಹ ಇಲಾಖೆಯ ಪೊಲೀಸ್ ಮಹಾನಿರ್ದೇಶಕರು ಮತ್ತು ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು ಇವರ ಕಛೇರಿಯಲ್ಲಿ ಅನುದಾನಗಳು ಲೋಪವಾಗುವುದನ್ನು ತಪ್ಪಿಸಲು ಇಂಧನ ಖರೀದಿಗೆ ಮಾರ್ಚ್ 2022ರಲ್ಲಿ ಪ್ರತಿ ಬಿಲ್ಲಿಗೆ ₹5.68 ಲಕ್ಷಗಳಂತೆ, ಎರಡು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಏಪ್ರಿಲ್ 2022ರ ತಿಂಗಳಿಗಾಗಿ ಮುಂಚಿತವಾಗಿ ಸೆಳೆಯಲಾಗಿತ್ತು ಎಂಬುದನ್ನು ಗಮನಿಸಲಾಯಿತು.

ಮಾರ್ಚ್ ತಿಂಗಳಲ್ಲಿ ಮುಂದಿನ ವರ್ಷಕ್ಕೆ ಮುಂಚಿತವಾಗಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ನಿಧಿಗಳನ್ನು ಸೆಳೆಯುವುದು ಕೇವಲ ಅನುದಾನಗಳು ನಷ್ಟವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಮುಂಚಿತವಾಗಿ ಹಣ ಸೆಳೆಯಲಾಯಿತು ಎಂದು ಸೂಚಿಸುತ್ತದೆ ಮತ್ತು ಇದು ಆರ್ಥಿಕ ಅಶಿಸ್ತಿನೆಡೆಗೆ ಬೊಟ್ಟು ಮಾಡಿ ತೋರಿಸುತ್ತದೆ.

ಹಣಕಾಸು ವರ್ಷದ ಪ್ರಾರಂಭದಲ್ಲಿ ನಿಧಿಗಳ ಬಿಡುಗಡೆಯಲ್ಲಿ ವಿಳಂಬವಿರುವುದನ್ನು ಗಮನದಲ್ಲಿಟ್ಟುಕೊಂಡು ಏಪ್ರಿಲ್ 2022ರ ತಿಂಗಳ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಮುಂಚಿತವಾಗಿ ಸೆಳೆಯಲಾಯಿತು ಎಂದು ಕಾರಾಗೃಹ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ನವೆಂಬರ್ 2022).

### *4.3.4 ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಅನುಮತಿಸಲಾಗದ ವೋಚರ್‌ಗಳು*

ಕೈಪಿಡಿಯ ನಿಯಮ 37(3)ರ ಪ್ರಕಾರ, ನಿಯಂತ್ರಣ ಮತ್ತು ವಿತರಣಾ ಅಧಿಕಾರಿಗಳು ತಾವು ಹಣಪಡೆದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸಂಬಂಧಿಸಿದಂತೆ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ತಮ್ಮ ನಿಯಂತ್ರಣಾಧಿಕಾರಿಗಳಿಗೆ ಯಾವ ತಿಂಗಳಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಂದ ಹಣ ಪಡೆಯಲಾಗಿದೆಯೋ ಅದರ ನಂತರದ ತಿಂಗಳಿನ ಮೊದಲನೆಯ ವಾರ ಮುಕ್ತಾಯವಾಗುವ ಮೊದಲು, ಮಹಾಲೇಖಪಾಲರಿಗೆ (ಲೆ ಮತ್ತು ಹ) ಅದೇ ತಿಂಗಳಿನ 15ರೊಳಗೆ ರವಾನೆ ಮಾಡಲು ಕಳುಹಿಸಿಕೊಡಬೇಕು.

ಪೊಲೀಸ್ ಇಲಾಖೆಯ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳಿಗೆ ಲಗತ್ತಿಸಿದ 17 ವೋಚರುಗಳು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಗಳಿಂದ ಹಣ ಪಡೆದ ಹಿಂದಿನ ಅವಧಿಗೆ ಸಂಬಂಧಿಸಿದ್ದವಾಗಿದ್ದವು ಮತ್ತು ಆದ್ದರಿಂದ ಅನುಮತಿಸಲು ಸಾಧ್ಯವಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ಅದೇ ರೀತಿ, ಕಾರಾಗೃಹ ಇಲಾಖೆಯಲ್ಲಿ, ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳಿಗೆ ಲಗತ್ತಿಸಿದ 325 ವೋಚರುಗಳು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಹಣ ಪಡೆದ ಹಿಂದಿನ ಅವಧಿಗೆ ಸಂಬಂಧಿಸಿದ್ದವಾಗಿದ್ದವು.

ಗ್ಯಾಸ್ ಸಿಲಿಂಡರುಗಳು ಸಾಲದ ಮೇಲೆ ದೊರೆಯುತ್ತಿರಲಿಲ್ಲ ಮತ್ತು ಹಣ ಪಡೆಯಲು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮಂಜೂರಾತಿಯಲ್ಲೂ ವಿಳಂಬವಿದ್ದುದರಿಂದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹಣ ಪಡೆದ ಅವಧಿಗೆ ಮುಂಚಿನ ವೋಚರುಗಳನ್ನು ಸಲ್ಲಿಸುವುದು ಅನಿವಾರ್ಯ ಎಂದು ಕಾರಾಗೃಹ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ನವೆಂಬರ್ 2022). ಇದು ಅನುಮತಿಸಲಾಗದ ವೋಚರುಗಳನ್ನು ಒಳಗೊಳ್ಳುವುದರಿಂದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಂದ ಹಣ ಪಡೆಯುವುದನ್ನು ಮುಂಚಿತವಾಗಿ ಮಂಜೂರು ಮಾಡುವ ಪದ್ಧತಿಯೊಂದನ್ನು ಅಳವಡಿಸುವ ಅಗತ್ಯತೆ ಇದೆ.

### *4.3.5 ವೈಯಕ್ತಿಕ ಠೇವಣಿ ಖಾತೆಗಳಲ್ಲಿ ನಿಧಿಗಳನ್ನು ಎರಡು ವರ್ಷಗಳವರೆಗೆ ಹಿಡಿದಿಟ್ಟುಕೊಂಡಿರುವಿಕೆ*

ಕರ್ನಾಟಕ ಆರ್ಥಿಕ ಸಂಹಿತೆಯ 286ಎ ನಿಯಮದ ಪ್ರಕಾರ, ವಿಶೇಷ ಕಾನೂನುಗಳಿಂದ ಹೊರಹೊಮ್ಮುವ ಸರ್ಕಾರ/ಇಲಾಖೆಯ ಜವಾಬ್ದಾರಿಗಳನ್ನು ಚುಕ್ತಗೊಳಿಸಲು ರಾಜ್ಯದ ಸಂಚಿತ ನಿಧಿಗೆ ಖರ್ಚುಹಾಕಿ ನಿಧಿಗಳನ್ನು ವರ್ಗಾಯಿಸುವ ಮೂಲಕ ವೈಯಕ್ತಿಕ ಠೇವಣಿ ಖಾತೆಗಳನ್ನು ಸೃಷ್ಟಿಸಲಾಗುವುದು. ಸಂಚಿತ ನಿಧಿಗೆ ಖರ್ಚು ಹಾಕುವ ಮೂಲಕ ರಚಿಸಲಾದ ವೈಯಕ್ತಿಕ ಠೇವಣಿ ಖಾತೆಗಳನ್ನು ಪ್ರತೀ ವರ್ಷದ 31ನೇ ಮಾರ್ಚ್‌ರಂದು ವೈಯಕ್ತಿಕ ಠೇವಣಿ ಖಾತೆಯಿಂದ ಸಂಚಿತ ನಿಧಿಗೆ ವರ್ಗಾಯಿಸಬೇಕಾಗಿರುವ ಶಿಲ್ಕಿನ ಬಗ್ಗೆ ಖಜಾನೆ ಅಧಿಕಾರಿಗಳಿಗೆ ತಿಳಿಸಿ ಮುಕ್ತಾಯಗೊಳಿಸಬೇಕು. ವೈಯಕ್ತಿಕ ಠೇವಣಿ ಖಾತೆಯನ್ನು ಮುಂದುವರೆಸುವುದು ಸರ್ಕಾರದಿಂದ ಪಡೆದ ಅಂತಹ ಅನುಮತಿಗೆ ಒಳಪಟ್ಟಿರುತ್ತದೆ.

ಪೊಲೀಸ್ ಮಹಾನಿರ್ದೇಶಕರು ಮತ್ತು ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಕಛೇರಿ, ಬೆಂಗಳೂರು ಇವರ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ 25 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಇಂಧನ ಖರೀದಿ ಮತ್ತು ಜೈಲರ್ ಮತ್ತು ವಾರ್ಡನ್ ನೇಮಕಾತಿಗೆ ಸಂಬಂಧಿಸಿದ ವೆಚ್ಚಕ್ಕಾಗಿ ಹಣ ಪಡೆಯಲಾಗಿದೆ ಎಂದು ಗಮನಿಸಲಾಯಿತು. ಜೈಲರ್ ಮತ್ತು ವಾರ್ಡನ್ ನೇಮಕಾತಿಗಾಗಿ ₹1.50 ಕೋಟಿ ಹಣವನ್ನು ಸೆಳೆಯಲಾಯಿತು (ಮಾರ್ಚ್ 2018) ಮತ್ತು ಕೇಂದ್ರೀಯ ಕಾರಾಗೃಹ, ಬೆಂಗಳೂರು ಇವರ ವೈಯಕ್ತಿಕ ಠೇವಣಿ ಖಾತೆಯಲ್ಲಿ ಇಡಲಾಯಿತು. ಇದು ಕರ್ನಾಟಕ ಆರ್ಥಿಕ ಸಂಹಿತೆಯ ಅವಕಾಶಗಳ ಉಲ್ಲಂಘನೆಯಾಗಿದೆ.

ಆದಾಗ್ಯೂ, ₹1.50 ಕೋಟಿಗೆ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸುವಾಗ (ಏಪ್ರಿಲ್ 2018) ₹1,41,60,550/-ಕ್ಕೆ ವೋಚರುಗಳನ್ನು ಸಲ್ಲಿಸಲಾಯಿತು ಮತ್ತು ₹8,39,450/- ಬಳಸಲಾರದೆ ಉಳಿಯಿತು. ಖಜಾನೆಯು ಬಳಸದ ಮೊತ್ತವನ್ನು ಪರಿಶೀಲಿಸದೆಯೇ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು

ಅಂಗೀಕರಿಸಿತು ಎಂಬುದನ್ನು ಲೆಕ್ಕ ಪರಿಶೋಧನೆಯು ಗಮನಿಸಿತು. ಬಳಸದ ಮೊತ್ತವನ್ನು 2 ವರ್ಷಗಳ ವಿಳಂಬದೊಂದಿಗೆ ಹಿಂತಿರುಗಿಸಲಾಯಿತು (ಫೆಬ್ರವರಿ 2020).

ಕೆಲಸದ ಒತ್ತಡದಿಂದಾಗಿ ಬಳಸದ ಮೊತ್ತವನ್ನು ರವಾನಿಸುವಲ್ಲಿ ವಿಳಂಬ ಉಂಟಾಯಿತು ಎಂದು ಕಾರಾಗೃಹ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ನವೆಂಬರ್ 2022). ಬಳಸದ ಮೊತ್ತವನ್ನು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯ ಜೊತೆಗೆ ಹಿಂತಿರುಗಿಸಬೇಕಾಗಿದ್ದರಿಂದ ಉತ್ತರವು ಒಪ್ಪತಕ್ಕದಲ್ಲ.

### *4.3.6 ಅನುಮೋದನೆಯನ್ನು ತಪ್ಪಿಸಲು ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ಮೊತ್ತದ ಬಿಲ್ಲುಗಳ ವಿಭಜನೆ*

ಗೃಹ ಇಲಾಖೆಯಲ್ಲಿ ₹ ಎರಡು ಲಕ್ಷಕ್ಕೆ ಮೀರಿದ ಮೊತ್ತದ ಹಣ ಪಡೆಯಲು ಬಟವಾಡೆ ಅಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿ ಪಡೆಯುವ ಅಗತ್ಯತೆ ಇತ್ತು.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ, ಲೆಕ್ಕಪರಿಶೋಧನೆಯು ಒಬ್ಬ ಬಟವಾಡೆ ಅಧಿಕಾರಿ (ಗೃಹ), ಬೆಂಗಳೂರು ಪ್ರತಿಯೊಂದು ಬಿಲ್ಲಿಗೂ ₹ ಎರಡು ಲಕ್ಷಗಳ ಹಾಗೆ ನಾಲ್ಕು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ₹ಎಂಟು ಲಕ್ಷಗಳನ್ನು ಡಿಸೆಂಬರ್ 2019ರ ತಿಂಗಳಲ್ಲಿ ಬಾಂಬ್ ಸ್ಫೋಟ ತನಿಖೆಗೆ ಸಂಬಂಧಿಸಿದ ಕಾನೂನು ಪತ್ರಗಳ ನಕಲು ಪತ್ರಗಳನ್ನು ಮಾಡಿಸಲು ಹಣ ಪಡೆಯಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಗೃಹ ಇಲಾಖೆಯಲ್ಲಿ, ಒಬ್ಬ ಬಟವಾಡೆ ಅಧಿಕಾರಿ (ಕಾರಾಗೃಹ), ಬೆಂಗಳೂರು ಇವರು ₹49.50 ಲಕ್ಷಗಳನ್ನು ಖೈದಿಗಳಿಗೆ ಕೂಲಿ ಹಣವನ್ನು ಪಾವತಿ ಮಾಡಲು ಮೂರು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಪಡೆಯಲಾಗಿತ್ತು (ಮಾರ್ಚ್ 2018).

ಎರಡೂ ಪ್ರಕರಣಗಳಲ್ಲಿ ಇಲಾಖೆಯು ತನಗೆ ನಿಗದಿಪಡಿಸಿದ್ದ ಮಿತಿಯನ್ನು ಮೀರಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಂದ ಹಣ ಪಡೆಯಲು ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆದಿರಲಿಲ್ಲ, ಖಜಾನೆ ಅಧಿಕಾರಿಗಳು ಆರ್ಥಿಕ ಇಲಾಖೆಯ ಸೂಚನೆಗಳ ಸ್ಪಷ್ಟ ಉಲ್ಲಂಘನೆಯೊಂದಿಗೆ ಬಿಲ್ಲನ್ನು ಪಾಸ್ ಮಾಡಿದರು. ಇಲಾಖೆಗಳು ಆರ್ಥಿಕ ಔಚಿತ್ಯತೆ ಮತ್ತು ವಿವೇಚನೆಯನ್ನು ಅನುಸರಿಸಬೇಕು.

### *4.3.7 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಿಂದ ಪಡೆದ ಹಣವನ್ನು ಉದ್ದೇಶ ಲೆಕ್ಕಶೀರ್ಷಿಕೆ–051 ಸಾಮಾನ್ಯ ವೆಚ್ಚಗಳಿಗೆ ಬಳಸುವಿಕೆ*

ಪೊಲೀಸ್ ಕಮೀಷನರ್‌ರವರ ಕಛೇರಿ, ಮೈಸೂರು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ನೇಮಕಾತಿ, ಇಂಧನ ಖರೀದಿ (ಪೆಟ್ರೋಕಾರ್ಡ್), ಇತರೆ ವೆಚ್ಚಗಳು ಮುಂತಾದ ವಿವಿಧ ಉದ್ದೇಶಗಳಿಗೆ ಹಣ ಪಡೆಯುವ ಅಧಿಕಾರವನ್ನು ಹೊಂದಿತ್ತು. ಇವರ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪರಿಶೀಲನೆಯಲ್ಲಿ ಕಛೇರಿಯು ₹15 ಲಕ್ಷ ಮೊತ್ತದ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನಿಂದ 2055 ಪ್ರಧಾನ ಲೆಕ್ಕಶೀರ್ಷಿಕೆ ಅಡಿಯಲ್ಲಿನ ಉದ್ದೇಶ ಲೆಕ್ಕಶೀರ್ಷಿಕೆ 051–ಸಾಮಾನ್ಯ ವೆಚ್ಚಗಳು ಅಡಿಯಲ್ಲಿ ಹಣ ಪಡೆದಿರುವುದನ್ನು ಗಮನಿಸಲಾಯಿತು.

ಇದಕ್ಕೆ ಸಂಬಂಧಿಸಿದ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಅಡ್ಡಪರಿಶೀಲನೆಯಲ್ಲಿ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳಿಗೆ ಬೆಂಬಲವಾಗಿ ನೀಡಿದ್ದ ವೋಚರುಗಳು ಇಂಧನ ಖರೀದಿ ವೋಚರುಗಳಾಗಿದ್ದವು ಎಂಬುದನ್ನು ಗಮನಿಸಲಾಯಿತು. ಅಲ್ಲಿ ನಿರ್ದಿಷ್ಟ ಉದ್ದೇಶ ಲೆಕ್ಕ ಶೀರ್ಷಿಕೆ 195 ಸಾರಿಗೆ ವೆಚ್ಚ–ಇಂಧನ ಖರೀದಿ ಇದ್ದುದರಿಂದ ಹಣವನ್ನು 051 ಸಾಮಾನ್ಯ ವೆಚ್ಚಗಳು ಅಡಿಯಲ್ಲಿ ಪಡೆಯುವುದು ನಿಧಿಗಳ ವಿಚಲನೆಗೆ ಕಾರಣವಾಯಿತು.

## 4.4 ವೈಯಕ್ತಿಕ ಠೇವಣಿ ಖಾತೆಗಳು

ಕರ್ನಾಟಕ ಆರ್ಥಿಕ ಸಂಹಿತೆ 1958ರ 286ನೇ ನಿಯಮವು ಹಣಕಾಸು ವ್ಯವಹಾರಗಳಿಗೆ ಸಾಮಾನ್ಯ ಲೆಕ್ಕಪತ್ರ ವ್ಯವಸ್ಥೆಯು ಸೂಕ್ತವಲ್ಲದ ಸಂದರ್ಭಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಲು ಅವಕಾಶ ಒದಗಿಸುತ್ತದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕುವ ಮೂಲಕ ರಚಿಸಲಾದ

ವೈಯಕ್ತಿಕ ಠೇವಣಿ ಖಾತೆಗಳನ್ನು ಆರ್ಥಿಕ ವರ್ಷದ ಕೊನೆಯಲ್ಲಿ ಮುಕ್ತಾಯಗೊಳಿಸಬೇಕು. ಆದಾಗ್ಯೂ, ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಿರುವಂತೆ, ನಂತರದ ವರ್ಷಕ್ಕೆ ಗಮನಾರ್ಹ ಶಿಲ್ಕುಗಳನ್ನು ಮುಂದುವರೆಸಿದ್ದು ಸಂಹಿತೆಯ ನಿಯಮಗಳನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಅನುಸರಿಸಿರುವುದಿಲ್ಲ. ವೈಯಕ್ತಿಕ ಠೇವಣಿ ಖಾತೆಗಳ ಆಡಳಿತಾಧಿಕಾರಿಗಳು ಸಂಚಿತ ನಿಧಿಗೆ ವರ್ಗಾಯಿಸಬೇಕಾದ ಶಿಲ್ಕಿನ ಬಗ್ಗೆ ಖಜಾನೆ ಅಧಿಕಾರಿಗೆ ತಿಳಿಸಬೇಕು. ತಮ್ಮ ವೈಯಕ್ತಿಕ ಠೇವಣಿ ಖಾತೆಗಳನ್ನು ನಿಗದಿತ ಅವಧಿಯನ್ನು ಮೀರಿ ಮುಂದುವರೆಸಲು ಆಡಳಿತಾಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ಖಜಾನೆಯ ಲೆಕ್ಕಗಳೊಂದಿಗೆ ತಮ್ಮ ವೈಯಕ್ತಿಕ ಠೇವಣಿ ಖಾತೆಗಳ ಲೆಕ್ಕಗಳೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡುವುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿದೆ.

### *4.4.1 ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳ ಪ್ರವೃತ್ತಿಗಳು*

2017–18 ರಿಂದ 2021–22ರ ಅವಧಿಯ ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳನ್ನು **ಕೋಷ್ಟಕ–4.6**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–4.6: ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಇರಿಸಲಾದ ನಿಧಿಗಳು.**

(₹ ಕೋಟಿಗಳಲ್ಲಿ)

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ಅಂತಿಮ ಶಿಲ್ಕು |
|---|---|---|---|---|
| **2017–18** | 2,942.12 | 4,194.46 | 4,395.06 | 2,741.52 |
| **2018–19** | 2,741.52 | 5,350.98 | 4,007.36 | 4,085.14 |
| **2019–20** | 4,085.14 | 6,557.67 | 6,221.25 | 4,421.56 |
| **2020–21** | 4,421.56 | 4,711.16 | 5,143.49 | 3,989.23 |
| **2021–22** | 3,989.23 | 4,787.13 | 4,670.75 | 4,105.61 |

*ಆಕರ: ಹಣಕಾಸು ಲೆಕ್ಕಗಳು.*

2020–21ರಲ್ಲಿ ಅಸ್ತಿತ್ವದಲ್ಲಿದ್ದ 71 ವೈಯಕ್ತಿಕ ಠೇವಣಿ ಖಾತೆಗಳೊಂದಿಗೆ, 2021–22ರ ಅವಧಿಯಲ್ಲಿ 11 ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಲಾಯಿತು, ₹0.47 ಕೋಟಿಗಳ ಶಿಲ್ಕು ಇರುವ 4 ವೈಯಕ್ತಿಕ ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸಲಾಯಿತು ಮತ್ತು ವರ್ಷದ ಅಂತ್ಯದ ವೇಳೆಗೆ 78 ವೈಯಕ್ತಿಕ ಠೇವಣಿ ಖಾತೆಗಳು ಅಸ್ಥಿತ್ವದಲ್ಲಿದ್ದವು. 2021–22ರಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಜಮೆಯಾಗಿದ್ದ ಒಟ್ಟು ₹4,787.13 ಕೋಟಿ ಪೈಕಿ ₹1,471.75 ಕೋಟಿಗಳನ್ನು ಮಾರ್ಚ್ 2022ರಲ್ಲಿ ವರ್ಗಾಯಿಸಲಾಯಿತು. ಠೇವಣಿ ಖಾತೆಯಲ್ಲಿನ ಮುಕ್ತಾಯದ ಶಿಲ್ಕು 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ಕನಿಷ್ಠ ಏರಿಕೆ ತೋರಿಸಿತ್ತು. ಅಂತಿಮ ಶಿಲ್ಕುಗಳು ನಗರ ಸ್ಥಳೀಯ ಸಂಸ್ಥೆಗಳಿಗೆ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ) ಬಿಡುಗಡೆ ಮಾಡಿದ್ದ XIV ಮತ್ತು XVನೇ ಹಣಕಾಸು ಆಯೋಗದ ಅನುದಾನಗಳ ಬಳಕೆ ಮಾಡದೆ ಉಳಿದಿದ್ದ ₹1,054.58 ಕೋಟಿಗಳನ್ನು ಒಳಗೊಂಡಿತ್ತು.

2021–22ರ ಅಂತ್ಯದ ವೇಳೆಗೆ ಹೆಚ್ಚು ಶಿಲ್ಕುಗಳನ್ನು ಹೊಂದಿರುವ ಕೆಲವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗಳಿಗೆ ಸಂಬಂಧಿಸಿದಂತೆ, ನಿವ್ವಳ ಮುಕ್ತಾಯದ ಶಿಲ್ಕನ್ನು **ಕೋಷ್ಟಕ–4.7**ರಲ್ಲಿ ನೀಡಲಾಗಿದೆ. ಇದು ನಕರಾತ್ಮಕ ಶಿಲ್ಕು ಹೊಂದಿರುವ ಕೆಲವು ವೈಯಕ್ತಿಕ ಠೇವಣಿ ಖಾತೆಗಳಿಂದಾಗಿ ಹೊಂದಾಣಿಕೆಯಾಗಿದೆ.

**ಕೋಷ್ಟಕ–4.7:** ವೈಯಕ್ತಿಕ **ಠೇವಣಿ ಖಾತೆಗಳಲ್ಲಿನ ಅಂತಿಮ ಶುಲ್ಕ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಆಡಳಿತಾಧಿಕಾರಿ | ಮೊತ್ತ |
|---|---|---|
| **1** | ವೈಯಕ್ತಿಕ ಠೇವಣಿಗಳು –ಸಾಮಾನ್ಯ | 346.00 |
| **2** | ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿಗಳು | 8,591.97 |
| **3** | ನಿರ್ದೇಶಕರು, ಪರಿಶಿಷ್ಟ ಪಂಗಡ ಇಲಾಖೆ ಅವರ ವೈಯಕ್ತಿಕ ಠೇವಣಿಗಳ ಖಾತೆಗಳು | 351.46 |
| **4** | ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿಗಳ ವೈಯಕ್ತಿಕ ಠೇವಣಿಗಳು | 244.66 |

*ಆಕರ–ಋಣ, ಠೇವಣಿ ಇರಸಾಲು ಲೆಡ್ಜರ್‌ಗಳು*

### *4.4.2 ನಿಷ್ಕ್ರಿಯ ಮತ್ತು ಲೆಕ್ಕ ಹೊಂದಾಣಿಕೆ ಮಾಡದ ವೈಯಕ್ತಿಕ ಠೇವಣಿ ಖಾತೆಗಳು*

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286 ಎ ಪ್ರಕಾರ, ರಾಜ್ಯ ಸರ್ಕಾರವು ಗಣನೀಯ ಅವಧಿಯ ವರೆಗೆ ನಿಷ್ಕ್ರಿಯವಾಗಿರುವ ಎಲ್ಲಾ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸುವ ಅಗತ್ಯವಿದೆ. 2021–22ರಲ್ಲಿ, 78 ವೈಯಕ್ತಿಕ ಠೇವಣಿ ಖಾತೆಗಳ ಪೈಕಿ 21 ವೈಯಕ್ತಿಕ ಠೇವಣಿ ಖಾತೆಗಳು (12 ವೈಯಕ್ತಿಕ ಠೇವಣಿ ಖಾತೆಗಳು ₹50.67 ಕೋಟಿ ಜಮೆ ಶಿಲ್ಕು ಮತ್ತು ಏಳು ವೈಯಕ್ತಿಕ ಠೇವಣಿ ಖಾತೆಗಳು ₹2.02 ಕೋಟಿ ಖರ್ಚು ಶಿಲ್ಕು ಮತ್ತು ಶೂನ್ಯ ಶಿಲ್ಕಿನ ಎರಡು ವೈಯಕ್ತಿಕ ಠೇವಣಿ ಖಾತೆಗಳು) ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ನಿಷ್ಕ್ರಿಯವಾಗಿತ್ತು (**ಅನುಬಂಧ–4.2**). ಆಡಳಿತಾಧಿಕಾರಿಗಳು ಈ ಶಿಲ್ಕುಗಳನ್ನು ವಿಶ್ಲೇಷಿಸಿ, ಲೆಕ್ಕ ಹೊಂದಾಣಿಕೆ ಮಾಡಿ ಖಾತೆಗಳನ್ನು ಮುಕ್ತಾಯಗೊಳಿಸಿ ಬಳಸದ ಮೊತ್ತವನ್ನು ರಾಜ್ಯ ಸಂಚಿತ ನಿಧಿಗೆ ಹಿಂತಿರುಗಿಸಲು ಕ್ರಮ ಕೈಗೊಳ್ಳಬೇಕಿದೆ.

ಸರ್ಕಾರಿ ಆದೇಶದ (ನವೆಂಬರ್ 2022) ಪ್ರಕಾರ 58 ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಕ್ತಾಯಗೊಳಿಸಿದೆ ಎಂದು ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ತಿಳಿಸಿತು (ಜನವರಿ 2023). ಆದರೆ, ಇದನ್ನು ಮಹಾಲೇಖಾಪಾಲರು (ಲೆ ಮತ್ತು ಹ) ಇವರೊಂದಿಗೆ ಸಮನ್ವಯಗೊಳಿಸಬೇಕಾಗಿದೆ ಮತ್ತು ಅಂತಿಮ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

## ಸಿ. ಮಾಪನಗಳಿಗೆ ಸಂಬಂಧಿಸಿದ ವ್ಯಾಖ್ಯಾನ

## 4.5 ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು

### *4.5.1 ಪ್ರಮುಖ ಅಮಾನತ್ತು ಮತ್ತು ಋಣ ಠೇವಣಿ ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ಬಾಕಿ ಉಳಿದಿರುವ ಶಿಲ್ಕುಗಳು*

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ಇರಿಸಲಾಗುತ್ತದೆ. ಸ್ವೀಕೃತಿಗಳು ಮತ್ತು ಪಾವತಿಗಳ ವಹಿವಾಟುಗಳನ್ನು ಅವುಗಳ ಸ್ವರೂಪದ ಮಾಹಿತಿಯ ಕೊರತೆಯಿಂದಾಗಿ ಅಥವಾ ಇತರೆ ಕಾರಣಗಳಿಗಾಗಿ ಲೆಕ್ಕದ ಅಂತಿಮ ಶೀರ್ಷಿಕೆಗೆ ಜಮೆ/ಖರ್ಚು ಹಾಕಲಾಗುವುದಿಲ್ಲ. ಈ ಅಮಾನತ್ತು ಲೆಕ್ಕವು ಅಂತಿಮವಾಗಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿ ಖರ್ಚಿನ ಕಳೆಯುವಿಕೆ ಅಥವಾ ಜಮೆಯ ಕಳೆಯುವಿಕೆಯ ಮೂಲಕ ಲೆಕ್ಕ ಹಾಕಿ ತೀರಿಕೆ ಮಾಡಲಾಗುತ್ತದೆ. ಈ ಮೊತ್ತಗಳು ತೀರಿಕೆಯಾಗದೆ ಉಳಿದಿದ್ದರೆ ಅಮಾನತ್ತು ಶೀರ್ಷಿಕೆಯಲ್ಲಿ ಶಿಲ್ಕುಗಳು ಸಂಗ್ರಹವಾಗುತ್ತವೆ ಮತ್ತು ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳು ನಿಖರವಾಗಿ ಪ್ರತಿಬಿಂಬಿತವಾಗುವುದಿಲ್ಲ. ಮಹಾಲೇಖಾಪಾಲರು (ಲೆ ಮತ್ತು ಹ) ನಿರ್ವಹಿಸಿರುವ ಲೆಡ್ಜರಿನಲ್ಲಿ ದಾಖಲಿಸಲಾದ ಕೆಲವು ಪ್ರಮುಖ ಅಮಾನತ್ತುಗಳನ್ನು **ಕೋಷ್ಟಕ–4.8**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.8: ಅಮಾನತ್ತು ಮತ್ತು ಇರಸಾಲು ಶೀರ್ಷಿಕೆಗಳಡಿಯ ಶಿಲ್ಕುಗಳು**

(₹ ಕೋಟಿಗಳಲ್ಲಿ)

| ಕಿರು ಲೆಕ್ಕ ಶೀರ್ಷಿಕೆ | 2019–20 | | 2020–21 | | 2021–22 | |
|---|---|---|---|---|---|---|
| ಪ್ರಧಾನ ಲೆಕ್ಕ ಶೀರ್ಷಿಕೆ 8658–ಅಮಾನತ್ತು | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| 101–ಪಾವತಿ ಮತ್ತು ಲೆಕ್ಕ ಕಛೇರಿ ಅಮಾನತ್ತು | 270.30 | 10.86 | 283.51 | 3.40 | 273.17 | 4.07 |
| ನಿವ್ವಳ | ಖರ್ಚು 259.44 | | ಖರ್ಚು 280.11 | | ಖರ್ಚು 269.10 | |
| 102–ಅಮಾನತ್ತು ಲೆಕ್ಕ–ಸಿವಿಲ್ | 18.14 | 414.95 | 18.42 | 378.75 | 16.94 | 372.49 |
| ನಿವ್ವಳ | ಜಮೆ 396.81 | | ಜಮೆ 360.33 | | ಜಮೆ 355.55 | |
| 110– ರಿಸರ್ವ್ ಬ್ಯಾಂಕ್ ಅಮಾನತ್ತು – ಕೇಂದ್ರ ಲೆಕ್ಕಪತ್ರ ಕಛೇರಿ | 17.59 | 154.67 | 72.61 | 53.35 | 172.52 | 35.49 |
| ನಿವ್ವಳ | ಜಮೆ 137.08 | | ಖರ್ಚು 19.26 | | ಖರ್ಚು 137.03 | |

| ಕಿರು ಲೆಕ್ಕ ಶೀರ್ಷಿಕೆ | 2019-20 | | 2020-21 | | 2021-22 | |
|---|---|---|---|---|---|---|
| ಪ್ರಧಾನ ಲೆಕ್ಕ ಶೀರ್ಷಿಕೆ 8782-ಜಮೆಗಳು | | | | | | |
| 102-1 ಲೋಕೋಪಯೋಗಿ ಕಾಮಗಾರಿಗಳು-ಖಜಾನೆಗೆ ಜಮೆ | 82.61 | ಶೂನ್ಯ | 82.61 | ಶೂನ್ಯ | 82.61 | ಶೂನ್ಯ |
| ನಿವ್ವಳ | ಖರ್ಚು 82.61 | | ಖರ್ಚು 82.61 | | ಖರ್ಚು 82.61 | |
| 103-1 ಅರಣ್ಯ ಜಮೆಗಳು | 12.13 | ಶೂನ್ಯ | 12.13 | ಶೂನ್ಯ | 12.13 | ಶೂನ್ಯ |
| ನಿವ್ವಳ | ಖರ್ಚು 12.13 | | ಖರ್ಚು 12.13 | | ಖರ್ಚು 12.13 | |

*ಆಕರ: ಋಣ, ಠೇವಣಿ ಇರಸಾಲುಗಳ ಲೆಡ್ಜರ್*

ಸರ್ಕಾರವು, ಸಾರ್ವಜನಿಕ ಹಣದ ಪಾಲಕನಾಗಿ ಅವುಗಳನ್ನು ಸ್ವೀಕರಿಸಿ ನಂಬಿಕೆಯಲ್ಲಿ ಇರಿಸುವ ವ್ಯವಹಾರಗಳನ್ನು ಸಾಲ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಕ್ಕಶೀರ್ಷಿಕೆಯಲ್ಲಿ ನಿರ್ವಹಿಸುತ್ತದೆ.

2021-22ರ ರಾಜ್ಯ ಹಣಕಾಸು ಖಾತೆಗಳ ನಿಖರತೆಯು ಈ ಕೆಳಗೆ ಕಾಣಿಸಿರುವಂತಹ ಅಂಶಗಳಿಂದ ಪ್ರತಿಕೂಲವಾಗಿ ಬಾಧಿತವಾಗಿದೆ:

(i) ಅಂತಿಮ ವರ್ಗೀಕರಣಕ್ಕಾಗಿ ಕಾಯುತ್ತಿರುವ ಹೆಚ್ಚಿನ ಸಂಖ್ಯೆಯ ಅಮಾನತ್ತು ವಹಿವಾಟುಗಳು ;

(ii) ಸಾಲ ಠೇವಣಿ ಇರಸಾಲುಗಳ ಲೆಕ್ಕ ಶೀರ್ಷಿಕೆಯಲ್ಲಿ ಹೆಚ್ಚಿದ ವ್ಯತಿರಿಕ್ತ ಶಿಲ್ಕುಗಳ ಪ್ರಮಾಣ ಮತ್ತು ಮೊತ್ತ.

ಹಣಕಾಸು ಲೆಕ್ಕಗಳು ಈ ಶೀರ್ಷಿಕೆಗಳ ಅಡಿಯಲ್ಲಿ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಬಾಕಿ ಇರುವ ಖರ್ಚು ಮತ್ತು ಜಮೆ ಶಿಲ್ಕುಗಳನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸುವ ಮೂಲಕ ಬಾಕಿ ಉಳಿದಿರುವ ಶಿಲ್ಕುಗಳನ್ನು ಲೆಕ್ಕ ಮಾಡಲಾಗುತ್ತದೆ. ಈ ಶೀರ್ಷಿಕೆಗಳ ಅಡಿಯಲ್ಲಿರುವ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ

- **ಪಾವತಿ ಮತ್ತು ಲೆಕ್ಕ ಕಛೇರಿ ಅಮಾನತ್ತು**

ಭಾರತ ಸರ್ಕಾರದ ವಿವಿಧ ಪ್ರತ್ಯೇಕ ಪಾವತಿ ಮತ್ತು ಲೆಕ್ಕ ಕಛೇರಿಗಳು ಮತ್ತು ಮಹಾಲೇಖಾಪಾಲರ ನಡುವಿನ ವಹಿವಾಟುಗಳ ಇತ್ಯರ್ಥ ಈ ಶೀರ್ಷಿಕೆಯ ಉದ್ದೇಶವಾಗಿದೆ. ಮಹಾಲೇಖಾಪಾಲರ ಪುಸ್ತಕಗಳಲ್ಲಿ ಈ ಶೀರ್ಷಿಕೆಯಲ್ಲಿ ಆರಂಭದಲ್ಲಿ ದಾಖಲಿಸಲಾದ ವಹಿವಾಟುಗಳನ್ನು ಪಾವತಿ ಮತ್ತು ಲೆಕ್ಕ ಕಛೇರಿಗಳಿಂದ ಚೆಕ್/ಡಿಮಾಂಡ್ ಡ್ರಾಫ್ಟ್‌ಗಳ ಸ್ವೀಕೃತಿಯ ಮೇಲೆ ಮತ್ತು ಪಾವತಿ ಮತ್ತು ಲೆಕ್ಕ ಕಛೇರಿಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ಸ್ವೀಕರಿಸಿದ ಮೊತ್ತಕ್ಕೆ ಸಂಬಂಧಿಸಿದಂತೆ ಚೆಕ್/ಡಿಮಾಂಡ್ ಡ್ರಾಫ್ಟ್‌ಗಳ ವಿತರಣೆ ಮೇಲೆ ಇತ್ಯರ್ಥ ಗೊಳಿಸಲಾಗುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿ ಬಾಕಿ ಉಳಿದಿರುವ ಖರ್ಚು ಶಿಲ್ಕು ಎಂದರೆ ಪಾವತಿ ಮತ್ತು ಲೆಕ್ಕ ಕಛೇರಿಗಳ ಪರವಾಗಿ ಮಹಾಲೇಖಾಪಾಲರು ಮಾಡಿರುವ ಪಾವತಿಗಳು ಇನ್ನೂ ಮರುಪಡೆಯಲು ಬಾಕಿ ಉಳಿದಿರುವುದು. ಬಾಕಿ ಉಳಿದಿರುವ ಜಮೆ ಶಿಲ್ಕು ಅಂದರೆ ಪಾವತಿ ಮತ್ತು ಲೆಕ್ಕ ಕಛೇರಿಗಳ ಪರವಾಗಿ ಮಹಾಲೇಖಾಪಾಲರು ಸ್ವೀಕರಿಸಲಾದ ಮೊತ್ತಗಳು ಇನ್ನೂ ಪಾವತಿಸಬೇಕಾಗಿದೆ. ಈ ಶೀರ್ಷಿಕೆಯ ಅಡಿಯಲ್ಲಿ ನಿವ್ವಳ ಖರ್ಚು 2020-21ರಲ್ಲಿ 2019-20ಕ್ಕಿಂತ ಹೆಚ್ಚಾಗಿತ್ತು ಆದರೆ, 2021-22ರಲ್ಲಿ ಕಡಿಮೆಯಾಯಿತು ಮತ್ತು ಇದರ ತೀರಿಕೆ/ಇತ್ಯರ್ಥ ಆದ ಮೇಲೆ ರಾಜ್ಯ ಸರ್ಕಾರದ ನಗದು ಶಿಲ್ಕು ಹೆಚ್ಚಾಗುತ್ತದೆ. ಈ ಬಾಬ್ತು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ ವಹಿವಾಟುಗಳು ಮತ್ತು ಕೇಂದ್ರ ಸರ್ಕಾರದ ಸಿವಿಲ್ ಪಿಂಚಣಿದಾರರಿಗೆ ರಾಜ್ಯ ಸರ್ಕಾರವು ಮಾಡಿದ ಪಾವತಿಗಳಿಗೆ ಸಂಬಂಧಿಸಿದೆ.

- **ಅಮಾನತ್ತು ಲೆಕ್ಕ (ಸಿವಿಲ್)**

ವರ್ಗೀಕರಣದ ಸಂಪೂರ್ಣ ವಿವರಗಳು ಲಭ್ಯವಿಲ್ಲದ ವಹಿವಾಟುಗಳು, ಅಥವಾ ಅದಕ್ಕೆ ಪೂರಕವಾದ ಸಂಬಂಧಿತ ವೋಚರುಗಳು /ಅನುಸೂಚಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ಪಾವತಿ/ನಗದು ಲೆಕ್ಕಗಳ ಖಜಾನೆ ಅನುಸೂಚಿಗಳಲ್ಲಿ ವರದಿ ಮಾಡಲಾದ ಅಂಕಿ ಅಂಶಗಳು ಮತ್ತು ಪೂರಕ ವೋಚರುಗಳ ಅಂಕಿಗಳ ನಡುವೆ ವ್ಯತ್ಯಾಸಗಳಿದ್ದರೆ ಇತ್ಯಾದಿಗಳು ಈ ಶೀರ್ಷಿಕೆಯಲ್ಲಿ ಬಾಕಿ ಇರುವ ಅಂಕಿಗಳ ಪ್ರಮುಖ ಭಾಗವಾಗಿರುತ್ತದೆ.

ರೈಲ್ವೇ, ರಕ್ಷಣಾ ಮತ್ತು ಅಂಚೆ ಮತ್ತು ದೂರಸಂಪರ್ಕ ಇಲಾಖೆಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ನಡೆಯುವ ವಹಿವಾಟುಗಳನ್ನು ಸಂಬಂಧಿಸಿದ ಅಧಿಕಾರಿಗಳು ಬಾಕಿಗಳನ್ನು ಇತ್ಯರ್ಥಗೊಳಿಸುವವರೆಗೆ ಆರಂಭದಲ್ಲಿ ಈ ಶೀರ್ಷಿಕೆಯಡಿ ವರ್ಗೀಕರಿಸಲಾಗುತ್ತದೆ. ಈ ಶೀರ್ಷಿಕೆಯಡಿಯಲ್ಲಿ ನಿವ್ವಳ ಜಮೆ ವರ್ಷದಲ್ಲಿ ₹4.78 ಕೋಟಿಗಳಷ್ಟು ಕಡಿಮೆಯಾಗಿದೆ. ರೈಲ್ವೇ (₹3.14 ಕೋಟಿ) ಮತ್ತು ರಕ್ಷಣಾ ಇಲಾಖೆಗೆ (₹0.39 ಕೋಟಿ) ಸಂಬಂಧಿಸಿದಂತೆ, ಅಮಾನತ್ತು ಇತ್ಯರ್ಥದ ನಂತರ ನಗದು ಶಿಲ್ಕು ಹೆಚ್ಚಾಗುತ್ತದೆ. ಉಳಿದವುಗಳಿಗೆ ಸಂಬಂಧಿಸಿದಂತೆ ನಗದು ಶಿಲ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು ಕೇಂದ್ರ ಲೆಕ್ಕ ಕಛೇರಿ**

ರಿಸರ್ವ್ ಬ್ಯಾಂಕ್ ಕೇಂದ್ರ ಲೆಕ್ಕ ಕಛೇರಿ ವಿಭಾಗಕ್ಕೆ ಸೂಚನೆಯನ್ನು ಕಳುಹಿಸುವ ಮೂಲಕ ಎರಡೂ ಸರ್ಕಾರಗಳ ನಗದು ಶಿಲ್ಕುಗಳ ನಡುವೆ ಹಣ ಇತ್ಯರ್ಥವನ್ನು ಮಾಡುವ ಅಂತರ–ಸರ್ಕಾರಿ ವಹಿವಾಟುಗಳನ್ನು ದಾಖಲಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ಮಾಡಿದ ಹಣ ಇತ್ಯರ್ಥ ಸೂಚನೆಯ ಸ್ವೀಕೃತಿಯ ಮೇಲೆ ಮೊತ್ತವನ್ನು ಅಂತಿಮ ಶೀರ್ಷಿಕೆಗೆ ವರ್ಗಾಯಿಸುವ ಮೂಲಕ ಈ ಅಮಾನತ್ತು ಶೀರ್ಷಿಕೆಯನ್ನು ಚುಕ್ತಗೊಳಿಸಲಾಗುತ್ತದೆ. ಭಾರತ ಸರ್ಕಾರದಿಂದ ಪಡೆದ ಅನುದಾನ, ಸಾಲಗಳು ಮತ್ತು ಸಾಲಗಳ ಮರುಪಾವತಿಗಳು, ಭದ್ರತೆಗಳ ವಿಮುಕ್ತತೆ ಮತ್ತು ಬ್ಯಾಂಕಿನ ಸಾರ್ವಜನಿಕ ಋಣ ಕಛೇರಿಗಳು ಪಾವತಿಸಿದ ಅದರ ಮೇಲಿನ ಬಡ್ಡಿ ಪಾವತಿ ಮತ್ತು ಪೂರೈಕೆ ಮತ್ತು ವಿಲೇವಾರಿಗಳ ಮಹಾನಿರ್ದೇಶಕರು ಸರ್ಕಾರಿ ಇಲಾಖೆಗಳಿಗೆ ಸರಬರಾಜು ಮಾಡಿದ ಸಾಮಗ್ರಿಗಳ ಪಾವತಿಗಳು ಈ ಅಮಾನತ್ತು ಶೀರ್ಷಿಕೆಯ ಮೂಲಕ ಇತ್ಯರ್ಥಗೊಳ್ಳುವ ಪ್ರಮುಖ ವಹಿವಾಟುಗಳು. 2021–22ರಲ್ಲಿ ಈ ಶೀರ್ಷಿಕೆಯಡಿ ಖರ್ಚು ಶುಲ್ಕ ₹137.03 ಕೋಟಿಗಳಷ್ಟಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ₹117.77 ಕೋಟಿಗಳಷ್ಟು ಹೆಚ್ಚಾಗಿದೆ.

- **ಖಜಾನೆಗೆ ಸಾರ್ವಜನಿಕ ಕಾಮಗಾರಿಗಳ ಇರಸಾಲುಗಳು**

ಸಾರ್ವಜನಿಕ ಕಾಮಗಾರಿಗಳ ವಿಭಾಗೀಯ ಅಧಿಕಾರಿಗಳು ಇರಸಾಲು ಮಾಡಿದ ಮೊತ್ತವನ್ನು ಖಜಾನೆಯಲ್ಲಿ ಅಂಗೀಕರಿಸಲಾಗಿದೆಯೇ ಎಂಬುದನ್ನು ಗಮನಿಸಲು ಈ ಶೀರ್ಷಿಕೆಯನ್ನು ನಿರ್ವಹಿಸಲಾಗುತ್ತದೆ. 2021–22 ರಲ್ಲಿ ಈ ಶೀರ್ಷಿಕೆಯಡಿಯಲ್ಲಿದ್ದ ₹82.61 ಕೋಟಗಳಷ್ಟು ಖರ್ಚು ಶುಲ್ಕವು ವಿಭಾಗೀಯ ಕಛೇರಿಗಳು ಖಜಾನೆಯೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳದ ಕಾರಣದಿಂದ ಉಂಟಾಗಿದ್ದು ಈ ವ್ಯತ್ಯಾಸಗಳು ದುರುಪಯೋಗ ಪ್ರಕರಣಗಳಿದ್ದಲ್ಲಿ ಪತ್ತೆ ಹಚ್ಚದಿರಲು ಕಾರಣವಾಗಬಹುದಾಗಿದ್ದು ಸರ್ಕಾರಕ್ಕೆ ನಷ್ಟವನ್ನು ಉಂಟು ಮಾಡಬಹುದು.

- **ಖಜಾನೆಗೆ ಅರಣ್ಯ ಇರಸಾಲುಗಳು**

ಅರಣ್ಯ ವಿಭಾಗಗಳ ಮೂಲಕ ಅರಣ್ಯ ಆದಾಯ ಸಂಗ್ರಹಣೆ ಮತ್ತು ಖಜಾನೆಯಲ್ಲಿ ಸರ್ಕಾರಿ ಲೆಕ್ಕಗಳಿಗೆ ಅವುಗಳ ಜಮೆಯು ಆರಂಭದಲ್ಲಿ ಈ ಶೀರ್ಷಿಕೆಯಡಿ ನಡೆಯುತ್ತದೆ. ಹಣ ಇರಸಾಲುಗಳನ್ನು ಖಜಾನೆ ಅಧಿಕಾರಿಗಳು ಒಪ್ಪಿಕೊಂಡು ಲೆಕ್ಕ ಹಾಕಿದ ನಂತರ ಖಜಾನೆ ಲೆಕ್ಕದಲ್ಲಿ ಕಾಣಿಸಿಕೊಳ್ಳುವ ಈ ಶೀರ್ಷಿಕೆಯಲ್ಲಿನ ಖರ್ಚುಗಳು ಜಮೆಗಳಿಂದ ತೀರುವಳಿಗೊಳ್ಳುತ್ತವೆ. ಆದಾಯದ ನಿಜವಾದ ವಸೂಲಿ ಮತ್ತು ಖಜಾನೆಗೆ ಅದರ ಜಮೆಯ ನಡುವಿನ ಸಮಯದ ವಿಳಂಬದಿಂದಾಗಿ, ಈ ಶೀರ್ಷಿಕೆಯಡಿಯಲ್ಲಿ ವಿಭಾಗದ ಲೆಕ್ಕಗಳಲ್ಲಿ ಕಾಣಿಸಿಕೊಳ್ಳುವ ಖರ್ಚುಗಳು ಜಮೆ ಮಾಡಿದ ಹಣವು ಅಂತಿಮವಾಗಿ ಖಜಾನೆ ಲೆಕ್ಕಗಳಲ್ಲಿ ಲೆಕ್ಕ ಹಾಕುವವರೆಗೂ ಕಾಣಿಸಿಕೊಳ್ಳುತ್ತದೆ. ಈ ಶೀರ್ಷಿಕೆಯ ಅಡಿಯಲ್ಲಿ 2021–22ರ ಅಂತ್ಯದಲ್ಲಿ ₹12.13 ಕೋಟಿಗಳ ಖರ್ಚು ಶಿಲ್ಕು ಇತ್ತು.

### *4.5.2 ಋಣ ಠೇವಣಿ ಇರಸಾಲು ಶೀರ್ಷಿಕೆಯ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು*

ಋಣಾತ್ಮಕ ಶಿಲ್ಕುಗಳು ಇರಬಾರದ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಋಣಾತ್ಮಕ ಶಿಲ್ಕುಗಳು ಇದ್ದರೆ ಅವು ವ್ಯತಿರಿಕ್ತ ಶಿಲ್ಕುಗಳು ಎನ್ನಿಸಿಕೊಳ್ಳುತ್ತವೆ. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡದ ಲೆಕ್ಕ ಶೀರ್ಷಿಕೆಯಡಿ ಋಣಾತ್ಮಕ ಶಿಲ್ಕು ಮುಂಗಡದ ಮೂಲ ಮೊತ್ತಕ್ಕಿಂತ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. **ಕೋಷ್ಟಕ–**

**4.9** ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕನ್ನು ತೋರಿಸುತ್ತದೆ. ಸಾರ್ವಜನಿಕ ಋಣ ಲೆಕ್ಕ ಶೀರ್ಷಿಕೆ (6003–00–108–0–01–ರಾಜ್ಯದ ಅಂತರಿಕ ಸಾಲ –ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಸರ್ಕಾರದ ಸಾಲ) ಅಡಿಯಲ್ಲಿನ ಶಿಲ್ಕು 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ₹40.83 ಕೋಟಿಗಳಷ್ಟು ಹೆಚ್ಚಾಯಿತು ಮತ್ತು ಲೆಕ್ಕ ಶೀರ್ಷಿಕೆ 7610–ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ 2020–21ಕ್ಕೆ ಹೋಲಿಸಿದರೆ 2021–22ರಲ್ಲಿ ಶಿಲ್ಕು ₹1.85 ಕೋಟಿಗಳಷ್ಟು ಹೆಚ್ಚಾಯಿತು. ಆದ್ದರಿಂದ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ ವ್ಯತಿರಿಕ್ತ ಶಿಲ್ಕುಗಳನ್ನು ತೆರವುಗೊಳಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ.

**ಕೋಷ್ಟಕ–4.9: ಋಣ, ಠೇವಣಿ, ಇರಸಾಲು ಶೀರ್ಷಿಕೆಗಳ ಅಡಿಯಲ್ಲಿ ವ್ಯತಿರಿಕ್ತ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ವಿವರ | ಮೊತ್ತ | ಕಾರಣ |
|---|---|---|---|---|
| ಸಾರ್ವಜನಿಕ ಋಣ | | | | |
| 1 | 6003–00–108–0–01 | ರಾಜ್ಯ ಸರ್ಕಾರದ ಆಂತರಿಕ ಋಣ–ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ನಿಯಮಿತದಿಂದ ಸಾಲ | (ಖರ್ಚು)174.40 | ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಿಂದ ಪಡೆದ ಸಾಲವನ್ನು ಲೆಕ್ಕಗಳಲ್ಲಿ ತೆಗೆದುಕೊಳ್ಳದಿರುವುದರಿಂದ, ಆದರೆ, ಮರುಪಾವತಿಯನ್ನು ಸರ್ಕಾರಿ ಲೆಕ್ಕದ ಮೂಲಕ ಮಾಡಿರುವುದರಿಂದ. |
| 2 | 6004–03 & 6004–04 | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು | (ಖರ್ಚು) 10.36 | ಇದು ಹದಿಮೂರನೆಯ ಹಣಕಾಸು ಆಯೋಗದ ಶಿಫಾರಿಸಿನ ಮೇಲೆ ಕೇಂದ್ರ ಸರ್ಕಾರದ ಸಾಲಗಳನ್ನು ತೆಗೆದುಹಾಕಿದ ಕಾರಣದಿಂದ (31ಮಾರ್ಚ್ 2010ರಂದು ಲೆಕ್ಕಪತ್ರಗಳಲ್ಲಿ ಬಾಕಿ ಇದ್ದಂತೆ). 2010–12ರ ಅವಧಿಯಲ್ಲಿ ವಿವಿಧ ಪಾವತಿ ಖಾತೆಗಳ ಕಛೇರಿಗಳಿಗೆ ಮಾಡಿದ ಅಧಿಕ ಪಾವತಿಗಳನ್ನು ಹಣಕಾಸು ಮಂತ್ರಾಲಯ, ಭಾರತ ಸರ್ಕಾರ, ಇವರ ಬಾಕಿಗಳಿಗೆ ಹೊಂದಾಣಿಕೆ ಮಾಡಬೇಕಿದೆ. |
| ಒಟ್ಟು | | | ಖರ್ಚು 184.76 | |
| ಸಾಲಗಳು ಮತ್ತು ಮುಂಗಡಗಳು | | | | |
| 3 | 6202, 6215, 6217, 6401, 6402, 6405, 6408, 6435 6505, 6506, 6701, 7475 & 7615 | ರಾಜ್ಯ ಸಂಸ್ಥೆಗಳಿಗೆ ನೀಡಿದ ಸಾಲಗಳು | (ಜಮೆ) 89.65 | ವ್ಯತಿರಿಕ್ತ ಶಿಲ್ಕು ತಪ್ಪು ವರ್ಗೀಕರಣದ ಕಾರಣದಿಂದ ಉಂಟಾಗಿದ್ದು ಲೆಕ್ಕ ಹೊಂದಾಣಿಕೆ ಮಾಡಲಾಗುತ್ತಿದೆ. |
| 4 | 7610 | ಸರ್ಕಾರಿ ನೌಕರರಿಗೆ ಸಾಲ ಮತ್ತು ಮುಂಗಡಗಳು | (ಜಮೆ)10.23 | |
| ಒಟ್ಟು | | | ಜಮೆ 99.88 | |

*ಆಕರ: ಮಹಾಲೇಖಪಾಲರ (ಲೆ ಮತ್ತು ಹ) ಕಛೇರಿ*

## 4.6 ಇಲಾಖೆಗಳ ಅಂಕಿಅಂಶಗಳ ಹೊಂದಾಣಿಕೆ ಆಗದಿರುವುದು

ಆದಾಯ/ವೆಚ್ಚಗಳ ಮೇಲೆ ಪರಿಣಾಮ ಬೀರುವ ಆಯವ್ಯಯ ನಿಯಂತ್ರಣವನು ನಿರ್ವಹಿಸಲು ಮತ್ತು ಲೆಕ್ಕಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ನಿಯಂತ್ರಣ ಅಧಿಕಾರಿಗಳು ಪ್ರತಿ ತಿಂಗಳು ತಮ್ಮ ಪುಸ್ತಕಗಳಲ್ಲಿ ದಾಖಲಾದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಮಹಾಲೇಖಪಾಲರ (ಲೆ ಮತ್ತು ಹ) ಲೆಕ್ಕ ಪುಸ್ತಕದಲ್ಲಿ ಲೆಕ್ಕ ಹಾಕಿದ ಅಂಕಿಗಳೊಂದಿಗೆ ಸಮನ್ವಯಗೊಳಿಸಬೇಕಾಗುತ್ತದೆ. 2019–20ರಿಂದ ಕಳೆದ ಮೂರು ವರ್ಷಗಳ ಸ್ವೀಕೃತಿಗಳು ಮತ್ತು ವೆಚ್ಚದ ಸಮನ್ವಯದ ವಿವರಗಳನ್ನು **ನಕ್ಷೆ–4.3**ರಲ್ಲಿ ಸೂಚಿಸಲಾಗಿದೆ.

**(₹ ಕೋಟಿಗಳಲ್ಲಿ)**




*ಆಕರ: ಹಣಕಾಸು ಲೆಕ್ಕಗಳು* **ಸಾಲಗಳು ಮತ್ತು ಮುಂಗಡಗಳನ್ನು ಹೊರತುಪಡಿಸಿ*

ನಿಯಂತ್ರಣ ಅಧಿಕಾರಿಗಳ ಸಂಖ್ಯೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಲೆಕ್ಕ ಸಮನ್ವಯದ ಪ್ರಮಾಣಕ್ಕೆ ಸಂಬಂಧಿಸಿದಂತೆ ವಿವರಗಳನ್ನು **ಕೋಷ್ಟಕ–4.10**ರಲ್ಲಿ ನೀಡಲಾಗಿದೆ.

**ಕೋಷ್ಟಕ–4.10: ಸ್ವೀಕೃತಿಗಳು ಮತ್ತು ವೆಚ್ಚದ ಅಂಕಿಗಳ ಸಮನ್ವಯದ ಸ್ಥಿತಿ**

**(₹ ಕೋಟಿಗಳಲ್ಲಿ)**

| ವರ್ಷ | ನಿಯಂತ್ರಣ ಅಧಿಕಾರಿಗಳ ಸಂಖ್ಯೆ | ಸಂಪೂರ್ಣವಾಗಿ ಲೆಕ್ಕ ಹೊಂದಾಣಿಕೆ ಮಾಡಿರುವುದು | ಭಾಗಶಃ ಲೆಕ್ಕ ಹೊಂದಾಣಿಕೆ ಮಾಡಿರುವುದು | ಲೆಕ್ಕ ಹೊಂದಾಣಿಕೆ ಮಾಡದೇ ಇರುವುದು | ವಹಿವಾಟು ನಡೆಸದ ನಿಯಂತ್ರಣ ಅಧಿಕಾರಿಗಳು | ಒಟ್ಟು ಮೊತ್ತ | ಲೆಕ್ಕ ಹೊಂದಾಣಿಕೆಯಾದ ಮೊತ್ತ | ಶೇಕಡ |
|---|---|---|---|---|---|---|---|---|
| ಸ್ವೀಕೃತಿಗಳು | | | | | | | | |
| **2019–20** | 101 | 75 | 18 | 8 | – | 1,75,487.87 | 1,73,687.60 | 98.97 |
| **2020–21** | 101 | 86 | – | 15 | – | 1,56,761.64 | 1,56,597.91 | 99.90 |
| **2021–22** | 103 | 71 | 20 | 12 | – | 1,95,767.92 | 1,93,763.21 | 98.98 |
| ವೆಚ್ಚ | | | | | | | | |
| **2019–20** | 322 | 245 | 50 | 27 | – | 2,09,786.84 | 1,79,098.38 | 85.37 |
| **2020–21** | 322 | 289 | – | 33 | – | 2,21,459.96 | 2,18,803.97 | 98.80 |
| **2021–22** | 333 | 260 | 42 | 31 | – | 2,57,302.40 | 2,49,650.66 | 97.03 |

*ಆಕರ: ಮಾಸಿಕ ಸಿವಿಲ್ ಲೆಕ್ಕಗಳ ಮೇಲಿನ ವರದಿ ಮತ್ತು ಹಣಕಾಸು ಲೆಕ್ಕಗಳು*

ಮೇಲಿನ ಕೋಷ್ಟಕದಲ್ಲಿ ಸೂಚಿಸಿದಂತೆ, 2021–22ರಲ್ಲಿ, ಸ್ವಲ್ಪವೇ ಆದರೂ, ಸ್ವೀಕೃತಿ ಮತ್ತು ವೆಚ್ಚಗಳೆರಡರ ಸಮನ್ವಯದಲ್ಲೂ ಇಳಿಕೆ ಕಂಡುಬಂದಿತ್ತು. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿ ಮತ್ತು ವಿತರಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಲೆಕ್ಕ ಸಮನ್ವಯವನ್ನು ಕೈಗೊಳ್ಳಲಾಗಿಲ್ಲ. ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿ ಸ್ವೀಕೃತಿಗಳು ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಸಮನ್ವಯಕ್ಕಾಗಿ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

## 4.7 ನಗದು ಶಿಲ್ಕಿನ ಲೆಕ್ಕ ಹೊಂದಾಣಿಕೆ

ರಾಜ್ಯ ಸರ್ಕಾರದ ವಹಿವಾಟುಗಳ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಲೆಕ್ಕಹಾಕುವಿಕೆ ಮತ್ತು ಸಮನ್ವಯಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನಗಳ ಬಗ್ಗೆ ಕಾರ್ಯಕಾರಿ ಸಮೂಹದ ವರದಿಯ **ಕಂಡಿಕೆ–3.65**ರ ನಿಬಂಧನೆಗಳ ಪ್ರಕಾರ ಆರ್ಥಿಕ ವರ್ಷ ನಂತರದ 30 ಜೂನ್‌ರಂದು ಮಹಾಲೇಖಾಪಾಲರ (ಲೆ ಮತ್ತು ಹ)

ಲೆಕ್ಕಪುಸ್ತಕಗಳ ಪ್ರಕಾರ ರಾಜ್ಯ ನಗದು ಶಿಲ್ಕು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ವರದಿ ಮಾಡಿದ ನಗದು ಶಿಲ್ಕುಗಳ ನಡುವೆ ಯಾವುದೇ ವ್ಯತ್ಯಾಸ ಇರಬಾರದು.

ಮಾರ್ಚ್ 2022ರಲ್ಲಿದ್ದಂತೆ, ಲೆಕ್ಕಗಳಲ್ಲಿ ಬಿಂಬಿತವಾದ ಅಂಕಿಗಳು {₹1,518.38 ಕೋಟಿ (ಖರ್ಚು)ಮತ್ತು ರಿಸರ್ವ್ ಬ್ಯಾಂಕ್ ವರದಿ ಮಾಡಿದ ಅಂಕಿಗಳ {₹26.17ಕೋಟಿ (ಖರ್ಚು)} ನಡುವೆ {₹1,544.56 ಕೋಟಿ (ಖರ್ಚು) ವ್ಯತ್ಯಾಸವಿತ್ತು ಮತ್ತು ಮೇ2022ರ ಸಮನ್ವಯದ ನಂತರ ವ್ಯತ್ಯಾಸವು ಕೇವಲ ₹81,900 ರಷ್ಟು (ಖರ್ಚು) ಮಾತ್ರ ಕಡಿಮೆಯಾಯಿತು. ಏಜೆನ್ಸಿ ಬ್ಯಾಂಕುಗಳಿಂದ ಅಂಕಿಗಳ ವರದಿ ಮಾಡದಿರುವುದು ಮತ್ತು ಲೆಕ್ಕ ಹೊಂದಾಣಿಕೆ ಮಾಡದಿರುವುದು ವ್ಯತ್ಯಾಸಕ್ಕೆ ಕಾರಣವಾಗಿದ್ದು ಇದು ಮಹಾಲೇಖಾಪಾಲರ (ಲೆ ಮತ್ತು ಹ) ಕಛೇರಿಯಲ್ಲಿ ಸಮನ್ವಯದಲ್ಲಿದೆ.

## ಡಿ. ಲೆಕ್ಕಗಳ ವಿಷಯಗಳ ಕಾಣಿಸುವಿಕೆಗೆ ಸಂಬಂಧಿಸಿದ ಅವಲೋಕನ

### 4.8 ಲೆಕ್ಕಪತ್ರ ಮಾನದಂಡಗಳ ಅನುಸರಣೆ

ಭಾರತ ಸರ್ಕಾರದ ಬೆಂಬಲದೊಂದಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಛೇರಿಯಲ್ಲಿ ಸ್ಥಾಪಿಸಲಾಗಿರುವ ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಸಲಹಾ ಮಂಡಳಿಗೆ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಲೆಕ್ಕಪತ್ರ ಮತ್ತು ಹಣಕಾಸು ವರದಿ ಮಾನದಂಡಗಳನ್ನು ರೂಪಿಸುವ ಮತ್ತು ಪ್ರಸ್ತಾಪಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಲಹೆಯ ಮೇರೆಗೆ, ಭಾರತದ ರಾಷ್ಟ್ರಪತಿಗಳು ಇಲ್ಲಿಯವರೆಗೆ ಮೂರು ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳನ್ನು (ಐಜಿಎಎಸ್) ಸೂಚಿಸಿದ್ದಾರೆ.

ಭಾರತೀಯ ಸರ್ಕಾರದ ಲೆಕ್ಕಪತ್ರ ಮಾನದಂಡಗಳ ವಿವರಗಳು ಮತ್ತು 2021-22ಕ್ಕೆ ಕರ್ನಾಟಕ ಸರ್ಕಾರದ ಅವುಗಳ ಅನುಸರಣೆಯನ್ನು **ಕೋಷ್ಟಕ-4.11** ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ 4.11: ಲೆಕ್ಕಪತ್ರ ನಿರ್ವಹಣಾ ಮಾನದಂಡಗಳ ಅನುಸರಣೆ**

| ಕ್ರಮ ಸಂಖ್ಯೆ | ಲೆಕ್ಕಪತ್ರ ಮಾನದಂಡಗಳು | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡದ ಸಾರ | ಪ್ರಸ್ತುತ ಸ್ಥಿತಿ | ಕೊರತೆಯ ಪ್ರಭಾವ |
|---|---|---|---|---|
| 1 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ-1 ಸರ್ಕಾರ ನೀಡಿದ ಖಾತರಿಗಳು - ಅಗತ್ಯವಿರುವ ಕಾಣಿಸುವಿಕೆಗಳು | ಆಯಾ ವರ್ಷದಲ್ಲಿ ಸರ್ಕಾರವು ನೀಡಿದ ಗರಿಷ್ಠ ಖಾತರಿ, ಸೇರಿಕೆ, ತೆಗೆದುಹಾಕಿದ್ದು (ಆ ವರ್ಷದ ಕೋರಿಕೆಗಳನ್ನು ಹೊರತುಪಡಿಸಿ) ವರ್ಷದ ಆರಂಭ ಮತ್ತು ಅಂತ್ಯದಲ್ಲಿನ ಶಿಲ್ಕು ಮತ್ತು ಖಾತರಿ ಶುಲ್ಕ ಇವುಗಳನ್ನು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಕಾಣಿಸುವ ಮಾನದಂಡವನ್ನು ನಿಗದಿಗೊಳಿಸಿದೆ. | ಅನುಸರಿಸಲಾಗಿದೆ | ಖಾತರಿಗಳ ಕಾಣಿಸುವಿಕೆಯ ಮಾನದಂಡಗಳನ್ನು ಅನುಸರಿಸಲಾಗಿದೆ |
| 2 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ-2 ಸಹಾಯಾನುದಾನಗಳ ಲೆಕ್ಕ ಹಾಕುವಿಕೆ ಮತ್ತು ವರ್ಗೀಕರಣ | ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನಿರ್ದಿಷ್ಟವಾಗಿ ಅನುಮೋದಿಸಿದ ಪ್ರಕರಣಗಳ ಹೊರತಾಗಿ ಅನುದಾನವು ಆಸ್ತಿಗಳ ನಿರ್ಮಾಣವನ್ನು ಒಳಗೊಂಡಿದ್ದರೂ ಅನುದಾನ ನೀಡುವವರ ಲೆಕ್ಕದಲ್ಲಿ ಅದನ್ನು ರಾಜಸ್ವ ವೆಚ್ಚವೆಂದು, ಅನುದಾನಿತರ ಲೆಕ್ಕದಲ್ಲಿ ರಾಜಸ್ವ ಸ್ವೀಕೃತಿಗಳೆಂದು ಪರಿಗಣಿಸಬೇಕು. | ಅನುಸರಿಸಲಾಗಿಲ್ಲ | ವಿಕಲಚೇತನ ಸ್ನೇಹಿ ಕಟ್ಟಡ ನಿರ್ಮಾಣಕ್ಕಾಗಿ ಸಮಂತರಂ ಟ್ರಸ್ಟ್‌ಗೆ ಒದಗಿಸಿದ ಹೆಚ್ಚುವರಿ ಅನುದಾನವನ್ನು ಬಂಡವಾಳ ವೆಚ್ಚದಡಿಗೆ ಬದಲಾಗಿ ಸಹಾಯಾನುದಾನವಾಗಿ ತೋರಿಸಬೇಕಿತ್ತು.<br>ಇದು ನಿಗದಿಯ ಅನುಸರಣೆ ಆಗದಿರುವಲ್ಲಿ ಫಲಿತವಾಗಿ ರಾಜಸ್ವ ಹೆಚ್ಚಳವನ್ನು ಮತ್ತು ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗಿದೆ. |

| ಕ್ರಮ ಸಂಖ್ಯೆ | ಲೆಕ್ಕಪತ್ರ ಮಾನದಂಡಗಳು | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡದ ಸಾರ | ಪ್ರಸ್ತುತ ಸ್ಥಿತಿ | ಕೊರತೆಯ ಪ್ರಭಾವ |
|---|---|---|---|---|
| 3 | ಭಾರತ ಸರ್ಕಾರದ ಲೆಕ್ಕಪತ್ರ ಮಾನದಂಡ–3 ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು | ಈ ಮಾನದಂಡವು ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳ ಗುರುತಿಸುವಿಕೆ, ಪ್ರಮಾಣ, ಮೌಲ್ಯ ನಿರ್ಣಯ ಮತ್ತು ವರದಿಗಳು ಮತ್ತು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಪೂರ್ಣತೆ, ನಿಖರತೆ ಮತ್ತು ಏಕರೀತಿಯ ಲೆಕ್ಕರೂಢಿಯ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದೆ | ಭಾಗಶ: ಅನುಪಾಲನೆಯಾಗಿದೆ | ರಾಜ್ಯ ಸರ್ಕಾರವು ಮಾನದಂಡದಲ್ಲಿ ನಿಗದಿಪಡಿಸಿದ ನಮೂನೆಯನ್ನು ಅಳವಡಿಸಿಕೊಂಡಿದೆ. ಆದರೆ, ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದಂತೆ ಅಸಲು ಮತ್ತು ಬಡ್ಡಿಗಳ ಎಲ್ಲಾ ವಿವರಗಳನ್ನೂ ಮಹಾಲೇಖಾಪಾಲರಿಗೆ (ಲೆ ಮತ್ತು ಹ) ಒದಗಿಸುತ್ತಿಲ್ಲವಾದ್ದರಿಂದ ಮಾಹಿತಿ ಅಪೂರ್ಣವಾಗಿದೆ. |

## 4.9 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗದಲ್ಲಿ ಮಂಡಿಸುವುದು

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ, ಇತ್ಯಾದಿ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರವು ಹಲವಾರು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ರಾಜ್ಯದ 14 ಸ್ವಾಯತ್ತ ಸಂಸ್ಥೆಗಳ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರೀಶೋಧಕರ (ಡಿಪಿಸಿ) ಕಾಯಿದೆ, 1971 ಪರಿಚ್ಛೇದ 19 ಮತ್ತು 20ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ.

ಲೆಕ್ಕಪರಿಶೋಧನೆಯ ವಹಿಸುವಿಕೆ, ಲೆಕ್ಕಗಳ ಸಲ್ಲಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ನೀಡುವುದು ಮತ್ತು ರಾಜ್ಯ ಶಾಸಕಾಂಗದ ಮುಂದೆ ಅವುಗಳ ಮಂಡಿಕೆಗಳ ಸ್ಥಿತಿಯನ್ನು **ಅನುಬಂಧ–4.3**ರಲ್ಲಿ ಸೂಚಿಸಲಾಗಿದೆ. ಅನುಬಂಧದಲ್ಲಿ ಕಾಣಿಸಿದಂತೆ ನಾಲ್ಕು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಪರಿಶೋಧನಾ ವರದಿ, ನಾಲ್ಕು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪರಿಶೋಧನಾ ವರದಿಗಳು, ನಾಲ್ಕು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರತ್ಯೇಕ ವರದಿಯಿಲ್ಲ ಶಾಸಕಾಂಗದಲ್ಲಿ ಮಂಡಿಸಲು ಬಾಕಿ ಇವೆ ಮತ್ತು ಎರಡು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸದಂತೆ ಯಾವುದೇ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಶಾಸಕಾಂಗಕ್ಕೆ ಇದುವರೆಗೂ ಸಲ್ಲಸಲಾಗಿಲ್ಲ.

## 4.10 ಇಲಾಖಾ ವಾಣಿಜ್ಯೋದ್ಯಮಗಳು/ನಿಗಮಗಳು/ಕಂಪನಿಗಳು

ವಾಣಿಜ್ಯ ಮತ್ತು ಅರೆ–ವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಿರ್ವಹಿಸುವ ಕೆಲವು ಸರ್ಕಾರಿ ಇಲಾಖಾ ಸಂಸ್ಥೆಗಳು ವಾರ್ಷಿಕವಾಗಿ ನಿಗದಿತ ಸ್ವರೂಪದಲ್ಲಿ ಹಣಕಾಸಿನ ಕಾರ್ಯಾಚರಣೆಗಳ ಫಲಿತಾಂಶವನ್ನು ತೋರಿಸುವ ಪ್ರಪತ್ರ ಲೆಕ್ಕಗಳನ್ನು ಸಿದ್ಧಪಡಿಸುವ ಅಗತ್ಯವಿದ್ದು, ಇದರಿಂದ ಸರ್ಕಾರವು ಈ ಸಂಸ್ಥೆಗಳ ಕಾರ್ಯಾಫಲವನ್ನು ನಿರ್ಧರಿಸಬಹುದು. ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ಯಮಗಳ ಅಂತಿಮಗೊಳಿಸಿದ ಲೆಕ್ಕಗಳು ಅವುಗಳ ಒಟ್ಟಾರೆ ಆರ್ಥಿಕ ಸ್ವಾಸ್ಥ್ಯ ಮತ್ತು ದಕ್ಷತೆಯನ್ನು ಪ್ರತಿಬಿಂಬಿಸುತ್ತವೆ.

ಲೆಕ್ಕಗಳ ಸಕಾಲಿಕ ಅಂತಿಮಗೊಳಿಸುವಿಕೆಯ ಅನುಪಸ್ಥಿತಿಯಲ್ಲಿ, ಸರ್ಕಾರದ ಹೂಡಿಕೆಯ ಲೆಕ್ಕಪರಿಶೋಧನೆ/ ರಾಜ್ಯ ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತದೆ. ತತ್ಪರಿಣಾಮವಾಗಿ, ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ದಕ್ಷತೆಯನ್ನು ಸುಧಾರಿಸಲು ಅಗತ್ಯವಿರುವ ಸರಿಪಡಿಕೆಯ ಕ್ರಮಗಳನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳಲಾಗುವುದಿಲ್ಲ. ಇದಲ್ಲದೆ, ವಿಳಂಬವು ವ್ಯವಸ್ಥೆಯನ್ನು ವಂಚನೆ ಮತ್ತು ಸಾರ್ವಜನಿಕ ಹಣದ ಸೋರಿಕೆಯ ಅಪಾಯಕ್ಕೆ ಈಡುಗೊಳಿಸುವ ಸಂಭವವಿದೆ.

ಸರ್ಕಾರದಲ್ಲಿನ ಇಲಾಖೆಗಳ ಮುಖ್ಯಸ್ಥರು ಈ ಉದ್ಯಮಗಳು ನಿಗದಿತ ಸಮಯದ ಚೌಕಟ್ಟಿನೊಳಗೆ ಲೆಕ್ಕಪರಿಶೋಧನೆಗಾಗಿ ಮಹಾಲೇಖಾಪಾಲರಿಗೆ ಸಲ್ಲಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಿದ/ವರ್ಗಾಯಿಸಲ್ಪಟ್ಟ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿಸಲಾದ ಒಂಬತ್ತು ಉದ್ಯಮಗಳಲ್ಲಿ, ಎರಡು

ಉದ್ಯಮಗಳಿಗೆ ಸಂಬಂಧಿಸಿದಂತೆ ಪ್ರಪತ್ರಗಳು 1969–70ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ಯಮಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿ ಇರುವ ಸ್ಥಿತಿಯನ್ನು **ಅನುಬಂಧ–4.4**ರಲ್ಲಿ ನೀಡಲಾಗಿದೆ.

ಅನುಬಂಧದಲ್ಲಿ ತೋರಿಸಿದಂತೆ 2008–09ರವರೆಗೆ ಲೆಕ್ಕಗಳನ್ನು ಅಂತಿಮಗೊಳಿಸಿರುವ ಒಂದು ಉದ್ದಿಮೆ, 2015–16ರವರೆಗಿನ ನಾಲ್ಕು ಉದ್ದಿಮೆಗಳು, 2016–17ರವರೆಗಿನ ಒಂದು ಉದ್ದಿಮೆ, ಒಟ್ಟು ಆರು ಉದ್ದಿಮೆಗಳಲ್ಲಿ ₹8.87 ಕೋಟಿಗಳ ಹೂಡಿಕೆ ಮಾಡಲಾಗಿದೆ.

## 4.11 ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ/ಸಾಲಗಳ ವಿವರಗಳನ್ನು ಸಲ್ಲಿಸದಿರುವುದು

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 14ರ ಅಡಿಯಲ್ಲಿ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ರಾಜ್ಯದ ಸಂಚಿತ ನಿಧಿಯಿಂದ ಅನುದಾನ ಅಥವಾ ಸಾಲಗಳಿಂದ ಗಣನೀಯವಾಗಿ ಹಣಕಾಸು ಒದಗಿಸಿದಾಗ, ಆ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ, ಆ ಸಮಯಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಆ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚದ ಪರಿಶೋಧನೆ ಮಾಡಿ ಪರಿಶೋಧಿತ ಸ್ವೀಕೃತಿಗಳು ಮತ್ತು ವೆಚ್ಚಗಳ ವರದಿಯನ್ನು ಸಲ್ಲಿಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಡಿಪಿಸಿ) ಕಾಯಿದೆ, 1971ರ ಪರಿಚ್ಛೇದ 15ರ ಅಡಿಯಲ್ಲಿ, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ಅನುದಾನ ಅಥವಾ ಸಾಲವನ್ನು ನೀಡಿದರೆ, ಅದಕ್ಕೆ ಸಂಬಂಧಿಸಿದ ಷರತ್ತುಗಳ ಪಾಲನೆಗೆ ಅನುಸರಿಸಬೇಕಾದ ಕಾರ್ಯವಿಧಾನಗಳನ್ನು ಮಂಜೂರಾತಿ ಪ್ರಾಧಿಕಾರವು ತೃಪ್ತಿಕರವಾಗಿ ನಿರ್ವಹಿಸಿದೆಯೇ ಎಂಬುದನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪರಿಶೀಲಿಸುತ್ತಾರೆ.

ಮೇಲಿನ ವಿಧಿಗಳ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ಒಳಪಡುವ ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳು/ ಪ್ರಾಧಿಕಾರಗಳನ್ನು ಗುರುತಿಸುವ ಅಗತ್ಯವಿದೆ ಮತ್ತು ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಪ್ರತೀವರ್ಷ ₹25 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಹಣಕಾಸು ನೆರವು ನೀಡಿದ ಸಂಸ್ಥೆಗಳ ಮತ್ತು ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ಮತ್ತು ಸಂಸ್ಥೆಗಳ ಒಟ್ಟು ವೆಚ್ಚದ ಬಗ್ಗೆ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಬೇಕಾಗಿರುತ್ತದೆ.

**ಅನುಬಂಧ–4.5**ರಲ್ಲಿ ವಿವರಿಸಿದಂತೆ 21 ಇಲಾಖೆಗಳು ಎರಡು ವರ್ಷದಿಂದ 20 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ₹25ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಅನುದಾನವನ್ನು ಸ್ವೀಕರಿಸಿದ 1086 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿಲ್ಲ. ಅನುಬಂಧದಲ್ಲಿ ನೋಡಿದಂತೆ, ಪ್ರಮುಖವಾಗಿ ಶಿಕ್ಷಣ ಇಲಾಖೆಯು ಮಾಹಿತಿಯನ್ನು ನೀಡಿಲ್ಲ.

ಮಾರ್ಚ್ 2021ಕ್ಕೆ ಕೊನೆಗೊಳ್ಳುವ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ವರದಿಯ **ಕಂಡಿಕೆ–4.11**ಯಲ್ಲಿನ ಲೆಕ್ಕಪರಿಶೋಧನಾ ಅವಲೋಕನಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಡಿಸೆಂಬರ್ 2021) ಲೆಕ್ಕಪರಿಶೋಧನಾ ಕಛೇರಿಗೆ ಮಾಹಿತಿ ಒದಗಿಸಲು ಸಂಬಂಧಿಸಿದ ಇಲಾಖೆಗಳಿಗೆ ವಿನಂತಿಸಲಾಗಿದೆ ಎಂದು ತಿಳಿಸಿದ್ದರೂ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾಹಿತಿ ಒದಗಿಸದ ಸಂಸ್ಥೆಗಳ ಸಂಖ್ಯೆ ಏರಿಕೆಯಾಗಿದೆ.

## 4.12 ಲೆಕ್ಕ ಸಲ್ಲಿಕೆಯ ಕಾಲಮಿತಿಗಳು ಮತ್ತು ಲೆಕ್ಕಗಳ ಗುಣಮಟ್ಟ

ಮಹಾಲೇಖಾಪಾಲರು (ಲೆ ಮತ್ತು ಹ) ರಾಜ್ಯ ಸರ್ಕಾರದ ಲೆಕ್ಕಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೀಡುವ ಸೂಚನೆಗಳಲ್ಲದೆ, 34 ಖಜಾನೆಗಳು, ಮೂರು ಇತರೆ, 103 ಲೋಕೋಪಯೋಗಿ ವಿಭಾಗಗಳು ಮತ್ತು 103 ಅರಣ್ಯ ವಿಭಾಗಗಳು ಸಲ್ಲಿಸಿದ ಆರಂಭಿಕ ಲೆಕ್ಕಗಳಿಂದ ಸಂಕಲಿಸುತ್ತಾರೆ. ಇಲಾಖೆಗಳ ಕೆಲವು ವಿಭಾಗಗಳಿಂದ ಮೊದಲ ಮೂರು ತ್ರೈಮಾಸಿಕಗಳಲ್ಲಿ ಮಾಸಿಕ ಲೆಕ್ಕಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿದ್ದರೂ, ರಾಜ್ಯ ಸರ್ಕಾರವು ಮೇಲ್ವಿಚಾರಣೆ ಮತ್ತು ನಿಗದಿತ ಸಮಯಕ್ಕೆ ಸರಿಯಾಗಿ ಲೆಕ್ಕಗಳನ್ನು ಸಲ್ಲಿಸುವುದನ್ನು ಖಾತ್ರಿಪಡಿಸಿದೆ. ಈ ಸಮಯೋಚಿತ ಲೆಕ್ಕಗಳ ಸಲ್ಲಿಕೆಯು 2021–22ರಲ್ಲೂ ಮುಂದುವರೆದುದ್ದರ ಪರಿಣಾಮವಾಗಿ

ಮಹಾಲೇಖಾಪಾಲರು (ಲೆ ಮತ್ತು ಹ) ಸರ್ಕಾರಕ್ಕೆ ಸಲ್ಲಿಸುವ ಮಾಸಿಕ ಸಿವಿಲ್ ಲೆಕ್ಕಗಳಲ್ಲಿ ಯಾವುದೇ ಲೆಕ್ಕಗಳನ್ನು ಹೊರತುಪಡಿಸಿರಲಿಲ್ಲ.

### 4.13 ಹಣ ದುರ್ಬಳಕೆ, ನಷ್ಟಗಳು, ಕಳ್ಳತನ ಇತ್ಯಾದಿ.

2021–22ರ ಅಂತ್ಯಕ್ಕೆ ₹37.37 ಕೋಟಿಗಳ ಮೊತ್ತದ ಹಣದ ದುರುಪಯೋಗ, ನಷ್ಟ ಇತ್ಯಾದಿಗಳ 61 ಪ್ರಕರಣಗಳಿದ್ದು, ಅಂತಿಮ ಕ್ರಮ ಬಾಕಿ ಇದೆ. ಇಲಾಖಾವಾರು ಬಾಕಿ ಇರುವ ಪ್ರಕರಣಗಳ ವಿಭಜನೆಯನ್ನು **ಕೋಷ್ಟಕ–4.12**ರಲ್ಲಿ ನೀಡಲಾಗಿದೆ ಮತ್ತು ಕಾಲವಾರು ವಿಭಜನೆಯನ್ನು **ಅನುಬಂಧ–4.6**ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ–4.12: ದುರುಪಯೋಗ, ನಷ್ಟ ಮತ್ತು ಕಳ್ಳತನ ಇತ್ಯಾದಿಗಳ ಬಾಕಿ ಉಳಿದಿರುವ ಪ್ರಕರಣಗಳು**

**(₹ ಲಕ್ಷಗಳಲ್ಲಿ)**

| ಇಲಾಖೆಯ ಹೆಸರು | ಸರ್ಕಾರದ ಸ್ವತ್ತುಗಳ ದುರ್ಬಳಕೆ/ನಷ್ಟಗಳು/ಕಳ್ಳತನ | | ಬಾಕಿ ಇರುವ ದುರ್ಬಳಕೆ, ನಷ್ಟ, ಕಳ್ಳತನ ಇತ್ಯಾದಿಗಳ ಪ್ರಕರಣಗಳ ಅಂತಿಮ ವಿಲೇವಾರಿಯಲ್ಲನ ವಿಳಂಬಕ್ಕೆ ಕಾರಣಗಳು | | | | | |
|---|---|---|---|---|---|---|---|---|
| | | | ಇಲಾಖಾ ಮತ್ತು ದಂಡಾರ್ಹ ಪರಿಶೋಧನೆಗಳು ನಿರೀಕ್ಷೆಯಲ್ಲಿರುವುದು | | ಇಲಾಖಾ ಕ್ರಮ ಪ್ರಾರಂಭವಾಗಿದ್ದು, ಅಂತಿಮಗೊಳ್ಳದಿರುವುದು | | ದಂಡ ಪ್ರಕ್ರಿಯೆ ಅಂತಿಮಗೊಂಡಿದ್ದು ಹಣ ವಸೂಲಿ ಬಾಕಿ ಇರುವುದು | |
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು | 04 | 643.70 | 04 | 643.70 | – | – | – | – |
| ಆಹಾರ ಮತ್ತು ನಾಗರೀಕ ಸರಬರಾಜು | 01 | 525.00 | 01 | 525.00 | – | – | – | – |
| ವೈದ್ಯಕೀಯ ಶಿಕ್ಷಣ | 02 | 1.98 | 02 | 1.98 | – | – | – | – |
| ಅರಣ್ಯ | 02 | 0.73 | 02 | 0.73 | – | – | – | – |
| ಗೃಹ | 11 | 220.31 | 05 | 180.96 | 05 | 34.94 | 01 | 4.41 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 10 | 1.59 | 10 | 1.59 | – | – | – | – |
| ಕಾರ್ಮಿಕ | 01 | 0.89 | – | – | 01 | 0.89 | – | – |
| ಸಮಾಜ ಕಲ್ಯಾಣ | 01 | 9.48 | 01 | 9.48 | | | | |
| ಲೋಕೋಪಯೋಗಿ | 02 | 1,180.18 | – | – | 02 | 1,180.18 | – | – |
| ತೋಟಗಾರಿಕೆ | 01 | 1.47 | 01 | 1.47 | – | – | – | – |
| ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ | 01 | 1.04 | 01 | 1.04 | | – | – | |
| ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ. | 01 | 499.21 | – | – | – | – | 01 | 499.21 |
| ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ | 01 | 12.50 | – | – | – | – | 01 | 12.50 |
| ಕರ್ನಾಟಕ ರಾಜ್ಯ ತೆಂಗಿನನಾರು ಅಭಿವೃದ್ಧಿ ನಿಗಮ ನಿಯಮಿತ | 07 | 28.83 | – | – | – | – | 07 | 28.83 |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 05 | 182.73 | 02 | 27.33 | 01 | 80.09 | 02 | 75.31 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 02 | 99.30 | – | – | 01 | 44.85 | 01 | 54.45 |
| ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 03 | 224.75 | 01 | 34.34 | 01 | 97.88 | 01 | 92.53 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 03 | 92.09 | 02 | 60.91 | 01 | 31.18 | – | – |
| ಪುರಾತತ್ವ, ಪ್ರಾಚ್ಯವಸ್ತು ಮತ್ತು ಪರಂಪರೆ | 01 | 3.38 | | | 01 | 3.38 | – | – |
| ನಗರಾಭಿವೃದ್ಧಿ | 01 | 2.02 | 01 | 2.02 | – | – | – | – |
| ಮೀನುಗಾರಿಕೆ | 01 | 6.25 | – | – | 01 | 6.25 | – | – |
| **ಒಟ್ಟು** | **61** | **3,737.43** | **33** | **1,490.55** | **14** | **1,479.64** | **14** | **767.24** |

*ಆಕರ: ಪ್ರಧಾನ ಮಹಾಲೇಖಾಪಾಲರ (ಲೆಕ್ಕಪರಿಶೋದನೆ–I) ಮತ್ತು (ಲೆಕ್ಕ ಪರಿಶೋಧನೆ–II) ಕಚೇರಿಗಳು*

### 4.14 ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಯ ಮೇಲಿನ ಅನುಸರಣಾ ಕ್ರಮ

2019–20ನೇ ಸಾಲಿನ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಜುಲೈ 2022ರಲ್ಲಿ ಚರ್ಚಿಸಲ್ಪಟ್ಟಿತು. 2012–13ರಿಂದ 2018–19ನೇ ಸಾಲಿನ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳ ತತ್ಸಮಾನ ಮತ್ತು ಪ್ರಮುಖ ಅಂಶಗಳನ್ನೂ ಸಹ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಿಂದ ಕೈಗೆತ್ತಿಕೊಳ್ಳಲಾಯಿತು. ಅದು 2012–13ರಿಂದ 2017–18ರ ವರೆಗಿನ ಅವಧಿಯ ₹2,409.53 ಕೋಟಿಗಳ ಅಧಿಕ ವೆಚ್ಚವನ್ನು ಸಕ್ರಿಮೀಕರಣಗೊಳಿಸುವ ಬಗ್ಗೆ ಚರ್ಚಿಸಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳನ್ನು ರಾಜ್ಯ ಶಾಸಕಾಂಗದ ಮುಂದೆ ಇನ್ನೂ ಮಂಡಿಸಬೇಕಾಗಿದೆ.

### 4.15 ತೀರ್ಮಾನ

ಆಯವ್ಯಯ ಅನುದಾನಗಳು ಕೈತಪ್ಪಿಹೋಗುವುದನ್ನು ತಪ್ಪಿಸಲು ಇಲಾಖೆಗಳು ನಿಧಿಗಳನ್ನು ಸಂಚಿತ ನಿಧಿಯ ಹೊರಗಡೆ ವರ್ಗಾಯಿಸಿದವು. ಕೆಲವು ಇಲಾಖೆಗಳು/ಸರ್ಕಾರಿ ಕಂಪನಿಗಳು/ನಿಗಮಗಳು, ಆರ್ಥಿಕ ಇಲಾಖೆಯಿಂದ ನೀಡಿದ ಸೂಚನೆಗಳ ಹೊರತಾಗಿಯೂ ಸರ್ಕಾರದಿಂದ ಪಡೆದ ಅನುದಾನಗಳಿಂದ ಗಳಿಸಿದ ಬಡ್ಡಿಯನ್ನು ಸರ್ಕಾರದ ಖಾತೆಗೆ ರವಾನಿಸಿರಲಿಲ್ಲ.

2019–20ರವರೆಗೂ ಇಳಿಕೆ ಪ್ರವೃತ್ತಿ ತೋರಿಸುತ್ತಿದ್ದ ಬಳಕೆ ಪ್ರಮಾಣಪತ್ರಗಳು 2021–22ರಲ್ಲಿ ಮತ್ತೊಮ್ಮೆ ಏರಿಕೆಯಾಯಿತು. 2020–21ರ ಕೊನೆಯಲ್ಲಿದ್ದ ₹38.63 ಕೋಟಿಗಳ ಮೌಲ್ಯದ 37 ಬಳಕೆ ಪ್ರಮಾಣಪತ್ರಗಳು ₹325.50 ಕೋಟಿಗಳ ಮೌಲ್ಯದ 132 ಬಳಕೆ ಪ್ರಮಾಣಪತ್ರಗಳಿಗೆ ಏರಿಕೆಯಾಯಿತು.

ಆದಾಗ್ಯೂ, ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಬಾಕಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 38ರಷ್ಟು ಕಡಿಮೆಯಾಗಿದೆ. ಎರಡು ಪ್ರಮುಖ ಲೆಕ್ಕ ಶೀರ್ಷಿಕೆಗಳ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಮೀಕ್ಷೆಯು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಲ್ಲಿ ವಿಳಂಬವಷ್ಟೇ ಅಲ್ಲದೆ ಆಯವ್ಯಯ ಅನುದಾನಗಳ ನಷ್ಟವಾಗುವುದನ್ನು ತಪ್ಪಿಸಲು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ನಿಧಿಗಳ ಸೆಳೆಯುವಿಕೆ, ಅನುಮತಿಸಲು ಸಾಧ್ಯವಿಲ್ಲದ ವೋಚರುಗಳ ಸಲ್ಲಿಕೆ, ಬಿಲ್ಲುಗಳನ್ನು ವಿಭಜಿಸುವಿಕೆ ಮುಂತಾದವುಗಳನ್ನು ತೋರಿಸಿತು.

ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮುಕ್ತಾಯದ ಶಿಲ್ಕುಗಳು 2020–21ರಲ್ಲಿ ಸ್ವಲ್ಪಮಟ್ಟಿನ ಇಳಿಕೆಯಾಗಿದ್ದು 2021–22ರಲ್ಲಿ ಏರಿಕೆಯಾಗಿದೆ. ಭಾರಿ ಮೊತ್ತದ ಹಣವನ್ನು ಹಿಡಿದಿಟ್ಟುಕೊಳ್ಳುವುದು ಶಾಸಕಾಂಗದ ಹಣಕಾಸು ನಿಯಂತ್ರಣ ಸಿದ್ಧಾಂತಕ್ಕೆ ವಿರುದ್ಧವಾಗಿದೆ.

ಸರ್ಕಾರದಿಂದ ಗಣನೀಯವಾಗಿ ಅನುದಾನ ಪಡೆದ ಸಂಸ್ಥೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡುವಂತೆ ಆರ್ಥಿಕ ಇಲಾಖೆಯು ಸೂಚನೆಗಳನ್ನು ನೀಡಿದ್ದರೂ, ಅಗತ್ಯ ಮಾಹಿತಿಗಳನ್ನು ಒದಗಿಸದ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಇದು ಅಸಮರ್ಪಕ ಆಂತರಿಕ ನಿಯಂತ್ರಣ ಮತ್ತು ರಾಜ್ಯ ಸರ್ಕಾರದ ಮೇಲ್ವಿಚಾರಣಾ ಕಾರ್ಯ ವಿಧಾನದಲ್ಲಿನ ಕೊರತೆಯನ್ನು ಸೂಚಿಸುತ್ತದೆ.

### 4.16 ಶಿಫಾರಸುಗಳು

- *ನಿರ್ದಿಷ್ಟ ಉದ್ದೇಶಗಳಿಗೆ ಬಿಡುಗಡೆಯಾದ ಅನುದಾನಗಳಿಗೆ ಸಂಬಂಧಿಸಿದಂತೆ ಇಲಾಖೆಗಳು ಬಳಕೆ ಪ್ರಮಾಣಪತ್ರಗಳನ್ನು ನಿಗದಿತ ಸಮಯದಲ್ಲಿ ಸಲ್ಲಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ನಿಧಿಗಳ ಅಂತಿಮ ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಪಬ್ಲಿಕ್ ಫೈನಾನ್ಶಿಯಲ್ ಸಿಸ್ಟಮ್‌ನಲ್ಲಿರುವ ಎಕ್ಸಪೆಂಡಿಚರ್ ಅಡ್ವಾನ್ಸ್ ಟ್ರಾನ್ಸ್‌ಫರ್ ಮಾಡ್ಯೂಲ್‌ನಂತೆಯೇ ಇಂಟಗ್ರೇಟೆಡ್ ಫೈನಾನ್ಶಿಯಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಖಜಾನೆ–2ರಲ್ಲಿ ಒಂದು ಘಟಕವನ್ನು ರೂಪಿಸಬಹುದು.*
- *ನಿಗದಿತ ಅವಧಿಯೊಳಗೆ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಸಲ್ಲಿಸದಿರುವ ನಿಯಂತ್ರಣಾಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.*
- *ಬಾಕಿ ಇರುವ ಬಳಕೆ ಪ್ರಮಾಣಪತ್ರಗಳ ಮತ್ತು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಸರ್ಕಾರವು ಪಬ್ಲಿಕ್ ಫೈನಾನ್ಶಿಯಲ್ ಸಿಸ್ಟಮ್‌ನಲ್ಲಿರುವ ಎಕ್ಸಪೆಂಡಿಚರ್ ಅಡ್ವಾನ್ಸ್ ಟ್ರಾನ್ಸ್‌ಫರ್‌ನಂತೆಯೇ ಮಾಡ್ಯೂಲ್‌ಅನ್ನು ಅಳವಡಿಸಲು ಪರಿಗಣಿಸಬಹುದಾಗಿದೆ.*
- *ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಶಿಲ್ಕುಗಳಲ್ಲಿ ಬಳಕೆಯ ಅವಧಿಯನ್ನು ಮೀರಿದ ಶಿಲ್ಕುಗಳ ತೀರುವಳಿಗೊಳಿಸುವುದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ಶಿಲ್ಕುಗಳ ಹೊಂದಾಣಿಕೆಯ ನಂತರ ಮತ್ತು ನಿರ್ವಾಹಕರು ಮತ್ತು ಖಜಾನೆಯೊಂದಿಗೆ ಸಮಾಲೋಚಿಸಿದ ನಂತರ ಅಂತಹ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.*

# ಅಧ್ಯಾಯ–5

# ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು

# ಅಧ್ಯಾಯ–5: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು

ಈ ಅಧ್ಯಾಯವು ಸರ್ಕಾರಿ ಕಂಪನಿಗಳು, ಶಾಸನಬದ್ಧ ನಿಗಮಗಳು ಮತ್ತು ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗಳ ಲೆಕ್ಕಪತ್ರಗಳಿಂದ ಅವುಗಳ ಆರ್ಥಿಕ ಸಾಧನೆಗಳನ್ನು ಚರ್ಚಿಸುತ್ತದೆ. 2021–22ರ ವರ್ಷಕ್ಕೆ (ಅಥವಾ ಪ್ರಸ್ತುತ ವರ್ಷದಲ್ಲಿ ಮುಕ್ತಾಯಗೊಳಿಸಿದ ಹಿಂದಿನ ವರ್ಷಗಳ) ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಆರ್ಥಿಕ ವಿವರಣಾಪಟ್ಟಿಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಿದ ಪೂರಕ ಲೆಕ್ಕಪರಿಶೋಧನೆಯ ಪರಿಣಾಮವಾಗಿ ನೀಡಿದ ಗಮನಾರ್ಹ ವ್ಯಾಖ್ಯಾನಗಳ ಪ್ರಭಾವವನ್ನೂ ಸಹ ಚರ್ಚಿಸಲಾಗಿದೆ.

## 5.1 ಸರ್ಕಾರಿ ಕಂಪನಿಯ ವ್ಯಾಖ್ಯಾನ

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 2(45)ರಲ್ಲಿ ವ್ಯಾಖ್ಯಾನಿಸಿದ ಪ್ರಕಾರ ಸರ್ಕಾರಿ ಕಂಪನಿಯೆಂದರೆ ಷೇರು ಬಂಡವಾಳದ ಶೇಕಡ 51ಕ್ಕಿಂತ ಕಡಿಮೆ ಇಲ್ಲದಂತೆ ಪಾವತಿಸಲ್ಪಟ್ಟಿರುವ ಷೇರು ಬಂಡವಾಳವನ್ನು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶ:ವಾಗಿ ಕೇಂದ್ರ ಸರ್ಕಾರ ಮತ್ತು ಭಾಗಶ:ವಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯ ಸರ್ಕಾರಗಳು ಹೊಂದಿರುವ ಯಾವುದೇ ಕಂಪನಿಯಾಗಿರಬಹುದು ಮತ್ತು ಅವುಗಳ ಅಧೀನ ಸಂಸ್ಥೆಯಾಗಿರುತ್ತದೆ.

ಇದಲ್ಲದೆ, ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳ ಅಥವಾ ಭಾಗಶ: ಕೇಂದ್ರ ಸರ್ಕಾರ ಮತ್ತು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ರಾಜ್ಯ ಸರ್ಕಾರಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಅದರ ಒಡೆತನವನ್ನು ಅಥವಾ ನಿಯಂತ್ರಣವನ್ನು ಹೊಂದಿದ ಯಾವುದೇ ಇತರೆ ಕಂಪನಿಯನ್ನು[23] ಈ ವರದಿಯಲ್ಲಿ ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗಳು ಎಂದು ಉಲ್ಲೇಖಿಸಲಾಗಿದೆ.

## 5.2 ಲೆಕ್ಕಪರಿಶೋಧನಾ ಆದೇಶ

ಸರ್ಕಾರಿ ಕಂಪನಿಗಳು ಮತ್ತು ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತು ಮಹಾಲೆಕ್ಕಪರಿಶೋಧಕರು ಕಂಪನಿಗಳ ಅಧಿನಿಯಮ, 2013 ರ ಪರಿಚ್ಛೇದ 143(5)ರಿಂದ 143(7) ಜತೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971 ಪರಿಚ್ಛೇದ 19 ಮತ್ತು ಅದರಡಿಯಲ್ಲಿ ಮಾಡಿದ ಕಟ್ಟುಪಾಡುಗಳಿಗೆ ಒಳಪಟ್ಟು ನಡೆಸಲಾಗುವುದು. ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸನ್ನದು ಲೆಕ್ಕಪರಿಶೋಧಕರನ್ನು ಕಂಪನಿಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರೆಂದು ನೇಮಿಸುತ್ತಾರೆ ಮತ್ತು ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಬೇಕಾದ ರೀತಿಯ ಬಗ್ಗೆ ನಿರ್ದೇಶನಗಳನ್ನು ನೀಡುತ್ತಾರೆ. ಜೊತೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ಪೂರಕ ಲೆಕ್ಕಪರಿಶೋಧನೆ ನಡೆಸುವ ಹಕ್ಕು ಇರುತ್ತದೆ. ಕೆಲವು ಶಾಸನಬದ್ಧ ನಿಗಮಗಳನ್ನು ನಿಯಂತ್ರಿಸುವ ಕಾನೂನುಗಳ ಪ್ರಕಾರ ಅವರ ಲೆಕ್ಕಪತ್ರಗಳನ್ನು ಕೇವಲ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದಲೇ ಲೆಕ್ಕಪರಿಶೋಧನೆ ನಡೆಸಬೇಕಾದ ಅಗತ್ಯವಿದೆ.

---

[23] ದಿನಾಂಕ 4 ಸೆಪ್ಟೆಂಬರ್ 2014ರ ಗೆಜೆಟ್ ಅಧಿಸೂಚನೆಯ ಮೂಲಕ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಕಂಪನಿಗಳ (ಕಷ್ಟಗಳನ್ನು ತೆಗೆದುಹಾಕುವುದು) ಏಳನೇ ಆದೇಶ.

## 5.3 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಎಸ್‌ಡಿಪಿ) ಅವುಗಳ ಕಾಣಿಕೆ

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯ ಸರ್ಕಾರಿ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳನ್ನು ಒಳಗೊಂಡಿವೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಸಾರ್ವಜನಿಕರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯಿಕ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಸ್ಥಾಪಿಸಲಾಯಿತು ಮತ್ತು ಅವುಗಳು ರಾಜ್ಯದ ಆರ್ಥಿಕತೆಯಲ್ಲಿ ಒಂದು ವಿಶೇಷ ಸ್ಥಾನಮಾನ ಕೂಡ ಹೊಂದಿವೆ. 31 ಮಾರ್ಚ್ 2022ರಲ್ಲಿದ್ದಂತೆ, ಕರ್ನಾಟಕದಲ್ಲಿ ಆರು ಶಾಸನಬದ್ಧ ನಿಗಮಗಳನ್ನು[24] ಒಳಗೊಂಡಂತೆ, 125 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು 119 ಸರ್ಕಾರಿ ಕಂಪನಿಗಳು (13[25] ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳನ್ನು[26] ಒಳಗೊಂಡಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿದೆ. ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹೆಸರುಗಳನ್ನು **ಅನುಬಂಧ–5.1**ರಲ್ಲಿ ನೀಡಲಾಗಿದೆ. ಈ ಸರ್ಕಾರಿ ಕಂಪನಿಗಳ ಪೈಕಿ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ಯಮವನ್ನು (ದಿ ಮೈಸೂರು ಕಾಗದ ಕಾರ್ಖಾನೆ, ನಿಯಮಿತ) ಮುಂಬಯಿ ಷೇರು ವಿನಿಮಯ ಕೇಂದ್ರದಲ್ಲಿ ನೊಂದಣಿ ಮಾಡಲಾಗಿತ್ತು. ಕಾರ್ಯ ಸ್ಥಗಿತಗೊಂಡ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಟ್ಟು ₹607.78 ಕೋಟಿ ಹೂಡಿಕೆಯನ್ನು ಬಂಡವಾಳದೆಡೆಗೆ (₹160.21 ಕೋಟಿ) ಮತ್ತು ದೀರ್ಘಾವಧಿ ಸಾಲಗಳನ್ನು (₹447.57 ಕೋಟಿಗಳು) ಹೊಂದಿವೆ. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಹೂಡಿಕೆಯು ರಾಜ್ಯದ ಆರ್ಥಿಕ ಬೆಳವಣಿಗೆಗೆ ಯಾವುದೇ ಕೊಡುಗೆ ನೀಡುವುದಿಲ್ಲವಾದ್ದರಿಂದ ಇದು ಸಂದಿಗ್ಧ ಪ್ರದೇಶವಾಗಿದೆ.

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ ಅನುಪಾತವು ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯಚಟುವಟಿಕೆಗಳ ವಿಸ್ತಾರವನ್ನು ತೋರಿಸುತ್ತದೆ. 31 ಮಾರ್ಚ್ 2022ಕ್ಕೆ ಅಂತ್ಯಗೊಂಡ ಕಳೆದ ಮೂರು ವರ್ಷಗಳ ಅವಧಿಯ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ ವಿವರಗಳನ್ನು ಈ ಕೆಳಗಿನ **ಕೋಷ್ಟಕ–5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.1: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಹಾಗೂ ಅದಕ್ಕೆ ಪರಸ್ಪರ ಅಭಿಮುಖವಾಗಿ ಕರ್ನಾಟಕ ರಾಜ್ಯದ ಒಟ್ಟು ದೇಶೀಯ ಉತ್ಪಾದನೆಯ ವಿವರಗಳು**

(₹ ಕೋಟಿಗಳಲ್ಲಿ)

| ವಿವರಗಳು | 2019–20 | 2020–21 | 2021–22 |
|---|---|---|---|
| ವಹಿವಾಟು | 74,922.04 | 77,607.61 | 77,381.94 |
| ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ | 16,15,457 | 17,30,991 | 17,21,336 |
| ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಹಿವಾಟಿನ ಶೇಕಡಾವಾರು | ***4.64*** | ***4.48*** | ***4.50*** |

[24] ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಹಿಂದೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ಕರ್ನಾಟಕ ರಾಜ್ಯ ಉಗ್ರಾಣ ನಿಗಮ.

[25] ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್, ದಿ ಮೈಸೂರು ಟೊಬ್ಯಾಕೋ ಕಂಪನಿ ಲಿಮಿಟೆಡ್, ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್, ದಿ ಕರ್ನಾಟಕ ಸ್ಟೇಟ್ ವೆನಿಯರ್ಸ್ ಲಿಮಿಟೆಡ್, ದಿ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್, ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್, ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್, ಎನ್‌ಜಿಇಎಫ್ ಲಿಮಿಟೆಡ್, ಕರ್ನಾಟಕ ಟೆಲಿಕಾಂ ಲಿಮಿಟೆಡ್, ದಿ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು ಸಬರ್ಬನ್ ರೈಲ್ ಕಂಪನಿ ಲಿಮಿಟೆಡ್ ಮತ್ತು ವಿಜಯನಗರ ಸ್ಟೀಲ್ ಲಿಮಿಟೆಡ್.

[26] ನಿಷ್ಕ್ರಿಯ ಸರ್ಕಾರಿ ಕಂಪನಿ ಎಂದರೆ ಯಾವುದೇ ವ್ಯವಹಾರ ಅಥವಾ ಕಾರ್ಯಾಚರಣೆಯನ್ನು ನಡೆಸದೆ ಇರುವ ಅಥವಾ ಯಾವುದೇ ಗಮನಾರ್ಹ ಲೆಕ್ಕಪತ್ರ ವ್ಯವಹಾರವನ್ನು ಮಾಡದ ಅಥವಾ ಕಳೆದ ಎರಡು ಹಣಕಾಸು ವರ್ಷಗಳಲ್ಲಿ ಹಣಕಾಸು ತ:ಖ್ತೆಗಳು ಮತ್ತು ವಾರ್ಷಿಕ ಆದಾಯವನ್ನು ಸಲ್ಲಿಸದ ಕಂಪನಿ.

2019–20ಕ್ಕೆ ಹೋಲಿಸಿದರೆ 2021–22ರಲ್ಲಿ ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಕಳೆದ ವರ್ಷಗಳ ಲೆಕ್ಕಪರಿಶೋಧಿತ ಲೆಕ್ಕಪತ್ರಗಳ ಪ್ರಕಾರ ಶೇಕಡ 3.28ರಷ್ಟು ಹೆಚ್ಚಳವನ್ನು ದಾಖಲಿಸಿತ್ತು ಎಂಬುದನ್ನು ಮೇಲಿನ ಕೋಷ್ಟಕದಿಂದ ನೋಡಬಹುದಾಗಿದೆ. ಆದಾಗ್ಯೂ, ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕೊಡುಗೆ ಅತ್ಯಲ್ಪವಾಗಿತ್ತು.

## 5.4 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮತ್ತು ಆಯವ್ಯಯ ಬೆಂಬಲ

### *5.4.1 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹೊಂದಿರುವಿಕೆ ಮತ್ತು ಸಾಲಗಳು*

31 ಮಾರ್ಚ್ 2022ರಲ್ಲಿದ್ದಂತೆ ವಲಯವಾರು ಒಟ್ಟು ಈಕ್ವಿಟಿ, ರಾಜ್ಯ ಸರ್ಕಾರದ ಈಕ್ವಿಟಿಯ ಹೂಡಿಕೆ ಮತ್ತು ರಾಜ್ಯ ಸರ್ಕಾರದ ಸಾಲಗಳನ್ನೂ ಒಳಗೊಂಡಂತೆ, ದೀರ್ಘಾವಧಿ ಸಾಲಗಳ ವಿವರಗಳನ್ನು **ಕೋಷ್ಟಕ–5.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.2: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ವಲಯವಾರು ಹೂಡಿಕೆ**

| ವಲಯದ ಹೆಸರು | ಹೂಡಿಕೆ[27] (₹ ಕೋಟಿಗಳಲ್ಲಿ) | | | | |
|---|---|---|---|---|---|
| | ಒಟ್ಟು ಈಕ್ವಿಟಿ | ರಾಜ್ಯ ಸರ್ಕಾರದ ಈಕ್ವಿಟಿ | ಒಟ್ಟು ದೀರ್ಘಾವಧಿ ಸಾಲಗಳು | ರಾಜ್ಯ ಸರ್ಕಾರದ ಸಾಲಗಳು | ಒಟ್ಟು ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳು |
| | (1) | (2) | (3) | (4) | (5)=(2)+(4) |
| ವಿದ್ಯುತ್ | 18,087.07 | 14,320.64 | 65,577.58 | 1,607.01 | 83,664.65 |
| ಆರ್ಥಿಕ | 2,805.16 | 2,710.31 | 1,159.93 | 72.72 | 3,965.09 |
| ಸೇವೆ | 1,213.20 | 1,163.08 | 1,562.82 | 4.00 | 2,776.02 |
| ಮೂಲಸೌಕರ್ಯ | 74,155.95 | 73,173.13 | 23,205.47 | 8,622.71 | 97,361.42 |
| ಇತರೆ | 792.49 | 698.23 | 2,379.79 | 1,608.67 | 3,172.28 |
| *ಒಟ್ಟು* | ***97,053.87*** | ***92,065.39*** | ***93,885.59*** | ***11,915.11*** | ***1,90,939.46*** |

*ಆಕರ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಆರ್ಥಿಕ ವಿವರಣಾಪಟ್ಟಿಗಳು*

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹೂಡಿಕೆಯು ಪ್ರಮುಖವಾಗಿ ಮೂಲಸೌಕರ್ಯ ಮತ್ತು ವಿದ್ಯುತ್ ವಲಯದ ಮೇಲೆಯೇ ಒತ್ತುಕೊಡಲಾಗಿತ್ತು. ಈ ವಲಯಗಳು ₹1,90,939.46 ಕೋಟಿಗಳ ಒಟ್ಟು ಹೂಡಿಕೆಯ ಶೇಕಡ 50.99 (₹97,361.42 ಕೋಟಿ) ಮತ್ತು ಶೇಕಡ 43.82ರಷ್ಟನ್ನು (₹83,664.65 ಕೋಟಿಗಳು) ಸ್ವೀಕರಿಸಿದವು.

### *5.4.2 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹೂಡಿಕೆಯಲ್ಲಿ ಮಾರುಕಟ್ಟೆ ಬಂಡವಾಳೀಕರಣ*

ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ (ದಿ ಮೈಸೂರು ಕಾಗದ ಕಾರ್ಖಾನೆ ನಿಯಮಿತ) ಮುಂಬಯಿ ಷೇರು ವಿನಿಯಮದಲ್ಲಿ ಪಟ್ಟಿ ಮಾಡಲಾಗಿದೆ.

### *5.4.3 ಬಂಡವಾಳ ಹಿಂತೆಗೆತ, ಪುನರ್–ರಚನೆ ಮತ್ತು ಖಾಸಗೀಕರಣ*

2021–22ರ ವರ್ಷದಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಖಾಸಗೀಕರಣದ ಯಾವುದೇ ಪ್ರಕರಣ ಇರಲಿಲ್ಲ.

### *5.4.4 ವಿದ್ಯುತ್ ಸರಬರಾಜು ಕಂಪನಿಗಳು*

31 ಮಾರ್ಚ್ 2022ರಲ್ಲಿದ್ದಂತೆ, ವಿದ್ಯುತ್ ವಲಯಕ್ಕೆ ಸಂಬಂಧಿಸಿದ 11 ಸಾರ್ವಜನಿಕ ವಲಯ ಉದ್ದಿಮೆಗಳು (ಒಂದು ಅಧೀನ ಕಂಪನಿಯೂ ಸೇರಿದಂತೆ–ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಒಂದು ಜಂಟಿ ಉದ್ಯಮ– ರಾಯಚೂರು ವಿದ್ಯುತ್ ನಿಗಮ ನಿಯಮಿತ ಹಾಗೂ

[27] ಹೂಡಿಕೆಯು ಈಕ್ವಿಟಿ ಮತ್ತು ದೀರ್ಘಾವಧಿಯ ಸಾಲಗಳನ್ನು ಒಳಗೊಂಡಿರುತ್ತದೆ.

ಒಂದು ಸಹವರ್ತಿ ಕಂಪನಿ–ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್) ಇದ್ದವು. ರಾಜ್ಯ ಸರ್ಕಾರವು ವಿದ್ಯುತ್ ವಲಯಕ್ಕೆ ಸಂಬಂಧಿಸಿದ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ವಾರ್ಷಿಕ ಆಯವ್ಯಯದ ಮೂಲಕ ಅನೇಕ ವಿಧಗಳಲ್ಲಿ ಆರ್ಥಿಕ ಬೆಂಬಲವನ್ನು ಒದಗಿಸುತ್ತಿದೆ. ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ 31 ಮಾರ್ಚ್ 2022ರಲ್ಲಿದ್ದಂತೆ, ಕಳೆದ ಮೂರು ವರ್ಷಗಳಲ್ಲಿ ಆಯವ್ಯಯದ ಮೂಲಕ ಒದಗಿಸಿದ ಈಕ್ವಿಟಿ, ಸಾಲಗಳು, ಅನುದಾನಗಳು/ಸಹಾಯಾನುದಾನಗಳು, ಮನ್ನಾ ಮಾಡಲಾಗಿರುವ ಸಾಲಗಳು ಹಾಗೂ ಬಡ್ಡಿಯ ವಿವರಗಳನ್ನು **ಕೋಷ್ಟಕ–5.3**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–5.3: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ರಾಜ್ಯ ಸರ್ಕಾರದಿಂದ ಆಯವ್ಯಯ ಬೆಂಬಲಕ್ಕೆ ಸಂಬಂಧಿಸಿದ ವಿವರಗಳು**

(₹ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2019–20 | | 2020–21 | | 2021–22 | |
|---|---|---|---|---|---|---|---|
| | | ಪಿಎಸ್‌ಯುಗಳ ಸಂಖ್ಯೆ | ಮೊತ್ತ | ಪಿಎಸ್‌ಯುಗಳ ಸಂಖ್ಯೆ | ಮೊತ್ತ | ಪಿಎಸ್‌ಯುಗಳ ಸಂಖ್ಯೆ | ಮೊತ್ತ |
| 1 | ಈಕ್ವಿಟಿ ಬಂಡವಾಳ | 6 | 884.69 | 4 | 537.33 | 7 | 793.14 |
| 2 | ಸಾಲ ನೀಡಿರುವುದು | 4 | 2,500 | 0 | 0 | 1 | 150 |
| 3 | ಅನುದಾನ/ ಸಹಾಯಾನುದಾನಗಳನ್ನು ಒದಗಿಸಿರುವುದು | 6 | 2,864.19 | 4 | 5,035.88 | 4 | 12,908.94 |
| 4 | ಒಟ್ಟು | | **6,248.88** | | **5,573.21** | | **13,852.08** |
| 5 | ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿರುವುದು | 0 | 0 | 0 | 0 | 0 | 0 |
| 6 | ಖಾತರಿಗಳನ್ನು ನೀಡಿರುವುದು | 1 | 0.33 | 4 | 7,250 | 4 | 3,617.14 |
| 7 | ಖಾತರಿ ಬದ್ಧತೆ | 5 | 3,969.08 | 6 | 10,764.30 | 6 | 12,919.08 |

ವಿದ್ಯುತ್ ವಲಯಕ್ಕೆ ಸಂಬಂಧಿತ 11 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕಾರ್ಯಚಟುವಟಿಕೆವಾರು ಹೂಡಿಕೆಗಳು (ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳು) **ಕೋಷ್ಟಕ–5.4**ರಲ್ಲಿ ವಿವರಿಸಿದಂತೆ ₹83,664.65 ಕೋಟಿಗಳಷ್ಟಿತ್ತು.

**ಕೋಷ್ಟಕ–5.4: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕಾರ್ಯಚಟುವಟಿಕೆವಾರು ಹೂಡಿಕೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಚಟುವಟಿಕೆ | ಪಿಎಸ್‌ಯುಗಳ ಸಂಖ್ಯೆ | ಹೂಡಿಕೆ | | |
|---|---|---|---|---|---|
| | | | ಈಕ್ವಿಟಿ | ದೀರ್ಘಾವಧಿ ಸಾಲಗಳು | ಒಟ್ಟು |
| 1 | ವಿದ್ಯುತ್ ಉತ್ಪಾದನೆ | 3 | 8,572.18 | 31,123.06 | **39,695.24** |
| 2 | ವಿದ್ಯುತ್ | 1 | 2,218.67 | 8,420.92 | **10,639.59** |
| 3 | ವಿದ್ಯುತ್ ವಿತರಣೆ | 5 | 7,295.67 | 23,268.79 | **30,564.46** |
| 4 | ಇತರೆ | 2 | 0.55 | 2,764.81 | **2,765.36** |
| ಒಟ್ಟು | | **11** | **18,087.07** | **65,577.58** | **83,664.65** |

ಈ ಹೂಡಿಕೆಯು ರಾಜ್ಯದ 2021–22ರ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 4.86ರಷ್ಟು ಮತ್ತು ಸಾಲದ ಘಟಕವೊಂದೇ ಶೇಕಡ 3.81ರಷ್ಟಾಗುತ್ತದೆ. ವಿತರಣಾ ಕಂಪನಿಗಳ ಆರ್ಥಿಕ ದುಸ್ಥಿತಿಗೆ ಪ್ರಮುಖ ಸೂಚಕಗಳಲ್ಲಿ ಉತ್ಪಾದನಾ ಕಂಪನಿಗಳಿಗೆ ಸಂಬಂಧಿಸಿದಂತೆ ಹೆಚ್ಚುತ್ತಿರುವ ವಿದ್ಯುತ್ ಖರೀದಿ ಬಾಕಿಗಳ ಹೊರೆ ಎಂದು ಗಮನಿಸಲಾಯಿತು. ವಿತರಣಾ ಕಂಪನಿಗಳಿಂದ ವಿಳಂಬ ಪಾವತಿಗಳು ಆರ್ಥಿಕ ಒತ್ತಡಕ್ಕೆ ಪ್ರಮುಖ ಕಾರಣವೆಂದು ಪರಿಗಣಿಸಲಾಗಿದೆ. ಈ ದುಸ್ಥಿತಿಯನ್ನು ಹೋಗಲಾಡಿಸಲು ಭಾರತ ಸರ್ಕಾರವು

ಕೊನೆಯ ಪಾವತಿಯ ಹೆಚ್ಚುವರಿ ಶುಲ್ಕ (ಎಲ್‌ಪಿಎಸ್) ನಿಯಮಗಳು, 2022ಅನ್ನು ಹೊರತಂದಿತು, ಇದು ವಿತರಣಾ ಕಂಪನಿಗಳಿಗೆ ಬಾಕಿಗಳನ್ನು ಸಮಗೊಳಿಸಿದ ಮಾಸಿಕ ಕಂತುಗಳಲ್ಲಿ ಪಾವತಿಸಲು ಅನುವುಮಾಡಿಕೊಟ್ಟಿತು. 31 ಮಾರ್ಚ್ 2021ರಲ್ಲಿದ್ದಂತೆ ಕರ್ನಾಟಕದ ಸಾಂಪ್ರದಾಯಿಕ ಉತ್ಪಾದನೆಯಲ್ಲಿ ತೊಡಗಿರುವ ಉತ್ಪಾದನಾ ಕಂಪನಿಗಳಿಗೆ ಬಾಕಿ ಮೊತ್ತವು ₹20,182.39 ಕೋಟಿಗಳಷ್ಟಿತ್ತು[28]. ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಪಾವತಿಸಬೇಕಿರುವ ಸಂಚಯಿತ ಬಾಕಿ ಮೊತ್ತವು ಡಿಸೆಂಬರ್ 2022ರ[29] ಕೊನೆಗೆ ₹19,133.49 ಕೋಟಿಗಳಷ್ಟಾಗಿದ್ದು[30], ಇದು 21 ತಿಂಗಳುಗಳ ಅವಧಿಯಲ್ಲಿ ಬಾಕಿ ಮೊತ್ತವು ಶೇಕಡ 5.20 ರಷ್ಟು ಕಡಿಮೆಯಾಗಿದೆ ಎಂಬುವನ್ನು ಸೂಚಿಸುತ್ತದೆ.

ಕರ್ನಾಟಕ ಸರ್ಕಾರವು 2019–20ರಿಂದ 2021–22ರ ಅವಧಿಯಲ್ಲಿ ಉತ್ಪಾದನಾ ಕಂಪನಿಗಳಿಗೆ ಯಾವುದೇ ಸಾಲಗಳನ್ನು ವಿಸ್ತರಿಸಲಿಲ್ಲವಾದ್ದರಿಂದ ಮಾರ್ಚ್ 2022ರ ಕೊನೆಗೆ ಯಾವುದೇ ಮೊತ್ತ ವಸೂಲಿಯಾಗಲಿಲ್ಲ. ಉತ್ಪಾದನಾ ಕಂಪನಿಗಳ ಖಾತೆಗೆ ಸಾಲದ ಘಟಕ ಶೂನ್ಯವಾಗಿದ್ದುದರಿಂದ ರಾಜ್ಯದ ಆರ್ಥಿಕ ಕೊರತೆಯ ಮೇಲೆ ಯಾವುದೇ ಪ್ರಭಾವ ಇರಲಿಲ್ಲ.

## 5.5 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಪ್ರತಿಫಲ

### *5.5.1 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿದ ಲಾಭ*

2020–21ರ 50ಕ್ಕೆ ಹೋಲಿಸಿದರೆ 2021–22ರಲ್ಲಿ ಲಾಭಗಳಿಸಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ 55 (ಐದು ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳನ್ನೂ ಒಳಗೊಂಡು) ಆಗಿತ್ತು. ಗಳಿಸಿದ ಲಾಭ 2020–21ರಲ್ಲಿದ್ದ ₹2,987.00 ಕೋಟಿಯಿಂದ 2021–22ರಲ್ಲಿ ₹2,608.22 ಕೋಟಿಗೆ ಇಳಿಕೆಯಾಯಿತು. 55 ಲಾಭ ಗಳಿಸಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಈಕ್ವಿಟಿ ಮೇಲಿನ ಪ್ರತಿಫಲವು 2020–21ರಲ್ಲಿ 50 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿದ ಶೇಕಡ 8.53ಕ್ಕೆ ಹೋಲಿಸಿದರೆ 2021–22ರಲ್ಲಿ 55 ಲಾಭ ಗಳಿಸಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಶೇಕಡ 6.70ಕ್ಕೆ ಇಳಿಯಿತು. 125 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಈಕ್ವಿಟಿ ಮೇಲಿನ ಪ್ರತಿಫಲವು 2021–22ರಲ್ಲಿ 50 ನಷ್ಟ ಅನುಭವಿಸಿದ (ಎಂಟು ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳು) ಎಲ್ಲಾ ಶೇಕಡ (–) 14.50 ಆಗಿತ್ತು.

ಗರಿಷ್ಠ ಲಾಭ ಗಳಿಸಿದ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಿವರಗಳನ್ನು **ಕೋಷ್ಟಕ–5.5 ರಲ್ಲಿ** ಸಂಕ್ಷಿಪ್ತವಾಗಿ ನೀಡಲಾಗಿದೆ.

---

[28] ರಾಜ್ಯದ ಉತ್ಪಾದನೆಗೆ ಬಾಕಿಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್): ₹17,934.97 ಕೋಟಿ ಮತ್ತು ರಾಯಚೂರು ವಿದ್ಯುತ್ ನಿಗಮ ನಿಯಮಿತ (ಆರ್‌ಪಿಸಿಎಲ್): ₹2,247.42 ಕೋಟಿ (ಕೆಪಿಸಿಎಲ್ ಮತ್ತು ಆರ್‌ಪಿಸಿಎಲ್ ಕಂಪನಿಗಳ ಲೆಕ್ಕ ಪುಸ್ತಕಗಳಲ್ಲಿದ್ದಂತೆ).

[29] ಕೊನೆಯ ಪಾವತಿಯ ಹೆಚ್ಚುವರಿ ಶುಲ್ಕ ನಿಯಮಗಳು, 2022 ದಿನಾಂಕ 3 ಜೂನ್ 2022ರಿಂದ ಜಾರಿಗೆ ಬಂದಿದೆ ಮತ್ತು ವಿದ್ಯುತ್ ವಿತರಣಾ ಸಂಸ್ಥೆಗಳು ₹1,048.90 ಕೋಟಿಗಳನ್ನು ಆಗಸ್ಟ್ 2022ರಿಂದ ಡಿಸೆಂಬರ್ 2022ರವರೆಗೆ ಈ ನಿಯಮದಡಿ ಪಾವತಿಸಿದೆ.

[30] ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (₹17,170.23 ಕೋಟಿ) ಮತ್ತು ರಾಯಚೂರು ವಿದ್ಯುತ್ ನಿಗಮ ನಿಯಮಿತಗಳನ್ನು ಒಳಗೊಂಡಿದೆ (₹1,963.26 ಕೋಟಿ). ಈ ಮೊತ್ತವು ಏಪ್ರಿಲ್ 2021ರಿಂದ ಡಿಸೆಂಬರ್ 2022ರವರೆಗೆ ಬಾಕಿ ಸಂಗ್ರಹವಾಗಿರುವುದನ್ನು ಮತ್ತು ಕೊನೆಯ ಪಾವತಿಯ ಹೆಚ್ಚುವರಿ ಶುಲ್ಕದ ಅವಧಿಯಲ್ಲಿ ಹೊರಗೆ ಸ್ವೀಕರಿಸಿದ ಪಾವತಿಯನ್ನು ಒಳಗೊಂಡಿಲ್ಲ.

**ಕೋಷ್ಟಕ–5.5: ಗರಿಷ್ಠ ಲಾಭ ಗಳಿಸಿದ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು**

| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ ಹೆಸರು | ಗಳಿಸಿದ ನಿವ್ವಳ ಲಾಭ (₹ಕೋಟಿಗಳಲ್ಲಿ) | ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಲಾಭಕ್ಕೆ ಈ ಲಾಭದ ಶೇಕಡ |
|---|---|---|
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) | 828.61 | 31.77 |
| ಕರ್ನಾಟಕ ರಾಜ್ಯ ಖನಿಜಗಳ ನಿಗಮ ನಿಯಮಿತ (ಕೆಎಸ್ಎಮ್ಸಿಎಲ್) | 472.66 | 18.12 |
| ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ) | 332.46 | *12.75* |
| *ಒಟ್ಟು* | *1633.73* | *62.64* |

*ಆಕರ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ವಿವರಣಾ ಪಟ್ಟಿಗಳು*

2021–22ರ ಅವಧಿಯಲ್ಲಿ ಈ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭಾಂಶವು ₹1,633.73 ಕೋಟಿಗಳ ನಿವ್ವಳ ಲಾಭವು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಲಾಭದ ಶೇಕಡ 62.64ರಷ್ಟಾಗಿತ್ತು.

### *5.5.2 ರಾಜ್ಯದ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಷೇರು ಲಾಭಾಂಶ (ಡಿವಿಡೆಂಡ್) ಪಾವತಿ*

ಕರ್ನಾಟಕ ಸರ್ಕಾರವು ಸಂಪೂರ್ಣವಾಗಿ ಅಥವಾ ಭಾಗಶ: ಸ್ವಾಮ್ಯ ಹೊಂದಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಿರ್ದೇಶಕರ ಮಂಡಳಿಗಳು ರಾಜ್ಯ ಸರ್ಕಾರದ ಸಲಹೆಯ ಮೇರೆಗೆ ತೆರಿಗೆಯ ನಂತರದ ಲಾಭದ ಶೇಕಡ 30ಕ್ಕಿಂತಲೂ ಕಡಿಮೆಯಿಲ್ಲದಂತೆ ಕಾರ್ಯಾಚರಣೆ ಹಾಗೂ ಆರ್ಥಿಕ ಕಾರ್ಯಸಾಧನೆಯನ್ನು ಗಣನೆಗೆ ತೆಗೆದುಕೊಂಡು ಯಾವುದೇ ನಿರ್ದಿಷ್ಟ ವರ್ಷದ ಲಾಭಾಂಶದ ಪಾವತಿಯನ್ನು ನಿರ್ಧರಿಸಬೇಕು ಎಂದು ರಾಜ್ಯ ಸರ್ಕಾರವು ಸುತ್ತೋಲೆಯ ಮೂಲಕ (ನವೆಂಬರ್ 2021) ಮಾರ್ಗಸೂಚಿಯನ್ನು[31] ರೂಪಿಸಿತ್ತು. ರಾಜ್ಯ ಸರ್ಕಾರ ಈಕ್ವಿಟಿ ಹೂಡಿಕೆ ಮಾಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಪಾವತಿಸಿದ ಷೇರು ಲಾಭಾಂಶವನ್ನು ಕೆಳಗಿನ **ಕೋಷ್ಟಕ–5.6** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–5.6: ರಾಜ್ಯದ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲಾಭಾಂಶ ಪಾವತಿ**

(₹ ಕೋಟಿಗಳಲ್ಲಿ)

| ವರ್ಷ | ಲಾಭಾಂಶ ಘೋಷಿಸಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪಾವತಿಸಲ್ಪಟ್ಟಿರುವ ಬಂಡವಾಳ | ನಿವ್ವಳ ಲಾಭ | ಘೋಷಿಸಿದ ಲಾಭಾಂಶ |
|---|---|---|---|---|
| 1 | 2 | 3 | 4 | 5 |
| **2019–20** | 16 | 198.51 | 566.62 | 49.78 |
| **2020–21** | 16 | 208.65 | 583.28 | 59.01 |
| **2021–22** | 18 | 222.15 | 1,116.45 | 189.35 |

*ಆಕರ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಆರ್ಥಿಕ ವಿವರಣಾ ಪಟ್ಟಿಗಳು*

2018–19 ಮತ್ತು 2019–20ರಲ್ಲಿ 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಷೇರು ಲಾಭಾಂಶವನ್ನು ಪಾವತಿಸಿದ್ದರೆ/ಘೋಷಿಸಿದ್ದರೆ 2021–22ರಲ್ಲಿ 18 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಷೇರು ಲಾಭಾಂಶವನ್ನು ಪಾವತಿಸಿದ್ದವು/ಘೋಷಿಸಿದ್ದವು. ವಿದ್ಯುತ್ ವಲಯದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಯಾವುದೇ ಷೇರು ಲಾಭಾಂಶವನ್ನು ಘೋಷಿಸಿಲ್ಲ/ಪಾವತಿಸಿಲ್ಲ.

[31] ರಾಜ್ಯ ಸರ್ಕಾರವು ರೂಪಿಸಿದ ಮಾರ್ಗಸೂಚಿಗಳ (ಮೇ 2003) ಅನುಸಾರ, ಸರ್ಕಾರವು ಈಕ್ವಿಟಿಯನ್ನು ಹೊಂದಿರುವಂತಹ ಸಾರ್ವಜನಿಕ ಉದ್ದಿಮೆಗಳು ಅಥವಾ ಜಂಟಿ ಸಾಹಸೋದ್ಯಮಗಳ ನಿರ್ದೇಶಕರ ಮಂಡಳಿಯಲ್ಲಿ ಸರ್ಕಾರಿ ನಾಮನಿರ್ದೇಶಿತರು ಷೇರುಹಿಡುವಳಿಗಳ ಮೇಲೆ ಕನಿಷ್ಠ ಶೇಕಡ 20ರಷ್ಟು ಲಾಭಾಂಶವನ್ನು ಘೋಷಿಸುವಂತೆ ಒತ್ತಾಯಿಸತಕ್ಕದ್ದು. ಒಂದು ವೇಳೆ ಅಷ್ಟರಮಟ್ಟಿಗೆ ಷೇರು ಲಾಭಾಂಶಗಳನ್ನು ಪಾವತಿಸಲು ಸಾಧ್ಯವಾಗುವುದಿಲ್ಲವಾದಲ್ಲಿ, ಷೇರು ಲಾಭಾಂಶ ಪಾವತಿಯು ಕನಿಷ್ಠ ಪಕ್ಷ ತೆರಿಗೆ ಪಾವತಿಯ ನಂತರ ಸಿಗುವ ಲಾಭದ ಮೊತ್ತದ ಶೇಕಡ 20ರಷ್ಟು ಆಗಿರತಕ್ಕದ್ದು.

## 5.6 ಋಣ ಸೇವೆಗಳು

### *5.6.1 ಬಡ್ಡಿ ವ್ಯಾಪ್ತಿ ಅನುಪಾತ*

ಬಡ್ಡಿ ವ್ಯಾಪ್ತಿ ಅನುಪಾತವನ್ನು ಬಾಕಿ ಇರುವ ಸಾಲದ ಮೇಲೆ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಗೆ ಇರುವ ಸಾಮರ್ಥ್ಯವನ್ನು ನಿರ್ಧಾರ ಮಾಡುವ ಸಲುವಾಗಿ ಬಳಸಲಾಗುವುದು ಹಾಗೂ ಬಡ್ಡಿ ಮತ್ತು ತೆರಿಗೆಗಳ ಪಾವತಿಗೆ ಮುಂಚಿನ ಕಂಪನಿಯ ಗಳಿಕೆಯನ್ನು (ಇಬಿಐಟಿ) ಅದೇ ಅವಧಿಯ ಬಡ್ಡಿ ವೆಚ್ಚಗಳಿಂದ ಭಾಗಿಸುವ ಮೂಲಕ ಲೆಕ್ಕ ಹಾಕಲಾಗುವುದು. ಅನುಪಾತವು ಕಡಿಮೆ ಪ್ರಮಾಣದಲ್ಲಿದ್ದರೆ, ಸಾಲಗಳ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಯ ಸಾಮರ್ಥ್ಯವೂ ಕಡಿಮೆ ಪ್ರಮಾಣದಲ್ಲಿರುತ್ತದೆ. ಒಂದಕ್ಕಿಂತ ಕಡಿಮೆ ಪ್ರಮಾಣದಲ್ಲಿನ ಬಡ್ಡಿ ಪಾವತಿ ಅನುಪಾತವು ಕಂಪನಿಯು ಬಡ್ಡಿ ಪಾವತಿಯ ಮೇಲೆ ತನ್ನ ವೆಚ್ಚಗಳನ್ನು ಭರಿಸಲು ಸಮರ್ಪಕ ವರಮಾನವನ್ನು ಉತ್ಪಾದಿಸುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ. ಬಡ್ಡಿ ಪಾವತಿ ಹೊರೆಯನ್ನು ಹೊಂದಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಬಡ್ಡಿ ವ್ಯಾಪ್ತಿ ಅನುಪಾತದ ವಿವರಗಳನ್ನು **ಕೋಷ್ಟಕ–5.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.7: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಬಡ್ಡಿ ವ್ಯಾಪ್ತಿ ಅನುಪಾತ**

| ವರ್ಷ | ಬಡ್ಡಿ (₹ ಕೋಟಿಗಳಲ್ಲಿ) | ಬಡ್ಡಿ ಮತ್ತು ತೆರಿಗೆ ಮುಂಚಿನ ಗಳಿಕೆ (₹ ಕೋಟಿಗಳಲ್ಲಿ) | ಸರ್ಕಾರ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಸಾಲದ ಜವಾಬ್ದಾರಿ ಹೊಂದಿರುವ ಎಸ್‌ಪಿಎಸ್‌ಯುಗಳ ಸಂಖ್ಯೆ | 1ಕ್ಕಿಂತ[32] ಹೆಚ್ಚಿನ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿರುವ ಕಂಪನಿಗಳ ಸಂಖ್ಯೆ | 1ಕ್ಕಿಂತ[33] ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತ ಹೊಂದಿರುವ ಕಂಪನಿಗಳ ಸಂಖ್ಯೆ |
|---|---|---|---|---|---|
| **2019–20** | 8,055.29 | 4,948.43 | 54 | 20 | 21 |
| **2020–21** | 9,285.89 | 5,041.69 | 52 | 15 | 24 |
| **2021–22** | 9,887.90 | 1,873.97 | 52 | 17 | 23 |

*ಆಕರ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಆರ್ಥಿಕ ವಿವರಣಾ ಪಟ್ಟಗಳು*

2021–22ರ ಅವಧಿಯಲ್ಲಿ 17 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಂದಕ್ಕಿಂತ ಹೆಚ್ಚಿನ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿದ್ದವು, 23 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿದ್ದವು ಮತ್ತು ಉಳಿದ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಬಡ್ಡಿ ವೆಚ್ಚ ಅಥವಾ ಬಡ್ಡಿ ಮತ್ತು ತೆರಿಗೆ ಮುಂಚಿನ ಗಳಕೆಯಲ್ಲಿ ಯಾವುದಾದರೊಂದು ಶೂನ್ಯ ಇದ್ದುದರಿಂದ ಬಡ್ಡಿ ವ್ಯಾಪ್ತಿ ಅನುಪಾತವನ್ನು ಲೆಕ್ಕ ಹಾಕಲು ಸಾಧ್ಯವಾಗಲಿಲ್ಲ. ಹೀಗೆ, 23 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ಬಡ್ಡಿಯ ವೆಚ್ಚವನ್ನು ಭರಿಸಲು ಸಾಕಷ್ಟು ಆದಾಯಗಳನ್ನು ಉತ್ಪಾದಿಸುತ್ತಿಲ್ಲ.

## 5.7 ವಿನಿಮಯ ಕೇಂದ್ರದಲ್ಲಿ ನೋಂದಣಿಯಾದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ ಅದಕ್ಕನುಗುಣವಾಗಿ ಖಾಸಗಿ ಕಂಪನಿಗಳ ಕಾರ್ಯ ನಿರ್ವಹಣೆ

ಕರ್ನಾಟಕದಲ್ಲಿ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ (ದಿ ಮೈಸೂರು ಕಾಗದ ಕಾರ್ಖಾನೆ ನಿಯಮಿತ) ಮುಂಬಯಿ ಷೇರು ವಿನಿಮಯ ಕೇಂದ್ರದಲ್ಲಿ ನೊಂದಣಿಯಾಗಿದೆ, ಮತ್ತು ಪ್ರಸ್ತುತದಲ್ಲಿ ಯಾವುದೇ ಕಾರ್ಯಾಚರಣೆ ಇಲ್ಲ.

[32] ಸಾರ್ವಜನಿಕ ವಲಯ ಉದ್ದಿಮೆಗಳು ಯಾವುದೇ ಸಾಲದ ಭಾಧೆ ಮತ್ತು ಬಡ್ಡಿಯ ಅನುಪಾತವನ್ನು ಅಳೆಯಲು ಸಾಧ್ಯವಿಲ್ಲ ಏಕೆಂದರೆ ಬಡ್ಡಿ ಮತ್ತು ತೆರಿಗೆ ಮುಂಚಿನ ಗಳಿಕೆ ಅಥವಾ ಬಡ್ಡಿಯ ಖರ್ಚು ಶೂನ್ಯ.

[33] ಸಾರ್ವಜನಿಕ ವಲಯ ಉದ್ದಿಮೆಗಳು ಯಾವುದೇ ಸಾಲದ ಭಾಧೆ ಮತ್ತು ಬಡ್ಡಿಯ ಅನುಪಾತವನ್ನು ಅಳೆಯಲು ಸಾಧ್ಯವಿಲ್ಲ ಏಕೆಂದರೆ ಬಡ್ಡಿ ಮತ್ತು ತೆರಿಗೆ ಮುಂಚಿನ ಗಳಿಕೆ ಅಥವಾ ಬಡ್ಡಿಯ ಖರ್ಚು ಶೂನ್ಯ.

### *5.7.1 ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲ*

ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲವು ಬಂಡವಾಳವನ್ನು ತೊಡಗಿಸಲಾದ ಕಂಪನಿಯ ಲಾಭದಾಯಕತೆ ಹಾಗೂ ದಕ್ಷತೆಯನ್ನು ಅಳೆಯುವ ಒಂದು ಅನುಪಾತವಾಗಿರುತ್ತದೆ. ಬಡ್ಡಿ ಹಾಗೂ ತೆರಿಗೆಗಳ ಪಾವತಿಗೆ ಮುಂಚಿನ ಒಂದು ಕಂಪನಿಯ ಗಳಿಕೆಗಳನ್ನು ತೊಡಗಿಸಲಾಗಿರುವ ಬಂಡವಾಳದಿಂದ ಭಾಗಿಸುವ ಮೂಲಕ ಹೂಡಿಕೆ ಮಾಡಲಾದ ಬಂಡವಾಳದ[34] ಮೇಲಿನ ಪ್ರತಿಫಲವನ್ನು ಲೆಕ್ಕ ಹಾಕಲಾಗುವುದು. 2019–20ರಿಂದ 2021–22ರವರೆಗಿನ ಅವಧಿಯ ಬಂಡವಾಳದ ಮೇಲಿನ ಪ್ರತಿಫಲವದ ವಿವರಗಳನ್ನು **ಕೋಷ್ಟಕ–5.8**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.8: ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲ**

| ವರ್ಷ | ಬಡ್ಡಿ ಮತ್ತು ತೆರಿಗೆಗೆ ಮುಂಚಿನ ಗಳಿಕೆ (₹ ಕೋಟಿಗಳಲ್ಲಿ) | ಹೂಡಿಕೆ ಮಾಡಲಾಗಿರುವ ಬಂಡವಾಳ (₹ ಕೋಟಿಗಳಲ್ಲಿ) | ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|
| **2019–20** | 4,948.43 | 1,37,115.15 | 3.61 |
| **2020–21** | 5,041.69 | 1,45,117.01 | 3.47 |
| **2021–22** | 1,873.97 | 1,58,153.43 | 1.18 |

*ಆಕರ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಆರ್ಥಿಕ ವಿವರಣಾ ಪಟ್ಟಿಗಳು*

2019–20ರಿಂದ 2021–22ರ ಅವಧಿಯಲ್ಲಿ ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲವು ಧನಾತ್ಮಕವಾಗಿತ್ತಾದರೂ ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲವು 2019–20ರಲ್ಲಿದ್ದ ಶೇಕಡ 3.61ರಿಂದ 2021–22ರಲ್ಲಿ 1.18ಕ್ಕೆ ಇಳಿಕೆಯಾಯಿತು.

### *5.7.2 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಈಕ್ವಿಟಿ ಮೇಲಿನ ಪ್ರತಿಫಲ*

ಈಕ್ವಿಟಿ ಮೇಲಿನ ಪ್ರತಿಫಲವು ವ್ಯವಸ್ಥಾಪನೆಯು ಲಾಭವನ್ನು ಗಳಿಸುವ ಸಲುವಾಗಿ ಕಂಪನಿಯ ಆಸ್ತಿಗಳನ್ನು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ ಎಂಬುದನ್ನು ನಿರ್ಧಾರ ಮಾಡುವ ಸಲುವಾಗಿ ಹಣಕಾಸಿನ ಕಾರ್ಯನಿರ್ವಹಣೆಯ ಒಂದು ಅಳತೆಯಾಗಿರುತ್ತದೆ. ಈಕ್ವಿಟಿ ಮೇಲಿನ ಪ್ರತಿಫಲದ ನಿವ್ವಳ ಆದಾಯವನ್ನು (ಅಂದರೆ ತೆರಿಗೆಗಳ ನಂತರ ನಿವ್ವಳ ಲಾಭ) ಷೇರುದಾರರುಗಳ ಹಣಕಾಸಿನಿಂದ ಭಾಗಿಸುವ ಮೂಲಕ ಲೆಕ್ಕ ಹಾಕಲಾಗುವುದು. ಇದನ್ನು ಶೇಕಡಾವಾರಿನಲ್ಲಿ ವ್ಯಕ್ತಪಡಿಸಲಾಗುವುದು ಮತ್ತು ಯಾವುದೇ ಕಂಪನಿಗೆ ನಿವ್ವಳ ಆದಾಯ ಮತ್ತು ಷೇರುದಾರರ ಹಣಕಾಸು ಎರಡೂ ಧನಾತ್ಮಕ ಸಂಖ್ಯೆಯಾಗಿದ್ದಾಗ ಮಾತ್ರ ಲೆಕ್ಕ ಮಾಡಬಹುದಾಗಿದೆ.

ಷೇರುದಾರರುಗಳ ಹಣಕಾಸನ್ನು ಪಾವತಿಸಲ್ಪಟ್ಟಿರುವ ಬಂಡವಾಳಕ್ಕೆ ಮುಕ್ತ ಮೀಸಲುಗಳನ್ನು ಸೇರಿಸಿ, ಅದರಿಂದ ಸಂಚಿತ ನಷ್ಟ ಮತ್ತು ಮುಂದೂಡಿದ ರಾಜಸ್ವ ವೆಚ್ಚವನ್ನು ಕಳೆಯುವುದರ ಮೂಲಕ ಲೆಕ್ಕಹಾಕಲಾಗುವುದು ಮತ್ತು ಕಂಪನಿಯ ಎಲ್ಲಾ ಆಸ್ತಿಗಳನ್ನು ಮಾರಿದರೆ, ಎಲ್ಲಾ ಸಾಲಗಳನ್ನೂ ಪಾವತಿಸದರೆ ಕಂಪನಿಯ ಪಾಲುದಾರರಿಗೆ ಎಷ್ಟು ಉಳಿಯುತ್ತದೆ ಎಂಬುದನ್ನು ಹೊರಗೆಡಹುತ್ತದೆ. ಒಂದು ಧನಾತ್ಮಕ ಷೇರುದಾರರ ಹಣಕಾಸು ಕಂಪನಿಯು ತನ್ನ ಜವಾಬ್ದಾರಿಗಳನ್ನು ಪೂರೈಸಲು ಸಾಕಷ್ಟು ಆಸ್ತಿಗಳನ್ನು ಹೊಂದಿದೆ ಎಂಬುದನ್ನು ಹೊರಗೆಡಹುತ್ತದೆ, ಅದೇ ಋಣಾತ್ಮಕ ಷೇರುದಾರರ ಈಕ್ವಿಟಿಯು ಜವಾಬ್ದಾರಿಯ ಆಸ್ತಿಗಿಂತ ಜಾಸ್ತಿ ಇದೆ ಎಂದು ಅರ್ಥೈಸುತ್ತದೆ.

ಷೇರುದಾರರ ಹಣಕಾಸು ಮತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈಕ್ವಿಟಿ ಮೇಲಿನ ಪ್ರತಿಫಲದ ವಿವರಗಳನ್ನು **ಕೋಷ್ಟಕ–5.9**ರಲ್ಲಿ ನೀಡಲಾಗಿದೆ.

---

[34] ತೊಡಗಿಸಿದ ಬಂಡವಾಳ=ಪಾವತಿಸಲ್ಪಟ್ಟ ಷೇರು ಬಂಡವಾಳ + ಮುಕ್ತ ಮೀಸಲು ಮತ್ತು ಅಧಿಕ + (ಧೀರ್ಘಾವಧಿ ಸಾಲಗಳು–ಸಂಚಿತ ನಷ್ಟ–ಮುಂದೂಡಿದ ರಾಜಸ್ವ ವೆಚ್ಚ)

**ಕೋಷ್ಟಕ–5.9: ರಾಜ್ಯ ಸರ್ಕಾರ ನಿಧಿಗಳನ್ನು ಹೂಡಿಕೆ ಮಾಡಿರುವ ರಾಜ್ಯ ಸಾವರ್ಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈಕ್ವಿಟಿ ಮೇಲಿನ ಪ್ರತಿಫಲ**

| ವರ್ಷ | ನಿವ್ವಳ ಆದಾಯ (₹ ಕೋಟಿಗಳಲ್ಲಿ) | ಷೇರುದಾರರ ನಿಧಿ (₹ ಕೋಟಿಗಳಲ್ಲಿ) | ಈಕ್ವಿಟಿ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|
| 2019–20 | –3,911.89 | 59,698.86 | – |
| 2020–21 | –5,259.47 | 54,429.18 | – |
| 2021–22 | –8,839.63 | 60,956.73 | – |

2019–20ರಿಂದ 2021–22ರವರೆಗೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಲಾಭ ಗಳಿಸದಿದ್ದರೂ ಈಕ್ವಿಟಿ ಮೇಲಿನ ಪ್ರತಿಫಲವನ್ನು ಲೆಕ್ಕ ಹಾಕಲು ಸಾಧ್ಯವಾಗಲಿಲ್ಲ.

## 5.8 ನಷ್ಟ ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು

### *5.8.1 ಅನುಭವಿಸಿದ ನಷ್ಟಗಳು*

ಮಾರ್ಚ್ 2022ರ ಕೊನೆಗೆ ಮುಕ್ತಾಯಗೊಳಿಸಿದ ಇತ್ತೀಚಿನ ಲೆಕ್ಕಪತ್ರಗಳ ಪ್ರಕಾರ 50 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[35] ನಷ್ಟವನ್ನು ಅನುಭವಿಸಿದ್ದವು. **ಕೋಷ್ಟಕ–5.10**ರಲ್ಲಿ 2019–20ರಲ್ಲಿ ₹6,642.55 ಕೋಟಿಗಳಷ್ಟಿದ್ದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಷ್ಟಗಳು ಇತ್ತೀಚೆಗೆ ಮುಕ್ತಾಯಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ₹11,447.85 ಕೋಟಗಳಿಗೆ ಹೆಚ್ಚಳವಾಯಿತು.

**ಕೋಷ್ಟಕ–5.10: 2019–20ರಿಂದ 2021–22ರವರೆಗೆ ನಷ್ಟ ಅನುಭವಿಸಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ**

(₹ ಕೋಟಿಗಳಲ್ಲಿ)

| ವರ್ಷ | ನಷ್ಟ ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು | ವರ್ಷದ ನಿವ್ವಳ ನಷ್ಟ | ಸಂಚಿತ ನಷ್ಟ | ನಿವ್ವಳ ಆಸ್ತಿಯ ಮೌಲ್ಯ[36] |
|---|---|---|---|---|
| ಶಾಸನಬದ್ಧ ನಿಗಮಗಳು | | | | |
| 2019–20 | 4 | (–) 641.72 | (–) 2,315.17 | (–) 1,646.26 |
| 2020–21 | 5 | (–) 985.32 | (–) 3,141.26 | (–) 2,464.55 |
| 2021–22 | 4 | (–) 1282.43 | (–) 3877.52 | (–) 2981.46 |
| ರಾಜ್ಯ ಸರ್ಕಾರದ ಕಂಪನಿಗಳು | | | | |
| 2019–20 | 41 | (–) 6,000.83 | (–) 20,676.61 | 26,238.01 |
| 2020–21 | 45 | (–) 7,261.15 | (–) 26,567.37 | 21,844.26 |
| 2021–22 | 46 | (–) 10,165.42 | (–) 32,951.29 | 25,000.29 |
| ಒಟ್ಟು | | | | |
| 2019–20 | ***45*** | ***(–) 6,642.55*** | ***(–) 22,991.78*** | ***24,591.75*** |
| 2020–21 | ***50*** | ***(–) 8,246.47*** | ***(–) 29,708.63*** | ***19,379.71*** |
| 2021–22 | ***50*** | ***(–)11447.85*** | ***(–)36828.81*** | ***(–) 22,018.83*** |

[35] 50 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಎಂಟು ಕಾರ್ಯಸ್ಥಗಿತ ಉದ್ದಿಮೆಗಳನ್ನು ಒಳಗೊಂಡಿದೆ.

[36] ನಿವ್ವಳ ಮೌಲ್ಯ ಎಂದರೆ ಪಾವತಿಸಿದ ಷೇರು ಬಂಡವಾಳ ಮತ್ತು ಉಚಿತ ಮೀಸಲು ಮತ್ತು ಹೆಚ್ಚುವರಿ ಇವುಗಳಿಂದ ಸಂಗ್ರಹವಾದ ನಷ್ಟ ಮತ್ತು ಮುಂದೂಡಲ್ಪಟ್ಟ ಆದಾಯ ವೆಚ್ಚಗಳ ಒಟ್ಟು ಮೊತ್ತದ ಕಳೆಯುವಿಕೆ. ಉಚಿತ ಮೀಸಲು ಎಂದರೆ ಲಾಭ ಮತ್ತು ಷೇರು ಪ್ರೀಮಿಯಂ ಖಾತೆಯಿಂದ ರಚಿಸಲಾದ ಎಲ್ಲಾ ಮೀಸಲುಗಳು ಆದರೆ ಸ್ವತ್ತುಗಳ ಮರುಮೌಲ್ಯಮಾಪನದಿಂದ ರಚಿಸಲಾದ ಮೀಸಲುಗಳನ್ನು ಒಳಗೊಂಡಿಲ್ಲ ಮತ್ತು ಸವಕಳಿ ನಿಬಂಧನೆಯನ್ನು ಹಿಂಬರೆಯಲಾಗಿತ್ತು.

2021–22ರಲ್ಲಿ 50 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅನುಭವಿಸಿದ ಒಟ್ಟಾರೆ ನಷ್ಟವಾದ ₹11,447.85 ಕೋಟಿಗಳಲ್ಲಿ ನಾಲ್ಕು[37] ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಗಣನೀಯ ₹7,907.43 ಕೋಟಿಗಳು ನಷ್ಟ ಅನುಭವಿಸಿದೆ.

### *5.8.2 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಬಂಡವಾಳ ಅಳಿಸಿಹೋಗುವಿಕೆ*

31ನೇ ಮಾರ್ಚ್ 2022ರಲ್ಲಿದ್ದಂತೆ 54 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹37,893.24 ಕೋಟಿಗಳಷ್ಟು ಸಂಚಿತ ನಷ್ಟವನ್ನು ಹೊಂದಿದ್ದವು. ಈ 54ರ ಪೈಕಿ 39 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹11,378.58 ಕೋಟಿಗಳ ನಷ್ಟಗಳನ್ನು ಅನುಭವಿಸಿದವು ಮತ್ತು 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ಇತ್ತೀಚಿಗೆ ಮುಕ್ತಾಯಗೊಳಿಸದ ಲೆಕ್ಕಪತ್ರಗಳ ಪ್ರಕಾರ ₹562.98 ಕೋಟಿಗಳಷ್ಟು ಸಂಚಿತ ನಷ್ಟವನ್ನು ಹೊಂದಿದ್ದರೂ ನಷ್ಟ ಅನುಭವಿಸಲಿಲ್ಲ. 54 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಎರಡು ಮುಚ್ಚುವ[38] ಪ್ರಕ್ರಿಯೆಯಲ್ಲಿದ್ದವು (ಲಿಕ್ವಿಡೇಷನ್).

ಒಟ್ಟು 54 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 34ರ ನಿವ್ವಳ ಆಸ್ತಿ ಮೌಲ್ಯವು ಸಂಚಿತ ನಷ್ಟಗಳಿಂದಾಗಿ ಸಂಪೂರ್ಣವಾಗಿ ಅಳಿಸಿಹೋಗಿತ್ತು ಮತ್ತು ಅವುಗಳ ನಿವ್ವಳ ಆಸ್ತಿ ಮೌಲ್ಯವು ಸೊನ್ನೆ ಅಥವಾ ಋಣಾತ್ಮಕವಾಗಿದೆ ಮತ್ತು ವಿವರಗಳನ್ನು **ಅನುಬಂಧ–5.4**ರಲ್ಲಿ ಸೂಚಿಸಲಾಗಿದೆ. 31 ಮಾರ್ಚ್ 2022ರಲ್ಲಿದ್ದಂತೆ ಈ 34 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ₹9,095.51 ಕೋಟಗಳ ಈಕ್ವಿಟಿ ಹೂಡಿಕೆಗೆ ಪ್ರತಿಯಾಗಿ ಅವುಗಳ ನಿವ್ವಳ ಆಸ್ತಿ ಮೌಲ್ಯವು (–) ₹17,912.56 ಕೋಟಿಗಳಷ್ಟಾಗಿತ್ತು. ಬಂಡವಾಳ ಅಳಿಸಿಹೋಗಿದ್ದ (ನಿವ್ವಳ ಆಸ್ತಿ ಮೌಲ್ಯವು ಶೂನ್ಯ ಅಥವಾ ಋಣಾತ್ಮಕವಾಗಿರುವ) ಈ 34ರ ಪೈಕಿ ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2021–22ರಲ್ಲಿ ₹5.87 ಕೋಟಿ ಲಾಭವನ್ನು ಗಳಿಸಿದ್ದವು. 34 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಬಂಡವಾಳ ಅಳಿಸಿಹೋಗಿದ್ದ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 31 ಮಾರ್ಚ್ 2022ರಲ್ಲಿದ್ದಂತೆ, ಬಾಕಿ ಇದ್ದ ಸರ್ಕಾರಿ ಸಾಲಗಳ ಮೊತ್ತ ₹42,567.68 ಕೋಟಿಗಳಷ್ಟಾಗಿತ್ತು.

ಮುಂದುವರೆದು, 34 ಕಂಪನಿಗಳಲ್ಲಿನ ಒಟ್ಟು ಈಕ್ವಿಟಿ ಮತ್ತು ಸಾಲಗಳಲ್ಲಿ ಶೇಕಡ 96.25ರಷ್ಟು ಈಕ್ವಿಟಿ ಮತ್ತು ಶೇಕಡ 52.82ರಷ್ಟು ಸಾಲವು ವಿದ್ಯುತ್ ಮತ್ತು ಸಾರಿಗೆ ವಲಯಗಳಿಗೆ ಸಂಬಂಧಿಸಿದ್ದಾಗಿದೆ. ರಾಜ್ಯ ಸರ್ಕಾರವು ವಿದ್ಯುತ್ ವಲಯದ ಘಟಕಗಳ ಮಾಲೀಕತ್ವವನ್ನು ಹೊಂದಿದ್ದು ರಾಜ್ಯದ ಸರ್ಕಾರಿ ಇಲಾಖೆ/ ಉದ್ದಿಮೆಗಳು ಸಾರ್ವಜನಿಕ ಸಾರಿಗೆ ಸೇವೆಗಳನ್ನು ಒದಗಿಸುತ್ತವೆ. ವಿದ್ಯುತ್ ವಲಯದ ಆರ್ಥಿಕ ಸ್ಥಿತಿಯು ವಿಶೇಷವಾಗಿ ರಾಜ್ಯಗಳ ಹಣಕಾಸಿನ ಸ್ಥಿತಿಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಹೆಚ್ಚಿನ ನಷ್ಟಗಳಿಗೆ ಈ ಎರಡು ವಲಯಗಳೆ ಕೊಡುಗೆ ನೀಡಿರುವುದರಿಂದ, ಅವುಗಳಲ್ಲಿನ ಅಸಮರ್ಥತೆಗಳನ್ನು ಪರಿಹರಿಸಲು ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಅದಕ್ಷತೆಯನ್ನು ಬಗೆಹರಿಸುವುದನ್ನು ಶಿಫಾರಸು ಮಾಡುವುದರ ಜೊತೆಗೆ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಆರ್ಥಿಕ ಸ್ವಾಯತ್ತತೆಯನ್ನು ಒದಗಿಸಲು ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗದ ನಿಧಿಯನ್ನು ಸ್ಥಾಪಿಸಲು ಹಾಗೂ ಸಾರಿಗೆ ವಲಯಕ್ಕೆ ಸ್ವತಂತ್ರ ನಿಯಂತ್ರಣ ಪ್ರಾಧಿಕಾರವನ್ನು ರಚಿಸಲು ಸೂಚಿಸಿತ್ತು. ಇನ್ನಿತರ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ನಿಷ್ಕ್ರಿಯ ಕಂಪನಿಗಳನ್ನು ಮುಚ್ಚಲು ಮಾರ್ಗನಕ್ಷೆಯನ್ನು ರೂಪಿಸುವಂತೆ ಹೇಳಿದ್ದ ಹದಿಮೂರನೇ ಹಣಕಾಸು ಆಯೋಗದ ಶಿಫಾರಸನ್ನು ಎತ್ತಿ ಹಿಡಿದಿತ್ತು.

---

[37] ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಬೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ), ರಾಯಚೂರು ಪವರ್ ಕಾರ್ಪೊರೇಷನ್ ಲಿಮಿಟೆಡ್ (ಆರ್‌ಪಿಸಿಎಲ್) ಮತ್ತು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಗೆಸ್ಕಾಂ).

[38] ಕರ್ನಾಟಕ ರಾಜ್ಯ ವಿನೀರ್ಸ್ ನಿಯಮಿತ (ಕೆಎಸ್‌ವಿಎಲ್) ಮತ್ತು ಮೈಸೂರ್ ಕಾಸ್ಮೆಟಿಕ್ಸ್ ನಿಯಮಿತ (ಎಮ್‌ಸಿಎಲ್).

## 5.9 ರಾಜ್ಯ ಸರ್ಕಾರಿ ವಲಯ ಉದ್ದಿಮೆಗಳ ಲೆಕ್ಕಪರಿಶೋಧನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(5) ಮತ್ತು (7)ರ ಅಡಿಯಲ್ಲಿ ಸರ್ಕಾರಿ ಕಂಪನಿ ಮತ್ತು ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ಇತರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕಗೊಳಿಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ಪೂರಕ ಲೆಕ್ಕಪರಿಶೋಧನೆ ನಡೆಸಲು ಮತ್ತು ಟೀಕೆ ಟಿಪ್ಪಣಿಗಳನ್ನು ನೀಡಲು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕ ವರದಿ ನೀಡುವ ಹಕ್ಕು ಇದೆ. ಕೆಲವು ನಿಗಮಗಳನ್ನು ನಿಯಂತ್ರಿಸುವ ಕಾನೂನುಗಳು ನಿಗಮಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಅವರೇ ನಡೆಸಬೇಕಾದ ಅಗತ್ಯವಿದ್ದು ಶಾಸಕಾಂಗಕ್ಕೆ ವರದಿಯನ್ನು ಸಲ್ಲಿಸಬೇಕೆಂದು ತಿಳಿಸುತ್ತವೆ.

## 5.10 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕ

ಸರ್ಕಾರಿ ಕಂಪನಿ ಅಥವಾ ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ಇತರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹಣಕಾಸು ವರ್ಷ ಪ್ರಾರಂಭವಾದ 180 ದಿನಗಳೊಳಗೆ ನೇಮಿಸಬೇಕೆಂದು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(5) ಸೂಚಿಸುತ್ತದೆ.

2021–22ರ ವರ್ಷಕ್ಕೆ ಕಂಪನಿಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಆಗಸ್ಟ್/ಸೆಪ್ಟೆಂಬರ್ 2021ರಲ್ಲಿ ನೇಮಕ ಮಾಡಲಾಯಿತು.

## 5.11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ

### *5.11.1 ಸಮಯೋಚಿತ ಸಲ್ಲಿಕೆಯ ಅಗತ್ಯತೆ*

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 394ರ ಅನುಸಾರ ಸರ್ಕಾರಿ ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯ[39] ಮೂರು ತಿಂಗಳೊಳಗಾಗಿ ಅದರ ಕಾರ್ಯಾಚರಣೆ ಮತ್ತು ವ್ಯವಹಾರಗಳ ಬಗ್ಗೆ ಒಂದು ವಾರ್ಷಿಕ ವರದಿಯನ್ನು ತಯಾರಿಸಬೇಕು. ಆ ವರದಿ ತಯಾರಾದ ನಂತರ ಆ ವರದಿಯ ಜೊತೆ ಲೆಕ್ಕಪರಿಶೋಧನಾ ವರದಿಯ ಮೇಲೆ ಅಥವಾ ಪೂರಕವಾದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟಿಪ್ಪಣಿಗಳನ್ನು ರಾಜ್ಯದ ಶಾಸಕಾಂಗದಲ್ಲಿ ಮಂಡಿಸಬೇಕು. ಶಾಸನಬದ್ಧ ನಿಗಮಗಳಿಗೆ ಅವುಗಳನ್ನು ನಿಯಂತ್ರಿಸುವ ಇಂತಹವೇ ಅನುವುಗಳು ಇವೆ. ಈ ಕಾರ್ಯವಿಧಾನವು ರಾಜ್ಯದ ಸಂಚಿತ ನಿಧಿಯಿಂದ ಮಾಡಲಾದ ಸಾರ್ವಜನಿಕ ಹಣಕಾಸಿನ ಹೂಡಿಕೆಯ ಬಳಕೆಯ ಮೇಲೆ ಅವಶ್ಯವಾದ ಶಾಸನಾತ್ಮಕ ನಿಯಂತ್ರಣವನ್ನು ಒದಗಿಸುತ್ತದೆ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96ರಂತೆ ಪ್ರತಿಯೊಂದು ಕಂಪನಿಯು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ಷೇರುದಾರರ ವಾರ್ಷಿಕ ಸಾಮಾನ್ಯ ಸಭೆ ನಡೆಸಬೇಕು. ಒಂದು ವಾರ್ಷಿಕ ಸಾಮಾನ್ಯ ಸಭೆಯಿಂದ ಇನ್ನೊಂದು ವಾರ್ಷಿಕ ಸಾಮಾನ್ಯ ಸಭೆಯ ನಡುವೆ 15 ತಿಂಗಳುಗಳು ಮೀರಬಾರದು ಎಂದು ಹೇಳಲಾಗಿದೆ. ಹಣಕಾಸಿನ ವರ್ಷದ ಹಣಕಾಸಿನ ಪಟ್ಟಿಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವರ ಪರಿಗಣನೆಗಾಗಿ ಮಂಡಿಸಬೇಕು ಎಂದು ಕಂಪನಿಗಳ ಅಧಿನಿಯಮ 2013ರ ಪರಚ್ಛೇದ 129 ನಿರ್ದಿಷ್ಟಪಡಿಸಿದೆ.

[39] ಮೊದಲ ವಾರ್ಷಿಕ ಸಾಮಾನ್ಯ ಸಭೆಯನ್ನು ಕಂಪನಿಯ ಮೊದಲ ಹಣಕಾಸು ವರ್ಷದ ಮುಕ್ತಾಯದ ದಿನಾಂಕದಿಂದ ಒಂಬತ್ತು ತಿಂಗಳ ಅವಧಿಯೊಳಗೆ ಮತ್ತು ಇತರ ಯಾವುದೇ ಪ್ರಕರಣದಲ್ಲಿ ಹಣಕಾಸು ಮುಕ್ತಾಯದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಅಂದರೆ 30 ಸೆಪ್ಟೆಂಬರ್ ಒಳಗೆ ನಡೆಸಬೇಕು.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129ರ ಅನುವುಗಳನ್ನು ಪಾಲನೆ ಮಾಡದಿದ್ದಲ್ಲಿ ಕಂಪನಿಯ ನಿರ್ದೇಶಕರನ್ನೂ ಒಳಗೊಂಡಂತೆ ಅದಕ್ಕೆ ಕಾರಣಕರ್ತರಾದ ವ್ಯಕ್ತಿಗಳಿಗೆ ದಂಡ ಮತ್ತು ಜೈಲು ಶಿಕ್ಷೆ ವಿಧಿಸಬಹುದೆಂದು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129(7) ಒದಗಿಸಿದೆ.

30 ಸೆಪ್ಟೆಂಬರ್ 2022ರಲ್ಲಿದ್ದಂತೆ[40], ವಿವಿಧ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಾರ್ಷಿಕ ಲೆಕ್ಕಪತ್ರಗಳು ಈ ಕೆಳಗಿನ ಕಂಡಿಕೆಯಲ್ಲಿ ವಿವರಿಸಿದ ಹಾಗೆ ಬಾಕಿ ಇದ್ದವು.

### *5.11.2 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿ ಸಮಯೋಚಿತತೆ*

31 ಮಾರ್ಚ್ 2022ರಲ್ಲಿದ್ದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿ 119 ಸರ್ಕಾರಿ ಕಂಪನಿಗಳಿದ್ದವು. ಇವುಗಳಲ್ಲಿ, 2021–22ರ ವರ್ಷಕ್ಕೆ 118 ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳು ಬಾಕಿ ಇದ್ದವು. ಆದಾಗ್ಯೂ, 30 ಸೆಪ್ಟೆಂಬರ್ 2022ರೊಳಗೆ ಕೇವಲ 32 ಸರ್ಕಾರಿ ಕಂಪನಿಗಳು ತಮ್ಮ ಲೆಕ್ಕಪತ್ರಗಳನ್ನು (ಹಿಂದಿನ ವರ್ಷಗಳ ಲೆಕ್ಕಪತ್ರಗಳನ್ನೂ ಒಳಗೊಂಡಂತೆ) ಲೆಕ್ಕಪರಿಶೋಧನೆಗಾಗಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ಸಲ್ಲಿಸಿದ್ದವು. 86 ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳು ವಿವಿಧ ಕಾರಣಗಳಿಗಾಗಿ ಬಾಕಿ ಇದ್ದವು. ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿನ ಬಾಕಿಯನ್ನು **ಕೋಷ್ಟಕ–5.11**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.11: ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿನ ಬಾಕಿಯ ವಿವರಗಳು**

| ಕ್ರಮ ಸಂಖ್ಯೆ | ವಿವರಗಳು | | ಸರ್ಕಾರಿ ಕಂಪನಿಗಳ ಸಂಖ್ಯೆ |
|---|---|---|---|
| 1 | 31.03.2022 ರಲ್ಲಿದ್ದಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿರುವ ಕಂಪನಿಗಳ ಒಟ್ಟು ಸಂಖ್ಯೆ | | 119 |
| 2 | ಕಳೆಯಿರಿ: 2021–22ರ ಲೆಕ್ಕಪತ್ರಗಳು ಬಾಕಿಯಿರದ[41] ಹೊಸ ಕಂಪನಿಗಳು | | 01 |
| 3 | 2021–22ರ ಲೆಕ್ಕಪತ್ರಗಳು ಬಾಕಿ ಇರುವ ಕಂಪನಿಗಳ ಸಂಖ್ಯೆ | | 118 |
| 4 | 30 ಸೆಪ್ಟೆಂಬರ್ 2022ರೊಳಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಗಾಗಿ 2021–22ರ ಲೆಕ್ಕಪತ್ರಗಳನ್ನು ಸಲ್ಲಿಸಿದ ಕಂಪನಿಗಳ ಸಂಖ್ಯೆ. | | 32[42] |
| 5 | ಬಾಕಿ ಇರುವ ಲೆಕ್ಕಪತ್ರಗಳ ಸಂಖ್ಯೆ (86 ಸರ್ಕಾರಿ ಕಂಪನಿಗಳು) | | 204 |
| 6 | ಬಾಕಿಗಳ ವಿವರಗಳು | (i) ಮುಚ್ಚುವಿಕೆಯ ಪ್ರಕ್ರಿಯೆಯಲ್ಲಿರುವವು | 72 |
| | | (ii) ನಿಷ್ಕ್ರಿಯ | 15 |
| | | (iii) ಇತರೆ | 117 |
| 7 | 'ಇತರೆ' ವರ್ಗಕ್ಕೆ ಪ್ರತಿಯಾಗಿ ಇರುವ ಬಾಕಿಗಳ ವಯೋಮಾನದ ವಿಶ್ಲೇಷಣೆ | (i) ಒಂದು ವರ್ಷ (2021–22) | 56 |
| | | (ii) ಎರಡು ವರ್ಷಗಳು (2020–21 ಮತ್ತು 2021–22) | 22 |
| | | (iii) ಮೂರು ವರ್ಷಗಳು ಮತ್ತು ಹೆಚ್ಚು | 39 |

ಲೆಕ್ಕಪತ್ರಗಳು ಬಾಕಿಯಿರಿಸಿರುವ ಕಂಪನಿಗಳಲ್ಲಿ ಕರ್ನಾಟಕ ಸರ್ಕಾರವು ಈಕ್ವಿಟಿ ಮತ್ತು ಸಾಲದ ರೂಪದಲ್ಲಿ ಹೂಡಿಕೆ ಮಾಡಿರುವುದರಿಂದ, ಸದರಿ ಕಂಪನಿಗಳಿಂದ ಲೆಕ್ಕಪತ್ರಗಳನ್ನು ಅಂತಿಮಗೊಳಿಸದಿರುವುದು ಅಂತಹ ಹೂಡಿಕೆಗಳು ಲೆಕ್ಕಪರಿಶೋಧನೆ ಮತ್ತು ರಾಜ್ಯ ಶಾಸಕಾಂಗದ ಕಣ್ಗಾವಲಿನಿಂದ ಹೊರಗುಳಿದು ಆ ಮೂಲಕ ಅವುಗಳು ವಂಚನೆ ಮತ್ತು ದುರುಪಯೋಗಕ್ಕೆ ಒಳಗಾಗುವ ಹೆಚ್ಚಿನ ಅವಕಾಶವನ್ನು ಹೊಂದಿದ್ದವು.

---

[40] ಕಂಪನಿಗಳ ಅಧಿನಿಯಮ, 2013ರ ಪ್ರಕಾರ 30 ಸೆಪ್ಟೆಂಬರ್ 2022ರೊಳಗೆ 2021–22ರ ಸಾಲಿನ ವಾರ್ಷಿಕ ಸಾಮಾನ್ಯ ಸಭೆ ನಡೆಸಬೇಕು.

[41] ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮ (ಮೇ 2021ರಲ್ಲಿ ಸ್ಥಾಪಿಸಿದ್ದು)

[42] 2021–22ರ ಅವಧಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಾರ್ಷಿಕ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಲೆಕ್ಕಪರಿಶೋಧನೆಯಾಗಿರುವುದು.

### 5.11.3 ಶಾಸನಬದ್ಧ ನಿಗಮಗಳಿಂದ ಲೆಕ್ಕಪತ್ರಗಳ ತಯಾರಿಕೆಯಲ್ಲಿ ಸಮಯೋಚಿತತೆ

ಆರು ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನಡೆಸುತ್ತಾರೆ. ಅವುಗಳಲ್ಲಿ ನಾಲ್ಕು ಶಾಸನಬದ್ಧ ನಿಗಮಗಳಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕಮಾತ್ರ ಲೆಕ್ಕಪರಿಶೋಧಕರಾಗಿದ್ದರೆ, ಉಳಿದ ಎರಡು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಯ ನಂತರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕಮಾತ್ರ ಲೆಕ್ಕಪರಿಶೋಧಕರಾಗಿರುವ ನಾಲ್ಕು ಶಾಸನಬದ್ಧ ನಿಗಮಗಳ ಪೈಕಿ ಯಾವೊಂದು ನಿಗಮವೂ ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆ ನಡೆಸುವ ಒಂದು ನಿಗಮವು 2021-22ರ ಅವಧಿಗೆ 30 ಸೆಪ್ಟೆಂಬರ್ 2022ರೊಳಗೆ ಲೆಕ್ಕಪತ್ರಗಳನ್ನು ಸಲ್ಲಿಸಿದ್ದವು. 30 ಸೆಪ್ಟೆಂಬರ್ 2022ರಲ್ಲಿದ್ದಂತೆ, ಆರು ಶಾಸನಬದ್ಧ ನಿಗಮಗಳಿಂದ ಆರು ಲೆಕ್ಕಪತ್ರಗಳು (ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕಮಾತ್ರ ಲೆಕ್ಕಪರಿಶೋಧಕರಾಗಿರುವ ನಾಲ್ಕು ಲೆಕ್ಕಪತ್ರಗಳು ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆ ನಡೆಸುವ ಎರಡು ಲೆಕ್ಕಪತ್ರಗಳು) ಬಾಕಿ ಇದ್ದವು.

## 5.12 ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲುಸ್ತುವಾರಿ (ಓವರ್‌ಸೈಟ್)– ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಪೂರಕ ಲೆಕ್ಕಪರಿಶೋಧನೆ

### 5.12.1 ಆರ್ಥಿಕ ನಿರೂಪಣಾ ಚೌಕಟ್ಟು

ಕಂಪನಿಗಳು ಹಣಕಾಸು ತ:ಖ್ತೆಗಳನ್ನು ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲ್ III ರಲ್ಲಿ ನೀಡಿದಂತಹ ನಮೂನೆಯಲ್ಲೇ ಮತ್ತು ಕೇಂದ್ರ ಸರ್ಕಾರವು ಲೆಕ್ಕಪತ್ರ ಮಾನದಂಡಗಳ ರಾಷ್ಟ್ರೀಯ ಸಲಹಾ ಸಮಿತಿಯೊಂದಿಗಿನ ಪರ್ಯಾಲೋಚನೆಯೊಂದಿಗೆ ನಿಗದಿಪಡಿಸಿದ ಕಡ್ಡಾಯ ಲೆಕ್ಕಪತ್ರ ಮಾನದಂಡಗಳ ಅನುಸರಣೆಯೊಂದಿಗೆ ತಯಾರಿಸಬೇಕಾದ ಅಗತ್ಯತೆ ಇದೆ. ಶಾಸನಬದ್ಧ ನಿಗಮಗಳು ತಮ್ಮ ಲೆಕ್ಕಪತ್ರಗಳನ್ನು ನಿಯಮಗಳ ಅಡಿಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರೊಂದಿಗಿನ ಪರ್ಯಾಲೋಚನೆಯಿಂದ ರೂಪಿಸಿದ ಮತ್ತು ಅಂತಹ ನಿಗಮಗಳನ್ನು ನಿಯಂತ್ರಿಸುವ ಅಧಿನಿಯಮದ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಇತರ ಯಾವುದೇ ನಿರ್ದಿಷ್ಟ ಅವಕಾಶಗಳನ್ನು ಅನುಸರಿಸಿ ತಯಾರಿಸುವ ಅಗತ್ಯತೆ ಇದೆ.

### 5.12.2 ಶಾಸನಬದ್ಧ ಲೆಕ್ಕಪರಿಶೋಧಕರಿಂದ ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನೇಮಿಸಲ್ಪಟ್ಟ ಶಾಸನಬದ್ಧ ಲೆಕ್ಕಪರಿಶೋಧಕರು ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ ಮತ್ತು ಅದರ ಮೇಲಿನ ತಮ್ಮ ವರದಿಯನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಪ್ರಕಾರ ಸಲ್ಲಿಸುತ್ತಾರೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಶಾಸನಬದ್ಧ ಲೆಕ್ಕಪರಿಶೋಧಕರು ತಮಗೆ ವಹಿಸಿಕೊಟ್ಟ ಕಾರ್ಯಗಳನ್ನು ಸೂಕ್ತವಾಗಿ ಮತ್ತು ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪರಿಶೋಧನೆಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವ ಮೂಲಕ ಮೇಲುಸ್ತುವಾರಿ ಪಾತ್ರವನ್ನು ನಿರ್ವಹಿಸುತ್ತಾರೆ. ಈ ಕಾರ್ಯವನ್ನು ಇವುಗಳಿಗೆ ಸಂಬಂಧಿಸಿದಂತೆ ಅಧಿಕಾರ ಚಲಾಯಿಸುವ ಮೂಲಕ ನೆರವೇರಿಸುತ್ತಾರೆ:

- ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(5) ಅಡಿಯಲ್ಲಿ

ನಿರ್ದೇಶನಗಳನ್ನು ನೀಡುವುದು; ಮತ್ತು

- ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(6)ರ ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಮೇಲೆ ಪೂರಕ ಅಥವಾ ಟೀಕೆಟಿಪ್ಪಣಿ.

### *5.12.3 ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಪೂರಕ ಲೆಕ್ಕಪರಿಶೋಧನೆ*

ಕಂಪನಿಗಳ ಅಧಿನಿಯಮ, 2013 ಅಥವಾ ಇತರೆ ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ನಿಗದಿಪಡಿಸಿದ ಹಣಕಾಸು ವರದಿಗಾರಿಕೆ ಚೌಕಟ್ಟಿಗೆ ಅನುಸಾರವಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಪ್ರಮುಖ ಜವಾಬ್ದಾರಿ ಆ ಸಂಸ್ಥೆಯ ವ್ಯವಸ್ಥಾಪನೆಯದಾಗಿರುತ್ತದೆ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139ರಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನೇಮಿಸಲ್ಪಟ್ಟ ಶಾಸನಬದ್ಧ ಲೆಕ್ಕಪರಿಶೋಧಕರು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಅಡಿಯಲ್ಲಿ ಹಣಕಾಸು ತ:ಖ್ತೆಗಳ ಮೇಲೆ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಸ್ಟಾಂಡರ್ಡ್ ಆಡಿಟಿಂಗ್ ಪ್ರಾಕ್ಟೀಸಸ್ ಆಫ್ ಇನ್ಸಿಟಿಟ್ಯೂಟ್ ಆಫ್ ಚಾರ್ಟಡ್ ಅಕೊಂಟೆಂಟ್ಸ್ ಆಫ್ ಇಂಡಿಯಾ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನೀಡಲ್ಪಟ್ಟ ನಿರ್ದೇಶನಗಳಿಗೆ ಅನುಸಾರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ಲೆಕ್ಕಪರಿಶೋಧನಾ ವರದಿ ಸಲ್ಲಿಸುವ ಅಗತ್ಯತೆ ಇದೆ.

